**ವಿಷಯಾನುಕ್ರಮಣಿಕೆ**

ಅಧ್ಯಾತ್ಮಗ್ರಂಥಾವಳಿ

# ಬ್ರಹ್ಮಸೂತ್ರಭಾಷ್ಯಸಾರ

( ಶ್ರೀಶಂಕರಾಚಾರ್ಯರ ಮತದಂತೆ )

ಬರೆದವರು :

ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಸಂಪಾದಕ.

ಅಧ್ಯಾತ್ಮವಿದ್ಯಾಪ್ರವೀಣ

ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ

ಕ್ರಮಾಂಕ ೧೭೪

ಅಧ್ಯಾತ್ಮಪ್ರಕಾಶಕಾರ್ಯಾಲಯ,

ಹೊಳೆನರಸೀಪುರ.

೧೯೯೫

ಮೊದಲನೆಯ ಮುದ್ರಣ : 1977
ಎರಡನೆಯ ಮುದ್ರಣ : 1995

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
All Rights Reserved

ಮುದ್ರಣಸ್ಥಾನ :
ಅಧ್ಯಾತ್ಮಪ್ರಕಾಶಮುದ್ರಣಾಲಯ,
ಹೊಳೆನರಸೀಪುರ.

# ಮುನ್ನುಡಿ

ಶ್ರೀಶಂಕರಭಗವತ್ಪಾದರು ಬಾದರಾಯಣಕೃತ ವೇದಾಂತಸೂತ್ರಗಳ ಮೇಲೆ ರಚಿಸಿರುವ "ಬ್ರಹ್ಮಸೂತ್ರಭಾಷ್ಯ"ವನ್ನು ಬ್ರಹ್ಮೀಭೂತ ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರು ಕನ್ನಡ ಭಾಷೆಯಲ್ಲಿ ಅನುವಾದಮಾಡಿ ಟಿಪ್ಪಣಿ, ಪೀಠಿಕೆ, ಗ್ರಂಥಸಾರ, ಪರಿಶಿಷ್ಟಗಳೊಡನೆ ಸಿದ್ಧಗೊಳಿಸಿರುವದನ್ನು ಅಧ್ಯಾತ್ಮಪ್ರಕಾಶಕಾರ್ಯಾಲಯದವರು ಈಗಾಗಲೆ ಎರಡು ಬಾರಿ ಮುದ್ರಿಸಿ ಪ್ರಕಾಶಗೊಳಿಸಿದ್ದಾರೆ. ಈ ಗ್ರಂಥವು (೨ ಸಂಪುಟಗಳು) ಮುಮುಕ್ಷುಗಳಿಗೆ ಈಗಲೂ ಲಭ್ಯವಾಗಿದೆ.

ಆದರೆ ಶಂಕರಭಾಷ್ಯಾನುಸಾರವಾಗಿ ಬ್ರಹ್ಮಸೂತ್ರಗಳ ಸಾರಾಂಶವನ್ನು ಮನನಮಾಡಲಿಚ್ಛಿಸುವ ಓದುಗರಿಗಾಗಿ ಶ್ರೀಶ್ರೀಗಳವರು ತಮ್ಮ ಅನುವಾದ ಗ್ರಂಥದಲ್ಲಿ ಅನುಗ್ರಹಿಸಿದ್ದ ಆಯಾ ಅಧಿಕರಣಗಳ ಸಾರರೂಪವಾದ ವಿಷಯಗಳನ್ನು–ಪೀಠಿಕೆಗಳ ಸಮೇತ ಸ್ವತಂತ್ರಪುಸ್ತಕವಾಗಿ ಮೊದಲಬಾರಿಗೆ 1977 ರಲ್ಲಿ ಪ್ರಕಟಿಸಲಾಯಿತು. ಅದು ಕೂಡ ಜನಪ್ರಿಯವಾಗಿದ್ದು ಪ್ರತಿಗಳೆಲ್ಲವೂ ಮಾರಾಟವಾದ್ದರಿಂದ ಈಗ ಎರಡನೆಯಬಾರಿಗೆ ಪುನರ್ಮುದ್ರಿಸಿ ವಾಚಕರಿಗೆ ಅರ್ಪಿಸಲಾಗಿದೆ.

ಅನೇಕ ವಾಚಕರಿಂದ ಈ ಗ್ರಂಥದಂತೆಯೇ ದಶೋಪನಿಷದ್ಭಾಷ್ಯಗಳ ಸಾರವನ್ನು ಶ್ರೀಶ್ರೀಗಳವರ ಗ್ರಂಥಗಳಿಂದಲೇ ಸಂಗ್ರಹಿಸಿ ಸ್ವತಂತ್ರಪುಸ್ತಕವಾಗಿ ಪ್ರಕಟಿಸಬೇಕೆಂದು ಈಗಾಗಲೆ ಸೂಚನೆಗಳು ಬಂದಿವೆ. ಇಂಥ ಗ್ರಂಥಗಳ ಪ್ರಕಟನೆಗೆ ಮಹಾಜನರಿಂದ ಧನಸಹಾಯವು ಒದಗಿಬಂದಂತೆಲ್ಲ ಮುಂದುವರೆಸಲಾಗುವದು. ಸದ್ಯಕ್ಕೆ ಈ ಗ್ರಂಥವನ್ನು ಮಹಾಜನರು ಸ್ವೀಕರಿಸಿ ಎಂದಿನಂತೆ ಪ್ರೋತ್ಸಾಹಿಸುವರೆಂದು ನಂಬಿದೆ.

ಇತಿ– ಸಜ್ಜನವಿಧೇಯ,

ಹೊಳೆನರಸೀಪುರ. ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ,

ತಾ|| 5–1–1995 ಅಧ್ಯಾತ್ಮಗ್ರಂಥಾವಳಿಯ ಸಂಪಾದಕ.

# ಪೀಠಿಕೆ

ಬಾದರಾಯಣಕೃತವೇದಾಂತಸೂತ್ರಗಳನ್ನು ಪ್ರಸ್ಥಾನತ್ರಯಗಳೊಳಗೆ 'ನ್ಯಾಯಪ್ರಸ್ಥಾನ'ವೆಂದು ಕರೆಯಲಾಗಿದೆ. ಶ್ರೀಶಂಕರಾಚಾರ್ಯರೇ ಮುಂತಾದ ಅನೇಕಮಹನೀಯರುಗಳು ಈ ಸೂತ್ರಗಳಿಗೆ ತಮ್ಮತಮ್ಮ ಸಂಪ್ರದಾಯಗಳಿಗೆ ಅನುಸಾರವಾಗಿ ಭಾಷ್ಯಗಳನ್ನು ರಚಿಸಿದ್ದಾರೆ.

ಈ ಸೂತ್ರಗ್ರಂಥವು ಶ್ರೀಶಂಕರಾಚಾರ್ಯರ ಮತದಂತೆ ೫೫೫ ಸೂತ್ರಗಳು, ೧೯೧ ಅಧಿಕರಣಗಳಾಗಿ ವಿಂಗಡವಾಗಿದ್ದು ಕ್ರಮವಾಗಿ ವೇದಾಂತವಾಕ್ಯಗಳ ಸಮನ್ವಯ, ವಿರೋಧಪರಿಹಾರ, ಸಾಧನೆ, ಫಲಗಳೆಂಬ ವಿಷಯವಿಭಾಗವನ್ನು ಹೊಂದಿ ನಾಲ್ಕು ಅಧ್ಯಾಯಗಳಾಗಿ ಪ್ರಸಿದ್ಧವಾಗಿದೆ. ಒಂದೊಂದು ಅಧ್ಯಾಯಕ್ಕೂ ನಾಲ್ಕು ಪಾದಗಳಿವೆ. ಅಧಿಕರಣವಿಭಾಗವು ಮಾತ್ರ ವಿಷಯಾನುಗುಣವಾಗಿದ್ದು ಕೆಲವು ಅಧಿಕರಣಗಳಲ್ಲಿ ಒಂದೊಂದೇ ಸೂತ್ರವಿರುತ್ತದೆ. ಮತ್ತೆ ಕೆಲವು ಅಧಿಕರಣಗಳಲ್ಲಿ ಒಂದಕ್ಕಿಂತ ಹೆಚ್ಚಿನ ಸಂಖ್ಯೆಯ ಸೂತ್ರಗಳಿರುವವು. ಈ ಗ್ರಂಥದಲ್ಲಿ ಪ್ರತಿಯೊಂದು ಅಧಿಕರಣದ ಆರಂಭದಲ್ಲಿಯೂ ಅದಕ್ಕೆ ಸಂಬಂಧಪಟ್ಟ ಸೂತ್ರಗಳನ್ನು ಕೊಡಲಾಗಿದೆ. ಕೊನೆಯಲ್ಲಿ ಸಂಪೂರ್ಣವಾಗಿ ಸೂತ್ರಪಾಠವನ್ನು ಕೊಡಲಾಗಿದೆ. ಅಲ್ಲಿ ಕಪ್ಪಕ್ಷರ (Antique)ದಲ್ಲಿ ಮುದ್ರಿತವಾಗಿರುವ ಸೂತ್ರಗಳು ಅಧಿಕರಣಾರಂಭವನ್ನು ಸೂಚಿಸುವವು.

ಕಾರ್ಯಾಲಯದಿಂದಲೇ ಪ್ರಕಾಶಿತವಾಗಿರುವ "ವೇದಾಂತದರ್ಶನ" ಎಂಬ ಗ್ರಂಥವನ್ನು ಮೊದಲು ಓದಿ ಅನಂತರ ಈ ಗ್ರಂಥವನ್ನು ಓದುವವರಿಗೆ ಬ್ರಹ್ಮಸೂತ್ರಭಾಷ್ಯದ ಮುಖ್ಯವಿಷಯಗಳ ಪರಿಚಯವಾಗುವದಲ್ಲದೆ ನ್ಯಾಯಪ್ರಸ್ಥಾನದ ವೈಶಿಷ್ಟ್ಯವೂ ಸ್ಫುಟವಾಗುವದು. ಮುಂದೆ ನೇರಾಗಿ ಭಾಷ್ಯಗ್ರಂಥವನ್ನು ಓದುವ ಅರ್ಹತೆಯೂ ಉಂಟಾಗುವದು. ಆದ್ದರಿಂದ ಈ ಗ್ರಂಥವು ಸ್ವಲ್ಪಮಟ್ಟಿಗಾದರೂ ವೇದಾಂತಜಿಜ್ಞಾಸುಗಳ ಹಸಿವನ್ನು ನೀಗಿ ತೃಪ್ತಿಯನ್ನು ನೀಡಿದಲ್ಲಿ ನಮ್ಮ ಶ್ರಮವು ಸಾರ್ಥಕವಾದಂತೆಯೇ– ಎಂದು ಭಾವಿಸಲಾಗಿದೆ.

ಸಂಪಾದಕ.

# ವಿಷಯಾನುಕ್ರಮಣಿಕೆ


| | ಪುಟ |
|---|---|
| ಪೀಠಿಕೆ– | ೧–೫೩ |
| **ಒಂದನೆಯ ಅಧ್ಯಾಯ** | |
| ಜಿಜ್ಞಾಸಾಧಿಕರಣ | ೫೪ |
| ಜನ್ಮಾದ್ಯಧಿಕರಣ | ೫೬ |
| ಶಾಸ್ತ್ರಯೋನಿತ್ವಾಧಿಕರಣ | ೫೭ |
| ಸಮನ್ವಯಾಧಿಕರಣ | ೫೮ |
| ಈಕ್ಷತ್ಯಧಿಕರಣ | ೬೧ |
| ಆನಂದಮಯಾಧಿಕರಣ | ೬೩ |
| ಅಂತರಧಿಕರಣ | ೬೪ |
| ಆಕಾಶಾಧಿಕರಣ | ೬೫ |
| ಪ್ರಾಣಾಧಿಕರಣ | ೬೬ |
| ಜ್ಯೋತಿಶ್ಚರಣಾಧಿಕರಣ | ೬೭ |
| ಪ್ರತರ್ದನಾಧಿಕರಣ | ೬೮ |
| ಸರ್ವತ್ರಪ್ರಸಿದ್ಧ್ಯಧಿಕರಣ | ೭೦ |
| ಅತ್ತ್ರಧಿಕರಣ | ೭೧ |
| ಗುಹಾಪ್ರವಿಷ್ಟಾಧಿಕರಣ | ೭೨ |
| ಅಂತರಧಿಕರಣ | ೭೩ |
| ಅಂತರ್ಯಾಮ್ಯಧಿಕರಣ | ೭೪ |
| ಅದೃಶ್ಯತ್ವಾಧಿಕರಣ | ೭೫ |
| ವೈಶ್ವಾನರಾಧಿಕರಣ | ೭೬ |
| ದ್ಯುಭ್ವಾದ್ಯಧಿಕರಣ | ೭೮ |
| ಭೂಮಾಧಿಕರಣ | ೭೯ |
| ಅಕ್ಷರಾಧಿಕರಣ | ೮೦ |
| ಈಕ್ಷತಿಕರ್ಮವ್ಯಪದೇಶಾಧಿಕರಣ | ೮೧ |
| ದಹರಾಧಿಕರಣ | ೮೨ |
| ಅನುಕೃತ್ಯಧಿಕರಣ | ೮೪ |
| ಪ್ರಮಿತಾಧಿಕರಣ | ೮೫ |
| ದೇವತಾಧಿಕರಣ | ೮೬ |
| ಅಪಶೂದ್ರಾಧಿಕರಣ | ೮೮ |
| ಕಂಪನಾಧಿಕರಣ | ೮೯ |
| ಜ್ಯೋತಿರಧಿಕರಣ | ೯೦ |
| ಅರ್ಥಾಂತರವ್ಯಪದೇಶಾಧಿಕರಣ | ೯೧ |
| ಸುಷುಪ್ತ್ಯುತ್ಕ್ರಾಂತ್ಯಧಿಕರಣ | ೯೨ |
| ಆನುಮಾನಿಕಾಧಿಕರಣ | ೯೩ |
| ಚಮಸಾಧಿಕರಣ | ೯೫ |
| ಸಂಖ್ಯೋಪಸಂಗ್ರಹಾಧಿಕರಣ | ೯೭ |
| ಕಾರಣತ್ವಾಧಿಕರಣ | ೯೮ |
| ಬಾಲಾಕ್ಯಧಿಕರಣ | ೯೯ |
| ವಾಕ್ಯಾನ್ವಯಾಧಿಕರಣ | ೧೦೧ |
| ಪ್ರಕೃತ್ಯಧಿಕರಣ | ೧೦೩ |
| ಸರ್ವವ್ಯಾಖ್ಯಾನಾಧಿಕರಣ | ೧೦೪ |
| **ಎರಡನೆಯ ಅಧ್ಯಾಯ** | |
| ಸ್ಮೃತ್ಯಧಿಕರಣ | ೧೦೫ |
| ಯೋಗಪ್ರತ್ಯುಕ್ತ್ಯಧಿಕರಣ | ೧೦೬ |
| ವಿಲಕ್ಷಣತ್ವಾಧಿಕರಣ | ೧೦೭ |
| ಶಿಷ್ಟಾಪರಿಗ್ರಹಾಧಿಕರಣ | ೧೦೮ |
| ಭೋಕ್ತ್ರಾಪತ್ತ್ಯಧಿಕರಣ | ೧೦೯ |
| ಆರಂಭಣಾಧಿಕರಣ | ೧೦೯ |
| ಇತರವ್ಯಪದೇಶಾಧಿಕರಣ | ೧೧೦ |
| ಉಪಸಂಹಾರದರ್ಶನಾಧಿಕರಣ | ೧೧೧ |
| ಕೃತ್ಸ್ನಪ್ರಸಕ್ತ್ಯಧಿಕರಣ | ೧೧೨ |
| ಸರ್ವೋಪೇತಾಧಿಕರಣ | ೧೧೩ |
| ಪ್ರಯೋಜನವತ್ತ್ವಾಧಿಕರಣ | ೧೧೩ |
| ವೈಷಮ್ಯನೈರ್ಘೃಣ್ಯಾಧಿಕರಣ | ೧೧೪ |
| ಸರ್ವಧರ್ಮೋಪಪತ್ತ್ಯಧಿಕರಣ | ೧೧೫ |
| ರಚನಾನುಪಪತ್ತ್ಯಧಿಕರಣ | ೧೧೫ |

| | ಪುಟ | |
|---|---|---|
| ಮಹದ್ದೀರ್ಘಾಧಿಕರಣ | ೧೧೭ | ಶ್ರೇಷ್ಠಾಣುತ್ವಾಧಿಕರಣ |
| ಪರಮಾಣುಜಗದಕಾರಣತ್ವಾಧಿಕರಣ | ೧೧೭ | ಜ್ಯೋತಿರಾದ್ಯಧಿಕರಣ |
| ಸಮುದಾಯಾಧಿಕರಣ | ೧೧೯ | ಇಂದ್ರಿಯಾದ್ಯಧಿಕರಣ |
| ಅಭಾವಾಧಿಕರಣ | ೧೨೦ | ಸಂಜ್ಞಾಮೂರ್ತಿಕ್ಲೃಪ್ತ್ಯಧಿಕರಣ |
| ಏಕಸ್ಮಿನ್ನಸಂಭವಾಧಿಕರಣ | ೧೨೨ | ಮೂರನೆಯ ಅಧ್ಯಾಯ |
| ಪತ್ಯಧಿಕರಳ | ೧೨೨ | ತದಂತರಪ್ರತಿಪತ್ತ್ಯಧಿಕರಣ |
| ಉತ್ಪತ್ತ್ಯಸಂಭವಾಧಿಕರಣ | ೧೨೪ | ಕೃತಾತ್ಯಯಾಧಿಕರಣ |
| ವಿಯದಧಿಕರಣ | ೧೨೫ | ಅನಿಷ್ಟಾದಿಕಾರ್ಯಾಧಿಕರಣ |
| ಮಾತರಿಶ್ವಾಧಿಕರಣ | ೧೨೬ | ಸಾಭಾವ್ಯಾಪತ್ತ್ಯಧಿಕರಣ |
| ಅಸಂಭವಾಧಿಕರಣ | ೧೨೬ | ನಾತಿಚಿರಾಧಿಕರಣ |
| ತೇಜೋಧಿಕರಣ | ೧೨೭ | ಅನ್ಯಾಧಿಷ್ಠಿತಾಧಿಕರಣ |
| ಅಬಧಿಕರಣ | ೧೨೮ | ಸಂಧ್ಯಾಧಿಕರಣ |
| ಪೃಥಿವ್ಯಧಿಕಾರಾಧಿಕರಣ | ೧೨೮ | ತದಭಾವಾಧಿಕರಣ |
| ತದಭಿಧ್ಯಾನಾಧಿಕರಣ | ೧೨೯ | ಕರ್ಮಾನುಸ್ಮೃತಿಶಬ್ದವಿಧ್ಯಧಿಕರಣ |
| ವಿಪರ್ಯಯಾಧಿಕರಣ | ೧೨೯ | ಮುಗ್ಧೇಽರ್ಧಸಂಪತ್ತ್ಯಧಿಕರಣ |
| ಅಂತರಾವಿಜ್ಞಾನಾಧಿಕರಣ | ೧೩೦ | ಉಭಯಲಿಂಗಾಧಿಕರಣ |
| ಚರಾಚರವ್ಯಪಾಶ್ರಯಾಧಿಕರಣ | ೧೩೧ | ಪ್ರಕೃತೈತಾವತ್ತ್ವಾಧಿಕರಣ |
| ಆತ್ಮಾಧಿಕರಣ | ೧೩೧ | ಪರಾಧಿಕರಣ |
| ಜ್ಞಾಧಿಕರಣ | ೧೩೨ | ಫಲಾಧಿಕರಣ |
| ಉತ್ಕ್ರಾಂತಿಗತ್ಯಧಿಕರಣ | ೧೩೩ | ಸರ್ವವೇದಾಂತಪ್ರತ್ಯಯಾಧಿಕರಣ |
| ಕರ್ತ್ರಧಿಕರಣ | ೧೩೪ | ಉಪಸಂಹಾರಾಧಿಕರಣ |
| ತಕ್ಷಾಧಿಕರಣ | ೧೩೫ | ಅನ್ಯಥಾತ್ವಾಧಿಕರಣ |
| ಪರಾಯತ್ತಾಧಿಕರಣ | ೧೩೬ | ವ್ಯಾಪ್ತ್ಯಧಿಕರಣ |
| ಅಂಶಾಧಿಕರಣ | ೧೩೬ | ಸರ್ವಾಭೇದಾಧಿಕರಣ |
| ಪ್ರಾಣೋತ್ಪತ್ತ್ಯಧಿಕರಣ | ೧೩೮ | ಆನಂದಾದ್ಯಧಿಕರಣ |
| ಸಪ್ತಗತ್ಯಧಿಕರಣ | ೧೩೯ | ಆಧ್ಯಾನಾಧಿಕರಣ |
| ಪ್ರಾಣಾಣುತ್ವಾಧಿಕರಣ | ೧೪೦ | ಆತ್ಮಗೃಹೀತ್ಯಧಿಕರಣ |
| ಪ್ರಾಣಶ್ರೈಷ್ಠ್ಯಾಧಿಕರಣ | ೧೪೦ | ಕಾರ್ಯಾಖ್ಯಾನಾಧಿಕರಣ |
| ವಾಯುಕ್ರಿಯಾಧಿಕರಣ | ೧೪೧ | ಸಮಾನಾಧಿಕರಣ |

| | ಪುಟ | | ಪುಟ |
|---|---|---|---|
| ಸಂಬಂಧಾಧಿಕರಣ | ೧೬೯ | ಪಾರಿಪ್ಲವಾಧಿಕರಣ | ೧೯೨ |
| ಸಂಭೃತ್ಯಧಿಕರಣ | ೧೭೦ | ಅಗ್ನೀಂಧನಾದ್ಯಧಿಕರಣ | ೧೯೩ |
| ಪುರುಷಾದ್ಯಧಿಕರಣ | ೧೭೦ | ಸರ್ವಾಪೇಕ್ಷಾಧಿಕರಣ | ೧೯೩ |
| ವೇಧಾದ್ಯಧಿಕರಣ | ೧೭೧ | ಸರ್ವಾನ್ನಾನುಮತ್ಯಧಿಕರಣ | ೧೯೪ |
| ಹಾನ್ಯಧಿಕರಣ | ೧೭೨ | ಆಶ್ರಮಕರ್ಮಾಧಿಕರಣ | ೧೯೫ |
| ಸಾಂಪರಾಯಾಧಿಧಿಕರಣ | ೧೭೪ | ವಿಧುರಾಧಿಕರಣ | ೧೯೫ |
| [illegible] | ೧೭೫ | ತದ್ಭೂತಾಧಿಕರಣ | ೧೯೬ |
| ಅನಿಯಮಾಧಿಕರಣ | ೧೭೫ | ಅಧಿಕಾರಾಧಿಕರಣ | ೧೯೭ |
| ಯಾವದಧಿಕಾರಾಧಿಕರಣ | ೬೧೭ | ಬಹಿರಧಿಕರಣ | ೯೭೧ |
| ಅಕ್ಷರಾಧ್ಯಧಿಕರಣ | ೧೭೭ | ಸ್ವಾಮ್ಯಧಿಕರಣ | ೧೯೭ |
| ಇಯದಧಿಕರಣ | ೧೭೮ | ಸಹಕಾರ್ಯಂತರವಿಧ್ಯಧಿಕರಣ | ೧೯೮ |
| ಅಂತರತ್ವಾಧಿಕರಣ | ೧೭೮ | ಅನಾವಿಷ್ಕಾರಾಧಿಕರಣ | ೧೯೯ |
| ವ್ಯತಿಹಾರಾಧಿಕರಣ | ೧೭೯ | ಐಹಿಕಾಧಿಕರಣ | ೨೦೦ |
| ಸತ್ಯಾದ್ಯಧಿಕರಣ | ೧೮೦ | ಮುಕ್ತಿಫಲಾಧಿಕರಣ | ೨೦೦ |
| ಕಾಮಾದ್ಯಧಿಕರಣ | ೧೮೦ | **ನಾಲ್ಕನೆಯ ಅಧ್ಯಾಯ** | |
| ಆದರಾಧಿಕರಣ | ೧೮೧ | ಆವೃತ್ತ್ಯಧಿಕರಣ | ೨೦೨ |
| ತನ್ನಿರ್ಧಾರಣಾಧಿಕರಣ | ೧೮೧ | ಆತ್ಮತ್ವೋಪಾಸನಾಧಿಕರಣ | ೨೦೩ |
| ಪ್ರದಾನಾಧಿಕರಣ | ೨೮೩ | ಪ್ರತೀಕಾಧಿಕರಣ | ೨೦೩ |
| ಲಿಂಗಭೂಯಸ್ತ್ವಾಧಿಕರಣ | ೧ ೩ | ಬ್ರಹ್ಮದೃಷ್ಟ್ಯಧಿಕರಣ | ೨೦೪ |
| ಐಕಾತ್ಮ್ಯಾಧಿಕರಣ | ೧೮೪ | ಆದಿತ್ಯಾದಿಮತ್ಯಧಿಕರಣ | ೨೦೫ |
| ಅಂಗಾವಬದ್ಧಾಧಿಕರಣ | ೧೮೫ | ಆಸೀನಾಧಿಕರಣ | ೨೦೬ |
| ಭೂಮಜ್ಯಾಯಸ್ತ್ವಾಧಿಕರಣ | ೧೮೬ | ಏಕಾಗ್ರತಾಧಿಕರಣ | ೨೦೬ |
| ಶಬ್ದಾದಿಭೇದಾಧಿಕರಣ | ೧೮೬ | ಆಪ್ರಾಯಣಾಧಿಕರಣ | ೨೦೭ |
| ವಿಕಲ್ಪಾಧಿಕರಣ | ೧೮೭ | ತದಧಿಗಮಾಧಿಕರಣ | ೨೦೭ |
| ಕಾಮ್ಯಾಧಿಕರಣ | ೧೮೮ | ಇತರಾಸಂಶ್ಲೇಷಾಧಿಕರಣ | ೨೦೮ |
| ಯಥಾಶ್ರಯಭಾವಾಧಿಕರಣ | ೧೮೮ | ಅನಾರಬ್ಧಾಧಿಕರಣ | ೨೦೮ |
| ಪುರುಷಾರ್ಥಾಧಿಕರಣ | ೧೮೯ | ಅಗ್ನಿಹೋತ್ರಾದ್ಯಧಿಕರಣ | ೨೧೯ |
| ಪರಾಮರ್ಶಾಧಿಕರಣ | ೧೯೧ | ವಿದ್ಯಾಜ್ಞಾನಸಾಧನಾಧಿಕರಣ | ೨೧೦ |
| ಸ್ತುತಿಮಾತ್ರಾಧಿಕರಣ | ೧೯೨ | ಇತರಕ್ಷಪಣಾಧಿಕರಣ | ೨೧೦ |

| | ಪುಟ |
|---|---|
| ವಾಗಧಿಕರಣ | ೨೧೧ |
| ಮನೋಽಧಿಕರಣ | ೨೧೨ |
| ಅಧ್ಯಕ್ಷಾಧಿಕರಣ | ೨೧೩ |
| ಆಸೃತ್ಯುಪಕ್ರಮಾಧಿಕರಣ | ೨೧೩ |
| ಸಂಸಾರವ್ಯಪದೇಶಾಧಿಕರಣ | ೨೧೪ |
| ಪ್ರತಿಷೇಧಾಧಿಕರಣ | ೨೧೫ |
| ವಾಗಾದಿಲಯಾಧಿಕರಣ | ೨೧೬ |
| ಅವಿಭಾಗಾಧಿಕರಣ | ೨೧೬ |
| ತದೋಕೋಽಧಿಕರಣ | ೨೧೭ |
| ರಶ್ಮ್ಯಧಿಕರಣ | ೨೧೭ |
| ದಕ್ಷಿಣಾಯನಾಧಿಕರಣ | ೨೧೮ |
| ಅರ್ಚಿರಾದ್ಯಧಿಕರಣ | ೨೧೯ |
| ವಾಯ್ವಧಿಕರಣ | ೨೨೦ |

| | ಪುಟ |
|---|---|
| ತಡಿದಧಿಕರಣ | ೨೨೧ |
| ಆತಿವಾಹಿಕಾಧಿಕರಣ | ೨೨೧ |
| ಕಾರ್ಯಾಧಿಕರಣ | ೨೨೨ |
| ಅಪ್ರತೀಕಾಲಂಬನಾಧಿಕರಣ | ೨೨೩ |
| ಸಂಪದ್ಯಾವಿರ್ಭಾವಾಧಿಕರಣ | ೨೨೪ |
| ಅವಿಭಾಗೇನ ದೃಷ್ಟತ್ವಾಧಿಕರಣ | ೨೨೫ |
| ಬ್ರಾಹ್ಮಾಧಿಕರಣ | ೨೨೫ |
| ಸಂಕಲ್ಪಾಧಿಕರಣ | ೨೨೬ |
| ಅಭಾವಾಧಿಕರಣ | ೨೨೭ |
| ಪ್ರದೀಪಾಧಿಕರಣ | ೨೨೭ |
| ಜಗದ್ವ್ಯಾಪಾರಾಧಿಕರಣ | ೨೨೮ |
| ಬ್ರಹ್ಮಸೂತ್ರಪಾಠಃ | ೨೩೦ |

॥ ಓಮ್ ॥

# ಬ್ರಹ್ಮಸೂತ್ರಭಾಷ್ಯಸಾರ

## ಪೀಠಿಕೆ

### ವೈದಿಕವಾಙ್ಮಯದಲ್ಲಿ ಬ್ರಹ್ಮಸೂತ್ರದ ಸ್ಥಾನ

ಭಗವಾನ್ ಬಾದರಾಯಣರು ರಚಿಸಿರುವ ಸೂತ್ರಗಳನ್ನು ವೇದಾಂತ ಸೂತ್ರಗಳು, ವೇದಾಂತಮೀಮಾಂಸೆ, ಶಾರೀರಕಮೀಮಾಂಸೆ, ವೇದಾಂತ ದರ್ಶನ–ಎಂಬ ಬೇರೆಬೇರೆಯ ಹೆಸರುಗಳಿಂದ ಕರೆಯುತ್ತಾರೆ. ಬ್ರಹ್ಮಸೂತ್ರ ಗಳೆಂಬ ಹೆಸರು ಈಗ ಸುಪ್ರಸಿದ್ಧವಾಗಿದ್ದರೂ ಶಾಂಕರಭಾಷ್ಯದಲ್ಲಿ ಎಲ್ಲಿಯೂ ಕಾಣುವದಿಲ್ಲ. ಭಗವದ್ಗೀತೆಯಲ್ಲಿ (೧೩–೪) ಕಾಣಬರುವ 'ಬ್ರಹ್ಮಸೂತ್ರ ಪದೈಶ್ಚೈವ' ಎಂಬ ಮಾತನ್ನು ವಿವರಿಸುವಾಗ 'ಆತ್ಮೇತ್ಯೇವೋಪಾಸೀತ' ಮುಂತಾದ ಬ್ರಹ್ಮವನ್ನು ತಿಳಿಸುವ ಸಂಗ್ರಹವಾಕ್ಯಗಳೇ ಬ್ರಹ್ಮಸೂತ್ರಗಳು– ಎಂದು ಶಾಂಕರಭಾಷ್ಯದಲ್ಲಿ ಬರೆದಿದೆ.

ವೇದಾಂತವೆಂಬುದು ವೇದಗಳ ಕೊನೆಯಲ್ಲಿರುವ ಆರಣ್ಯಕವೆಂಬ ಭಾಗ ದಲ್ಲಿಯೇ ಬಲುಮಟ್ಟಿಗೆ ಕಂಡುಬರುವ ಉಪನಿಷತ್ತುಗಳೆಂಬ ರಹಸ್ಯಜ್ಞಾನ ಪ್ರತಿಪಾದಕವಾದ ಗ್ರಂಥಗಳ ಹೆಸರು. ಬ್ರಾಹ್ಮಣೋಕ್ತವಾದ ಮಂತ್ರವಿನಿ ಯೋಗದ ರೀತಿಯನ್ನು ಇನ್ನಷ್ಟು ವ್ಯವಸ್ಥೆಯಿಂದ ತಿಳಿಸುವದಕ್ಕೆ ಕಲ್ಪ ಸೂತ್ರಗಳೂ ವೈದಿಕಕರ್ಮತತ್ತ್ವವನ್ನು ವಿಚಾರಮಾಡುವ ನ್ಯಾಯಗಳನ್ನು ಒದಗಿಸುವದಕ್ಕೆ ಕರ್ಮಮೀಮಾಂಸಾಸೂತ್ರಗಳೂ ಏರ್ಪಟ್ಟಿರುವಂತೆಯೇ ವೇದಾಂತಗಳಲ್ಲಿ, ಎಂದರೆ ಉಪನಿಷತ್ತುಗಳಲ್ಲಿ, ಪ್ರತಿಪಾದಿತವಾಗಿರುವ ಬ್ರಹ್ಮ ಜ್ಞಾನದ ತತ್ತ್ವವನ್ನು ವಿಚಾರಮಾಡುವ ನ್ಯಾಯಗಳನ್ನು ಒದಗಿಸುವದಕ್ಕೆ ವೇದಾಂತಮೀಮಾಂಸಾಸೂತ್ರಗಳು ಹೊರಟಿರುವದರಿಂದ ಇವಕ್ಕೆ

'ವೇದಾಂತಸೂತ್ರಗಳು' ಎಂಬ ಹೆಸರು ಬಂದಿದೆ. ವೇದಾಂತಸೂತ್ರಗಳಲ್ಲಿ ಮುಖ್ಯವಾಗಿ ಬ್ರಹ್ಮತತ್ತ್ವವನ್ನೇ ವಿಚಾರಮಾಡಿರುವದರಿಂದ ಈಗ ಅವಕ್ಕೆ 'ಬ್ರಹ್ಮಸೂತ್ರಗಳು' ಎಂಬ ಹೆಸರು ಬಳಕೆಗೆ ಬಂದಿರುತ್ತದೆ. ಮೀಮಾಂಸಾ ಶಬ್ದಕ್ಕೆ ಪೂಜಿತವಿಚಾರವೆಂದು ಅರ್ಥ. ವೇದದ ಪೂರ್ವಭಾಗವಾದ ಕರ್ಮ ಕಾಂಡದ ತಾತ್ಪರ್ಯವನ್ನು ನ್ಯಾಯಪೂರ್ವಕವಾಗಿ ನಿರ್ಣಯಿಸುವದರಿಂದ ಕರ್ಮತತ್ತ್ವವಿಚಾರವು ಪೂರ್ವಮೀಮಾಂಸವೆನಿಸಿತು. ಅದರ ಮುಂದಿನ ಭಾಗದ ತಾತ್ಪರ್ಯವನ್ನು ನಿರ್ಣಯಿಸುವ ವಿಚಾರವಿದಾದ್ದರಿಂದ ವೇದಾಂತ ಮೀಮಾಂಸವು ಉತ್ತರಮೀಮಾಂಸವೆನಿಸಿತು. ರೂಢಿಯಲ್ಲಿ 'ಮೀಮಾಂಸಾ ಸಾಸ್ತ್ರ'ವೆಂಬ ಮಾತನ್ನು ಈಗ ಪೂರ್ವಮೀಮಾಂಸವೆಂಬರ್ಥದಲ್ಲಿಯೇ ಬಳಸುತ್ತಾರೆ.

ಕರ್ಮವಿಚಾರಕ್ಕಾಗಿಯೂ ಬ್ರಹ್ಮವಿಚಾರಕ್ಕಾಗಿಯೂ ಹೊರಟಿರುವ ಪೂರ್ವೋತ್ತರಮೀಮಾಂಸಗಳಂತೆಯೇ ಸ್ವತಂತ್ರವಾದ ತತ್ತ್ವವಿಚಾರಕ್ಕೂ ವ್ಯಾಕರಣಧರ್ಮಶಾಸ್ತ್ರಚ್ಛನ್ದೋಜ್ಯೋತಿಷಾದಿಗಳ ವಿಚಾರಕ್ಕೂ ಅನೇಕ ಸೂತ್ರಗ್ರಂಥಗಳು ಹೊರಟಿರುತ್ತವೆ. ಸೂತ್ರವೆಂದರೆ ಯಾವದಾದರೊಂದು ಅಭಿಪ್ರಾಯವನ್ನು ಅದಷ್ಟು ಸಂಕ್ಷೇಪವಾಗಿ ತಿಳಿಸುವ ವಾಕ್ಯವು. ಬೇರೆಬೇರೆಯ ವಿಷಯಗಳ ತತ್ತ್ವಗಳನ್ನು ಸೂತ್ರಸಮುದಾಯರೂಪವಾದ ಗ್ರಂಥಗಳಲ್ಲಿ ಬೇರೆಬೇರೆಯ ಋಷಿಗಳು ರಚಿಸಿರುತ್ತಾರೆ. ಆ ಗ್ರಂಥಗಳಿಗೂ ಅವುಗಳಲ್ಲಿ ಪ್ರತಿಪಾದಿತವಾಗಿರುವ ತತ್ತ್ವಜ್ಞಾನಕ್ಕೂ 'ದರ್ಶನ'ವೆಂದು ಹೆಸರು. ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಪೂರ್ವಮೀಮಾಂಸಾ, ಉತ್ತರ ಮಾಮಾಂಸಾ–ಈ ಆರನ್ನು ಈಗ ಷಡ್ದರ್ಶನಗಳೆಂದು* ವೈದಿಕರು ಕರೆಯು ತ್ತಾರೆ. ಬ್ರಹ್ಮಸೂತ್ರಗಳಲ್ಲಿ ವೇದಾಂತವಾಕ್ಯಗಳ ವಿಚಾರಪೂರ್ವಕವಾಗಿ ತತ್ತ್ವವನ್ನು ನಿರೂಪಿಸಿರುವದರಿಂದ ಇದಕ್ಕೆ 'ವೇದಾಂತದರ್ಶನ'ವೆಂಬ

---

* ಜೈನರುಗಳಲ್ಲಿ ಹರಿಭದ್ರ, ರಾಜಶೇಖರ–ಇವರು ಷಡ್ದರ್ಶನವೆಂಬ ಹೆಸರಿನಿಂದ ಕರೆದಿರುವ ದರ್ಶನಗಳೇ ಬೇರೆ. ಹರಿಭದ್ರನು ಬೌದ್ಧ, ನೈಯಾಯಿಕ; ಸಾಂಖ್ಯ, ಜೈನ, ವೈಶೇಷಿಕ, ಜೈಮಿನೀಯ–ಎಂಬಿವನ್ನೂ ರಾಜಶೇಖರನು ಜೈನ, ಸಾಂಖ್ಯ; ಜೈಮಿನೀಯ, ಶೈವ, ವೈಶೇಷಿಕ, ಬೌದ್ಧ– ಎಂಬಿವನ್ನೂ ಷಡ್ದರ್ಶನಗಳೆಂದು ಕರೆದಿರುತ್ತಾರೆ.

ಹೆಸರುಬಂದಿರುತ್ತದೆ. ಈ ದರ್ಶನದಲ್ಲಿ ನಮ್ಮಗಳ ಶರೀರದಲ್ಲಿರುವ ಆತ್ಮ ತತ್ತ್ವವನ್ನು ಕುರಿತು ವಿಚಾರಮಾಡಿರುವದರಿಂದ ಇದಕ್ಕೆ 'ಶಾರೀರಕ ಮೀಮಾಂಸ' ಎಂಬ ಹೆಸರು ಬಂದಿರುತ್ತದೆ.

## ಬ್ರಹ್ಮಸೂತ್ರವನ್ನು ಬರೆದವರು

ಬ್ರಹ್ಮಸೂತ್ರವನ್ನು ಬರೆದವರು ಬಾ ದ ರಾ ಯ ಣ ರೆಂ ದು ಶಂಕರಾಚಾರ್ಯರು ಸ್ಪಷ್ಟವಾಗಿ ಬರೆದಿರುತ್ತಾರೆ. ಇವರೇ ವ್ಯಾಸರೆಂದು ಮಿಕ್ಕ ಕೆಲವರು ಭಾಷ್ಯಕಾರರೂ ಶಾಂಕರಭಾಷ್ಯವ್ಯಾಖ್ಯಾನಕಾರರೂ ಹೇಳಿರುತ್ತಾರಾದರೂ ಬಾದರಾಯಣ, ವ್ಯಾಸ– ಎರಡೂ ಒಬ್ಬರದೇ ಹೆಸರೆಂಬ ಬಗ್ಗೆ ಶಂಕರಾಚಾರ್ಯರ ಪ್ರಸ್ಥಾನತ್ರಯಭಾಷ್ಯದಲ್ಲಿ ಯಾವ ಆಧಾರವೂ ಸಿಕ್ಕುವದಿಲ್ಲ. ಸೂತ್ರಭಾಷ್ಯದಲ್ಲಿ (೩–೩–೩೨) ಕೃಷ್ಣದ್ವೈಪಾಯನವ್ಯಾಸರ ಹೆಸರನ್ನು ಎತ್ತಿರುತ್ತದೆ; ಆದರೆ ಅವರನ್ನು ಬಾದರಾಯಣರೆಂದು ಬರೆದಿಲ್ಲ. ವ್ಯಾಸರ ಹೆಸರು ಎಲ್ಲಿಬಂದರೂ ಈ ಭಾಷ್ಯಕಾರರು ಬಾದರಾಯಣರಿಗೂ ಅವರಿಗೂ ಗಂಟುಹಾಕದೆ ಇರುವದರಿಂದಲೂ 'ವ್ಯಾಸರೇ ಮುಂತಾದ ಸ್ಮೃತಿಕಾರರು ಹೀಗೆನ್ನುತ್ತಾರೆ' ಎಂದು ಸೂತ್ರಕಾರರು ಉದಾಹರಿಸಿರುವಂತೆ ಸೂತ್ರಗಳಿಗೆ ವ್ಯಾಖ್ಯಾನಮಾಡಿರುವದರಿಂದಲೂ ಭಾರತಕರ್ತರಾದ ವ್ಯಾಸರು ಸೂತ್ರಕರ್ತರಾದ ಬಾದರಾಯಣರಿಗಿಂತ ಹಿಂದಿರವರೆಂದು ವಿಂಡಿಷ್‌ಮ್ಯಾನ್, ತೆಲಾಂಗ್– ಮುಂತಾದ ಕೆಲವರು ಶೋಧಕರು ಅಭಿಪ್ರಾಯಪಟ್ಟಿರುತ್ತಾರೆ. ಗೀತೆಯಲ್ಲಿಯೇ ಬ್ರಹ್ಮಸೂತ್ರವೆಂಬ ಹೆಸರು ಬಂದಿರುವದರಿಂದ ಬಾದರಾಯಣರು ಭಾರತಕ್ಕಿಂತ ಹಿಂದೆಯೇ ಇದ್ದಿರಬೇಕೆಂದು ಮಾಕ್ಸ್‌ಮುಲ್ಲರ್ ಮುಂತಾದವರ ಮತವಿದೆ. ಪೂರ್ವಮೀಮಾಂಸದಲ್ಲಿ ಬ್ರಹ್ಮಸೂತ್ರಕಾರರಾದ ಬಾದರಾಯಣರನ್ನೂ ಉತ್ತರಮೀಮಾಂಸದಲ್ಲಿ ಜೈಮಿನಿಗಳ ಹೆಸರನ್ನೂ ಉದಾಹರಿಸಿರುವದರಿಂದ ಇವರಿಬ್ಬರೂ ಸಮಕಾಲಿಕರೆಂದೂ ಈ ಗ್ರಂಗಳೆರಡನ್ನೂ ಒಟ್ಟುಗೂಡಿಸಿ ಒಂದು ಶಾಸ್ತ್ರವಾಗಿ ಏರ್ಪಡಿಸಿದವರು ವ್ಯಾಸರೆಂದೂ ಡಾಯ್ಸನ್ ವಿದ್ವಾಂಸನು ಕಲ್ಪಿಸಿರುತ್ತಾನೆ!

ಈ ಕಲ್ಪನೆಗಳಲ್ಲಿ ಯಾವದೊಂದೂ ವಿಚಾರದ ಹೊಡೆತಕ್ಕೆ ನಿಲ್ಲುವಂತಿಲ್ಲವೆಂಬುದು ಸ್ಪಷ್ಟವಾಗಿದೆ. ಶಂಕರಾಚಾರ್ಯರ 'ಉಪದೇಶಸಾಹಸ್ರೀ'

ಪದ್ಯಭಾಗದಲ್ಲಿ (೧೬–೭೭) ವ್ಯಾಸರ ಮತವನ್ನು ಲಕ್ಷ್ಯದಲ್ಲಿಟ್ಟು ವೇದಾಂತಾರ್ಥದಲ್ಲಿ ನಿಶ್ಚಯವನ್ನು ಹೊಂದಬೇಕೆಂದು ಬರೆದಿದೆ; ವ್ಯಾಸರೆಂಬವರು ಹಲವು ಮಂದಿ ಇದ್ದರೆಂದು ಪುರಾಣಪ್ರಸಿದ್ಧಿಯೂ ಇದೆ. ಆದಕಾರಣ ಬಾದರಾಯಣರಿಗೆ ವ್ಯಾಸರೆಂಬ ಹೆಸರು ಇರಲು ಯಾವ ಅಡ್ಡಿಯೂ ಕಾಣುವದಿಲ್ಲ. ವ್ಯಾಸರು ಶುಕರ ಗುರುಗಳೆಂದೂ ಶುಕರು ಗೌಡಪಾದರ ಗುರುಗಳೆಂದೂ ತಿಳಿಸುವ ಗುರುಪರಂಪರೆಯ ಒಂದು ಶ್ಲೋಕವು ಸಾಂಪ್ರದಾಯಿಕವಾಗಿ ಪಠನೆಯಲ್ಲಿದೆ; ಆದರೆ ಆ ವಿಷಯದಲ್ಲಿಯೂ ಎಷ್ಟೋ ಸಂಶಯಗಳಿಗೆ ಎಡೆಯಿದೆ. ಬಾದರಾಯಣರು ವ್ಯಾಸರೆ, ಅಲ್ಲವೆ ? ಎಂಬುದನ್ನು ನಿಶ್ಚಯಿಸಿದರೂ ಅಥವಾ ಗೌಡಪಾದರು ಶುಕರ ಶಿಷ್ಯರೆ, ಅಲ್ಲವೆ ?– ಎಂಬುದನ್ನು ನಿಶ್ಚಯಿಸಿದರೂ ನಮಗೆ ಆಗುವ ಪ್ರಯೋಜನವು ಅತ್ಯಲ್ಪವೇ ; ಏಕೆಂದರೆ ಬಾದರಾಯಣರ ಮತ್ತು ಗೌಡಪಾದರ ವಿಷಯದಲ್ಲಿ ನಮಗೆ ನಿಶ್ಚಿತವಾಗಿ ತಿಳಿದಿರುವ ಐತಿಹಾಸಿಕಸಂಗತಿಯೂ ಯಾವದೊಂದೂ ಇರುವದಿಲ್ಲ. ವೇದಾಂತಸಿದ್ಧಾಂತವನ್ನು ತಿಳಿಯುವದಕ್ಕೆ ಇದರ ನಿರ್ಣಯದಿಂದ ಯಾವ ಪ್ರಯೋಜನವೂ ಆಗುವದಿಲ್ಲವೆಂಬುದಂತೂ ಸ್ಪಷ್ಟವಾಗಿಯೇ ಇದೆ.

ಸೂತ್ರದಲ್ಲಿರುವ ಸಂಕೇತನಾಮಗಳಿಂದ ಸೂತ್ರಕಾರರ ಕಾಲವನ್ನಾಗಲಿ ಅಭಿಪ್ರಾಯವನ್ನಾಗಲಿ ನಿರ್ಣಯಿಸುವದಕ್ಕೆ ಯಾವ ಸಹಾಯವೂ ಆಗುವಂತಿಲ್ಲ. ಆ ಸಂಕೇತನಾಮಗಳು ಬೇರೆಯ ಸೂತ್ರಗ್ರಂಥಗಳಲ್ಲಿಯೂ ಕಂಡು ಬರುತ್ತವೆ. ಉದಾಹರಣೆಗೆ ಆಶ್ಮರಥ್ಯನೆಂಬ ಹೆಸರು ಆಶ್ವಲಾಯನಶ್ರೌತಸೂತ್ರದಲ್ಲಿದೆ ; ಬಾದರಿ, ಕಾರ್ಷ್ಣಾಜಿನಿ, ಕಾಶಕೃತ್ಸ್ನ–ಇವು ಕಾತ್ಯಾಯನಸೂತ್ರದಲ್ಲಿವೆ ; ಆತ್ರೇಯನೆಂಬುದು ತೈತ್ತಿರೀಯಪ್ರಾತಿಶಾಖ್ಯದಲ್ಲಿದೆ. ಆತ್ರೇಯ, ಕಾಶಕೃತ್ಸ್ನ, ಬಾದರಿ– ಇವು ಬೋಧಾಯನಗೃಹ್ಯಸೂತ್ರದಲ್ಲಿಯೂ ಇವೆ. ಭಾರದ್ವಾಜಗೃಹ್ಯಸೂತ್ರದಲ್ಲಿ ಆತ್ರೇಯ, ವ್ಯಾಕರಣಮಹಾಭಾಷ್ಯದಲ್ಲಿ ಔಡುಲೋಮಿ–ಈ ಹೆಸರುಗಳು ಕಂಡುಬರುತ್ತವೆ. ಈ ಎಲ್ಲಾ ಗ್ರಂಥಗಳೂ ಒಂದೇ ಕಾಲದವುಗಳೆಂದು ಕಲ್ಪಿಸುವದಕ್ಕೆ ಸ್ವಲವೂ ಅವಕಾಶವಿಲ್ಲ. ಇದಲ್ಲದೆ ಈ ಒಂದೊಂದು ಹೆಸರೂ ಬೇರೆಬೇರೆಯ ಕಾಲಗಳಲ್ಲಿದ್ದಿರಬಹುದಾದ ಬೇರೆಬೇರೆಯ ಋಷಿಗಳ ಹೆಸರುಗಳೆಂದೂ ಊಹಿಸುವದಕ್ಕೆ ಅವಕಾಶವಿದೆ. ಬಾದರಾಯಣಸೂತ್ರಗಳಲ್ಲಿರುವ ಜೈಮಿನಿಗಳೂ ಜೈಮಿ

ನೀಯಸೂತ್ರಗಳಲ್ಲಿರುವ ಬಾದರಾಯಣರೊ ಆ ಹೆಸರಿನ ಇಬ್ಬರು ಗೊತ್ತಾದ ವ್ಯಕ್ತಿಗಳೆಂದು ನಿರ್ಧರಿಸುವದಕ್ಕೂ ಬರುವಂತಿಲ್ಲ; ಏಕೆಂದರೆ ಬಾದರಾಯಣರು ಜೈಮಿನಿಗಳನ್ನು ಕೆಲವುಕಡೆಗಳಲ್ಲಿ ವೇದಾಂತವಿಚಾರದಲ್ಲಿ ಪೂರ್ವಪಕ್ಷಿಗಳಾಗಿಯೂ ಕೆಲವುಕಡೆಗಳಲ್ಲಿ ಸಿದ್ಧಾಂತಿಗಳಾಗಿಯೂ ಉದಾಹರಿಸಿರುತ್ತಾರೆ. ಪೂರ್ವಮೀಮಾಂಸಾಗ್ರಂಥದಲ್ಲಿ ಪರಾಮೃಷ್ಟರಾಗಿರುವ ಜೈಮಿನಿಬಾದರಾಯಣರು ವೇದಾಂತಿಗಳೂ ಆಗಿದ್ದರೆಂಬುದಕ್ಕೆ ಅಲ್ಲಿ ಯಾವ ಗಮಕಗಳೂ ಕಾಣುವದಿಲ್ಲ.

ಈ ವೇದಾಂತಸೂತ್ರಗಳಲ್ಲಿ ಸಾಂಖ್ಯವೈಶೇಷಿಕಪಾಶುಪತಪಾಂಚರಾತ್ರ ಬೌದ್ಧಜೈನಮತಗಳನ್ನು ಪರಾಮರ್ಶಿಸಿರುವದು ಕಾಣಬರುತ್ತದೆ. ಆದರೆ ಅಲ್ಲಿ ಸೂಚಿಸಿರುವ ವಾದಗಳು ಇಂಥಿಂಥವೇ ಎಂದಾಗಲಿ, ಇಂಥಿಂಥ ಗ್ರಂಥದಿಂದಲೇ ಆರಿಸಿಕೊಂಡವು ಎಂದಾಗಲಿ– ನಿರ್ಧರಿಸುವದಕ್ಕೆ ಯಾವ ಸಾಧನವೂ ಇಲ್ಲ. ಆದ್ದರಿಂದ ಈ ಪರಾಮರ್ಶಗಳೂ ಬಾದರಾಯಣರ ಕಾಲವನ್ನು ಅಥವಾ ಅಭಿಪ್ರಾಯವನ್ನು ಗೊತ್ತುಮಾಡುವದಕ್ಕೆ ಸಹಾಯಕವಾಗುವದಿಲ್ಲ.

ಅಂತೂ ಈ ಎಲ್ಲಾ ಕಾರಣಗಳಿಂದ ಸೂತ್ರಕಾರರಾದ ಬಾದರಾಯಣರು ಯಾರು? ಯಾವ ಕಾಲದವರು?– ಎಂಬುದನ್ನು ಬರಿಯ ಸೂತ್ರಗಳ ಆಧಾರದಿಂದ ನಿರ್ಧರಿಸುವದಕ್ಕೆ ಆಗುವಂತಿಲ್ಲವೆಂದೇ ಹೇಳಬೇಕಾಗಿದೆ. ಈ ವಿಷಯದಲ್ಲಿ ಸದ್ಯಕ್ಕೆ ನಮಗೆ ಸೂತ್ರಗಳಿಗಿಂತ ಬೇರೆಯ ಯಾವ ಸಾಧನವೂ ಸಿಕ್ಕಿರುವದಿಲ್ಲ.

## ಬ್ರಹ್ಮಸೂತ್ರಗಳ ಸ್ವಭಾವ

ವೇದಾಂತಸೂತ್ರಗಳು ಯಾರಿಂದ ಯಾವಾಗ ರಚಿತವಾದವು ಎಂದು ವಿಮರ್ಶೆಮಾಡಿದ್ದರಲ್ಲಿ ಗ್ರಂಥಕರ್ತರು ಬಾದರಾಯಣರು, ಅವರು ಜೈನಬೌದ್ಧ ಮತಗಳನ್ನು ಪರಾಮರ್ಶಿಸಿರುವದರಿಂದ ಆ ಮತಗಳು ನಮ್ಮ ದೇಶದಲ್ಲಿ ಪ್ರಚಾರವಾದ ಬಳಿಕ ಈ ಗ್ರಂಥವನ್ನು ರಚಿಸಿರಬೇಕು–ಎಂದಿಷ್ಟೇ ಹೇಳಬಹುದೆಂದು ಗೊತ್ತಾಯಿತಷ್ಟೆ. ಸೂತ್ರದಲ್ಲಿರುವ ವೇದಾಂತದರ್ಶನದ ಅಸಾಧಾರಣ ಸ್ವರೂಪವು ಯಾವದು? ಆ ದರ್ಶನವು ಮಿಕ್ಕ ದರ್ಶನಗಳಿಗಿಂತ ಯಾವ ಬಗೆಯಲ್ಲಿ ವಿಲಕ್ಷಣವಾಗಿದ್ದಿತು?– ಎಂಬೀ ಪ್ರಶ್ನೆಗಳಿಗೂ ಸೂತ್ರದಲ್ಲಿ

ಉತ್ತರವು ದೊರಕುವಹಾಗಿಲ್ಲ. 'ಅಲ್ಪಾಕ್ಷರಮಸಂದಿಗ್ಧಂ ಸಾರವದ್ವಿಶ್ವತೋಮುಖಮ್ | ಅಸ್ತೋಭಮನವದ್ಯಂ ಚ ಸೂತ್ರಂ ಸೂತ್ರವಿದೋ ವಿದುಃ ||' ಎಂಬಂತೆ ಸೂತ್ರದಲ್ಲಿ ಆದಷ್ಟು ಕಡಿಮೆಯ ಮಾತುಗಳಿರಬೇಕು; ಅರ್ಥದ ವಿಷಯಕ್ಕೆ ಸಂದೇಹವು ಬರಬಾರದು; ಅದರಲ್ಲಿ ಸಾರವಾದ ವಿಷಯವಿರಬೇಕು; ಬಗೆಬಗೆಯ ಅರ್ಥಗಳು ಅದರಲ್ಲಿರಬೇಕು; ಅನವಶ್ಯವಾದ ಮಾತುಗಳು ಇರಬಾರದು; ಮತ್ತೆ ಯಾವ ದೋಷಗಳೂ ಇರಬಾರದು. ಹೀಗೆಂಬ ಒಂದು ಪುರಾಣವಚನವಿದೆ. ಆದರೆ ಈ ದೃಷ್ಟಿಯಿಂದ ನೋಡುವಾಗ ವೇದಾಂತ ಸೂತ್ರಗಳು ಅಸಂದಿಗ್ಧವಾಗಿವೆ ಎಂದು ಹೇಳುವದಕ್ಕೆ ಆಗುವದಿಲ್ಲ. ಗುರುಶಿಷ್ಯಸಂಪ್ರದಾಯದಿಂದ ತಿಳಿದುಕೊಂಡ ಹೊರತು ಈ ಗ್ರಂಥದಲ್ಲಿರುವ ಐನೂರೈವತ್ತೈದು ಸೂತ್ರಗಳಲ್ಲಿ ಇದೇ ಸೂತ್ರದ ಅರ್ಥವೆಂದು ಖಂಡಿತವಾಗಿ ಹೇಳಬಹುದಾದ ಸೂತ್ರಗಳು ತೀರ ಕಡಿಮೆ. 'ಸ್ಮೃತೇಶ್ಚ', 'ಶ್ರುತೇಶ್ಚ', 'ದರ್ಶನಾಚ್ಚ', 'ದರ್ಶಯತಿ ಚ'-ಮುಂತಾದ ಮತ್ತೆಮತ್ತೆ ಬರುವ ಸೂತ್ರಗಳಿಗೆ ಯಾವ ಅರ್ಥವಿರಬಹುದೆಂದು ನಿರ್ಣಯಿಸುವದು ಯಾರಿಗಾದರೂ ಕಷ್ಟವೇ. ಎಷ್ಟೋ ಸೂತ್ರಗಳಲ್ಲಿ ಮುಖ್ಯವಾದ ಉದ್ದೇಶವನ್ನೇ ಅಥವಾ ವಿಧೇಯವನ್ನೇ ಬಿಟ್ಟುಬಿಟ್ಟಿರುತ್ತದೆ. ಉದ್ದೇಶವಿಧೇಯಗಳೆರಡೂ ಇರುವ ಸೂತ್ರಗಳಲ್ಲಿ ಯಾವ ಅರ್ಥಕ್ಕಾದರೂ ಬಳುಕುವ ಸಾಮಾನ್ಯಪದಗಳಿರುತ್ತವೆ. ಬ್ರಹ್ಮ, ಆತ್ಮ, ಪ್ರಧಾನ, ಪ್ರತ್ಯಕ್ಷ, ಅನುಮಾನ- ಮುಂತಾದ ಹಲವು ಶಬ್ದಗಳಿಗೆ ಯಾವ ಅರ್ಥವನ್ನು ಸೂತ್ರಕಾರರು ಇಟ್ಟುಕೊಂಡಿದಾರೆಂಬುದನ್ನು ನಿರ್ಧರಿಸಿ ಹೇಳುವದುಕೂಡ ಸುಲಭವಾಗಿರುವದಿಲ್ಲ.

## ಶಾಂಕರಭಾಷ್ಯದ ಸ್ಥಾನ

ಸೂತ್ರಗಳಿಗಿರುವ ಭಾಷ್ಯಗಳ ಸಹಾಯದಿಂದಲೂ ವೇದಾಂತದರ್ಶನವನ್ನು ನಿರ್ಧರಿಸುವದು ಆಗುವಂತಿಲ್ಲ. ಏಕೆಂದರೆ ಶಂಕರ, ಭಾಸ್ಕರ, ರಾಮಾನುಜ, ಶ್ರೀಕಂಠ, ನಿಂಬಾರ್ಕ, ಮಧ್ವ, ವಿಜ್ಞಾನಭಿಕ್ಷು, ವಲ್ಲಭ, ಬಲದೇವ- ಮುಂತಾದ ಭಾಷ್ಯಕಾರರು ತಾವುತಾವು ಬರೆದಿರುವ ಭಾಷ್ಯದಲ್ಲಿಯೇ ನಿಜವಾದ ವೇದಾಂತದರ್ಶನವನ್ನು ತಿಳಿಸಿದೆಯೆಂದೂ ಉಳಿದ ಭಾಷ್ಯಕಾರರ ಮತಗಳು ಸೂತ್ರಕಾರರಿಗೆ ಅಸಮ್ಮತವೆಂದೂ ಸಾರಿರುತ್ತಾರೆ. ಈ ಭಾಷ್ಯಕಾರರು

ಗಳ ಅನುಯಾಯಿಗಳು ಈಗಲೂ ಅನೇಕರು ಇರುವದರಿಂದ ಈ ವೇದಾಂತಿಗಳ ಒಳಪಂಗಡಗಳ ಕದನದಿಂದ ನಿಜವಾದ ಬಾದರಾಯಣವೇದಾಂತವು ಯಾವ ದೆಂಬುದನ್ನು ನಿಶ್ಚಯಿಸುವದಕ್ಕೆ ಹೆಚ್ಚಿನ ಅಡ್ಡಿಯಾಗಿರುತ್ತದೆ. ವೇದಾಂತ ಜ್ಞಾನದಿಂದ ಮೋಕ್ಷವಾಗುವದೆಂದು ವೇದಪ್ರಮಾಣಿಕರೆಲ್ಲರೂ ನಂಬಿರುವದ ರಿಂದ ಬ್ರಹ್ಮಸೂತ್ರದ ತಾತ್ಪರ್ಯವನ್ನು ಗ್ರಹಿಸುವದಕ್ಕೆ ಯಾವ ಭಾಷ್ಯ ವನ್ನು ಅನುಸರಿಸಬೇಕೆಂಬುದು ಐತಿಹಾಸಿಕರಿಗೆ ಮಾತ್ರವಲ್ಲದೆ ಮುಮುಕ್ಷು ಗಳಿಗೂ ವಿಚಾರಣೀಯವಾಗಿರುತ್ತದೆ.

ಸದ್ಯಕ್ಕೆ ನಮಗೆ ದೊರಕಿರುವ ವೇದಾಂತಭಾಷ್ಯಗಳಲ್ಲಿ ಶಾಂಕರಭಾಷ್ಯವು ಅತ್ಯಂತಪ್ರಾಚೀನವಾಗಿರುತ್ತದೆ. ಶಂಕರಾಚಾರ್ಯರವರ ಅನುಯಾಯಿಗಳು ಭರತಖಂಡದಲ್ಲಿ ಮಿಕ್ಕ ಭಾಷ್ಯಕಾರರ ಅನುಯಾಯಿಗಳಿಗಿಂತ ಸಂಖ್ಯೆಯಲ್ಲಿ ಹೆಚ್ಚಾಗಿರುತ್ತಾರೆ. ಈ ಭಾಷ್ಯವು ಪುರಾಣಪ್ರಸಿದ್ಧವಾಗಿರುವ ಶಿವವಿಷ್ಣ್ವಾದಿ ದೇವತಾವಿಶೇಷಗಳಲ್ಲಿ ಯಾವದೊಂದನ್ನೂ ಸರ್ವೋತ್ತಮವೆಂದು ಸಾಧಿಸುವ ವಾದದಲ್ಲಿ ಪ್ರವೇಶಿಸದೆ ಉಪನಿಷತ್ತುಗಳಲ್ಲಿ ಪ್ರಸಿದ್ಧವಾಗಿರುವ ಬ್ರಹ್ಮವೆಂಬ ಹೆಸರಿನಿಂದಲೇ ಪರಮಾರ್ಥವನ್ನು ನಿರ್ಣಯಿಸುವದಕ್ಕೆ ಹೊರಟಿದೆ. ಈ ಭಾಷ್ಯವು ವಿಚಾರಪ್ರಧಾನವಾಗಿರುತ್ತದೆ; ಬ್ರಹ್ಮಜ್ಞಾನವು ವೇದಾಂತವಾಕ್ಯ ಗಳ ವಿಚಾರದಿಂದಲೇ ಆಗತಕ್ಕದ್ದೆಂದು ಮಿಕ್ಕ ಭಾಷ್ಯಕಾರರುಗಳಂತೆ ಶಂಕರಾ ಚಾರ್ಯರೂ ಒಪ್ಪಿರುತ್ತಾರಾದರೂ ವಸ್ತುಜ್ಞಾನದಲ್ಲಿ ಕ್ರಿಯೆಯಲ್ಲಿರುವಂತೆ ವಿಕಲ್ಪವಿರುವದಕ್ಕೆ ಅವಕಾಶವಿಲ್ಲವೆಂದೂ ಶಬ್ದವು ಇದ್ದ ವಿಷಯವನ್ನೇ ತಿಳಿಸು ತ್ತಿರುವದರಿಂದ ಯುಕ್ತ್ಯನುಭವಗಳಿಗೆ ಹೊಂದಿಸಿಯೇ ವಾಕ್ಯಾರ್ಥವನ್ನು ನಿಶ್ಚಯಿಸಬೇಕೆಂದೂ ಅವರು ಅಭಿಪ್ರಾಯಪಟ್ಟಿರುವದರಿಂದ ವಿಚಾರಪ್ರಧಾನ ರಾಗಿರುವ ಈಗಿನ ಜಿಜ್ಞಾಸುಗಳಿಗೆ ಇದು ಅವಶ್ಯವಾಗಿ ವಿಮರ್ಶನೀಯ ವಾಗಿರುತ್ತದೆ. ಭಾಷೆಯಲ್ಲಿರುವ ಲಾಲಿತ್ಯಮಾಧುರ್ಯಗಳು, ಸರ್ವಸಮ್ಮತ ಶಾಸ್ತ್ರವಚನಗಳ ಸೂರೆ, ಯುಕ್ತಿಗಳ ಸುರಿಮಳೆ, ತತ್ತ್ವನಿರ್ಣಯದಲ್ಲಿರುವ ಆದರ, ಪೂರ್ವಪಕ್ಷಗಳನ್ನು ನಿಷ್ಪಕ್ಷಪಾತವಾಗಿ ತೂಗಿ ಬೆಲೆಕಟ್ಟುವ ಕ್ರಮ, ಸಂಪ್ರದಾಯಶ್ರದ್ಧೆ, ಅಂಧಶ್ರದ್ಧೆಯನ್ನು ಮುರಿಯುವ ಧೈರ್ಯ, ಜಿಜ್ಞಾಸು ಗಳಾದ ಮುಮುಕ್ಷುಗಳಲ್ಲಿರುವ ಸೌಹಾರ್ದ—ಈ ಗುಣಗಳೆಲ್ಲ ಈ ಭಾಷ್ಯಕ್ಕೆ ಒಂದು ಉಚ್ಚಸ್ಥಾನವನ್ನು ಗಳಿಸಿಕೊಟ್ಟಿರುತ್ತವೆ.

## ಶಾಂಕರಭಾಷ್ಯವು ಸೂತ್ರಾನುಸಾರಿಯೆ ?

ಹಿಂದೆ ತಿಳಿಸಿರುವಂತೆ ಕೇವಲ ಸೂತ್ರಗಳ ಪರೀಕ್ಷಣದಿಂದ ಅವುಗಳ ಅಭಿಪ್ರಾಯವು ಇಂಥದ್ದೆಂದು ನಿರ್ಣಯವಾಗುವದು ಬಹಳ ಕಷ್ಟವಾಗಿರುವದರಿಂದ ಶಾಂಕರಭಾಷ್ಯವು ಸೂತ್ರಾನುಸಾರಿಯೆ, ಅಲ್ಲವೆ ?– ಎಂಬುದನ್ನು ಸ್ವತಂತ್ರವಿಚಾರದಿಂದ ನಿರ್ಣಯಿಸುವದು ಆಗುವಹಾಗಿಲ್ಲ. ಈ ಪ್ರಶ್ನೆಯನ್ನು ಬಿಡಿಸುವದಕ್ಕೆ ಹೊರಟ ಪಾಶ್ಚಾತ್ಯವಿದ್ವಾಂಸರುಗಳಲ್ಲಿ ಗಾಫ್, ಮ್ಯಾಕ್ಸ್ ಮುಲ್ಲರ್, ಡಾಯ್ಸನ್– ಮುಂತಾದವರು ಉಪನಿಷತ್ಸಿದ್ಧಾಂತವೇ ಶಂಕರಸಿದ್ಧಾಂತವೆಂದು ತುಲನಾತ್ಮಕವಿಮರ್ಶೆಯಿಂದ ನಿಶ್ಚಯಿಸಿ ಸೂತ್ರಾರ್ಥವೂ ಶ್ರುತ್ಯರ್ಥವನ್ನು ಹಾಗೆಯೇ ನಿರ್ಣಯಿಸುತ್ತದೆ ಎಂಬ ತೀರ್ಮಾನಕ್ಕೆ ಬಂದಿರುತ್ತಾರೆ. ಥೀಬೋ ಎಂಬಾತನು ಉಪನಿಷತ್ತುಗಳಲ್ಲಿ ಶಂಕರಾಚಾರ್ಯರಿಗೆ ಸಮ್ಮತವಾಗಿರುವ ಪರಾಪರಬ್ರಹ್ಮವಾದವೂ ಜೀವಬ್ರಹ್ಮೈಕ್ಯವಾದವೂ ಇರುವದಿಲ್ಲವೆಂತಲೂ ಸೂತ್ರಕಾರರ ಅಭಿಪ್ರಾಯಕ್ಕೆ ಶಾಂಕರಭಾಷ್ಯವು ಹೊಂದುಗಡೆಯಾಗಿಲ್ಲವೆಂತಲೂ ನಿರ್ಣಯಿಸಿರುತ್ತಾನೆ. ಈ ವಿದ್ವಾಂಸನು ಉಪನಿಷತ್ತುಗಳಿಗೆ ಸಾಧಾರಣವಾಗಿರುವ ಒಂದು ಸಿದ್ಧಾಂತವು ಇಲ್ಲವೇ ಇಲ್ಲವೆಂದೂ ಶ್ರೀರಾಮಾನುಜಾಚಾರ್ಯರು ತಮ್ಮ ಶ್ರೀಭಾಷ್ಯದಲ್ಲಿ ಅನುಸರಿಸಿರುವದಾಗಿ ಹೇಳಿಕೊಂಡಿರುವ ಬೋಧಾಯನರೂ ದ್ರಮಿಡಾಚಾರ್ಯರೂ ಶಂಕರಾಚಾರ್ಯರಿಗಿಂತ ಹಿಂದಿನವರೆಂದೂ ಇಟ್ಟುಕೊಂಡು ರಾಮಾನುಜಭಾಷ್ಯವು ಸೂತ್ರಗಳಿಗೆ ಹೆಚ್ಚು ಸಮೀಪದಲ್ಲಿರುವದೆಂದೂ ಶಾಂಕರಭಾಷ್ಯವು ಮುಖ್ಯವಾದ ಉಪನಿಷತ್ತುಗಳ ಬಹುಮತದಿಂದ ಏರ್ಪಡುವ ಉಪನಿಷತ್ಸಿದ್ಧಾಂತಕ್ಕೆ ಹೆಚ್ಚು ಸಮೀಪದಲ್ಲಿರುವದೆಂದೂ ಒಂದು ವಿಲಕ್ಷಣವಾದ ಅಭಿಪ್ರಾಯವನ್ನು ಹೊರಪಡಿಸಿರುತ್ತಾನೆ.

ಥೀಬೋ ಮಹಾಶಯನ ಮತವನ್ನು ಖಂಡಿಸುವದಕ್ಕೆ ನಮ್ಮ ದೇಶದವರು ಅನೇಕರು ಪ್ರಯತ್ನಿಸಿರುತ್ತಾರೆ. ಆದರೆ ಅವರ ಪ್ರಯತ್ನವು ವೃಥಾಶ್ರಮವೆಂದು ನಮ್ಮ ಅಭಿಪ್ರಾಯ. ಏಕೆಂದರೆ ಆ ಪಾಶ್ಚಾತ್ಯವಿದ್ವಾಂಸನ ವಿಮರ್ಶನಕ್ರಮದಲ್ಲಿ ನಾಲ್ಕು ಸ್ಫುಟವಾದ ದೋಷಗಳಿರುತ್ತವೆ: (೧) ಶಾಂಕರಭಾಷ್ಯವನ್ನು ರಾಮಾನುಜಭಾಷ್ಯಕ್ಕೆ ಹೋಲಿಸಿದ್ದರಿಂದ ರಾಮಾನುಜಭಾಷ್ಯವು ಸೂತ್ರಕ್ಕೆ ಹತ್ತಿರವಿರುವಂತೆ ತೋರಿದರೂ ಮಿಕ್ಕ ಭಾಷ್ಯಗಳನ್ನು–

ಅವರಲ್ಲಿಯೂ ರಾಮಾನುಜರ ಶ್ರೀಭಾಷ್ಯಕ್ಕಿಂತ ಮುಂಚೆಯೇ ಪ್ರಸಿದ್ಧವಾಗಿದ್ದ ಭಾಸ್ಕರಭಾಷ್ಯವನ್ನು– ತೆಗೆದುಕೊಂಡು ಶಾಂಕರಭಾಷ್ಯಕ್ಕೆ ಹೋಲಿಸಿದ್ದರೆ ಯಾವ ಫಲಿತಾಂಶವು ಸಿಕ್ಕುತ್ತಿತ್ತೆಂಬುದನ್ನು ಆತನು ಕಣ್ಣೆತ್ತಿಯೂ ನೋಡಿರುವದಿಲ್ಲ. (೨) ಶ್ರೀರಾಮಾನುಜಾಚಾರ್ಯರು ಶಂಕರರಿಗಿಂತ ಪ್ರಾಚೀನತರವಾದ ಸಂಪ್ರದಾಯವನ್ನು ಅನುಸರಿಸಿರುತ್ತಾರೆಂಬುದನ್ನು ಸಾಕಾದಷ್ಟು ಆಧಾರವಿಲ್ಲದೆಯೇ ಆತನು ಒಪ್ಪಿಕೊಂಡುಬಿಟ್ಟಿರುತ್ತಾನೆ. (೩) ವೇದಾಂತದಲ್ಲಿ ಮಿಕ್ಕ ದರ್ಶನಗಳನ್ನು ಖಂಡನೆಗೆ ತೆಗೆದುಕೊಂಡಂತೆ ಮಿಕ್ಕ ದರ್ಶನಗಳು ವೇದಾಂತವನ್ನು ಖಂಡಿಸುವಾಗ ವೇದಾಂತವೆಂದರೆ ಅದ್ವೈತವೆಂದೇ ಭಾವಿಸುತ್ತವೆ ಎಂಬ ಬಹುಮುಖ್ಯಸಂಗತಿಯನ್ನು ಆತನು ಲೆಕ್ಕಕ್ಕೆ ತೆಗೆದುಕೊಂಡಿರುವದಿಲ್ಲ. (೪) ಇವೆಲ್ಲಕ್ಕಿಂತಲೂ ಮುಖ್ಯವಾಗಿ ಶಂಕರಾಚಾರ್ಯರ ಸಿದ್ಧಾಂತವು ಯಾವದೆಂಬುದನ್ನು ಶಾಂಕರಭಾಷ್ಯದಿಂದ ನಿರ್ಣಯಿಸುವ ಪ್ರಯತ್ನವನ್ನು ಮಾಡದೆ ವ್ಯಾಖ್ಯಾನಕಾರರ ಅಭಿಪ್ರಾಯವನ್ನೇ ಶಾಂಕರಸಿದ್ಧಾಂತವೆಂದು ಆತನು ಕಣ್ಣುಮುಚ್ಚಿಕೊಂಡು ಉಪಯೋಗಿಸಿಕೊಂಡಿರುತ್ತಾನೆ. ಈ ನಾಲ್ಕನೆಯ ದೋಷವು ಬಹಳ ಮುಖ್ಯವಾಗಿರುತ್ತದೆ. ಏಕೆಂದರೆ ಶಾಂಕರಭಾಷ್ಯದಲ್ಲಿ ಯಾವ ಸಿದ್ಧಾಂತವಿದೆ ಎಂಬುದನ್ನು ಗೊತ್ತುಪಡಿಸದೆ ಶಾಂಕರಭಾಷ್ಯವು ಸೂತ್ರಾನುಸಾರಿಯೆ, ಅಲ್ಲವೆ ?– ಎಂಬುದನ್ನು ಗೊತ್ತುಪಡಿಸುವದಕ್ಕೆ ಹೋಗುವದು ತಳಹದಿಯಿಲ್ಲದೆ ಕಟ್ಟಡವನ್ನು ಕಟ್ಟುವ ಪ್ರಯತ್ನವಾಗುತ್ತದೆ.

ಉಪನಿಷತ್ತುಗಳಿಗೆಲ್ಲ ಸಮ್ಮತವಾಗಿರುವ ಒಂದಾನೊಂದು ಸಿದ್ಧಾಂತವಿದೆಯೆಂದೂ ಆ ಸಿದ್ಧಾಂತವನ್ನು ನ್ಯಾಯಗಳಿಂದ ನಿರ್ಣಯಿಸುವದಕ್ಕೇ ವೇದಾಂತಸೂತ್ರಗಳು ಬಂದಿವೆಯೆಂದೂ ಸಾಂಪ್ರದಾಯಿಕರು ಒಪ್ಪಿರುವ ಅಭಿಪ್ರಾಯವನ್ನೇ ಇಟ್ಟುಕೊಂಡು ಶಾಂಕರಭಾಷ್ಯವು ಹೊರಟಿದೆ. ಈ ವಿಷಯಕ್ಕೆ ಪ್ರಾಚೀನ ಅಥವಾ ಅರ್ವಾಚೀನಭಾಷ್ಯಕಾರರುಗಳು ಯಾರೊಬ್ಬರೂ ಮತಭೇದವುಳ್ಳವರಾಗಿಲ್ಲವಾದ್ದರಿಂದ ಇದಕ್ಕೆ ವಿರುದ್ಧವಾದ ಹೊಸ ಸಿದ್ಧಾಂತವನ್ನು ನಿರಾಧಾರವಾಗಿಟ್ಟುಕೊಂಡು ಹೊರಟಿರುವ ಥೀಬೋ ಮಹಾಶಯನ ವಿಚಾರಕ್ರಮದಲ್ಲಿ ನಮ್ಮ ದೇಶದವರಿಗೆ ಯಾರಿಗೂ ಆದರವುಂಟಾಗುವಂತಿಲ್ಲ. ಉಪನಿಷತ್ತುಗಳನ್ನೆಲ್ಲ ಹೊಂದಿಸುವ ಸಿದ್ಧಾಂತವನ್ನು ತೆಗೆದಿರುವದು ಶಂಕರಾಚಾರ್ಯರೊಬ್ಬರಿಗೇ ಸಾಧ್ಯವಾಗಿದೆಯೆಂದು ಆ ವಿಮರ್ಶಕನುಕೂಡ

ಒಪ್ಪಿರುವದರಿಂದ ಈ ಆಚಾರ್ಯರವರ ಭಾಷ್ಯವು ಸೂತ್ರಾನುಸಾರಿ ಎಂಬುವದಕ್ಕೆ ಇದೊಂದು ದೊಡ್ಡ ಸಾಕ್ಷಿಯಾಗಿರುತ್ತದೆ. ಶಂಕರಾಚಾರ್ಯರವರು ತಮಗಿಂತ ಪೂರ್ವದಲ್ಲಿ ಅನೇಕರು ಸೂತ್ರಭಾಷ್ಯಗಳನ್ನು* ಬರೆದಿರುವದಾಗಿ ಬಾಯಿಬಿಟ್ಟು ಹೇಳಿರುತ್ತಾರೆ; ಸೂತ್ರಗಳಲ್ಲಿ ಕೆಲವಕ್ಕೆ ಆ ಹಿಂದಿನ ಭಾಷ್ಯಕಾರರುಗಳು ಬರೆದಿರುವ ವ್ಯಾಖ್ಯಾನಾಂತರವನ್ನು ಅನುವಾದಮಾಡಿಕೊಂಡು ಖಂಡಿಸಿಯೂ ಇರುತ್ತಾರೆ; ಸೂತ್ರಗಳಲ್ಲಿ ಸಹ ಕೆಲವು ಪ್ರಧಾನವಿಚಾರಗಳ ಬಗ್ಗೆ ಪ್ರಾಚೀನವೇದಾಂತಿಗಳಲ್ಲಿ ಮತಭೇದವಿತ್ತೆಂದು ಹೇಳಿ ಸೂತ್ರಕಾರರು ತಮ್ಮ ಸಿದ್ಧಾಂತವನ್ನೇ ಅವಲಂಬಿಸಿರುತ್ತಾರೆಂಬುದನ್ನು ಸೂತ್ರವ್ಯಾಖ್ಯಾನದ ಮೂಲಕವಾಗಿ ಶ್ರುತಿಯುಕ್ತ್ಯನುಭವಗಳಿಂದ ತೋರಿಸಿಕೊಟ್ಟಿರುತ್ತಾರೆ. ಈ ಪರಾಮರ್ಶಗಳಲ್ಲಿ ಉದಾಹರಿಸಿರುವ ಪೂರ್ವಾಚಾರ್ಯರ ಮತಗಳನ್ನೂ ಅವುಗಳ ಖಂಡನಪ್ರಕಾರಗಳನ್ನೂ ಮುಂದೆ ಸಂಗ್ರಹವಾಗಿ ತಿಳಿಸುವೆವು. ಆದರೆ ಸದ್ಯಕ್ಕೆ ಒಂದು ವಿಷಯವನ್ನು—ನಾವು ನೆನಪಿನಲ್ಲಿಡುವದು ಒಳ್ಳೆಯದು. **ಆಚಾರ್ಯರು ಖಂಡನೆಗೆಂದು ಅನುವಾದಮಾಡಿಕೊಂಡಿರುವ ಎಲ್ಲಾ ವೇದಾಂತಿಗಳೂ ಮುಕ್ತಿಯಲ್ಲಿ ಅದ್ವೈತವನ್ನೇ ಒಪ್ಪುವವರಾಗಿರುತ್ತಾರೆ; ರಾಮಾನುಜಾದಿದ್ವೈತಿವೇದಾಂತಿಗಳ ಮತವನ್ನು ಅವರು ಎಲ್ಲಿಯೂ ಉದಾಹರಿಸಿಯೇ ಇರುವದಿಲ್ಲ.** ಹೀಗಿರುವದರಿಂದ ಅದ್ವೈತ ಸಂಪ್ರದಾಯಕ್ಕಿಂತ ಭಿನ್ನವಾದ ವೇದಾಂತಸಂಪ್ರದಾಯವೊಂದು ಆಚಾರ್ಯರಿಗಿಂತ ಹಿಂದೆ ಅಥವಾ ಆಚಾರ್ಯರ ಕಾಲಕ್ಕೆ ಇತ್ತೆಂದು ಭಾಷ್ಯದ ಆಧಾರದಿಂದಲಾಗಲಿ ಅಥವಾ ತತ್ಕಾಲದ ಗ್ರಂಥಾಂತರಗಳಿಂದಾಗಲಿ, ಸಾಧಿಸಿದಹೊರತು ಯಾವದೊಂದು ದ್ವೈತಭಾಷ್ಯವನ್ನು ಶಾಂಕರಭಾಷ್ಯಕ್ಕೆ ಹೋಲಿಸುವದಕ್ಕೆ ಹೊರಡುವದೂ ಸೂತ್ರಾರ್ಥನಿರ್ಣಯಕ್ಕೆ ಸಹಾಯಕವಾಗಲಾರದೆಂಬುದು ಸ್ಪಷ್ಟವಾಗಿರುತ್ತದೆ.

## ಸೂತ್ರಭಾಷ್ಯವೂ ವ್ಯಾಖ್ಯಾನಪ್ರಸ್ಥಾನಗಳೂ

ಸೂತ್ರದಲ್ಲಿಯೂ ಭಾಷ್ಯದಲ್ಲಿಯೂ ಪರಾಮೃಷ್ಟರಾಗಿರುವ ಅದ್ವೈತಿಗಳು (೧) ಸಂಸಾರದಲ್ಲಿ ಜೀವಬ್ರಹ್ಮರಿಗೆ ಭೇದ, ಮುಕ್ತಿಯಲ್ಲಿ

* ಭಾಷ್ಯಗಳಿಗೆ ವೃತ್ತಿಗಳೆಂಬ ಹೆಸರೂ ಇತ್ತು; ಆದ್ದರಿಂದ ಅನೇಕ ವೃತ್ತಿಕಾರರು ಆಚಾರ್ಯರ ಹಿಂದೆ ಇದ್ದರು. ಇದನ್ನರಿಯದೆ ಥೀಬೋ ವಿದ್ವಾಂಸನು ಬೋಧಾಯನರೆಂಬವರು ಒಬ್ಬರೇ ವೃತ್ತಿಕಾರರು ಎಂಬಂತೆ ಭಾವಿಸಿಕೊಂಡುಬಿಟ್ಟಿರುತ್ತಾರೆ.

ಅಭೇದ ; (೨) ಸಂಸಾರದಲ್ಲಿ ಜೀವಬ್ರಹ್ಮರಿಗೆ ಭೇದಾಭೇದ, ಮುಕ್ತಿಯಲ್ಲಿ ಅಭೇದ , (೬) ಸಂಸಾರದಲ್ಲಿ ಜೀವಬ್ರಹ್ಮರಿಗೆ ಅವಿದ್ಯಾಕೃತವಾದ ಭೇದ (ಅಥವಾ ಭೇದಾಭೇದ), ಸಂಸಾರದಲ್ಲಿಯೂ ಮುಕ್ತಿಯಲ್ಲಿಯೂ ಪಾರಮಾರ್ಥಿಕವಾದ ಅಭೇದ- ಎಂಬ ಮೂರು ವಾದಗಳಲ್ಲಿ ಒಂದನ್ನು ಅವಲಂಬಿಸುವವರಾಗಿರುತ್ತಾರೆ. ಈ ಮೂರರಲ್ಲಿ ಅವಿದ್ಯಾಕೃತಭೇದವನ್ನು ಒಪ್ಪಿ ಪಾರಮಾರ್ಥಿಕವಾಗಿ ಅಭೇದವನ್ನು ಒಪ್ಪುವ ವಾದವೇ ಶ್ರುತಿಗೂ ಸೂತ್ರಕಾರರಿಗೂ ಸಮ್ಮತವಾದ ಸಿದ್ಧಾಂತವೆಂದು ಶಂಕರಾಚಾರ್ಯರು ತಮ್ಮ ಸೂತ್ರಭಾಷ್ಯದಲ್ಲಿ (೧-೪-೨೨) ಸಾರಿರುತ್ತಾರೆ. ಹೀಗೆ ಈ ಭಾಷ್ಯಕಾರರ ಕಾಲದಲ್ಲಿ ಜೀವಭಾವವು ಪಾರಮಾರ್ಥಿಕವೆಂದು ಭಾವಿಸಿದ್ದ ವೈಶೇಷಿಕಮೀಮಾಂಸಕಾದಿದ್ವೈತಿಗಳೂ ವೇದಾಂತಿಗಳೂ ಇದ್ದರಾದ್ದರಿಂದಲೇ ಅವರು 'ಅಪರೇ ತು ವಾದಿನಃ ಪಾರಮಾರ್ಥಿಕಮೇವ ಜೈವಂ ರೂಪಮ್ ಇತಿ ಮನ್ಯನ್ತೇ ಅಸ್ಮದೀಯಾಶ್ಚ ಕೇಚಿತ್' ('ಆದರೆ ಬೇರೆಯ ವಾದಿಗಳು ಜೀವನ ರೂಪವು ಪಾರಮಾರ್ಥಿಕವೆಂದೇ ಅಭಿಪ್ರಾಯಪಡುತ್ತಾರೆ, ನಮ್ಮವರೂ ಕೆಲವರು ಹಾಗೆಂದು ಅಭಿಪ್ರಾಯಪಡುತ್ತಾರೆ') ಎಂದು ಬರೆದಿರುತ್ತಾರೆ. ಹೀಗಿರುವದರಿಂದ ಸೂತ್ರಾರ್ಥಕ್ಕೆ ಯಾವ ಭಾಷ್ಯವು ಹತ್ತಿರವಿದೆ ಎಂಬುದನ್ನು ನಿರ್ಧರಿಸುವದಕ್ಕೆ ಈಚಿನ ದ್ವೈತಿವೇದಾಂತಿಗಳ ಭಾಷ್ಯಗಳ ವಿಮರ್ಶೆಯು ಅಪ್ರಯೋಜಕವೆಂದೂ ಶಂಕರಾಚಾರ್ಯರೇ ಒಪ್ಪಿಕೊಂಡಿರುವ ಅದ್ವೈತಮತಪ್ರಭೇದಗಳಲ್ಲಿ ಯಾವದು ಸೂತ್ರಕ್ಕೆ ಹತ್ತಿರವಾಗಿದೆ ಎಂಬುದನ್ನೇ ನಿರ್ಣಯಿಸಬೇಕೆಂದೂ ಸಿದ್ಧವಾಗುತ್ತದೆ.

ಆದರೆ ಈ ಪ್ರಭೇದಗಳಲ್ಲಿ ಪ್ರಕೃತವಾಗಿರುವ ಶಾಂಕರಭಾಷ್ಯವು ಸೂತ್ರಕ್ಕೆ ಹತ್ತಿರವೊ, ಅಲ್ಲವೊ ?-ಎಂಬುದನ್ನು ನಿರ್ಣಯಿಸುವ ಮುಂಚೆ ಶಾಂಕರಸಿದ್ಧಾಂತವು ಯಾವದು ?- ಎಂಬುದನ್ನು ಮೊದಲು ಗೊತ್ತುಪಡಿಸಿಕೊಳ್ಳಲೇಬೇಕೆಂಬುದು ಸ್ಪಷ್ಟವು. ನಮ್ಮ ದೇಶದವರಾದ ರಾಮಾನುಜಾದಿ ಭಾಷ್ಯಕಾರರೂ ಪಾಶ್ಚಾತ್ಯವಿದ್ವಾಂಸರುಗಳಾದ ಮ್ಯಾಕ್ಸ್‌ಮುಲ್ಲರ್, ಥೀಬೋ -ಮುಂತಾದವರೂ ಈ ಸಿದ್ಧಾಂತವನ್ನು ಬಹುಮಟ್ಟಿಗೆ ವ್ಯಾಖ್ಯಾನಗಳ ಬಲದಿಂದಲೇ ನಿರ್ಣಯಿಸುವದಕ್ಕೆ ಹೋಗಿರುತ್ತಾರೆ. ಈ ಕ್ರಮವು ಸರಿಯಲ್ಲವೆಂಬುದನ್ನು ತಿಳಿಸುವದು ಅತ್ಯಂತ ಅವಶ್ಯವಾಗಿರುತ್ತದೆ. ಏಕೆಂದರೆ ಶಾಂಕರ

ಭಾಷ್ಯವು ಸ್ವತಃ ತನ್ನ ಸಿದ್ಧಾಂತವನ್ನು ನಿಸ್ಸಂದಿಗ್ಧವಾಗಿ ತಿಳಿಸುತ್ತಿರುವಲ್ಲಿ ಮತ್ತೊಬ್ಬರ ವ್ಯಾಖ್ಯಾನದಿಂದ ಅದನ್ನು ನಿರ್ಣಯಿಸುವದು ಅನ್ಯಾಯವಾಗಿರುತ್ತದೆ. ಇದಲ್ಲದೆ ವ್ಯಾಖ್ಯಾನಗಳಾದರೂ ಏಕಕಂಠವಾಗಿ ಒಂದೇ ಸಿದ್ಧಾಂತವನ್ನು ತಿಳಿಸದೆ ಅತ್ಯಂತವಿರುದ್ಧವಾದ ಪ್ರಕ್ರಿಯೆಗಳನ್ನೂ ಶಾಂಕರಸಿದ್ಧಾಂತವೆಂದೇ ಪ್ರತಿಪಾದಿಸುತ್ತಿರುತ್ತವೆ; ಆದ್ದರಿಂದಲೂ ಅವುಗಳ ಬಲದಿಂದ ಶಾಂಕರಸಿದ್ಧಾಂತವನ್ನು ನಿರ್ಣಯಿಸುವದು ಅಯುಕ್ತವಾಗಿರುತ್ತದೆ.

ವ್ಯಾಖ್ಯಾನಗಳಿಂದ ಶಾಂಕರಸಿದ್ಧಾಂತವನ್ನು ನಿರ್ಣಯಿಸುವದು ಯುಕ್ತವಲ್ಲವೆಂಬುದನ್ನು ತೋರಿಸುವದು ಸೂತ್ರಾರ್ಥನಿರ್ಧಾರಕರಿಗೆ ಮಾತ್ರವೇ ಅಲ್ಲದೆ ಶಂಕರರ ಅನುಯಾಯಿಗಳಾದ ಮುಮುಕ್ಷುಗಳಿಗೂ ಬೇಕಾಗಿರುತ್ತದೆ. ಏಕೆಂದರೆ ಈಗ ಅನೇಕ ಅದ್ವೈತಿಗಳ ಅಭಿಪ್ರಾಯದಲ್ಲಿ ವ್ಯಾಖ್ಯಾನಗಳೆಲ್ಲವೂ ಶಾಂಕರಸಿದ್ಧಾಂತವನ್ನೇ ವಿವರಿಸುತ್ತವೆ ಎಂಬ ತಪ್ಪುಅಭಿಪ್ರಾಯವುಂಟಾಗಿರುತ್ತದೆ. ಈ ಅಭಿಪ್ರಾಯದ ದೋಷವನ್ನು ಹೊರಗೆಡಹಿದ ಹೊರತು ಮೂಲಭಾಷ್ಯವನ್ನೇ ಚಿಂತನೆಮಾಡಿ ತತ್ತ್ವಜ್ಞಾನವನ್ನು ಸಂಪಾದಿಸಿಕೊಳ್ಳಬೇಕೆಂಬ ನಿಶ್ಚಯವು ಮುಮುಕ್ಷುಗಳಿಗೆ ಎಂದಿಗೂ ಉಂಟಾಗುವಹಾಗಿಲ್ಲ.

ಸೂತ್ರಭಾಷ್ಯಕ್ಕೆ ಪಂಚಪಾದಿಕೆ, ಭಾಮತಿ– ಎಂಬ ಎರಡು ಮುಖ್ಯವ್ಯಾಖ್ಯಾನಗಳಿರುತ್ತವೆ. ಇವುಗಳಲ್ಲಿ ಪಂಚಪಾದಿಕೆಯು ಬಹಳ ಹಿಂದಿನದಾಗಿದ್ದು ಶಂಕರಶಿಷ್ಯರಾದ ಪದ್ಮಪಾದಾಚಾರ್ಯರಿಂದ ವಿರಚಿತವಾದದ್ದೆಂಬ ಪ್ರಖ್ಯಾತಿಯನ್ನು ಹೊಂದಿದೆ. ಭಾಮತಿಯು ವಾಚಸ್ಪತಿಮಿಶ್ರನೆಂಬ ವಿದ್ವಾಂಸನಿಂದ ಈಚೆಗೆ ವಿರಚಿತವಾದದ್ದು. ಈ ಎರಡು ವ್ಯಾಖ್ಯಾನಗಳೂ ವೇದಾಂತಪ್ರಕ್ರಿಯೆಯ ಬಹುಮುಖ್ಯವಾದ ತತ್ತ್ವಗಳನ್ನು ಪರಸ್ಪರವಿರುದ್ಧವಾದ ಎರಡು ಬೇರೆಬೇರೆಯ ರೀತಿಗಳಲ್ಲಿ ವಿವರಿಸಿರುತ್ತವೆ. ಪಂಚಪಾದಿಕೆಯ ಮೇಲೆ ಪ್ರಕಾಶಾತ್ಮಯತಿಗಳು ಬರೆದಿರುವ ವಿವರಣವೆಂಬ ವ್ಯಾಖ್ಯಾನದಲ್ಲಿ ಕೆಲವು ಹೊಸ ವಿಷಯಗಳನ್ನು ಸೇರಿಸಿರುವದಲ್ಲದೆ ಭಾಮತೀವ್ಯಾಖ್ಯಾನದ ಪ್ರಕ್ರಿಯೆಯಲ್ಲಿ ಕೆಲವು ದೋಷಗಳನ್ನೂ ತೋರಿಸಿದೆ. ಭಾಮತೀವ್ಯಾಖ್ಯಾನಕ್ಕೆ ಅಮಲಾನಂದವಿರಚಿತವಾದ ಕಲ್ಪತರುವೆಂಬ ವ್ಯಾಖ್ಯಾನವಿದೆ; ಅದರಲ್ಲಿ ಕೆಲವು ಹೆಚ್ಚಿನ ವಿಷಯಗಳಿರುವದಲ್ಲದೆ ಭಾಮತೀವ್ಯಾಖ್ಯಾನವೇ ನಿರ್ದುಷ್ಟವೆಂದು ತೋರಿಸುವ ಪ್ರಯತ್ನವೂ ನಡೆದಿದೆ. ಈ ಎರಡು ವ್ಯಾಖ್ಯಾನ

ಪ್ರಸ್ಥಾನಗಳನ್ನೂ ಕ್ರಮವಾಗಿ ವಿವರಣಪ್ರಸ್ಥಾನ, ಭಾಮತೀಪ್ರಸ್ಥಾನ-ಎಂಬ ಹೆಸರುಗಳಿಂದ ಕರೆಯುವ ರೂಢಿಯಿರುತ್ತದೆ. ಈ ಶಾಖೋಪಶಾಖೆಗಳಾಗಿ ಒಡೆದುಕೊಂಡಿರುವ ವ್ಯಾಖ್ಯಾನಪರಂಪರೆಗಳನ್ನು ಪರೀಕ್ಷಿಸುವದಕ್ಕೆ ಇದು ಸ್ಥಲವೂ ಅಲ್ಲ, ಆ ಪರೀಕ್ಷೆಯು ನಮಗೆ ಅವಶ್ಯವೂ ಅಲ್ಲ.[1] ಇದನ್ನು ಒಳ ಹೊಕ್ಕು ನೋಡಿದ್ದರಲ್ಲಿ ಮುಖ್ಯವಾಗಿ ಪಂಚಪಾದಿಕೆ, ಭಾಮತಿ-ಎಂಬ ಹೆಸರಿನ ವ್ಯಾಖ್ಯಾನಗಳು **ವೇದಾಂತದ ಮೂಲ ಉಪದೇಶಗಳನ್ನೇ ಭಾಷ್ಯಕ್ಕಿಂತ ತೀರ ಭಿನ್ನತಾದ ರೀತಿಯಿಂದ ಮಾರ್ಪಡಿಸಿರುವವೆಂದು ನಮಗೆ ತಿಳಿದುಬಂದಿದೆ.** ಈ ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ಪೂರ್ಣವಾಗಿ ತಿಳಿಯಲಿಚ್ಛಿಸುವವರು ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿ ಪ್ರಕಟವಾಗಿರುವ ಗ್ರಂಥರಾಶಿಗಳನ್ನು ಅಧ್ಯಯನಮಾಡಬೇಕು. ಮುಖ್ಯವಾಗಿ ಸಂಸ್ಕೃತಭಾಷೆಯಲ್ಲಿರುವ 'ವೇದಾಂತಪ್ರಕ್ರಿಯಾಪ್ರತ್ಯಭಿಜ್ಞಾ', 'ಪಂಚಪಾದಿಕಾಪ್ರಸ್ಥಾನಮ್', 'ಸೂತ್ರಭಾಷ್ಯಾರ್ಥತತ್ತ್ವವಿವೇಚನೀ' (ಮೂರು ಭಾಗಗಳು) ಎಂಬ ಗ್ರಂಥಗಳನ್ನೂ Mis-conceptions about Shankara-ಎಂಬ ಗ್ರಂಥವನ್ನೂ ಓದಬೇಕು. ಇಲ್ಲಿ ಈ ಎರಡು ಪ್ರಸ್ಥಾನಗಳ ಸಾರವನ್ನೂ ಶಾಂಕರಭಾಷ್ಯಕ್ಕೆ ಅವು ಯಾವ ವಿಷಯವಲ್ಲಿ ಅತ್ಯಂತಭಿನ್ನವಾಗಿರುವವೆಂಬುದನ್ನೂ ತಿಳಿಯಪಡಿಸುವ ಉದ್ದೇಶದಿಂದ ಸ್ವಲ್ಪಮಟ್ಟಿಗೆ ಸಂಗ್ರಹಿಸಿರುತ್ತೇವೆ.

ವಿವರಣಪ್ರಸ್ಥಾನದಲ್ಲಿ[2] ಭಾಷ್ಯದಲ್ಲೆಲ್ಲೂ ಕಾಣದಿರುವ ಮೂಲಾವಿದ್ಯಾವಾದವನ್ನು ಅಂಗೀಕರಿಸಿರುತ್ತದೆ. ಭಾಮತಿಯಲ್ಲಿ ಅದನ್ನು ಅಂಗೀಕರಿಸಿರುವ ಸ್ಪಷ್ಟೋಕ್ತಿಗಳು ಕಂಡುಬರುವದಿಲ್ಲವಾದರೂ ಆ ವಾದಕ್ಕೆ ಹೊಂದುವ ಅಭಿಪ್ರಾಯಗಳು ಅಲ್ಲಲ್ಲಿ ಕಾಣಬರುತ್ತವೆ. ಕಲ್ಪತರುವ್ಯಾಖ್ಯಾನದಲ್ಲಂತೂ ಭಾಮತಿಗೆ ಮೂಲಾವಿದ್ಯೆಯು ಒಪ್ಪೆಂದೇ ಸ್ಪಷ್ಟವಾಗಿ ಹೇಳಿರು

---

1. ಇದುವರೆಗೆ ವ್ಯಾಖ್ಯಾನಪ್ರಸ್ಥಾನಗಳಲ್ಲಿ ಆಗಿರುವ ಅನೇಕ ಮತಭೇದಗಳನ್ನು ಶ್ರೀ॥ ಅಪ್ಪಯ್ಯದೀಕ್ಷಿತರು ತಮ್ಮ "ಸಿದ್ಧಾಂತಲೇಶಸಂಗ್ರಹ"ವೆಂಬ ಪ್ರಕರಣದಲ್ಲಿ ಸಂಗ್ರಹಿಸಿರುತ್ತಾರೆ.

2. ಪಂಚಪಾದಿಕೆಗೂ ವಿವರಣಕ್ಕೂ ಇರುವ ಸಣ್ಣಪುಟ್ಟ ಅಭಿಪ್ರಾಯಭೇದಗಳನ್ನೂ ಭಾಮತಿಗೂ ಕಲ್ಪತರುವಿಗೂ ಇರುವ ಅಭಿಪ್ರಾಯಭೇದವನ್ನೂ ಇಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿರುವದಿಲ್ಲ.

ತ್ತದೆ. ಭಾಮತೀಪ್ರಸ್ಥಾನದಲ್ಲಿ ಭಾಷ್ಯಕಾರರ ಮತಕ್ಕೆ ವಿರೋಧಿಯಾದ ಮಂಡನಮಿಶ್ರವಿರಚಿತವಾದ ಬ್ರಹ್ಮಸಿದ್ಧಿ-ಎಂಬ ಗ್ರಂಥವನ್ನು ಅನುಸರಿಸಿರುವ ಹಲವು ಅಭಿಪ್ರಾಯಗಳು ಹೆಣೆದುಕೊಂಡಿರುತ್ತವೆ. ಇಷ್ಟನ್ನು ಮನಸ್ಸಿನಲ್ಲಿಟ್ಟುಕೊಂಡು ವಾಚಕರು ಈ ಕೆಳಗಿನ ಪ್ರಸ್ಥಾನತಾರತಮ್ಯದ ಸಂಗ್ರಹವನ್ನು ಉಪಯೋಗಿಸಿಕೊಳ್ಳಬೇಕು.

## ಭಾಷ್ಯವ್ಯಾಖ್ಯಾನಪ್ರಸ್ಥಾನಗಳ ತಾರತಮ್ಯ

ಭಾಷ್ಯಕ್ಕೂ ಅದರ ಮೇಲಿರುವ ವ್ಯಾಖ್ಯಾನಪ್ರಸ್ಥಾನಗಳಿಗೂ ಕೆಲವು ಮುಖ್ಯವಾದ ಸಿದ್ಧಾಂತಭೇದಗಳಿವೆ. ಹೀಗಿರುವದರಿಂದ ವ್ಯಾಖ್ಯಾನಗಳು ಸ್ವತಂತ್ರಪ್ರಕ್ರಿಯೆಯಿಂದಲೇ ಅದ್ವೈತವನ್ನು ನಿರೂಪಿಸಿವೆ- ಎಂದು ಹೇಳುವದಕ್ಕೆ ಬರುತ್ತದೆ. ಮುಖ್ಯವಾದ ಮತಭೇದಗಳು ಯಾವವೆಂದರೆ ;

**1. ವಿದ್ಯಾವಿರೋಧಿಯಾದ ಅವಿದ್ಯೆ :**

ಭಾಷ್ಯದಂತೆ ಆತ್ಮೈಕತ್ವಜ್ಞಾನವೇ ವಿದ್ಯೆ, ಆತ್ಮಾನಾತ್ಮಗಳೆಂಬ ಸತ್ಯಾನೃತಗಳ ವಿವೇಕವಿಲ್ಲದೆ ಒಂದನ್ನೊಂದೆಂದು ತಿಳಿಯುವ ಅಧ್ಯಾಸವೇ ಅವಿದ್ಯೆ. ಈ ಅವಿದ್ಯೆಯು ಪ್ರಮಾಣಪ್ರಮೇಯಾದಿವ್ಯವಹಾರಕ್ಕೆ ಕಾರಣವಾಗಿದೆ. ಆತ್ಮೈಕತ್ವಜ್ಞಾನಕ್ಕೆ ವೇದಾಂತವಾಕ್ಯವೇ ಕರಣವು ; ವೇದಾಂತವಾಕ್ಯಜ್ಞಾನಕ್ಕೆ ಪದಾರ್ಥವಿಷಯಕವಾದ ಅಜ್ಞಾನಸಂಶಯವಿಪರ್ಯಯಗಳೇ ಅಡ್ಡಿ.

**ವಿವರಣ :** ಚೈತನ್ಯಸತ್ತೆಯನ್ನನುಸರಿಸಿಕೊಂಡಿರುವ ಅನಾದಿಯಾದ ಅಗ್ರಹಣಮಿಥ್ಯಾಜ್ಞಾನತತ್ಸಂಸ್ಕಾರಗಳಿಗಿಂತ ಭಿನ್ನವಾದ ನಾಮರೂಪ, ಅವ್ಯಾಕೃತ, ಮಾಯಾ-ಮುಂತಾದ ಹೆಸರುಗಳಿಂದ ಪ್ರಸಿದ್ಧವಾಗಿರುವ ಅಧ್ಯಾಸಕ್ಕೆ ಉಪಾದಾನಕಾರಣವಾಗಿರುವ ಸತ್ತೆಂದಾಗಲಿ, ಅಸತ್ತೆಂದಾಗಲಿ ಗೊತ್ತುಮಾಡಿಹೇಳುವದಕ್ಕೆ ಬರುವಹಾಗಿಲ್ಲವಾದ್ದರಿಂದ ಅನಿರ್ವಚನೀಯವಾದ ಜ್ಞಾನವಿರೋಧಿಯಾದ ಜಡಾತ್ಮಕಶಕ್ತಿಯೇ ಅವಿದ್ಯೆ. ಇದು ಆತ್ಮನಿಗೆ ಆವರಣವು. ಅಂತಃಕರಣವು ಇದರ ಪರಿಣಾಮವು. ಇದಕ್ಕೆ ಪ್ರತ್ಯಕ್ಷಾನು-ಮಾನಾರ್ಥಾಪತ್ತಿಶ್ರುತಿಗಳು ಪ್ರಮಾಣವು.

ಭಾಮತೀ : ಅನಿರ್ವಾಚ್ಯವಾದ ಕಾರ್ಯಕಾರಣಾವಿದ್ಯೆಗಳಿಂದ ಕೂಡಿದ ಆತ್ಮನ ವಿವರ್ತವು ಜಗತ್ತು. ಮಹಾಪ್ರಲಯದಲ್ಲಿ ಅಂತಃಕರಣಾದಿಗಳು ತಮ್ಮ ಕಾರಣವಾದ ಅನಿರ್ವಾಚ್ಯಾವಿದ್ಯೆಯಲ್ಲಿ ಕರ್ಮವಿಕ್ಷೇಪಕವಾದ ಅವಿದ್ಯಾ ವಾಸನೆಗಳಿಂದೊಡಗೂಡಿ ಅಡಗಿಕೊಂಡಿರುತ್ತವೆ; ಸೃಷ್ಟಿಕಾಲದಲ್ಲಿ—ಮೊದಲು ಮಣ್ಣಾಗಿದ್ದ ಕಪ್ಪೆಯ ಶರೀರಗಳು ಮಳೆಗಾಲದಲ್ಲಿ ಮತ್ತೆ ಕಪ್ಪೆಗಳಾಗುವಂತೆ—ಹಿಂದಿನಂಥ ನಾಮರೂಪಗಳನ್ನೇ ಪಡೆಯುವುವು. ಈ ಅವಿದ್ಯಾಶಕ್ತಿಯು 'ಬ್ರಹ್ಮಕ್ಕಿಂತ ಅಥವಾ ಜೀವರುಗಳಿಗಿಂತ ಬೇರೆಯೆಂದಾಗಲಿ ಬೇರೆಯಲ್ಲವೆಂದಾಗಲಿ ಗೊತ್ತುಪಡಿಸುವದಕ್ಕೆ ಆಗುವದಿಲ್ಲ; ಅದು ಪ್ರತಿಜೀವರಿಗೂ ಬೇರೆಬೇರೆಯಾಗಿದೆ. ಇದು ಜ್ಞಾನನಾಶ್ಯವು ವ್ಯಾಕೃತಾವ್ಯಾಕೃತರೂಪವಾಗಿರುವ ನಾಮರೂಪಮಾಯೆಯು ಅವಿದ್ಯಾಕಲ್ಪಿತವೆಂಬ ಪಕ್ಷವೂ ಭಾಮತಿಯಲ್ಲಿದೆ. ವಿದ್ಯಾಸ್ವರೂಪವಾಗಿರುವ ಬ್ರಹ್ಮವು ಅವಿದ್ಯೆಗೆ ಆಶ್ರಯವಲ್ಲ, ವಿಷಯವು; ಅವಿದ್ಯಾಜೀವರುಗಳು ಬೀಜಾಂಕುರನ್ಯಾಯದಿಂದ ಅನಾದಿ.

2. ಅವಿದ್ಯಾನಿವೃತ್ತಿ :

ಭಾಷ್ಯ : ನಾನು ಸ್ವಭಾವದಿಂದಲೇ ಬ್ರಹ್ಮವಾಗಿರುವೆನು ಎಂಬ ಬ್ರಹ್ಮಜ್ಞಾನವು 'ತತ್ತ್ವಮಸಿ' ಮುಂತಾದ ವಾಕ್ಯಗಳ ಶ್ರವಣಮನನನಿದಿಧ್ಯಾಸನಗಳಿಂದ ಆಗುತ್ತದೆ; ಈ ಸಾಧನಗಳು ವಾಕ್ಯಾರ್ಥವನ್ನು ಅರಿತುಕೊಳ್ಳುವದಕ್ಕೇ ಹೊರತು ಮತ್ತೇತಕ್ಕೂ ಅಲ್ಲ. ವಾಕ್ಯಾರ್ಥಜ್ಞಾನವು ಉಂಟಾದರೆ ಅವಿದ್ಯಾದಿದೋಷಗಳು ಸಂಪೂರ್ಣವಾಗಿ ತೊಲಗುತ್ತವೆ; 'ನಾನು ಶರೀರಿಯು, ಕರ್ತೃಭೋಕ್ತೃರೂಪನು' ಎಂಬ ತಪ್ಪುತಿಳಿವಳಿಕೆಯು ಸಂಪೂರ್ಣವಾಗಿ ತೊಲಗುತ್ತದೆ. ಆದ್ದರಿಂದ ವೇದಾಂತವಾಕ್ಯದಿಂದಾಗುವ ಅವಿದ್ಯಾನಿವೃತ್ತಿಯೂ ಸಂಸಾರನಿವೃತ್ತಿಯೂ ಪ್ರತ್ಯಕ್ಷವಾಗಿಯೇ ಅನುಭವಕ್ಕೆ ಬರುತ್ತವೆ, ಕಾಲಾಂತರದಲ್ಲಿ ಅವಸ್ಥಾಂತರದಲ್ಲಿ ಆಗುವದಲ್ಲ. ಪ್ರಾರಬ್ಧಕರ್ಮವೇ ಮುಂತಾದದ್ದು ಕೂಡ ಬಾಧಿತವಾದ ಮಿಥ್ಯಾಜ್ಞಾನದ ಅನುವೃತ್ತಿಯೇ ಹೊರತು ಇನ್ನುಮುಂದೆ ಜ್ಞಾನಿಗೆ ಅದರಲ್ಲಿ ಸತ್ಯತ್ವಬುದ್ಧಿಯು ಉಳಿದುಕೊಳ್ಳುವದಿಲ್ಲ.

ವಿವರಣ : 'ತತ್ತ್ವಮಸಿ' ಮುಂತಾದ ವಾಕ್ಯಗಳಿಂದ ನಾನು ಬ್ರಹ್ಮವು ಎಂಬ ಹೊಸದೊಂದು ಜ್ಞಾನವುಂಟಾಗುತ್ತದೆ. ವಾಕ್ಯದ ಶ್ರವಣವೆಂಬ

ಅಂಗಿಯನ್ನು ಮನನನಿದಿಧ್ಯಾಸಗಳಿಂದೊಡಗೂಡಿ ಶಾಸ್ತ್ರದಲ್ಲಿ ವಿಧಿಸಿದೆ. ಪುರುಷಾರ್ಥವನ್ನು ಬಯಸುವವರು ಮತ್ತೆಮತ್ತೆ ವಾಕ್ಯವನ್ನು ಅಭ್ಯಾಸ ಮಾಡಬೇಕು, ಅದರಿಂದ ಅವಿದ್ಯೆಯು ನಿವೃತ್ತವಾಗುತ್ತದೆ. ಬ್ರಹ್ಮಜ್ಞಾನವೂ ಸ್ವರೂಪದಿಂದ ಮಿಥ್ಯೆಯೇ ಆದರೂ ಅದರ ವಿಷಯವು ಮಿಥ್ಯೆಯಲ್ಲ; ಪ್ರಪಂಚವು ಜ್ಞಾನಬಾಧಿಕವಾಗುವಂತೆ ಜ್ಞಾನವು ಬಾಧಿತವಾಗುವದಿಲ್ಲ, ಅನಾದ್ಯವಿದ್ಯೆಯೂ ಜ್ಞಾನಾಭಾವಾದಿಗಳಂತೆ ಜ್ಞಾನವಿರೋಧಿಯಾದ್ದರಿಂದ ನಾಶವಾಗಬಹುದು; ಜ್ಞಾನಿಯು ಸಮಾಧಿಯಲ್ಲಿ ಆತ್ಮೈಕ್ಯವನ್ನು ಕಾಣು ತ್ತಿರುತ್ತಾನೆ. ಜ್ಞಾನವುಂಟಾದಮೇಲೂ ಅವಿದ್ಯೆಯ ಲೇಶವು ಉಳಿದು ಕೊಂಡಿರುವದರಿಂದ ದ್ವೈತವು ಅವನಿಗೆ ಕಾಣುತ್ತದೆ ; ಈ ಅವಿದ್ಯಾಲೇಶವು ತೊಲಗಿದಮೇಲೆ ವಿದೇಹಮುಕ್ತಿಯು ದೊರಕುತ್ತದೆ.

**ಭಾಮತೀ :** 'ತತ್ತ್ವಮಸಿ' ಮುಂತಾದ ವಾಕ್ಯಗಳಿಂದ ಶ್ರವಣಮನನ ಗಳನ್ನು ಮಾಡಿದ ಬಳಿಕ ಆ ಜ್ಞಾನದ ಭಾವನೆಯಿಂದ ಸಾಕ್ಷಾತ್ಕಾರಮಾಡಿ ಕೊಂಡರೆ ಅವಿದ್ಯೆಯು ಸಂಸ್ಕಾರಸಮೇತವಾಗಿ ತೊಲಗುತ್ತದೆ ; ಶ್ರವಣಮನನ ನಿದಿಧ್ಯಾಸನದರ್ಶನಗಳೆಂದರೆ ಸಾಕ್ಷಾತ್ಕಾರರೂಪವಾದ ಧಾರಣಾಧ್ಯಾನ ಸಮಾಧಿಗಳೇ. ಸಂಸಾರಭ್ರಾಂತಿಯು ಬರಿಯ ವಾಕ್ಯಜ್ಞಾನದಿಂದ ತೊಲಗ ಲಾರದು. ಶ್ರವಣಾದಿಗಳನ್ನು ಶಾಸ್ತ್ರದಲ್ಲಿ ವಿಧಿಸಿಲ್ಲವಾದರೂ ಅವುಗಳಿಂದ ಸಾಕ್ಷಾತ್ಕಾರವಾಗುವದು ಲೋಕಸಿದ್ಧವಾದ್ದರಿಂದ ಅವನ್ನು ಮುಮುಕ್ಷುವು ಅಭ್ಯಾಸಮಾಡಬೇಕು. ವೃತ್ತಿರೂಪಸಾಕ್ಷಾತ್ಕಾರವು ಸ್ವಪರವಿರೋಧಿ, ಚೈತನ್ಯ ರೂಪಸಾಕ್ಷಾತ್ಕಾರವು ನಿತ್ಯಸಿದ್ಧ. ಸಾಕ್ಷಾತ್ಕಾರವೂ ಅವಿದ್ಯೆಯಾದರೂ ಅದು ಅಧ್ಯಾಸರೂಪಾವಿದ್ಯೆಯನ್ನು ತೊಲಗಿಸಬಹುದು. ಈ ಸಾಕ್ಷಾತ್ಕಾರವು ಆರಬ್ಧ ಕರ್ಮವನ್ನು ನಾಶಗೊಳಿಸಲಾರದು ; ಆ ಕರ್ಮವಿರುವವರೆಗೆ ವಿದೇಹಮುಕ್ತಿ ಯಾಗಲಾರದು. ಜ್ಞಾನಾಜ್ಞಾನಗಳು ಒಟ್ಟಿಗೆ ಇರಬಾರದೆಂಬ ನಿಯಮ ವೇನೂ ಇಲ್ಲ. ವಿದೇಹಮುಕ್ತಿಯು ನಮ್ಮ ಅನುಭವದಲ್ಲಿಲ್ಲವಾದರೂ ಶ್ರುತಿ ಪ್ರಾಮಾಣ್ಯದಿಂದ ಅದನ್ನು ನಿಶ್ಚಯಿಸಬೇಕಾಗುತ್ತದೆ.

### 3. ಅನಿರ್ವಚನೀಯವಾದ :

**ಭಾಷ್ಯ :** ಸರ್ವಜ್ಞನಾದ ಈಶ್ವರನ ಸ್ವರೂಪವೇ ಎಂಬಂತೆ ಅವಿದ್ಯಾ ಕಲ್ಪಿತವಾಗಿರುವ ನಾಮರೂಪಗಳು ಆತ್ಮನೇ ಎಂದಾಗಲಿ, ಆತ್ಮನಲ್ಲವೆಂದಾಗಲಿ

ನಿರ್ವಚನಮಾಡಿ ಹೇಳುವದಕ್ಕೆ ಬರುವಂತಿರುವದಿಲ್ಲ. ಇದನ್ನೇ ಈಶ್ವರನ ಮಾಯೆ, ಶಕ್ತಿ, ಪ್ರಕೃತಿ–ಎಂದು ಮುಂತಾಗಿ ಕರೆಯುತ್ತಾರೆ. ಅವ್ಯಾಕೃತವಾಗಿರುವ ಇವುಗಳನ್ನೇ ಈಶ್ವರನು ವ್ಯಾಕರಣಮಾಡುವದರಿಂದ ಜಗತ್ತಿಗೆ ಸ್ರಷ್ಟೃವೆನಿಸುವನು. ಇವು ಹಾಗೆ ಅನಿರ್ವಚನೀಯವಾಗಿರುವದರಿಂದಲೇ ಮಾಯೆಯನ್ನು 'ಅವ್ಯಕ್ತ'ವೆಂದು ಕರದಿರುವರು ; ಈ ಅವ್ಯಕ್ತವು ಪರಮೇಶ್ವರನನ್ನು ಆಶ್ರಯಿಸಿಕೊಂಡು ಅವನಿಗೆ ಅಧೀನವಾಗಿಯೇ ಜಗತ್ತಿಗೆ ಕಾರಣವೆನಿಸುತ್ತದೆ. ಲೋಕದಲ್ಲಿ ಶುಕ್ತಿಯನ್ನು ರಜತವೆಂದು ತಿಳಿಯುತ್ತಾರೆಂಬುದೂ ಹೀಗೆಯೇ ; ಅಲ್ಲಿ ಅವಿದ್ಯೆಯಿಂದ ರಜತವೆಂದು ತಿಳಿಯುತ್ತಾರೆಯೇ ಹೊರತು ನಿಜವಾದ ರಜತವಿರುವದಿಲ್ಲ.

ವಿವರಣ : ಪ್ರಪಂಚವೆಲ್ಲವೂ ಸದಸದ್ವಿಲಕ್ಷಣವಾದ ಅನಿರ್ವಚನೀಯವಾದ ಅವಿದ್ಯೆಯ ಕಾರ್ಯವು. ಭಾಷ್ಯದಲ್ಲಿ 'ಮಿಥ್ಯಾಜ್ಞಾನನಿಮಿತ್ತವಾದ ಅಧ್ಯಾಸವು' ಎಂದು ಬರೆದಿದೆ ; ಅಲ್ಲಿ ಮಿಥ್ಯೆಯೆಂದರೆ ಅನಿರ್ವಚನೀಯವು, ಅಜ್ಞಾನವೆಂದರೆ ಜಡಾತ್ಮಕವಾದ ಅವಿದ್ಯಾಶಕ್ತಿಯು, ಅದು ನಿಮಿತ್ತವು ಎಂದರೆ ಅಧ್ಯಾಸಕ್ಕೆ ಉಪಾದಾನವು ಎಂದರ್ಥ. ಅನ್ವಯವ್ಯತಿರೇಕಗಳಿಂದ ಅಧ್ಯಾಸಕ್ಕೆ ಅವಿದ್ಯೆಯೇ ಉಪಾದಾನವೆಂದು ತಿಳಿದುಬರುತ್ತದೆಯಾದ್ದರಿಂದ ಅಧ್ಯಾಸವೂ ಅವಿದ್ಯೆಯೇ ; ಅವಿದ್ಯೆಯೂ ಅವಿದ್ಯಾತಂತ್ರವಾದ ಅವಿದ್ಯಾಸಂಬಂಧವೂ ಜೀವಬ್ರಹ್ಮವಿಭಾಗವೂ ಅನಿರ್ವಚನೀಯವೇ. ಶುಕ್ತಿರಜತ ದೃಷ್ಟಾಂತದಲ್ಲಿ ಲೋಕದಲ್ಲಿರುವ ನಿಜವಾದ ರಜತವು ಅಲ್ಲಿರುವದಿಲ್ಲ, ಅದರ ಸಜಾತೀಯವಾದ ಅನಿರ್ವಚನೀಯರಜತವಿರುತ್ತದೆ. ಶುಕ್ತಿಸಂಬದ್ಧವಾದ ಚೈತನ್ಯದಲ್ಲಿರುವ ಅವಿದ್ಯೆಯು ರಜತವಾಗಿರುತ್ತದೆ ; ದೋಷಸಹಿತವಾದ ಅವಿದ್ಯೆಯ ಪರಿಣಾಮವೇ ಅನಿರ್ವಚನೀಯರಜತ ಮತ್ತು ಅದರ ಜ್ಞಾನ, ಮೂಲವಾದ ಅವಿದ್ಯೆಯ ಅಥವಾ ಅದರ ಅವಸ್ಥಾವಿಶೇಷಗಳಾದ ಅವಿದ್ಯೆಗಳು ಆ ಅನಿರ್ವಚನೀಯರಜತಕ್ಕೆ ಉಪಾದಾನ. ಅವಿದ್ಯೆಯೂ ಮಾಯೆಯೂ ಒಂದೇ ಪದಾರ್ಥ.

ಭಾಮತೀ : ಬ್ರಹ್ಮವು ಮೊದಲಿನಂತೆ ಇದ್ದುಕೊಂಡೇ ಅನಿರ್ವಾಚ್ಯವಾದ ಜಗದ್ರೂಪವನ್ನು ತಳೆಯುತ್ತದೆ ; ಕಾರ್ಯವು ತನ್ನ ರೂಪದಿಂದ ಅನಿರ್ವಾಚ್ಯವು, ಕಾರಣರೂಪದಿಂದಲೇ ಸತ್ತು. ಬಿಸಿಲುಕುದುರೆಯಲ್ಲಿ ತೋರುವ ನೀರು ಸತ್ತಲ್ಲ, ಏಕೆಂದರೆ ಅಲ್ಲಿ ನಿಜವಾದ ನೀರು ಸಿಕ್ಕುವದಿಲ್ಲ; ಅದು ಅಸತ್ತೂ

ಅಲ್ಲ, ಏಕೆಂದರೆ ಅನುಭವಗೋಚರವಾಗಿದೆ ; ಅದು ಸದಸದ್ರೂಪವೆಂಬುದು ವಿರುದ್ಧವಚನವು. ಆದ್ದರಿಂದ ಅದು ಅನಿರ್ವಾಚ್ಯವೇ. ಈ ಪ್ರಸ್ಥಾನದಲ್ಲಿ ಅನಿರ್ವಚನೀಯವಾದಕ್ಕೆ ಬಲುಹೆಚ್ಚಿನ ಸ್ಥಾನವನ್ನು ಕೊಟ್ಟಿದೆಯಾದ್ದರಿಂದ ಇಡಿಯ ಗ್ರಂಥವನ್ನೇ ವಾಚಕರು ನೋಡಬೇಕು.

**ಸುಷುಪ್ತಿವಿಚಾರ :**

**ಭಾಷ್ಯ :** ಬ್ರಹ್ಮವೇ ಸುಷುಪ್ತಿಯಲ್ಲಿ ಆತ್ಮನಿಗೆ ಸ್ಥಾನವು. ಮನಃಪ್ರಚಾರಗಳೂ ಅದರ ವಾಸನೆಗಳೂ ಇಲ್ಲವಾಗುವದರಿಂದ ಸುಷುಪ್ತಿಯಲ್ಲಿ ಜೀವನಿಗೆ ಯಾವ ಉಪಾಧಿಕೃತವಿಶೇಷವೂ ಇರುವದಿಲ್ಲವಾದ್ದರಿಂದ ತನ್ನ ಸ್ವರೂಪದಲ್ಲಿ ಲಯವಾಗುತ್ತಾನೆಂದು ಶ್ರುತಿಯು ಹೇಳುತ್ತದೆ. ಆ ಅವಸ್ಥೆಯ ಪರಿಶೀಲನೆಯಿಂದ ಆತ್ಮನು ಅಸಂಗನು, ಆನಂದರೂಪನು– ಎಂಬುದು ಸ್ಪಷ್ಟವಾಗುತ್ತದೆ. ಆಗ ಬ್ರಹ್ಮವನ್ನು ಸೇರುವದರಿಂದ ಜೀವನು ಬ್ರಹ್ಮೀಭೂತನಾದನು ಎನ್ನುತ್ತಾರೆ. ಅಲ್ಲಿ ನಾನು, ಮತ್ತೊಬ್ಬರು, ಇದು, ಅದು– ಎಂಬ ವಿಶೇಷಜ್ಞಾನವಿಲ್ಲದಿರುವದಕ್ಕೆ ಬ್ರಹ್ಮದಲ್ಲಿ ಒಂದಾಗಿರುವದೇ ಕಾರಣವು. ಕನಸಿನಲ್ಲಿ ಅವಿದ್ಯಾಕಲ್ಪಿತವಾದ ವಿಭಾಗವಿರುವಂತೆ ಸ್ಥಿತಿಕಾಲದಲ್ಲಿಯೂ ತೋರುತ್ತಿರುತ್ತದೆ ; ಸುಷುಪ್ತಿಯಲ್ಲಿರುವಂತೆ ಪ್ರಲಯದಲ್ಲಿಯೂ ಅವಿದ್ಯಾಕಲ್ಪಿತವಾದ ವಿಭಾಗಶಕ್ತಿಯಿರುತ್ತದೆ. ಸುಷುಪ್ತಿಸಮಾಧಿಮೂರ್ಛೆಗಳಲ್ಲಿ ಸದ್ರೂಪವಾದ ಬ್ರಹ್ಮದಲ್ಲಿ ಜೀವನು ಸಂಪೂರ್ಣವಾಗಿ ಒಂದಾಗಿರುತ್ತಾನೆ ; ಸ್ವಲ್ಪಮಟ್ಟಿಗೆ ಒಂದಾಗಿರುವದಿಲ್ಲ.

**ವಿವರಣ :** ನಿರ್ವಿಕಲ್ಪಚೈತನ್ಯೈಕರಸವಾದ ಬ್ರಹ್ಮಕ್ಕೆ ಅವಿದ್ಯೆಯಿಂದ ಸುಷುಪ್ತಿಯಲ್ಲಿ ಒಂದಿಷ್ಟು ವಿಕಲ್ಪವಾಗುತ್ತದೆ. ಆ ಅವಿದ್ಯೆಯು ಅಂತಃಕರಣರೂಪವಾಗಿ ಪರಿಣಮಿಸಿ ಸ್ವಪ್ನದಲ್ಲಿ ಬ್ರಹ್ಮಕ್ಕೆ ಉಪಾಧಿಯಾಗಿ ಸ್ಥೂಲವ್ಯಪಹಾರಕ್ಕೆ ವಿಷಯವಾಗಿರುತ್ತದೆ ಎಚ್ಚರದಲ್ಲಿ ಅಂತಃಕರಣಸಂಬದ್ಧಸ್ಥೂಲಶರೀರದ ಸಂಬಂಧದಿಂದ ಬ್ರಹ್ಮವು ಸ್ಥೂಲತಮವೆನಿಸುತ್ತದೆ. 'ಸುಷುಪ್ತಿಯಲ್ಲಿ ಸುಖವಾಗಿದ್ದೆನು' ಎಂಬುದು ದುಃಖಾಭಾವವಿಷಯಕವಲ್ಲ, ಸುಖಾನುಭವದ ಸ್ಮರಣೆಯು ; 'ಸುಷುಪ್ತಿಯಲ್ಲಿ ಏನೂ ತಿಳಿಯಲಿಲ್ಲ' ಎಂಬುದು ಜ್ಞಾನಾಭಾವದ ಸ್ಮರಣೆಯಲ್ಲ, ಭಾವರೂಪಾಜ್ಞಾನದ ಸ್ಮರಣೆಯದು. ಅಜ್ಞಾನ, ಸುಖ, ಸಾಕ್ಷಿ– ಎಂಬ ವಿಕಲ್ಪಾನುಭವಗಳಿಂದ ಅಜ್ಞಾನದಲ್ಲಿ

ಚೈತನ್ಯಾಭಾಸಗಳೂ ಬೇರೆಬೇರೆಯಾಗುವದರಿಂದ ಅವುಗಳ ನಾಶದಿಂದಾದ ಸಂಸ್ಕಾರವು ಸ್ಮರಣೆಗೆ ಕಾರಣವಾಗುತ್ತದೆ. ಈ ಸ್ಮರಣೆಯು ಅಜ್ಞಾನ ವಿಶಿಷ್ಟಾತ್ಮನಲ್ಲಿಯೇ ಇರುತ್ತದೆ. ಸುಷುಪ್ತಿಯಲ್ಲಿರುವ ಅವಿದ್ಯಾದಿಗಳು ಬ್ರಹ್ಮಕ್ಕೇ ಆಗದೆ ಇರುವದಕ್ಕಾಗಿ ಸುಷುಪ್ತಿಯೇ ಮುಂತಾದ ಅವಸ್ಥೆಗಳಲ್ಲಿಯೂ ಜೀವಬ್ರಹ್ಮವಿಭಾಗವು ಇದೆಯೆಂದೂ ಅದು ಅವಿದ್ಯಾಧೀನವಾಗಿಯೇ ಇರುವದೆಂದೂ ಕಲ್ಪಿಸುತ್ತೇವೆ.

ಭಾಮತೀ ಸುಷುಪ್ತಿಯಲ್ಲಿ ವಿಕ್ಷೇಪಸಂಸ್ಕಾರಸಚಿವಲಯಲಕ್ಷಣಾವಿದ್ಯೆಯಿರುತ್ತದೆ. ಅಲ್ಲಿ ವಿಪರೀತಜ್ಞಾನವು ನಿವೃತ್ತಿಯಾಗುವದೆಂಬಮಟ್ಟಿಗೆ ಬ್ರಹ್ಮಸ್ವರೂಪದಲ್ಲಿ ಐಕ್ಯವಾಗಿರುತ್ತದೆ ಎನ್ನಬೇಕು. ಮೂರ್ಛೆಯಲ್ಲಿ ಸುಷುಪ್ತಿಯಂತೆ ಸತ್ಸಂಪತ್ತಿಯಾಗುವದಿಲ್ಲ ; ಅಲ್ಲಿ ಅರ್ಧಸಂಪತ್ತಿಯಾಗುತ್ತದೆ. ಜಾಗ್ರತ್ಸುಷುಪ್ತಿಗಳಲ್ಲಿ ಅವಿದ್ಯಾತದ್ವಾಸನಾರೂಪವಾದ ಉಪಾಧಿಯು ಕಾರ್ಯಕಾರಣಪ್ರವಾಹವಾಗಿ ಹರಿಯುತ್ತಿರುತ್ತದೆ. ಪ್ರಲಯದಲ್ಲಿಯೂ ಲಯಲಕ್ಷಣಾವಿದ್ಯೆಯಿರುವದಾದರೂ ಸುಷುಪ್ತಿಯಂತೆ ಪ್ರಾಣವಿರುವದಿಲ್ಲ.

## ಸೂತ್ರಭಾಷ್ಯವೂ ಗೀತೋಪನಿಷತ್ತುಗಳ ಭಾಷ್ಯಗಳೂ

ಶಾಂಕರಸಿದ್ಧಾಂತನಿರ್ಣಯಕ್ಕೆ ಮಿಕ್ಕ ವೇದಾಂತಿಗಳ ಭಾಷ್ಯಗಳಾಗಲಿ ವ್ಯಾಖ್ಯಾನಗಳಾಗಲಿ ಸಹಾಯಕವಲ್ಲವೆಂದು ತಿಳಿಸಿದ್ದಾಯಿತು. ಈಗ ಸೂತ್ರಭಾಷ್ಯವನ್ನು ಮಿಕ್ಕೆರಡು ಪ್ರಸ್ಥಾನಗಳ ಭಾಷ್ಯಗಳಿಗೆ ಹೋಲಿಸಿನೋಡಿದರೆ ಈ ಸಿದ್ಧಾಂತದ ವಿಷಯಕ್ಕೆ ನಮ್ಮ ಅಭಿಪ್ರಾಯವೇನಾದರೂ ಬದಲಿಸುವದೆ? –ಎಂಬುದನ್ನು ವಿಚಾರಮಾಡಬೇಕಾಗಿದೆ.* ಪ್ರಸ್ಥಾನತ್ರಯಭಾಷ್ಯಗಳೊಳಗೆ ಸೂತ್ರಭಾಷ್ಯವನ್ನು ಬರೆದವರೇ ಶಂಕರಾಚಾರ್ಯರು ಎಂದು ಕೆಲವರು ಪಾಶ್ಚಾತ್ಯವಿಮರ್ಶಕರು ಅಂಗೀಕರಿಸಿ ಆ ಭಾಷ್ಯಕ್ಕೆ ವಿರುದ್ಧವಾದ ಅಭಿಪ್ರಾಯಗಳಿರುವ ಭಾಷ್ಯಗಳು ಶಂಕರವಿರಚಿತವಲ್ಲವೆಂದು ವಾದಿಸುತ್ತಾರೆ ; ಮತ್ತೆ ಕೆಲವರು ಭಾಷ್ಯಗಳೆಲ್ಲವೂ ಶಂಕರವಿರಚಿತವೇ ಆಗಿದ್ದರೂ ಅವು ಆ ಆಚಾರ್ಯರ ಬೇರೆಬೇರೆಯ ವಯಸ್ಸಿನಲ್ಲಿ ರಚಿತವಾಗಿರಬೇಕೆಂದು ಕಲ್ಪಿಸಿರುತ್ತಾರೆ.

* ಹಿಂದಿನ ವ್ಯಾಖ್ಯಾನಪ್ರಸ್ಥಾನಗಳ ವಿಚಾರದಲ್ಲಿ ನಾವು ಕೊಟ್ಟಿರುವ ಸಿದ್ಧಾಂತವನ್ನೇ ಇಲ್ಲಿ ಸೂತ್ರಭಾಷ್ಯದಲ್ಲಿರುವ ಸಿದ್ಧಾಂತವೆಂದು ಹಿಡಿದಿದೆ.

ಈ ಮತಭೇದವನ್ನು ಮನಸಿನಲ್ಲಿಟ್ಟೇ ನಾವು ಶಂಕರಾಚಾರ್ಯರ ಹಿಂದಿನ ವೇದಾಂತಿಗಳೆಲ್ಲರೂ ಅದ್ವೈತಿಗಳೇ ಎಂದು ವಾದಿಸುವಾಗ ಭಗವದ್ಗೀತೆ ಮತ್ತು ಬೃಹದಾರಣ್ಯಕವೇ ಮುಂತಾದ ಉಪನಿಷದ್ಭಾಷ್ಯಗಳಿಂದ ಆಧಾರ ವಚನಗಳನ್ನು ಉದಾಹರಿಸಲಿಲ್ಲ.

ಆದರೆ ಬೃಹದಾರಣ್ಯಕೋಪನಿಷದ್ಭಾಷ್ಯವು ಶಂಕರವಿರಚಿತವೆಂದೂ ತಾವು ಅವರ ಸಾಕ್ಷಾಚ್ಛಿಷ್ಯರೆಂದೂ ಸುರೇಶ್ವರಾಚಾರ್ಯರು ಬೃಹದಾರಣ್ಯಕವಾರ್ತಿಕ, ನೈಷ್ಕರ್ಮ್ಯಸಿದ್ಧಿ– ಇವುಗಳಲ್ಲಿ ಹೇಳಿಕೊಂಡಿರುತ್ತಾರೆ. ಆ ಉಪನಿಷತ್ತಿನ ಭಾಷ್ಯದಲ್ಲಿ "ವಿಜ್ಞಾನಾತ್ಮನಿಗೂ ಪರಮಾತ್ಮನಿಗೂ ಏಕತ್ವವನ್ನು ಹೇಳಿದೆ ಎಂಬುದರಲ್ಲಿ ಯಾವ ಉಪನಿಷದ್ವಾದಿಗಳಿಗೂ ವಿಮತಿಯಿಲ್ಲ" (ಬೃ. ೨-೧-೨೦) ಎಂದು ಭಾಷ್ಯಕಾರರು ಬಾಯಿಬಿಟ್ಟು ಹೇಳಿರುತ್ತಾರೆ. ಬೃಹದಾರಣ್ಯಕ ಭಾಷ್ಯಕ್ಕೂ ಸೂತ್ರಭಾಷ್ಯಕ್ಕೂ ಒಂದೆರಡು ಸಣ್ಣ ವಿಚಾರಗಳಲ್ಲಿ ಮತಭೇದ ವಿದೆಯೆಂಬುದನ್ನು ಬೃಹದಾರಣ್ಯಕಭಾಷ್ಯದ ಪೀಠಿಕೆಯಲ್ಲಿ ನಾವು ತಿಳಿಸಿ ಕೊಟ್ಟಿರುತ್ತೇವೆ. ತೈತ್ತಿರೀಯಬೃಹದಾರಣ್ಯಕಭಾಷ್ಯಗಳಿಗಿರುವ ಭಾಷಾ ಶೈಲಿಯ ಸಾಮ್ಯವನ್ನೂ ಅಲ್ಲಿ ವಿಶದಗೊಳಿಸಿರುತ್ತೇವೆ. ಹೇಗೇ ಆಗಲಿ, ಪ್ರಸ್ಥಾನತ್ರಯಭಾಷ್ಯಗಳಲ್ಲಿ ಕಾಣಬರುವ ಅದ್ವೈತಸಿದ್ಧಾಂತದ ಸಾರವಾದ ವಿಷಯಕ್ಕೆ ಯಾವ ಭಾಷ್ಯದಲ್ಲಿಯೂ ಮತಭೇದವು ಕಾಣಬರುವದಿಲ್ಲವಾದ್ದ ರಿಂದ ಈ ಭಾಷ್ಯಗಳನ್ನೆಲ್ಲ ಒಂದೇ ಸಿದ್ಧಾಂತಕ್ಕೆ ಸೇರಿದವೆಂದು ಹಿಡಿಯು ವದರಿಂದ ಯಾವ ಹಾನಿಯೂ ಆಗುವಹಾಗಿಲ್ಲ.

## ಸೂತ್ರದಲ್ಲಿ ಶಾಂಕರಸಿದ್ಧಾಂತವಿದೆಯೆ ?

ಶಾಂಕರಸಿದ್ಧಾಂತಕ್ಕೆ ಮುಖ್ಯವಾಗಿ ಮೂರು ವಾದಗಳು ಮೂಲಸ್ತಂಭ ಗಳಂತೆ ಇರುವವು. ಬ್ರಹ್ಮವು ಸತ್ಯ, ಜಗತ್ತು ತನ್ನ ರೂಪದಲ್ಲಿ ಮಿಥ್ಯೆ, ಜೀವನು ಪರಮಾರ್ಥವಾಗಿ ಬ್ರಹ್ಮವೇ– ಎಂಬೀ ಮೂರು ವಾದಗಳು ಪ್ರಸ್ಥಾನತ್ರಯಭಾಷ್ಯಗಳಲ್ಲೆಲ್ಲ ಸಮಾನವಾಗಿ ಕಾಣಬರುತ್ತವೆ. ಈ ವಾದ ಗಳು ಸೂತ್ರದಲ್ಲಿವೆಯೆ, ಇಲ್ಲವೆ ?– ಎಂಬುದನ್ನು ಗೊತ್ತುಪಡಿಸುವದು ಬರಿಯ ಸೂತ್ರಗಳ ವಿಮರ್ಶೆಯಿಂದ ಆವಶ್ಯಕವೆಂಬುದನ್ನು ನಾವು ಆಗಲೇ ಹೇಳಿಟ್ಟಿ ದ್ದೇವೆ. ಈಚಿನ ದ್ವೈತಿವೇದಾಂತಿಗಳ ಭಾಷ್ಯಗಳಲ್ಲಿರುವ ವಿಶಿಷ್ಟಾದ್ವೈತಾದಿ

ವಾದಗಳನ್ನು ಸೂತ್ರಗಳಲ್ಲಿ ಕಾಣುವ ಸಂಭವವಿಲ್ಲವೆಂಬುದಕ್ಕೆ ಅವು ಶಂಕರಾಚಾರ್ಯರಿಂದೀಚೆಗೆ ತಲೆಯೆತ್ತಿದವುಗಳೆಂಬ ಕಾರಣವನ್ನು ಕೊಟ್ಟಿರುತ್ತೇವೆ. ಇನ್ನು ಶಾಂಕರಭಾಷ್ಯಕ್ಕೆ ಎದುರಾಗಿ ನಿಲ್ಲುವ ಅದ್ವೈತಿಗಳು, ದ್ವೈತಾದ್ವೈತಿಗಳು– ಇವರ ಪ್ರಕ್ರಿಯೆಗಿಂತಲೂ ಶಾಂಕರಭಾಷ್ಯವು ಸೂತ್ರಕ್ಕೆ ಹೆಚ್ಚು ಹತ್ತಿರವಿರಬಹುದೆ ?– ಎಂಬುದನ್ನು ನಿರ್ಣಯಿಸುವದೊಂದು ಉಳಿದಿದೆ. ಈ ವಿಷಯವನ್ನು ನಿರ್ಣಯಿಸುವದಕ್ಕೆ ಕೆಲವು ಸೂತ್ರಗಳು ಸಹಾಯಕವಾಗಿವೆ. ಅವುಗಳನ್ನು ಇಲ್ಲಿ ಉದಾಹರಿಸಿ ಮುಂದಕ್ಕೆ ಸಾಗುವೆವು.

ಮೊಟ್ಟಮೊದಲನೆಯದಾಗಿ "ಆತ್ಮೇತಿ ತೂಪಗಚ್ಛನ್ತಿ ಗ್ರಾಹಯನ್ತಿ ಚ" (೪–೧–೩), "ಅವಿಭಾಗೇನ ದೃಷ್ಟತ್ವಾತ್"(೪–೪–೪)– ಎಂಬೀ ಎರಡು ಸೂತ್ರಗಳನ್ನೂ ನಾವು ಲಕ್ಷ್ಯವಿಟ್ಟು ನೋಡಬೇಕು. ಇವುಗಳಲ್ಲಿ ಎರಡನೆಯ ಸೂತ್ರವು ಮುಕ್ತಾತ್ಮನು ಪರಮಾತ್ಮನಿಗಿಂತ ವಿಭಕ್ತನಾಗಿರುವದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತದೆ. ಇದು ಮಿಕ್ಕ ಅದ್ವೈತಿಗಳಿಗೂ ದ್ವೈತಾದ್ವೈತಸಿದ್ಧಾಂತಿಗಳಿಗೂ ಸಮ್ಮತವಾಗಿದೆ. ಆದರೆ ಅವರು ಬದ್ಧಾವಸ್ಥೆಯಲ್ಲಿ ಈ ಅಭೇದವನ್ನು ಒಪ್ಪುವದಿಲ್ಲ. ಶಂಕರಾಚಾರ್ಯರು 'ತತ್ತ್ವಮಸಿ' (ಛಾಂ.), 'ಅಹಂ ಬ್ರಹ್ಮಾಸ್ಮಿ'(ಬೃ.)–ಮುಂತಾದ ಉಪನಿಷದ್ವಾಕ್ಯಗಳನ್ನನುಸರಿಸಿ ಈಗಲೂ ಜೀವನು ಬ್ರಹ್ಮವೇ ಆಗಿರುತ್ತಾನೆ ಎಂದು ವಾದಿಸಿರುತ್ತಾರೆ. ಹಾಗೆ ಸೂತ್ರಕಾರರು ಅಭಿಪ್ರಾಯಪಟ್ಟಿಲ್ಲವೆಂಬುದಕ್ಕೆ ಯಾವ ಆಧಾರವೂ ಇಲ್ಲ. ಮೊದಲನೆಯ ಸೂತ್ರವು ಪರಮಾತ್ಮನನ್ನು ಆತ್ಮನೆಂದೇ ತಿಳಿಯಬೇಕೆಂದು ಸ್ಪಷ್ಟವಾಗಿ ಹೇಳುತ್ತಿದೆ. ಇಲ್ಲಿಯೂ ಆಚಾರ್ಯರು ಶ್ರುತಿಪ್ರಾಮಾಣ್ಯದಿಂದಲೇ ಈ ಅರ್ಥವನ್ನು ತೆಗೆದಿರುತ್ತಾರೆ. ಶ್ರುತಿಯ ಅಕ್ಷರಾರ್ಥವು ಮಿಕ್ಕ ಸಿದ್ಧಾಂತಗಳಿಗೆ ವಿರುದ್ಧವಾಗಿದೆ ಎಂಬುದು ಸ್ಪಷ್ಟವಾಗಿದೆ. 'ವ್ಯತಿಹಾರೋ ವಿಶಿಂಷನ್ತಿ ಹೀತರವತ್' (೩–೩–೩೭) ಎಂಬ ಸೂತ್ರಕ್ಕೆ ಮೂಲವಾಗಿರುವದೆಂದು ಆಚಾರ್ಯರು ಉದಾಹರಿಸಿರುವ ಐತರೇಯಜಾಬಾಲಶ್ರುತಿಗಳಲ್ಲಂತೂ 'ನಾನೇ ಪರಮಾತ್ಮನು, ಪರಮಾತ್ಮನೇ ನಾನು' ಎಂದೇ ಚಿಂತಿಸಬೇಕೆಂದು ಸುಸ್ಪಷ್ಟವಾಗಿ ಹೇಳಿರುತ್ತದೆ.

ಇನ್ನೊಂದು ಸೂತ್ರವು ಶಾಂಕರಸಿದ್ಧಾಂತಕ್ಕೆ ಬೆಂಬಲವಾಗಿ ಮಿಕ್ಕ ವಾದಿಗಳಿಗೆ ವಿರುದ್ಧವಾದ ಅಭಿಪ್ರಾಯವನ್ನು ಹೇಳುವಂತಿದೆ. ಅದು ಯಾವ

ದೆಂದರೆ '**ಶಾಸ್ತ್ರದೃಷ್ಟ್ಯಾ ತೂಪದೇಶೋ ವಾಮದೇವವತ್**' (೧-೧-೩೧). ಈ ಸೂತ್ರದಲ್ಲಿ ಇಂದ್ರನು 'ನನ್ನನ್ನು ಪರಮಾತ್ಮನೆಂದು ತಿಳಿ' ಎಂದು ಪ್ರತರ್ದನನಿಗೆ ಉಪದೇಶಮಾಡಿದನೆಂಬುದೇ ವಿಷಯವಾಕ್ಯವೆಂದು ಎಲ್ಲಾ ಭಾಷ್ಯಕಾರರೂ ಒಪ್ಪಿರುತ್ತಾರೆ. ಇದು ವಾಮದೇವನಂತೆ ಶಾಸ್ತ್ರದೃಷ್ಟಿಯಿಂದ ಆಡಿದ ಮಾತು– ಎಂದು ಸೂತ್ರದಲ್ಲಿ ಹೇಳಿದೆ ; ಈ ವ್ಯಾಖ್ಯಾನವನ್ನು ಎಲ್ಲಾ ಭಾಷ್ಯಕಾರರೂ ಒಪ್ಪಿರುತ್ತಾರೆ. ವಾಮದೇವವಾಕ್ಯವನ್ನು ಬೃಹದಾರಣ್ಯಕ (೧–೪–೧೦)ರಲ್ಲಿ ಉದಾಹರಿಸಿದೆ. ಅಲ್ಲಿ ವಾಮದೇವನೆಂಬ ಋಷಿಯು 'ನಾನೇ ಬ್ರಹ್ಮವಾಗಿರುವೆನು' ಎಂದು ಕಂಡುಕೊಂಡದ್ದರಿಂದ ಸರ್ವಾತ್ಮಭಾವವನ್ನು ಪಡೆದುಕೊಂಡನು ; ಈಗಲೂ ಯಾರುಯಾರು 'ನಾನೇ ಬ್ರಹ್ಮವು' ಎಂದು ತಿಳಿದುಕೊಳ್ಳುವರೋ ಅವರೆಲ್ಲರೂ ಸರ್ವಾತ್ಮಭಾವವನ್ನು ಪಡೆದುಕೊಳ್ಳುತ್ತಾರೆ ಎಂದು ಸ್ಪಷ್ಟವಾಗಿ ಹೇಳಿಬಿಟ್ಟಿರುತ್ತದೆ. ಆದ್ದರಿಂದ ಜೀವನು ಈಗಲೇ ಬ್ರಹ್ಮವೆಂಬುದು '**ಶಾಸ್ತ್ರದೃಷ್ಟಿ**' ಎಂದೇ ಸೂತ್ರಕಾರರು ಹೇಳಿದಂತೆ ಆಯಿತು. ಮುಕ್ತಿಯಲ್ಲಿ ಮಾತ್ರ ಅದ್ವೈತವೆಂಬ ಮಿಕ್ಕ ವಾದಿಗಳ ಮತವು ಸೂತ್ರಕಾರರಿಗೆ ಸಮ್ಮತವಲ್ಲವೆಂದೂ ಆಯಿತು. ಆದ್ದರಿಂದ 'ಅದೇ ನೀನಾಗಿರುವೆ' ಎಂಬ ವೇದಾಂತವಾಕ್ಯದ ಅರ್ಥವನ್ನು 'ನೀನು ಸತ್ತು ಅದಾಗುವೆ' ಎಂದು ತಿರುಗಿಸಿ ಹೇಳುವದಕ್ಕೆ ಆಗಲಾರದು' ಎಂದು (೩–೨–೩೨) ಭಾಷ್ಯಕಾರರು ಹೇಳಿರುವ ಮತವೇ ಸೂತ್ರಕಾರರ ಮತವೆಂದಾಯಿತು. 'ತತ್ತ್ವಮಸಿ' (ಅದೇ ನೀನಾಗಿರುವೆ) ಎಂಬ ಬ್ರಹ್ಮಾತ್ಮಭಾವವು ಬೇರೆ ಯಾವದೋ ಒಂದು ಅವಸ್ಥೆಯಲ್ಲಾಗುವ ವಿದೇಹಮುಕ್ತಿ ಎಂಬವರ ವಾದದ ಜೊಳ್ಳುತನವೂ ಸಿದ್ಧವಾಯಿತು.

ಈಗ ವಿದೇಹಕೈವಲ್ಯವೇ ಮುಖ್ಯಮುಕ್ತಿಯೆಂದು ಒಪ್ಪುವ ವಾದಿಗಳು ಹೀಗೆನ್ನಬಹುದು : ಜೀವನು ಬ್ರಹ್ಮವನ್ನು ತಿಳಿದುಕೊಳ್ಳಬೇಕು– ಎಂಬುದೇ ಸೂತ್ರಕಾರರ ಅಭಿಪ್ರಾಯವಾದ್ದರಿಂದ ಜೀವಬ್ರಹ್ಮರಿಗೆ ಭೇದವಿರಬೇಕು. ಇಲ್ಲದಿದ್ದರೆ ಶಾಸ್ತ್ರೋಪದೇಶವಾಗಲಿ ಬಂಧಮೋಕ್ಷಗಳಾಗಲಿ ಯಾರಿಗೆ ಆಗಬೇಕು ? ಈ ಆಕ್ಷೇಪಕ್ಕೂ ಈ ಸೂತ್ರಗಳಲ್ಲಿ ಪರಿಹಾರವು ಸಿಕ್ಕುತ್ತದೆ : (೧) '**ಅಂಶೋ ನಾನಾವ್ಯಪದೇಶಾದನ್ಯಥಾ ಚಾಪಿ ದಾಶಕಿತವಾದಿತ್ವಮಧೀಯತ ಏಕೇ**'(೨–೩–೪೩), (೨) '**ಆಭಾಸ ಏವ ಚ**' (೨–೩–೫೦),

'ಅತ ಏವ ಚೋಪಮಾ ಸೂರ್ಯಕಾದಿವತ್' (೩-೨-೧೮). ಮೊದಲನೆಯ ಸೂತ್ರದಲ್ಲಿ ಹೇಳಿರುವದು ; ಜೀವನು ಬ್ರಹ್ಮದ ಅಂಶವೆನ್ನಬೇಕು. ಏಕೆಂದರೆ ಜೀವನು ಬ್ರಹ್ಮವನ್ನು ಅರಿತುಕೊಳ್ಳಬೇಕೆಂದು ಶ್ರುತಿಯಲ್ಲಿರುವದರಿಂದ ಅವನು ಬ್ರಹ್ಮಕ್ಕಿಂತ ಬೇರೆಯೆಂದಾಗುವದು; ಬೆಸ್ತರು, ಜೂಜುಗಾರರು ಮುಂತಾದವರುಕೂಡ ಬ್ರಹ್ಮವೇ ಎಂದು ಶ್ರುತಿಯಲ್ಲಿರುವದರಿಂದ ಅವನು ಬ್ರಹ್ಮವೇ ಎಂದೂ ಆಗುವದು. ಈ ಅಭಿಪ್ರಾಯವು ಭೇದಾಭೇದವಾದಿಗಳಿಗೆ ಸಮ್ಮತವಾಗಿಯೇ ಇರುತ್ತದೆ. ಆದರೆ ಎರಡನೆಯ ಸೂತ್ರದಲ್ಲಿ ಜೀವನು ಪರಮಾತ್ಮನ ಅಂಶವು ಎಂದರೆ ಆಭಾಸವು ; ಪ್ರತಿಬಿಂಬವು ಬಿಂಬಕ್ಕಿಂತ ಭಿನ್ನವೂ ಅಭಿನ್ನವೂ ಆಗಿರುವಂತೆ ಜೀವನು ತನ್ನ ತೋರಿಕೆಯ ರೂಪದಿಂದ ಭಿನ್ನನೂ ಸ್ವರೂಪದಿಂದ ಅಭಿನ್ನನೂ ಆಗಿರುತ್ತಾನೆ– ಎಂದು ಹೇಳಿರುತ್ತದೆ. ಇಲ್ಲಿ 'ಆಭಾಸ'ವೆಂಬ ಮಾತು ನಿಜವಾದ ಭೇದವನ್ನು ಹೇಳುವ ವಾದಿಗಳಿಗೆಲ್ಲ ಅಡ್ಡಿಯಾಗಿರುತ್ತದೆ ಎಂಬುದು ಸ್ಪಷ್ಟವಾಗಿರುತ್ತದೆ. ಇನ್ನು ಮೂರನೆಯ ಸೂತ್ರದಲ್ಲಿಯೋ ಎಂದರೆ ಹೀಗೆಂದಿದೆ : ಬ್ರಹ್ಮವು ಕೇವಲ ಚೈತನ್ಯಸ್ವರೂಪವಾದ್ದರಿಂದ ಅದರಲ್ಲಿ ಯಾವ ಆಕಾರವಿಶೇಷವೂ ಇರುವದಿಲ್ಲವೆಂದು ಹಿಂದಿನ ಸೂತ್ರದಲ್ಲಿ ಹೇಳಿದ್ದಾಗಿದೆ ; ಆದ್ದರಿಂದಲೇ ಬ್ರಹ್ಮದ ವಿಶೇಷರೂಪಗಳಿಗೆ ಸೂರ್ಯಪ್ರತಿಬಿಂಬವೇ ಮುಂತಾದ ಉಪಮಾನಗಳನ್ನು ಶಾಸ್ತ್ರದಲ್ಲಿ ಕೊಟ್ಟಿರುತ್ತದೆ. ಇಲ್ಲಿ ನಾವು ಕೊಟ್ಟಿರುವ ಸೂತ್ರಗಳ ಅರ್ಥವು ಶಾಂಕರಭಾಷ್ಯಾನುಸಾರವಾಗಿ ಬರೆದದ್ದು. ಸೂತ್ರಗಳನ್ನು ಮಿಕ್ಕ ಭಾಷ್ಯಕಾರರೂ ಹೀಗೆಯೇ ಬರೆದುಕೊಂಡಿರುತ್ತಾರೆ* ; ಅವುಗಳ ಅಕ್ಷರಾರ್ಥವು ಶಾಂಕರಭಾಷ್ಯಕ್ಕೆ ಹೊಂದುವಂತೆ ಮಿಕ್ಕವರ ಭಾಷ್ಯಗಳಿಗೆ ಹೊಂದುವದಿಲ್ಲವೆಂಬುದನ್ನು ಹೇಳಬೇಕಾದದ್ದೇ ಇಲ್ಲ.

ಬ್ರಹ್ಮಾತ್ಮೈಕತ್ವವು ಮಿಕ್ಕ ಅದ್ವೈತಿಗಳಿಗೂ ದ್ವೈತಾದ್ವೈತಿಗಳಿಗೂ ಹೇಗೋ ಸಮ್ಮತವಾಗಬಹುದು. ಆದರೆ ಪ್ರಪಂಚಮಿಥ್ಯಾತ್ವವಾದವು ಅವರಿಗೆ ಸಮ್ಮತವೇ ಇಲ್ಲ. ಹೀಗಿದ್ದರೂ 'ತದನನ್ಯತ್ವಮಾರಂಭಣಶಬ್ದಾದಿಭ್ಯಃ' (೨-೧-೧೪) ಎಂಬ ಸೂತ್ರದಲ್ಲಿ ಕಾರ್ಯವಾದ ಜಗತ್ತು ಕಾರಣವಾದ ಬ್ರಹ್ಮ

* ಈಚಿನ ರಾಮಾನುಜಾದಿಭಾಷ್ಯಗಳಲ್ಲಿ ಎರಡನೆಯ ಸೂತ್ರವನ್ನೇ ಮಾರ್ಪಡಿಸಿಕೊಂಡಿದೆ.

ಕ್ಕಿಂತ ಅನನ್ಯವೆಂದಿರುವದನ್ನು ನಾವು ಮನದಂದುಕೊಳ್ಳಬಹುದಾಗಿದೆ. ಇಲ್ಲಿ ಜಗತ್ತು ಬೇರೆ ಎಂದಂತೂ ಹೇಳಿಲ್ಲ; ಜಗತ್ತು ಅನ್ಯಾನನ್ಯ ಎಂದು ಭೇದಾಭೇದವನ್ನೂ ಹೇಳಿಲ್ಲ. ಆದ್ದರಿಂದ **'ಬ್ರಹ್ಮೈವೇದಂ ಸರ್ವಮ್'** (ಇದೆಲ್ಲವೂ ಬ್ರಹ್ಮವೇ), **'ಆತ್ಮೈವೇದಂ ಸರ್ವಮ್'** (ಇದೆಲ್ಲವೂ ಪರಮಾತ್ಮನೇ)- ಮುಂತಾದ ಶ್ರುತಿಗಳನ್ನು ಉದಾಹರಿಸಿ ಆಚಾರ್ಯರು ಈ ಪ್ರಪಂಚವೆಲ್ಲವೂ ಬ್ರಹ್ಮವೇ, ಬ್ರಹ್ಮಕ್ಕಿಂತ ಬೇರೆಯಾಗಿಲ್ಲವೇ ಇಲ್ಲ- ಎಂದು ಪ್ರಪಂಚಮಿಥ್ಯಾತ್ವವನ್ನು ಸ್ಪಷ್ಟಪಡಿಸಿರುವದು ಸೂತ್ರಕ್ಕನುಗುಣವೆಂದು ಹೇಳುವದಕ್ಕೆ ಯಾವ ಅಡ್ಡಿಯೂ ಕಾಣುವದಿಲ್ಲ.

## ಅಧ್ಯಾಸವಾದ

ಶ್ರೀಶಂಕರಾಚಾರ್ಯರವರು ಅಧ್ಯಾಸ, ಅಧ್ಯಾರೋಪ, ಭ್ರಾಂತಿ, ಮಿಥ್ಯಾಜ್ಞಾನ, ಮಿಥ್ಯಾಪ್ರತ್ಯಯ, ಅಪ್ರಬೋಧ- ಮುಂತಾದ ಹೆಸರುಗಳಿಂದ ವರ್ಣಿಸಿರುವ ಅವಿದ್ಯಾವಾದವು ಅವರ ಪ್ರಕ್ರಿಯೆಯಲ್ಲಿ ಬಹುಮುಖ್ಯವಾಗಿರುತ್ತದೆ. ಜೀವನು ಪರಮಾರ್ಥವಾಗಿ ಪರಮಾತ್ಮನೇ ಆಗಿದ್ದರೂ ಶಾಸ್ತ್ರದೃಷ್ಟಿಯನ್ನು ಸಂಪಾದಿಸಿಕೊಳ್ಳದೆ ಇರುವವರೆಗೆ ಸ್ವಾಭಾವಿಕವಾಗಿರುವ ಈ ಅವಿದ್ಯೆಯಿಂದ ತನ್ನಲ್ಲಿ ಅನಾತ್ಮವನ್ನು ಅಧ್ಯಾಸಮಾಡಿಕೊಂಡಿರುತ್ತಾನೆ. ಆತ್ಮಾನಾತ್ಮರ ಅನ್ಯೋನ್ಯಾಧ್ಯಾಸವೇ ಅವಿದ್ಯೆಯು, ಈ ಅವಿದ್ಯೆಯಿಂದಲೇ ಕರ್ತೃತ್ವಭೋಕ್ತೃತ್ವರೂಪವಾದ ಸಂಸಾರಬಂಧವಾಗಿರುವದು; ಅನರ್ಥಹೇತುವಾದ ಈ ಅವಿದ್ಯೆಯನ್ನು ಕಳೆಯುವದಕ್ಕಾಗಿಯೇ ಉಪನಿಷತ್ತುಗಳು ಹೊರಟಿರುವವು. ಹಾಗೆಂಬುದನ್ನು ನ್ಯಾಯಗಳಿಂದ ತೋರಿಸಿಕೊಡುವದಕ್ಕೇ ವೇದಾಂತಸೂತ್ರಗಳು ಬಂದಿವೆ- ಎಂದು ಅವರು ತಮ್ಮ ಅಧ್ಯಾಸಭಾಷ್ಯರೂಪವಾದ ಉಪೋದ್ಘಾತದಲ್ಲಿ ಬರೆದಿರುತ್ತಾರೆ. ಎಲ್ಲಾ ಪ್ರಮಾಣಪ್ರಮೇಯವ್ಯವಹಾರಗಳೂ ಈ ಅವಿದ್ಯೆಯನ್ನು ಮುಂದುಮಾಡಿಕೊಂಡೇ ಹೊರಟಿರುತ್ತವೆ- ಎಂದು ಅವರು ಮೊಟ್ಟಮೊದಲು ಪ್ರತಿಜ್ಞೆಮಾಡಿರುತ್ತಾರೆ; ಅದನ್ನು ಅನುಭವಸಹಿತವಾದ ಯುಕ್ತಿಯಿಂದಲೂ ಸಾಧಿಸಿಕೊಟ್ಟಿರುತ್ತಾರೆ. ವೇದಾಂತದ ವಾಕ್ಯಜ್ಞಾನದಿಂದ ಅವಿದ್ಯೆಯು ತೊಲಗಿದರೆ ಯಾವ ವ್ಯವಹಾರವೂ ಉಳಿದಿರುವದಿಲ್ಲವೆಂಬುದನ್ನೂ ಮತ್ತೆಮತ್ತೆ ಈ ಸೂತ್ರಭಾಷ್ಯದಲ್ಲಿ ಅವರು ತಿಳಿಸಿಕೊಟ್ಟಿರುತ್ತಾರೆ. ಜೀವೇಶ್ವರವಿಭಾಗ, ಸೃಷ್ಟಿಪ್ರತಿಪಾದನ, ಬಂಧಮೋಕ್ಷ

ವ್ಯವಹಾರ, ಸಾಧನೋಪದೇಶಗಳು– ಇವೆಲ್ಲವೂ ಅವಿದ್ಯಾದೃಷ್ಟಿಯಲ್ಲಿರುವವು, ಪರಮಾರ್ಥವಾಗಿಲ್ಲ ಎಂಬುದು ತೋರಿಸುವುದೇ ಭಾಷ್ಯದ ಹೆಗ್ಗುರಿ– ಎಂದರೆ ತಪ್ಪಾಗುವದಿಲ್ಲ. ಅದ್ವೈತಪ್ರಕ್ರಿಯೆಯ ಮೇಲೆ ಹುಟ್ಟಬಹುದಾದ ಆಕ್ಷೇಪಗಳಿಗೆಲ್ಲ ಇದೊಂದೇ ಬ್ರಹ್ಮಾಸ್ತ್ರರೂಪವಾದ ಪರಿಹಾರವೆಂಬುದನ್ನು ವಾಚಕರು ನೆನಪಿನಲ್ಲಿಡಬೇಕು. ಈ ಅಧ್ಯಾಸರೂಪಾವಿದ್ಯೆಯ ಸ್ವರೂಪವನ್ನು ಮನದಟ್ಟು ಮಾಡಿಕೊಳ್ಳದೆಯೇ ವ್ಯಾಖ್ಯಾನಪ್ರಸ್ಥಾನಗಳೂ ಪ್ರತಿವಾದಿಗಳ ಭಾಷ್ಯಗಳಲ್ಲಿರುವ ಆಕ್ಷೇಪಗಳೂ ಜೀವಿಸಿಕೊಂಡಿರುತ್ತವೆ– ಎಂಬುದು ಸೂಕ್ಷ್ಮದೃಷ್ಟಿಯ ವಿಮರ್ಶಕರಿಗೆಲ್ಲ ಸ್ಫುಟವಾಗುವಂತಿದೆ.

## ಶಾಸ್ತ್ರಪ್ರಾಮಾಣ್ಯ

ಬ್ರಹ್ಮವು ಶಾಸ್ತ್ರಪ್ರಮಾಣದಿಂದಲೇ ತಿಳಿಯಬರತಕ್ಕದ್ದೆಂದು "ಶಾಸ್ತ್ರಯೋನಿತ್ವಾತ್" (೧–೧–೩) ಎಂಬ ಸೂತ್ರದಲ್ಲಿ ಹೇಳಿದೆಯಷ್ಟೆ. "ಶಾಸ್ತ್ರದೃಷ್ಟ್ಯಾ ತೂಪದೇಶೋ ವಾಮದೇವವತ್" (೧–೧–೩೧) ಎಂಬ ಸೂತ್ರದಲ್ಲಿ ಹೇಳಿರುವ ಶಾಸ್ತ್ರದೃಷ್ಟಿಯೆಂಬುದು ಆಚಾರ್ಯರು ಹೇಳಿರುವಂತೆ ಲೋಕದೃಷ್ಟಿಯಿಂದ ಕಾಣುವ ಅಧ್ಯಾಸವನ್ನು ಕಳೆಯುವ ವೇದಾಂತಜನ್ಯಜ್ಞಾನವೆ, ಅಥವಾ ಮೋಕ್ಷಕಾಮನಾದವನು ಮಾಡಬೇಕೆಂದು ಶಾಸ್ತ್ರದಲ್ಲಿ ವಿಧಿಸಿರುವ ಉಪಾಸನಾರೂಪವಾದ ಜ್ಞಾನವೆ ?– ಎಂಬುದೊಂದು ದೊಡ್ಡ ಸಮಸ್ಯೆಯಾಗಿದೆ. ಏಕೆಂದರೆ ಇದರ ಉತ್ತರದಮೇಲೆ ವೇದಾಂತದರ್ಶನವು ಅನುಭವಾವಸಾನವಾದ ಯುಕ್ತಿಗೂ ಅನುಕೂಲವಾಗಿರುವ ತತ್ತ್ವದರ್ಶನವೆ, ಅಥವಾ ಶಾಸ್ತ್ರಪ್ರಾಮಾಣ್ಯವನ್ನು ನಂಬಿ ಕಾಲಾಂತರದಲ್ಲಿ ಲೋಕಾಂತರದಲ್ಲಿ ಆಗುವ ಫಲವಿಶೇಷಕ್ಕಾಗಿ ಮಾಡುವ ಧ್ಯಾನವನ್ನು ಹೇಳುವ ಒಂದಾನೊಂದು ಮತವನ್ನು ಪ್ರತಿಪಾದಿಸುವ ಶಾಸ್ತ್ರವೆ ?– ಎಂಬ ಪ್ರಶ್ನೆಗೆ ಕೊಡಬೇಕಾದ ಉತ್ತರವು ನಿಂತಿರುತ್ತದೆ. ಶಂಕರಾಚಾರ್ಯರು, ಅವರ ಪರಮಗುರುಗಳಾದ ಗೌಡಪಾದಾಚಾರ್ಯರು, ಅವರ ಶಿಷ್ಯರಾದ ಸುರೇಶ್ವರಾಚಾರ್ಯರು– ಈ ಮೂವರನ್ನು ಬಿಟ್ಟರೆ ಮಿಕ್ಕ ವೇದಾಂತಿಗಳೆಲ್ಲ ದೇಹಪಾತಾನಂತರದಲ್ಲಿ ಆಗುವ ವಿದೇಹಮುಕ್ತಿಯೇ ಮುಖ್ಯಮುಕ್ತಿಯು ಎಂದು ಹೇಳಿರುತ್ತಾರೆ. ಈಗಿನ ಅದ್ವೈತಿಗಳಲ್ಲಿಯೂ ಕೆಲವರು ಸದ್ಯೋಮುಕ್ತಿವಿದೇಹಮುಕ್ತಿಗಳ

ವಿಷಯದಲ್ಲಿ ವಿಲಕ್ಷಣವಾದ ಅಭಿಪ್ರಾಯಭೇದಗಳನ್ನಿಟ್ಟುಕೊಂಡಿರುವದಕ್ಕೆ ಈ ಶಾಸ್ತ್ರಪ್ರಾಮಾಣ್ಯದ ಸಮಸ್ಯೆಯನ್ನು ಚೆನ್ನಾಗಿ ಬಿಡಿಸಿಕೊಳ್ಳದೆಇರುವದೇ ಕಾರಣವೆಂದು ಹೇಳಬಹುದಾಗಿದೆ. ಆದ್ದರಿಂದ ಇಲ್ಲಿ ಭಾಷ್ಯಕಾರರ ಅಭಿಪ್ರಾಯವನ್ನು ಸ್ಪಷ್ಟಪಡಿಸುವದರಿಂದ ಪ್ರಯೋಜನವುಂಟು.

ಶ್ರುತಿಯಲ್ಲಿ ಹೇಳಿರುವ ಕೆಲವು ವಾಕ್ಯಗಳು ಉಪಾಸನೆಯನ್ನು ವಿಧಿಸುತ್ತವೆ ಎಂಬುದು ಸ್ಪಷ್ಟ. ಆ ವಾಕ್ಯಗಳಲ್ಲಿ ವಿಧಿಯಲ್ಲಿಯೇ ಮಿಕ್ಕ ಪದಗಳೆಲ್ಲವೂ ಸಮನ್ವಯವಾಗುತ್ತವೆ. ಉಪಾಸನಾವಿಧಿಪ್ರಧಾನವಾಗಿರುವ ಪ್ರತಿಯೊಂದು ಪ್ರಕರಣದಲ್ಲಿಯೂ ದೇಹಪಾತಾನಂತರದಲ್ಲಿ ಆಗುವ ಫಲವನ್ನೇ ಹೇಳಿದೆ. ಇದನ್ನು ಎಲ್ಲರೂ ಒಪ್ಪಿರುತ್ತಾರೆ. ಆದರೆ ಮತ್ತೆ ಕೆಲವು ವಾಕ್ಯಗಳು ಬ್ರಹ್ಮಪ್ರಧಾನವಾಗಿರುತ್ತವೆ. ಆ ವಾಕ್ಯಗಳಲ್ಲಿರುವ ಪದಗಳು ಬ್ರಹ್ಮದಲ್ಲಿಯೇ ಸಮನ್ವಯವಾಗಿರುತ್ತವೆ. ಬ್ರಹ್ಮಪ್ರಕರಣದಲ್ಲಿ ಹೇಳಿರುವ ವಾಕ್ಯಗಳ ವಿಷಯದ ನಿರೂಪಣವು ಮುಗಿದಬಳಿಕ ಮಾಡತಕ್ಕ ಯಾವ ಉಪಾಸನೆಯನ್ನೂ ಹೇಳಿರುವದಿಲ್ಲ; ಉಪಾಸನಾವಾಕ್ಯಗಳಂತೆ ಈ ವಾಕ್ಯಗಳು ಕಾಲಾಂತರಫಲಗಳನ್ನೂ ಹೇಳಿರುವದಿಲ್ಲ, ಈಗಲೇ ಇಲ್ಲಿಯೇ ಆಗುವ ಫಲವನ್ನು ಹೇಳುತ್ತವೆ, ಅಥವಾ ಜೀವಬ್ರಹ್ಮೈಕ್ಯವನ್ನು ಹೇಳಿ ಅಷ್ಟರಲ್ಲಿಯೇ ಪರಿಸಮಾಪ್ತವಾಗುತ್ತವೆ. 'ತತ್ತ್ವಮಸಿ' (ಛಾಂ.) 'ಅಭಯಂ ವೈ ಜನಕ ಪ್ರಾಪ್ತೋಽಸಿ' (ಬೃ.) ಮುಂತಾದ ಉದಾಹರಣೆಗಳನ್ನು ಇಲ್ಲಿ ವಾಚಕರು ನೆನಪಿಗೆ ತಂದುಕೊಳ್ಳಬಹುದು. ಈ ಎರಡು ಭೇದಗಳನ್ನೂ, ಮನಸ್ಸಿಗೆ ತಂದುಕೊಂಡು 'ತತ್ತು ಸಮನ್ವಯಾತ್' (೧-೧-೪) ಎಂಬ ಸೂತ್ರದಲ್ಲಿ ವೇದಾಂತವಾಕ್ಯಸಮನ್ವಯವು ಬ್ರಹ್ಮದಲ್ಲಿಯೇ ಆಗುವದರಿಂದ ಬ್ರಹ್ಮಕ್ಕೆ ಶಾಸ್ತ್ರವು ಪ್ರಮಾಣವಾಗಿದೆ; ವಿಧಿಗೆ ಅಂಗವಾಗಿ ಬ್ರಹ್ಮವನ್ನು ತಿಳಿಸುವದರಿಂದ ಅಲ್ಲ-ಎಂದು ಆಚಾರ್ಯರು ನಿರ್ಣಯಿಸಿರುತ್ತಾರೆ.

ಶಂಕರಾಚಾರ್ಯರ ಈ ವ್ಯಾಖ್ಯಾನದಿಂದ ಎರಡು ಉಪಸಿದ್ಧಾಂತಗಳು ಏರ್ಪಡುತ್ತವೆ. ಬ್ರಹ್ಮದ ಉಪಾಸನೆಯನ್ನು ಹೇಳುವ ವಾಕ್ಯಗಳೂ ಬ್ರಹ್ಮಸ್ವರೂಪವನ್ನು ಹೇಳುವ ವಾಕ್ಯಗಳೂ ಸ್ವತಂತ್ರವಾಗಿಯೇ ತಮ್ಮ ತಮ್ಮ ವಿಷಯವನ್ನು ತಿಳಿಸುತ್ತವೆ ಎಂಬುದು ಒಂದು ; ಬ್ರಹ್ಮವಾಕ್ಯಗಳು ಹೇಳುವ ವಿಷಯವು ಈಗಲೇ ಇಲ್ಲಿಯೇ ಅನುಭವಕ್ಕೆ ಬರುವದಾಗಿದೆ ಎಂಬುದು

ಮತ್ತೊಂದು. ಕ್ರಿಯೆಯಲ್ಲಿ ಹೀಗೂ ಇರಬಹುದು, ಹಾಗೂ ಇರಬಹುದು ಎಂಬ ವಿಕಲ್ಪವಿದೆ; ಆದರೆ ವಸ್ತುಸ್ವರೂಪವಿಷಯದಲ್ಲಿ ಹೀಗೆ ವಿಕಲ್ಪವಿರುವದಕ್ಕಾಗುವದಿಲ್ಲ– ಎಂದು ಶಂಕರಾಚಾರ್ಯರು ಮತ್ತೆ ಮತ್ತೆ ಸಾರಿರುತ್ತಾರೆ. ಇದರಿಂದ ವೇದಾಂತದರ್ಶನವು ಅನುಭವಾನುಸಾರಿಯಾದ ತತ್ತ್ವದರ್ಶನವೇ ಎಂಬುದು ಸಮನ್ವಯಸೂತ್ರದಿಂದಲೇ ಏರ್ಪಡುತ್ತದೆ; ಬ್ರಹ್ಮಜಿಜ್ಞಾಸೆಯೂ ಧರ್ಮಜಿಜ್ಞಾಸೆಯೂ ಸೇರಿ ಒಂದೇ ಶಾಸ್ತ್ರ ಎಂಬವರ ನಂಬಿಕೆಗೆ ಆಧಾರವಿಲ್ಲವೆಂದೂ ಆ ಸೂತ್ರದಿಂದ ಏರ್ಪಡುತ್ತದೆ. ಬ್ರಹ್ಮವಾಕ್ಯಗಳಲ್ಲಿ ಬ್ರಹ್ಮಸ್ವರೂಪವನ್ನು ಪ್ರತಿಪಾದನೆಗಾಗಿಯೂ ಉಪಾಸನಾವಾಕ್ಯಗಳಲ್ಲಿ ಉಪಾಸನೆಗಾಗಿಯೂ ಹೇಳಿರುವದರಿಂದ ಉಪಾಸನೆಗಾಗಿ ಹೇಳಿರುವ ಸಗುಣಬ್ರಹ್ಮವು ಮುಖ್ಯಬ್ರಹ್ಮವಲ್ಲವೆಂದೂ ಬ್ರಹ್ಮವಾಕ್ಯಗಳಲ್ಲಿ ಹೇಳಿರುವ ನಿರ್ವಿಶೇಷಸ್ವರೂಪವೇ ಶಾಸ್ತ್ರಕ್ಕೆ ವಿಷಯವೆಂದೂ ಏರ್ಪಡುತ್ತದೆ. ಇದನ್ನು ೧–೧–೪, ೧–೧–೨, ೧–೧–೧೯, ೧–೧–೨೪– ಮುಂತಾದ ಸೂತ್ರಗಳಲ್ಲಿ ಶ್ರುತಿಪ್ರಾಮಾಣ್ಯವನ್ನೂ ಯುಕ್ತಿಯನ್ನೂ ಕೊಟ್ಟು ಈ ಭಾಷ್ಯಕಾರರು ಸ್ಥಾಪಿಸಿರುತ್ತಾರೆ. ಮುಖ್ಯಬ್ರಹ್ಮವನ್ನು ಪರಬ್ರಹ್ಮವೆಂದೂ ಉಪಾಸ್ಯಬ್ರಹ್ಮವನ್ನು ಅಪರಬ್ರಹ್ಮವೆಂದೂ ಕರೆಯುವ ರೂಢಿಯಿದೆ. ಉಪನಿಷತ್ತುಗಳಲ್ಲಾಗಲಿ ಸೂತ್ರಗಳಲ್ಲಾಗಲಿ ಈ ಪರಾಪರಬ್ರಹ್ಮವಿಭಾಗವು ಇಲ್ಲವೆಂದು ಥೀಬೋ ಮುಂತಾದ ವಿಮರ್ಶಕರು ಹೇಳಿರುವದು ಶ್ರುತಿಪ್ರಾಮಾಣ್ಯಕ್ಕೆ ವಿರುದ್ಧವಾಗಿರುತ್ತದೆ. ಬ್ರಹ್ಮವು ನಮ್ಮೆಲ್ಲರ ಆತ್ಮನೇ ಆಗಿದೆ ಎಂಬುಧು ಶಾಸ್ತ್ರಪ್ರಮಾಣದಿಂದ ನಂಬುವ ವಿಷಯವಾಗಿಲ್ಲವೆಂಬುದನ್ನೂ ಅದು ಅನುಭವಗೋಚರವೇ ಎಂಬುದನ್ನೂ ಆಚಾರ್ಯರು ಬ್ರಹ್ಮವಾಕ್ಯಗಳ ಸಮನ್ವಯಾಧ್ಯಾಯದಲ್ಲಿ ತೋರಿಸಿಕೊಟ್ಟಿರುತ್ತಾರೆ; ಉಪಾಸ್ಯಬ್ರಹ್ಮದ ವಿಚಾರವು ಇದಕ್ಕೆ ಅಡ್ಡಿಯಾಗುವದಿಲ್ಲವೆಂಬುದನ್ನೂ ಮನದಂದುಕೊಳ್ಳಬೇಕು.

ಬ್ರಹ್ಮಾತ್ಮಜ್ಞಾನದಿಂದ ಅಧ್ಯಾಸರೂಪವಾದ ಅವಿದ್ಯೆಯನ್ನು ಕಳೆಯುವದೇ ವೇದಾಂತವಾಕ್ಯದ ಕೃತ್ಯವು. ಬ್ರಹ್ಮವು ನಮ್ಮ ಆತ್ಮನು ಎಂದರೆ ನಾನು ಎಂದು ಸಾಮಾನ್ಯವಾಗಿ ಜನರು ನಂಬಿರುವ ಮತ್ತು ಮೀಮಾಂಸಕರೂ ನೈಯಾಯಿಕರೂ ಅಹಂಪ್ರತ್ಯಯದಿಂದ ಸಿದ್ಧಮಾಡುವೆವೆಂದೂ ಹೇಳಿರುವ ಆತ್ಮನಲ್ಲ; ಈ ನಾನು ಎಂಬುದನ್ನೂ ನೋಡುತ್ತಿರುವ ಕೂಟಸ್ಥಚೈತನ್ಯ

ಸ್ವರೂಪವಾದ ಸಾಕ್ಷಿಯು. ಈ ಆತ್ಮಸ್ವರೂಪವನ್ನು ಉಪನಿಷತ್ತುಗಳಿಂದ ಮಾತ್ರವೇ ತಿಳಿಯುವದಕ್ಕೆ ಸಾಧ್ಯ- ಎಂಬುದನ್ನು ಆಚಾರ್ಯರು ಸೂತ್ರ ಭಾಷ್ಯದಲ್ಲಿ (೧-೧-೪) ಸ್ಪಷ್ಟಗೊಳಿಸಿರುತ್ತಾರೆ. ಈ ಸಾಕ್ಷಿಯು ಸ್ವತಃಸಿದ್ಧ ನಾಗಿರುವದರಿಂದ ಅವನನ್ನು ಇಲ್ಲವೆನ್ನುವದು ಆಗುವಹಾಗೆಯೇ ಇಲ್ಲ. ಶಾಸ್ತ್ರವು ಆತ್ಮನನ್ನು ವಿಷಯೀಕರಿಸಿ ತಿಳಿಸಿಕೊಡುವದಿಲ್ಲ; ಅರಿಯುವವನು ಅರಿಯಲ್ಪಡತಕ್ಕದ್ದು, ಅರಿವು- ಎಂಬ ಭೇದವು ಅವಿದ್ಯಕವೆಂದು ತಿಳಿಸಿ ಕೊಟ್ಟು ಅದ್ವೈತಾತ್ಮನಲ್ಲಿ ನಿಲ್ಲಿಸುವದರಿಂದಲೇ ಶಾಸ್ತ್ರವು ಪ್ರಮಾಣವೆನಿಸಿರು ತ್ತದೆ-ಎಂದು (೧-೧-೪) ಅವರು ತಿಳಿಸಿರುತ್ತಾರೆ. ಪ್ರಮಾಣಪ್ರಮೇಯ ವ್ಯವಹಾರವೇ ಅವಿದ್ಯಕವೆಂದು ತಿಳಿಸುವದರಿಂದ ಶಾಸ್ತ್ರವು ಅಂತ್ಯಪ್ರಮಾ ಣವು ಎಂದೂ (೨-೧-೧೪) ತಿಳಿಸಿರುತ್ತಾರೆ.

ಬ್ರಹ್ಮವು ನಮ್ಮ ಆತ್ಮನೇ ಆಗಿರುತ್ತದೆ; ಅದರಲ್ಲಿ ಯಾವ ವಿಶೇಷವೂ ಇಲ್ಲದಿದ್ದರೂ ಅಧ್ಯಾಸರೂಪಾವಿದ್ಯೆಯಿಂದ ಅದರಲ್ಲಿ ಎಲ್ಲಾ ವ್ಯವಹಾರಗಳೂ ಆಗಿರುತ್ತವೆ ಎಂದು ತಿಳಿಸುವದೇ ವೇದಾಂತದರ್ಶನವೆಂಬುದು ಶಂಕರಾಚಾ- ರ್ಯರ ಪರಮಸಿದ್ಧಾಂತವು. ಇದನ್ನು ಮನಸ್ಸಿನಲ್ಲಿಟ್ಟುಕೊಂಡಿರುವವರಿಗೆ ಈ ಸಿದ್ಧಾಂತದಲ್ಲಿ ಯಾವ ಸಂಶಯವೂ ಉಂಟಾಗುವದಿಲ್ಲ.

ಪರಬ್ರಹ್ಮವು ಜ್ಞಾತೃಜ್ಞೇಯಾದಿವಿಭಾಗವಿಲ್ಲದ್ದಾದರೂ ಅವಿದ್ಯಾದೃಷ್ಟಿ ಯಿಂದ ನಮಗೆ ಅದು ಜಿಜ್ಞಾಸ್ಯವಾಗಿರುತ್ತದೆ. ಅದರಲ್ಲಿ ಯಾವ ಕಾರ್ಯ ಕಾರಣಭಾವವೂ ಇಲ್ಲದಿದ್ದರೂ ಅವಿದ್ಯೆಯಿಂದ ಅದು ಜಗಜ್ಜನ್ಮಾದಿಕಾರಣ ವುಳ್ಳದ್ದೆಂದು ತೋರುತ್ತಿರುತ್ತದೆ; ಅದು ಸರ್ವಪ್ರಮಾಣಪ್ರಮೇಯವ್ಯವ ಹಾರಗಳಿಗೂ ಅತೀತವಾಗಿದ್ದರೂ ಅವಿದ್ಯಾದೃಷ್ಟಿಯಲ್ಲಿ ಶಾಸ್ತ್ರಪ್ರಮಾಣದಿಂದ ತಿಳಿಯಬರುತ್ತದೆ; ಅದರಲ್ಲಿ ಯಾವ ಶಬ್ದಪ್ರವೃತ್ತಿನಿಮಿತ್ತಗಳೂ ಇಲ್ಲ ದಿದ್ದರೂ ಅವಿದ್ಯಾದೃಷ್ಟಿಯಿಂದ ವೇದಾಂತವಾಕ್ಯಗಳ ಸಮನ್ವಯದಿಂದ ಶಾಸ್ತ್ರಪ್ರತಿಪಾದ್ಯವೆನಿಸಿರುತ್ತದೆ. ಅದರಲ್ಲಿ ಯಾವ ವಿಭಾಗವೂ ಇಲ್ಲದಿದ್ದರೂ ಜೀವಬ್ರಹ್ಮವಿಭಾಗವೂ ಪರಾಪರಬ್ರಹ್ಮವಿಭಾಗವೂ ಉಪಾಸ್ಯೋಪಾಸಕ ವಿಭಾಗವೂ ಅವಿದ್ಯಾದೃಷ್ಟಿಯಲ್ಲಿ ಇರಬಹುದಾಗಿದೆ. ಅದು ನಿತ್ಯಪ್ರಾಪ್ತ ವಾದ ನಮ್ಮ ಆತ್ಮನೇ ಆದರೂ ಅವಿದ್ಯಾದೃಷ್ಟಿಯಿಂದ ಲೋಕಾಂತರದಲ್ಲಿ

ಪ್ರಾಪ್ಯವೆನಿಸಬಹುದಾಗಿದೆ. ಹೀಗೆಯೇ ಮಿಕ್ಕ ಎಲ್ಲಾ ವ್ಯವಹಾರಗಳನ್ನೂ ಅವಿದ್ಯೆಯ ದೃಷ್ಟಿಯಿಂದಲೇ ಹೊಂದಿಸಿಕೊಳ್ಳಬೇಕು.*

ಈ ಅವಿದ್ಯೆಯು ಯಾರಿಗೆ ? ಅವಿದ್ಯೆಯಿದ್ದರೆ ಬ್ರಹ್ಮವು ಸದ್ವಿತೀಯ ವಾಗುವದಿಲ್ಲವೆ ?– ಎಂದರೆ ಅವಿದ್ಯಾದೃಷ್ಟಿಯಲ್ಲಿ ಕೇಳುವಾತನಿಗೇ ಅವಿದ್ಯೆ, ಆ ದೃಷ್ಟಿಯಿಂದ ಬ್ರಹ್ಮವು ಸದ್ವಿತೀಯವೇ ಆಗಿದೆ. ಅವಿದ್ಯೆಯಿಲ್ಲದ ಬ್ರಹ್ಮವು ನಾನೇ ಎಂದು ಅರಿತುಕೊಂಡಿರುದವನ ಶಾಸ್ತ್ರದೃಷ್ಟಿಯಲ್ಲಿ ಅವಿದ್ಯೆಯು ಯಾರಿಗೂ ಇಲ್ಲ, ಬ್ರಹ್ಮವು ಅದ್ವಿತೀಯವೇ ಆಗಿರುತ್ತದೆ (೧–೪–೩) ಎಂದು ಶಂಕರಾಚಾರ್ಯರು ಕುಚೋದ್ಯಕ್ಕೂ ಪರಿಹಾರವನ್ನು ಹೇಳಿರುತ್ತಾರೆ.

ನಿರ್ವಿಶೇಷವಾದ ಬ್ರಹ್ಮದಲ್ಲಿಯೇ ವೇದಾಂತವಾಕ್ಯಗಳು ಸಮನ್ವಿತ ವಾಗಿರುತ್ತವೆ. ಉಪಾಸನಾವಾಕ್ಯಗಳು ವಿಧಿಯಲ್ಲಿ ಸಮನ್ವಯವಾದರೂ ಬ್ರಹ್ಮಸ್ವರೂಪದ ಜ್ಞಾನಕ್ಕೆ ಅವುಗಳಿಂದ ಯಾವ ಆತಂಕವೂ ಇಲ್ಲ; ಸಾಂಖ್ಯ ಯೋಗಾದಿಸ್ಮೃತಿಗಳಿಗೆ ಯಾವ ವೇದಾಂತವಾಕ್ಯದ ಆಧಾರವೂ ಇಲ್ಲ; ಅವು ಗಳ ತರ್ಕಕ್ಕೆ ಈ ದರ್ಶನವು ವಿರುದ್ಧವಾದರೂ ಆ ತರ್ಕಗಳೇ ಕುತರ್ಕ ಗಳಾಗಿರುವದರಿಂದ ಈ ದರ್ಶನದಲ್ಲಿ ಯಾವ ದೋಷವೂ ಇಲ್ಲ– ಎಂಬಿದನ್ನು ಆಚಾರ್ಯರು ಇಲ್ಲಿ ತೋರಿಸಿಕೊಟ್ಟಿರುತ್ತಾರೆ.

## ಭಾಷ್ಯದಲ್ಲಿ ಪರಾಮೃಷ್ಟರಾಗಿರುವ ಪ್ರಾಚೀನವೇದಾಂತಿಗಳು

ಸೂತ್ರಗಳಲ್ಲಿ ಪರಾಮೃಷ್ಟರಾಗಿರುವ ಪ್ರಾಚೀನಾಚಾರ್ಯರುಗಳ ಮತ ಗಳನ್ನು ಮನನಮಾಡಿಕೊಂಡವರಿಗೆ ವೇದಾಂತದ ಉಪದೇಶದ ವಿಷಯಕ್ಕೆ ಮೂರು ಪ್ರಸ್ಥಾನಭೇದಗಳು ಕಾಣಬರುವವೆಂತಲೂ ಅವೆಲ್ಲವೂ ಅದ್ವೈತ ಸಿದ್ಧಾಂತಿಗಳ ಪ್ರಕ್ರಿಯಾಭೇದಗಳೆಂದು ನಂಬುವದಕ್ಕೆ ಆಧಾರವಿದೆಯೆಂತಲೂ ಹಿಂದೆ ತಿಳಿಸಿದ್ದೇವೆ. ಆ ಮೂರರೊಳಗೆ ಅವಿದ್ಯಾಕೃತಭೇದವನ್ನು ಒಪ್ಪಿ ಪಾರಮಾರ್ಥಿಕವಾಗಿ ಅಭೇದವನ್ನು ಅಂಗೀಕರಿಸಿರುವ ಶಾಂಕರಪ್ರಸ್ಥಾನವೇ ಸೂತ್ರಕಾರರಿಗೆ ಸಮ್ಮತವೆಂಬುದನ್ನೂ ಪ್ರತಿಪಾದಿಸಿದ್ದೇವೆ. ಶಂಕರಭಗವ ತ್ಪಾದರವರು ತಮಗೆ ಸಮ್ಮತವೆಂದು ಒಪ್ಪಿ ಅಥವಾ ಅನಾದೇಯವೆಂದು

---

* ಈ ವಿಷಯಕ್ಕೆ ಹೆಚ್ಚು ವಿವರವನ್ನು ತಿಳಿಯಬೇಕೆನ್ನುವವರು 'ಸರ್ವವ್ಯವ ಹಾರಾತೀತವಾದ ಪರಮಾರ್ಥ' ಎಂಬ ಶ್ರೀಶ್ರೀಗಳವರ ಕೃತಿಯನ್ನು ಓದಬೇಕು.

ಖಂಡಿಸಿ ಪರಾಮರ್ಶಿಸಿರುವ ಮತಗಳನ್ನು ಈಗ ಸಂಗ್ರಹಿಸುವೆವು. ಮೊಟ್ಟ ಮೊದಲು ಸೂತ್ರಭಾಷ್ಯದಲ್ಲಿ ನೇರಾಗಿ ಅಥವಾ ಪರೋಕ್ಷವಾಗಿ ನಿರ್ದೇಶಿಸಿರುವ ವೇದಾಂತಿಗಳನ್ನೇ ಇಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳುವೆವು.

**ಉಪವರ್ಷಾಚಾರ್ಯ**ರೆಂಬವರು ಬಹಳ ಪ್ರಾಚೀನಮೀಮಾಂಸಕರು. ಜೈಮಿನೀಯಸೂತ್ರದ ಭಾಷ್ಯದಲ್ಲಿ (೧-೧-೫) ಆಚಾರ್ಯಶಬರಸ್ವಾಮಿಗಳು ಉದಾಹರಿಸಿರುವದನ್ನು ಅನುಸರಿಸಿ ಶಂಕರಾಚಾರ್ಯರವರೂ (೧-೩-೨೮) ಶಬ್ದವು ವರ್ಣಾತ್ಮಕವೆಂಬ ಉಪವರ್ಷಮತವನ್ನು ಅಂಗೀಕರಿಸಿ ಸ್ಫೋಟವಾದವನ್ನು ಖಂಡಿಸಿರುತ್ತಾರೆ. ಶಬರಸ್ವಾಮಿಗಳೇ ಉಪವರ್ಷರನ್ನು 'ಭಗವಾನ್ ಉಪವರ್ಷಃ' ಎಂದು ಪೂಜ್ಯಬುದ್ಧಿಯಿಂದ ಕರೆದಿರುವದರಿಂದ ಈ ಆಚಾರ್ಯರು ಬಹಳ ಹಿಂದಿನವರೆಂದು ನಾವು ಧಾರಾಳವಾಗಿ ನಂಬಬಹುದು. ಉಪವರ್ಷರು ವೇದಾಂತಸೂತ್ರಕ್ಕೂ ವ್ಯಾಖ್ಯಾನಮಾಡಿರುವಂತೆ ಅವರ ಪೂರ್ವಮೀಮಾಂಸಾವೃತ್ತಿಯಲ್ಲಿರುವ ವಾಕ್ಯದಿಂದ ತಿಳಿಯಬಹುದಾಗಿದೆ. ಆ ವಾಕ್ಯವನ್ನು ಶಂಕರಾಚಾರ್ಯರವರು "ಅತ ಏವ ಭಗವತಾ ಉಪವರ್ಷೇಣ ಪ್ರಥಮತನ್ತ್ರೇ ಆತ್ಮಾಸ್ತಿತ್ವಾಭಿಧಾನಪ್ರಸಕ್ತೌ ಶಾರೀರಕೇ ವಕ್ಷ್ಯಾಮಃ ಇತಿ ಉದ್ಧಾರಃ ಕೃತಃ" (೩-೩-೫೩) ಎಂದು ಉದಾಹರಿಸಿರುತ್ತಾರೆ. ಶಾಂಕರಪ್ರಸ್ಥಾನಕ್ಕೆ ಸಮ್ಮತವಾದ ವೇದಾಂತವ್ಯಾಖ್ಯಾನವು ಆಚಾರ್ಯಶಬರಸ್ವಾಮಿಗಳಿಗೂ ಪೂರ್ವದಲ್ಲಿಯೇ ಇತ್ತೆಂಬುದಕ್ಕೆ ಇದೊಂದು ಪ್ರಬಲವಾ ಆಧಾರವಾಗಿರುತ್ತದೆ.

**ಗೌಡಪಾದಾಚಾರ್ಯ**ರನ್ನು ನೇರಾಗಿ ಹೆಸರಿಸದೆ ಇದ್ದರೂ 'ಸಂಪ್ರದಾಯವಿದ'ರೆಂಬ ಪೂಜ್ಯವಾಚಕಶಬ್ದದಿಂದ ಉಲ್ಲೇಖಿಸಿ ಅವರ ಕಾರಿಕೆಗಳೆರಡನ್ನು (೧-೪-೧೪, ೨-೧-೯) ಭಾಷ್ಯಕಾರರು ಸಮ್ಮತಿಗಾಗಿ ತೆಗೆದುಕೊಂಡಿರುತ್ತಾರೆ. ಗೌಡಪಾದರ ಮಾಂಡೂಕ್ಯಕಾರಿಕೆಗಳು ಈಗಲೂ ಸುಪ್ರಸಿದ್ಧವಾಗಿದ್ದು ಅವುಗಳಲ್ಲಿರುವ ವೇದಾಂತಪ್ರಸ್ಥಾನವು ಎಲ್ಲಾ ಬಗೆಯಿಂದಲೂ ಶಾಂಕರಪ್ರಸ್ಥಾನಕ್ಕೆ ಹೊಂದಿಕೆಯಾಗಿದೆ ಎಂಬುದು ನಿರ್ವಿವಾದವಾಗಿರುತ್ತದೆ.

ಬ್ರಹ್ಮಸೂತ್ರಗಳಲ್ಲಿ ಸಮನ್ವಯಸೂತ್ರದ (೧-೧-೪) ಭಾಷ್ಯದ ಕೊನೆಯಲ್ಲಿ ಆಚಾರ್ಯರು ಉದಾಹರಿಸಿರುವ ಮೂರು ಶ್ಲೋಕಗಳು ಶಾಂಕರಪ್ರಸ್ಥಾನಕ್ಕೆ ಅಡಿಗಟ್ಟಾಗಿರುವ ಅಧ್ಯಾಸವಾದಕ್ಕೆ ಅಸಂದಿಗ್ಧವಾದ ಆಧಾರ

ವಚನಗಳಾಗಿವೆ. ಈ ಶ್ಲೋಕಗಳು ಯಾರವೆಂಬ ಬಗ್ಗೆ ವಿವಾದವಿದೆ. ಮೂರನೆಯ ಶ್ಲೋಕವು 'ಆಚಾರ್ಯ ಸುಂದರಪಾಂಡ್ಯ'ನಿಂದ ತೆಗೆದುಕೊಂಡದ್ದೆಂದು ಸೂತಸಂಹಿತೆಯ ಟೀಕೆಯಲ್ಲಿದೆ ; ಇವೆಲ್ಲವೂ ಸುಂದರಪಾಂಡ್ಯನವೇ ಎಂದೂ ಕೆಲವರು ಕಲ್ಪಿಸಿರುತ್ತಾರೆ. ಸುಂದರಪಾಂಡ್ಯನು ಶೈವನಾದ್ದರಿಂದಲೂ ಆಚಾರ್ಯರು ಮತ್ತೆಲ್ಲಿಯೂ ಶೈವಗ್ರಂಥಗಳಿಂದ ಪ್ರಮಾಣವಚನಗಳನ್ನು ಉದಾಹರಿಸದೆ ಇರುವದರಿಂದಲೂ ಈ ಕಲ್ಪನೆಗೆ ಅಡಚಣೆಯಿದೆ. ಈ ಶ್ಲೋಕಗಳು ಇನ್ನೂ ಪ್ರಾಚೀನತರವಾದ ಯಾವದೋ ಗ್ರಂಥದಲ್ಲಿದ್ದು ಆ ಗ್ರಂಥದಿಂದಲೇ ಸುಂದರಪಾಂಡ್ಯನೂ ಆಚಾರ್ಯರೂ ಏತಕ್ಕೆ ಉದಾಹರಿಸಿಕೊಂಡಿರಬಾರದು ? ಎಂಬುದನ್ನು ವಿಮರ್ಶಕರು ಸಮಾಲೋಚನೆಮಾಡಬೇಕಾಗಿದೆ.

ಈಗ ಆಚಾರ್ಯರು ಖಂಡನೆಗೆಂದು ತೆಗೆದುಕೊಂಡಿರುವ ಅದ್ವೈತಪ್ರಸ್ಥಾನಗಳನ್ನು ವಿಮರ್ಶಿಸೋಣ. ಸೂತ್ರಭಾಷ್ಯದಲ್ಲಿ ಇಂಥ ಕೆಲವು ಮತಗಳು ಸಿಕ್ಕುತ್ತವೆಯಾದರೂ ಅವು ಯಾವ ಆಚಾರ್ಯರವು ಎಂಬುದು ಗೊತ್ತಾಗಿ ತಿಳಿಯುವಂತಿಲ್ಲ. ಮೊದಲನೆಯ ಸೂತ್ರದ ಅಥಶಬ್ದಕ್ಕೆ ಅಧಿಕಾರಾರ್ಥವನ್ನು ಹೇಳುವವರ ಮತವನ್ನು ಆಚಾರ್ಯರು (೧–೧–೧) ತಿರಸ್ಕರಿಸಿರುತ್ತಾರೆ ; ಇದರಂತೆ ಅಥಶಬ್ದಕ್ಕೆ ಮಂಗಲವೆಂಬರ್ಥವೂ ಸರಿಯಲ್ಲವೆಂದಿರುತ್ತಾರೆ. ಇವೆರಡೂ ಹಿಂದಿನ ವೃತ್ತಿಕಾರರು ಯಾರಾದರೂ ಒಪ್ಪಿದ ಮತಗಳೋ, ಅಥವಾ ಭಾಷ್ಯಕಾರರು ಆನಂತರ್ಯಾರ್ಥವನ್ನು ನಿಶ್ಚಯಿಸುವದಕ್ಕಾಗಿ ತಾವೇ ಕಲ್ಪಿಸಿ ನಿರಾಕರಿಸಿದವುಗಳೋ, ಹೇಳುವದಕ್ಕಾಗುವದಿಲ್ಲ. ಆದರೆ ಕರ್ಮಜ್ಞಾನಾನಂತರದಲ್ಲಿ ಎಂಬರ್ಥವಾಗಬಹುದಲ್ಲ !– ಎಂಬ (೧–೧–೧) ಶಂಕೆಯು ಮತ್ತೊಂದು ವೃತ್ತಿಯಲ್ಲಿತ್ತೆಂದು **ಪಂಚಪಾದಿಕೆ** ಎಂಬ ಟೀಕೆಯಿಂದ ತಿಳಿಯಬರುತ್ತದೆ. ಇದರಂತೆ 'ಬ್ರಹ್ಮಜಿಜ್ಞಾಸಾ' ಎಂಬಲ್ಲಿ 'ಬ್ರಹ್ಮಣೇ ಜಿಜ್ಞಾಸಾ' ಎಂದು ಚತುರ್ಥೀಸಮಾಸವನ್ನೂ 'ಬ್ರಹ್ಮಣೋ ಜಿಜ್ಞಾಸಾ' ಎಂದು ಶೇಷಷಷ್ಠಿಯನ್ನೂ ಅಂಗೀಕರಿಸಿದ್ದ ಇಬ್ಬರು ವೃತ್ತಿಕಾರರುಗಳನ್ನು ಆನಂದಗಿರಿಯ ಟೀಕೆಯಲ್ಲಿ ಪಂಚಪಾದಿಕೆಯನ್ನನುಸರಿಸಿ ಪರಾಮರ್ಶಿಸಿದೆ. ಆ ಇಬ್ಬರ ಮತವನ್ನೂ ತಳ್ಳಿಹಾಕಿ ಕರ್ಮಣಿಷಷ್ಠಿಯನ್ನು ಭಾಷ್ಯಕಾರರು ಸ್ವೀಕರಿಸಿರುತ್ತಾರೆ ; ಈ ಸಂದರ್ಭದಲ್ಲಿ ಬ್ರಹ್ಮಶಬ್ದಕ್ಕೆ ಬ್ರಾಹ್ಮಣ್ಯವೇ ಮುಂತಾದ ಅರ್ಥಗಳನ್ನು ಶಂಕಿಸಿ ಪರಿಹರಿಸಿದ್ದ ವೃತ್ತಿಕಾರರ ಅಭಿಪ್ರಾಯ

ವನ್ನು ಪಂಚಪಾದಿಕೆಯಲ್ಲಿ ವರ್ಣಿಸಿದೆ; ಅದನ್ನೂ ಭಾಷ್ಯಕಾರರು ತಳ್ಳಿ ಹಾಕಿರುತ್ತಾರೆ (೧-೧-೧) ಇದರಿಂದ ಆಚಾರ್ಯರಿಗಿಂತ ಹಿಂದೆ ಅನೇಕ ವೃತ್ತಿ ಕಾರರುಗಳು ಇದ್ದರೆಂದು ಗೊತ್ತಾಗುತ್ತದೆ.

ಈ ವೃತ್ತಿಕಾರರುಗಳಲ್ಲಿ ಯಾರೊಬ್ಬರೂ ದ್ವೈತಿಗಳಾಗಿದ್ದರೆಂಬುದಕ್ಕೆ ನಮಗೆ ಆಧಾರವು ದೊರೆಯುವದಿಲ್ಲ, ಈ ರಹಸ್ಯವನ್ನರಿಯದೆ ಥೀಭೋ ಮಹಾಶಯನು ರಾಮಾನುಜಾಚಾರ್ಯರಿಗೆ ಆಧಾರವಾಗಿ ವಿಶಿಷ್ಟಾದ್ವೈತ ಸಿದ್ಧಾಂತಕ್ಕನುಗುಣವಾದ ವೃತ್ತಿಯನ್ನು ಬರೆದಿದ್ದ ಬೋಧಾಯನರೆಂಬ ರೊಬ್ಬರೇ ಶಂಕರರು ಪರಾಮರ್ಶಿಸಿರುವ ವೃತ್ತಿಕಾರರೆಂದು ನಂಬಿರುತ್ತಾನೆ. ಭಾಷ್ಯಕಾರರು ವಿಶೇಷವಾಗಿ ಅನುವಾದಮಾಡಿಕೊಂಡು ಖಂಡಿಸಿರುವ ಅದ್ವೈತವೃತ್ತಿಕಾರರುಗಳು ಯಾರೆಂದರೆ: (೧) **ಧ್ಯಾನನಿಯೋಗವಾದಿಗಳು:** ಉಪನಿಷತ್ತುಗಳು ಉಪಾಸನಾವಿಧಿಪ್ರಧಾನವಾಗಿರುವವೆಂದೂ ಬ್ರಹ್ಮವನ್ನು ಉಪಾಸನೆಗೆ ಅಂಗವಾಗಿ ತಿಳಿಸುವವೆಂದೂ ಇವರು ಹೇಳುತ್ತಿದ್ದರು. ಆತ್ಮನ ಅಥವಾ ಬ್ರಹ್ಮದ ಸ್ವರೂಪವನ್ನು ಹೇಳುವ ವಾಕ್ಯಗಳು ಉಪಾಸನೆಯ ವಿಷಯವನ್ನು ಸಮರ್ಪಿಸುವವೆಂಬುದು ಅವರ ಮತ (೧-೨-೪). ಮೋಕ್ಷವು ಕೂಟಸ್ಥವಾಗಿದೆ. ನಿತ್ಯಸಿದ್ಧವಾದ್ದರಿಂದ ಅನುಷ್ಠೇಯದ ಫಲವಲ್ಲ, ಅವಿದ್ಯಾನಿವೃತ್ತಿಮಾತ್ರದಿಂದ ದೊರಕತಕ್ಕದ್ದು; ಬ್ರಹ್ಮಾತ್ಮಜ್ಞಾನವು ವಿಧೇಯವಲ್ಲ- ಎಂಬುದನ್ನು ತಿಳಿಸಿ ಈ ಮತವನ್ನು ಭಾಷ್ಯದಲ್ಲಿ ಖಂಡಿಸಿದೆ (೧-೧-೪). (೨) **ಪ್ರಪಂಚವಿಲಯವಾದಿಗಳು:** ದ್ವೈತಪ್ರಪಂಚವನ್ನು ಪ್ರವಿಲಯ ಮಾಡಿಕೊಳ್ಳಬೇಕೆಂದು ಮುಮುಕ್ಷುವನ್ನು ಶ್ರುತಿಗಳು ನಿಯೋಗಮಾಡುತ್ತವೆ; ಪ್ರಪಂಚಪ್ರವಿಲಯವನ್ನು ಮಾಡಿಕೊಳ್ಳದೆ ಬ್ರಹ್ಮಜ್ಞಾನವಾಗಲಾರದು- ಎಂಬುದು ಇವರ ಮತ. ಬ್ರಹ್ಮಜ್ಞಾನದಿಂದಲೇ ಅವಿದ್ಯಾನಿವೃತ್ತಿಯಾಗಿ ಪ್ರಪಂಚಪ್ರವಿಲಯವಾಗುತ್ತದೆ; ಅವಿದ್ಯಾನಿವೃತ್ತಿಯಾದಮೇಲೆ ಮಾಡಬೇಕಾದದ್ದೇನೂ ಉಳಿಯುವದಿಲ್ಲ ಎಂದು (೧-೩-೧, ೩-೨-೨೧) ಆಚಾರ್ಯರು ಈ ಮತವನ್ನು ಖಂಡಿಸಿದ್ದಾರೆ. (೩) **ಪ್ರಸಂಖ್ಯಾನವಾದಿಗಳು;** ತತ್ತ್ವಮಸಿ ಮುಂತಾದ ವಾಕ್ಯಗಳ ಶ್ರವಣಮಾತ್ರದಿಂದ ಆತ್ಮಾನುಭವವಾಗುವದಿಲ್ಲವಾದ್ದರಿಂದ ವಾಕ್ಯಜ್ಞಾನವನ್ನೂ ಯುಕ್ತಿಯನ್ನೂ ಮತ್ತೆಮತ್ತೆ ಪ್ರಸಂಖ್ಯಾನಮಾಡುವದರಿಂದ ಎಂದರೆ ಆವೃತ್ತಿಮಾಡುವದರಿಂದ ಆತ್ಮನ

ವಿಶೇಷಾನುಭವವುಂಟಾಗುತ್ತದೆ–ಎಂಬುದು ಇವರ ಮತ. ಭಾಷ್ಯಕಾರರು ಈ ಮತವನ್ನು ಖಂಡಿಸಿರುವದು ಹೇಗೆಂದರೆ ಶ್ರವಣಮಾತ್ರದಿಂದಲೇ ಕೆಲವರಿಗೆ ಜ್ಞಾನವುಂಟಾಗಬಹುದಾದ್ದರಿಂದ ಅವರಿಗೆ ಪ್ರಸಂಖ್ಯಾನವು ಬೇಡ. ವಾಕ್ಯದ ಪದಾರ್ಥಗಳ ವಿಷಯಕ್ಕೆ ಅಜ್ಞಾನಸಂಶಯವಿಪರ್ಯಯಗಳಿದ್ದರೆ ಅವನ್ನು ತೊಲಗಿಸುವದಕ್ಕಾಗಿ ಶಾಸ್ತ್ರಯುಕ್ತಿಗಳ ಅಭ್ಯಾಸವು ಅವಶ್ಯವಾಗಬಹುದು. ಸರ್ವದುಃಖರಹಿತವಾಗಿರುವ ಆತ್ಮಚೈತನ್ಯವೇ ನಾನು ಎಂಬ ಜ್ಞಾನವೇ ಆತ್ಮಾನುಭವವು ; ವಾಕ್ಯದಿಂದ ಈ ಜ್ಞಾನವಾದಮೇಲೆ ಆಗಬೇಕಾದದ್ದು ಏನೂ ಇರುವದಿಲ್ಲವಾಗಿ ಆಮೇಲೆ ಪ್ರಸಂಖ್ಯಾನವು ಬೇಕಿಲ್ಲ (೪–೧–೨).

ಸಾಧಕನು ಬದುಕಿರುವಾಗಲೇ ಜ್ಞಾನದಿಂದ ಸದ್ಯೋಮುಕ್ತಿಯನ್ನು ಪಡೆಯುವನೆಂಬ ಅಭಿಪ್ರಾಯವು ಮೇಲೆ ಹೇಳಿರುವ ವೃತ್ತಿಕಾರರುಗಳಲ್ಲಿ ಯಾರೊಬ್ಬರಿಗೂ ಸಮ್ಮತವಾದಂತೆ ಕಾಣಲಿಲ್ಲ. ದೇವಯಾನವೆಂದು ಪ್ರಸಿದ್ಧ ವಾಗಿರುವ ಅರ್ಚಿರಾದಿಮಾರ್ಗದಿಂದ ಜ್ಞಾನಿಯು ಬ್ರಹ್ಮದ ಬಳಿಗೆ ಹೋಗಿ ಸೇರುತ್ತಾನೆಂಬ ಮತವು ಪರಬ್ರಹ್ಮದ ವಿಷಯವೆಂಬವರ ಮತವನ್ನು ಖಂಡಿ ಸಿರುವದಕ್ಕೆ (೪–೩–೧೪), ಸದ್ಯೋಮುಕ್ತಿಯನ್ನು ಸ್ಥಾಪಿಸುವದೇ ಉದ್ದೇಶ ವೆಂಬುದು ಸ್ಪಷ್ಟವಾಗಿದೆ. ಆದರೆ ಆಚಾರ್ಯರು ಉಪಾಸನಾವಾಕ್ಯಗಳ ಗತಿಯನ್ನು ತಿಳಿಸುವದಕ್ಕೆಂದು ಚರ್ಚಿಸಿರುವ 'ಪ್ರಕಾಶವಚ್ಚ' ಮುಂತಾದ (೩–೨–೧೫ರಿಂದ ೨೧ರವರೆಗಿನ) ಸೂತ್ರಗಳೂ ವಸ್ತುಪರವೇ ಎಂದು ವಾದಿಸು ತ್ತಿದ್ದ ಒಬ್ಬ ವೃತ್ತಿಕಾರರನ್ನೂ ಇಲ್ಲಿ ಖಂಡಿಸಿರುವದು ಮನದಂದುಕೊಳ್ಳ ಬೇಕಾದ ವಿಷಯವಾಗಿದೆ. ಏಕೆಂದರೆ ಬ್ರಹ್ಮವು ನಿರ್ವಿಶೇಷವೆಂದು ಒಪ್ಪಿಯೇ ಆ ವೃತ್ತಿಕಾರರು ಬ್ರಹ್ಮವು ಕೇವಲ ಸಲ್ಲಕ್ಷಣವೊ, ಕೇವಲ ಬೋಧಲಕ್ಷಣವೊ, ಅಥವಾ ಉಭಯಲಕ್ಷಣವಾದದ್ದೊ ?– ಎಂಬ ವಿಚಾರವನ್ನು ಆರಂಭಿಸಿರು ತ್ತಾರೆ. ಉಪಾಸನಾವಾಕ್ಯಗಳಿಗೆ ಗತಿಯನ್ನೇ ಹೇಳದೆ ಇದ್ದ ವಸ್ತುವಾದಿ ಗಳೂ ಇದ್ದರೆಂದು ಇದರಿಂದ ನಮಗೆ ತಿಳಿಯಬರುತ್ತದೆ.

ಭೇದಾಭೇದವಾದಿಗಳಾದ ವೃತ್ತಿಕಾರರೊಬ್ಬರನ್ನೂ ಭಾಷ್ಯದಲ್ಲಿ ಖಂಡಿಸಿದೆ. ಬ್ರಹ್ಮವು ವೃಕ್ಷಸಮುದ್ರಾದಿಗಳಂತೆ ಅನೇಕಾತ್ಮಕವಾಗಿರುವ ದೆಂದೂ ಅದರ ನಾನಾತ್ವಾಂಶದಿಂದ ಕರ್ಮಕಾಂಡದ ವ್ಯವಹಾರವೂ ಏಕ ತ್ವಾಂಶದಿಂದ ಜ್ಞಾನಕಾಂಡದ ವ್ಯವಹಾರವೂ ಸಿದ್ಧವಾಗುವದೆಂದೂ ಅವರ

ಮತವಿತ್ತು. ಶ್ರುತಿಯಲ್ಲಿ ಕಾರಣವೊಂದೇ ಸತ್ಯವೆಂದೂ ಕಾರ್ಯವು ಅಸತ್ಯವೆಂದೂ ಹೇಳಿರುವದರಿಂದ ಬ್ರಹ್ಮಪರಿಣಾಮವಾದಿಗಳಾದ ಆ ವೃತ್ತಿಕಾರರ ಮತವು ಸರಿಯಲ್ಲವೆಂದು ಭಾಷ್ಯಕಾರರು ನಿರಾಕರಿಸಿರುತ್ತಾರೆ (೨-೧-೧೪). ಈ ಮತವು ಭರ್ತೃಪ್ರಪಂಚರದ್ದೆಂದು ನಂಬುವದಕ್ಕೆ ಬಲವಾದ ಆಧಾರವಿದೆ ಈ ಭರ್ತೃಪ್ರಪಂಚರ ವಿಷಯಕ್ಕೆ ಬೃಹದಾರಣ್ಯಕಭಾಷ್ಯದ ಪೀಠಿಕೆಯಲ್ಲಿ ಸವಿಸ್ತಾರವಾದ ಚರ್ಚೆಯನ್ನು ವಾಚಕರು ಕಾಣಬಹುದು.

## ಉಪಾಸನೆಯೂ ಜ್ಞಾನವೂ

ಬ್ರಹ್ಮದ ಉಪಾಸನೆಯೇ ಬ್ರಹ್ಮಜ್ಞಾನವೆಂಬುದು ಅನೇಕ ವೃತ್ತಿಕಾರರುಗಳ ಮತವು. ಉಪನಿಷತ್ತುಗಳಲ್ಲಿ ಉಪಾಸನೆಯನ್ನು ವಿಸ್ತಾರವಾಗಿ ಹೇಳಿರುವದರಿಂದಲೂ ಉಪಾಸ್, ವಿದ್-ಎಂಬ ಧಾತುಗಳನ್ನು ಒಂದೇ ಅರ್ಥದಲ್ಲಿ ಉಪಯೋಗಿಸಿರುವದು ಕಂಡುಬರುವದರಿಂದಲೂ (ಸೂ. ಭಾ. ೪-೧-೧) ಈ ಭ್ರಾಂತಿಯು ಉಂಟಾಗಿರಬೇಕು. ಆದರೆ ಶಾರೀರಕಮೀಮಾಂಸೆಯ ಮೊದಲನೆಯ ನಾಲ್ಕು ಸೂತ್ರಗಳಲ್ಲಿ ಬ್ರಹ್ಮವಸ್ತುವಿನ ಜ್ಞಾನವನ್ನೇ ಪ್ರತಿಪಾದಿಸಿರುತ್ತದೆ ಎಂಬುದನ್ನು ಆಚಾರ್ಯರು ಸ್ಪಷ್ಟಗೊಳಿಸಿರುತ್ತಾರೆ. ವೇದಾಂತವಾಕ್ಯಗಳು ಬ್ರಹ್ಮದಲ್ಲಿಯೇ ಸಮನ್ವಯವಾಗುತ್ತವೆಯಾದ್ದರಿಂದ ಅವು ವಸ್ತುಪರವೇ; ಆದ್ದರಿಂದಲೇ ಧರ್ಮಜಿಜ್ಞಾಸೆಗಿಂತ ಬೇರೆಯಾಗಿ ಮತ್ತೊಂದು ಬ್ರಹ್ಮಜಿಜ್ಞಾಸೆ ಎಂಬ ಶಾಸ್ತ್ರವನ್ನು ಆರಂಭಿಸುವದು ಯುಕ್ತವಾಗುತ್ತದೆ (೧-೧-೪) ; ನಾನು ಬ್ರಹ್ಮವೇ ಎಂಬ ಜ್ಞಾನವಾದಬಳಿಕ ಯಾವ ವಿಧಿಯೂ ಯಾವ ಪ್ರಮಾಣವೂ ಪರಮಾರ್ಥವಾಗಿ ಉಳಿಯುವದಿಲ್ಲ (೧-೧-೪) ಎಂದು ಅವರು ತೋರಿಸಿಕೊಟ್ಟಿರುತ್ತಾರೆ.

ನಿರ್ವಿಶೇಷವಾದ ಬ್ರಹ್ಮವನ್ನೇ ಶಾಸ್ತ್ರವು ಹೇಳುವದೆಂಬವರ ಮತದಲ್ಲಿ ಉಪಾಸನಾವಾಕ್ಯಗಳಿಗೇನು ಗತಿ ?- ಎಂಬ ಪ್ರಶ್ನೆಯನ್ನು ತೆಗೆದು ಅವು ಉಪಾಸನಾಪ್ರಧಾನವಾಗಿದ್ದು ಔಪಾಧಿಕವಾದ ವಿಶೇಷವನ್ನು ತಿಳಿಸುತ್ತವೆ. ಎಂಬ (೩-೨-೧೫ರಿಂದ ೨೧ರವರೆಗೆ) ಉತ್ತರವನ್ನು ಹೇಳಿರುತ್ತಾರೆ. ಜ್ಞಾನವು ವಸ್ತುತಂತ್ರವು, ಉಪಾಸನೆಯು ಅಥವಾ ಧ್ಯಾನವು ಪುರುಷತಂತ್ರವಾದ ಮಾನಸಕ್ರಿಯೆಯು-ಎಂಬುದು ಆಚಾರ್ಯರ ಮತವು. ಆದ್ದರಿಂದ ಜ್ಞಾನ

ವನ್ನು ವಿಧಿಸುವದಕ್ಕೆ ಬರುವದಿಲ್ಲ; ಉಪಾಸನೆಯು ವಿಧೇಯವಾಗಿರುವ ಕರ್ಮವಿಶೇಷವಾಗಿರುತ್ತದೆ- ಎಂಬ ಉಪಸಿದ್ಧಾಂತವು ಇದರಿಂದ ಹೊರತು ತ್ತದೆ. (೧-೧-೪) "ಕೇವಲವಸ್ತುವನ್ನು ತಿಳಿಸುವ ಶಾಸ್ತ್ರವೇ ಇಲ್ಲ. ಅಂಥ ವಸ್ತುವಿನ ಜ್ಞಾನದಿಂದ ಪ್ರಯೋಜನವೂ ಇಲ್ಲ"- ಎಂಬ ಆಕ್ಷೇಪಕ್ಕೆ "ಉಪ ನಿಷತ್ತಿನಲ್ಲಿ ಮಾತ್ರವೇ ತಿಳಿಯಬರುವ ಎಲ್ಲರಿಗೂ ಆತ್ಮನಾದ ಸಾಕ್ಷಿಯು ಇಲ್ಲವೆಂದಾಗಲಿ, ಅವನ ಜ್ಞಾನವಾಗುವದಿಲ್ಲವೆಂದಾಗಲಿ, ಆ ಜ್ಞಾನದಿಂದ ಸಂಸಾರಿತ್ವನಿವೃತ್ತಿಯು ಆಗುವದಿಲ್ಲವೆಂದಾಗಲಿ, ಹೇಳುವದು ಯಾರಿಂದಲೂ ಆಗಲಾರದು" (೧-೧-೪) ಎಂಬ ಪರಿಹಾರವನ್ನು ಆಚಾರ್ಯರು ಬರೆದಿರು ತ್ತಾರೆ.

ಬ್ರಹ್ಮಜಿಜ್ಞಾಸೆಯು ಹೀಗೆ ಕರ್ಮದ ಹಂಗೇ ಇಲ್ಲದೆ ಭೂತವಸ್ತುಪರ ವಾಗಿದ್ದರೂ ಈ ಶಾಸ್ತ್ರದಲ್ಲಿ ಪೂರ್ವಮೀಮಾಂಸದ ನ್ಯಾಯಗಳನ್ನು ಉಪ ಯೋಗಿಸುವದು ಯುಕ್ತವಾದೀತೆ? ಎಂಬ ಆಕ್ಷೇಪಕ್ಕೆ ಭಾಷ್ಯಕಾರರ ಮತ ದಂತೆ ಪರಿಹಾರವಿದು: ಬರಿಯ ಜ್ಞಾನವೇ ಅಲ್ಲದೆ ಉಪಾಸನೆಯೆಂಬ ಮಾನಸಕರ್ಮವನ್ನೂ ಇಲ್ಲಿ ವಿಚಾರಮಾಡಿರುವದರಿಂದ ಅದಕ್ಕೆ ಹಿಂದಿನ ಮೀಮಾಂಸೆಯ ನ್ಯಾಯಗಳು ಚೆನ್ನಾಗಿ ಹತ್ತುತ್ತವೆ. ವಸ್ತುಪರವಾದ ವಾಕ್ಯ ಗಳಲ್ಲಿಯೂ ಉಪಕ್ರಮೋಪಸಂಹಾರಾದಿಗಳಿಂದ ವಾಕ್ಯತಾತ್ಪರ್ಯವನ್ನು ನಿರ್ಣಯಿಸುವದಕ್ಕೂ ಶ್ರುತಿಲಿಂಗಪ್ರಕರಣಾದಿಗಳಿಂದ ಬಲಾಬಲಗಳನ್ನು ನಿರ್ಣಯಿಸಿ ವಾಕ್ಯಾರ್ಥವನ್ನು ಗೊತ್ತುಮಾಡುವದಕ್ಕೂ ಅದೇ ನ್ಯಾಯ ಗಳನ್ನು ಉಪಯೋಗಿಸಬಹುದಾಗಿದೆ. ಆದರೆ ಒಂದು ವಿಶೇಷ: ಹಿಂದಿನ ಮೀಮಾಂಸದಲ್ಲಿ ವಿಧಿವಾಕ್ಯಗಳು ಪ್ರಧಾನ, ಅವಕ್ಕೆ ಅನುಗುಣವಾಗಿ ವಸ್ತು ವಾಕ್ಯಗಳನ್ನು ನಯಿಸಬೇಕು; ಇಲ್ಲಿ ವಸ್ತುವಾಕ್ಯವೇ ಪ್ರಧಾನವಾದ್ದರಿಂದ ವಿಧಿವಾಕ್ಯಗಳನ್ನು ಅವಕ್ಕೆ ಅನುಗುಣವಾಗಿ ನಯಿಸಬೇಕು. ಧರ್ಮಜಿಜ್ಞಾಸೆ ಯಲ್ಲಿ ಅನುಭವದ ಅಪೇಕ್ಷೆಯಿಲ್ಲದ್ದರಿಂದ ಬರಿಯ ಶ್ರುತ್ಯಾದಿಗಳೇ ಪ್ರಮಾಣ ವು; ಆದರೆ ಜ್ಞಾನವು ಅನುಭವದಲ್ಲಿ ಕೊನೆಗಾಣತಕ್ಕದ್ದಾಗಿರುವದರಿಂದ ಶ್ರುತ್ಯಾದಿಗಳೂ ಅನುಭವಾದಿಗಳೂ ಯಥಾಸಂಭವವಾಗಿ ಪ್ರಮಾಣವಾಗಿರು ತ್ತವೆ. (೧-೧-೨) ಇಲ್ಲಿ ಯಥಾಸಂಭವವೆಂಬ ಮಾತಿನ ಸ್ವಾರಸ್ಯವೇನೆಂದರೆ: ಉಪಾಸನೆಗಳಲ್ಲಿ ಬರಿಯ ಶ್ರುತ್ಯಾದಿಗಳೇ ಪ್ರಮಾಣವು; ವಸ್ತುಜ್ಞಾನದಲ್ಲಿ ಶ್ರುತ್ಯಾದಿಗಳೂ ಅನುಭವಾದಿಗಳೂ ಪ್ರಮಾಣವು.

## ಉಪಾಸ್ಯಬ್ರಹ್ಮದ ವಿಷಯಕ್ಕೆ ತಪ್ಪುಅಭಿಪ್ರಾಯಗಳು

ಆಚಾರ್ಯರ ಭಾಷ್ಯದಲ್ಲಿ ಹೇಳಿರುವ ಉಪಾಸ್ಯಜ್ಞೇಯವಿಭಾಗವನ್ನು ಚೆನ್ನಾಗಿ ಮನದಟ್ಟುಮಾಡಿಕೊಳ್ಳದೆ ವ್ಯಾಖ್ಯಾನಪ್ರಸ್ಥಾನಕಾರರೂ ಈಗಿನ ವಿಮರ್ಶಕರೂ ಕೆಲವು ತಪ್ಪುಅಭಿಪ್ರಾಯಗಳನ್ನು ಹೊರಕ್ಕೆ ತಂದಿರುತ್ತಾರೆ. ಜಗತ್ಕಾರಣವಾಗಿರುವದು ಮಾಯಾಸಹಿತವಾದ ಈಶ್ವರ ಅಥವಾ ಅಪರಬ್ರಹ್ಮ ಎಂತಲೂ 'ನೇತಿ ನೇತಿ' ಎಂದು ಹೇಳುವದಕ್ಕೆ ಅರ್ಹವಾದ ಶುದ್ಧಬ್ರಹ್ಮವೇ ಪರಬ್ರಹ್ಮವೆಂತಲೂ ಕೆಲವರು ವೇದಾಂತಿಗಳ ಭಾವನೆಯಾಗಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡದ್ದರಿಂದಲೋ ಏನೊ, ಥೀಬೊ ಮಹಾಶಯನು 'ಬ್ರಹ್ಮವೇ ಬೇರೆ, ಈಶ್ವರನೇ ಬೇರೆ ಎಂದು ಸೂತ್ರದಲ್ಲಿ ಹೇಳಿಲ್ಲ, ಪರಾಪರ ಬ್ರಹ್ಮವಿದ್ಯೆಗಳನ್ನೂ ಅಲ್ಲಿ ಹೇಳಿಲ್ಲ' ಎಂದಿರುತ್ತಾನೆ. 'ಉಪನಿಷತ್ತುಗಳಲ್ಲಿ ಯೂ ಪರಾಪರಬ್ರಹ್ಮವಿಭಾಗವಿಲ್ಲ. ಕೆಲವು ಕಡೆಗಳಲ್ಲಿ ಬ್ರಹ್ಮವು ಸಗುಣ ವೆಂದು ಹೇಳಿದೆ, ಕೆಲವುಕಡೆಗಳಲ್ಲಿ ನಿರ್ಗುಣವೆಂದು ಹೇಳಿದೆ ಎಂಬುದು ನಿಜ. ಆದರೆ ಇವೆರಡೂ ಎರಡು ಬೇರೆಬೇರೆಯ ವಿದ್ಯೆಗಳೆಂದೂ ಅವುಗಳಿಗೆ ಬೇರೆ ಬೇರೆಯ ಫಲಗಳೆಂದೂ ಹೇಳಿಲ್ಲ'– ಎಂಬುದು ಆತನ ಮತ. ಆಚಾರ್ಯರು ಬರೆದಿರುವ ಭಾಷ್ಯದಲ್ಲಿ ಹೀಗಿದೆ : 'ಸತ್ಯಕಾಮನೆ, ಈ ಓಂಕಾರವಿದೆಯಲ್ಲ, ಇದೇ ಪರ(ಬ್ರಹ್ಮವೂ), ಅಪರಬ್ರಹ್ಮವೂ (ಆಗಿದೆ)' (ಪ್ರ. ೫–೨) ಎಂಬುದೇ ಮುಂತಾದ ಶ್ರುತಿಯಿಂದ (ಬ್ರಹ್ಮವು ಎರಡು ಬಗೆ ಎಂದು ಸಿದ್ಧವಾಗುತ್ತದೆ). ಹಾಗಾದರೆ ಪರಬ್ರಹ್ಮವು ಯಾವದು, ಅಪರಬ್ರಹ್ಮವು ಯಾವದು ? ಎಂದರೆ ಹೇಳುತ್ತೇವೆ : ಎಲ್ಲಿ ಅವಿದ್ಯಾಕೃತವಾದ ನಾಮರೂಪಗಳೇ ಮುಂತಾದ ವಿಷಯಗಳನ್ನು ಅಲ್ಲಗಳೆದು ಅಸ್ಥೂಲವೇ ಮುಂತಾದ ಶಬ್ದಗಳಿಂದ ಬ್ರಹ್ಮ ವನ್ನು ಉಪದೇಶಿಸಿರುತ್ತದೆಯೋ ಅದು ಪರ(ಬ್ರಹ್ಮವು) ; ಅದೇ (ಬ್ರಹ್ಮ ವನ್ನು) ಎಲ್ಲಿ ನಾಮರೂಪಾದಿಯಾದ ಯಾವದೋ ಒಂದು ವಿಶೇಷದಿಂದ ವಿಶಿಷ್ಟವಾಗಿ ಉಪಾಸನೆಗೆಂದು 'ಮನೋಮಯನು,' ಪ್ರಾಣಶರೀರನು, ಭಾರೂಪನು' (ಛಾಂ. ೩–೧೪–೨) ಮುಂತಾದ ಶಬ್ದಗಳಿಂದ ಉಪದೇಶಿಸಿರು ತ್ತದೆಯೋ ಅದು ಅಪರ(ಬ್ರಹ್ಮವು)' (೪–೩–೧೪). ಉಪನಿಷತ್ತಿನಲ್ಲಿ ಮನೋ ಮಯತ್ವಾದಿಗಳನ್ನು ಉಪದೇಶಿಸುವಾಗ ಅದು ಅಪರಬ್ರಹ್ಮವೆಂದು ಹೇಳಿಲ್ಲ ವಲ್ಲ !– ಎಂದು ಶಂಕಿಸುವದು ಸರಿಯಲ್ಲ ; ಏಕೆಂದರೆ ಅಲ್ಲಿಯೂ ಪರಬ್ರಹ್ಮ

ವನ್ನೇ ಉಪಾಸನೆಗಾಗಿ ಹೇಳಿದೆ. ಇದನ್ನು ತಿಳಿಸುವದಕ್ಕೇ ಪ್ರಶ್ನ (೫-೨) ಕಠ (೧-೨-೧೭) ಮುಂತಾದ ಕಡೆಗಳಲ್ಲಿ ಪರಾಪರಶಬ್ದಗಳನ್ನು ಪ್ರಯೋಗಿಸಿರುತ್ತದೆ. ಅಪರಬ್ರಹ್ಮವು ಈಶ್ವರನು, ಅದೇ ಜಗತ್ಕಾರಣವು- ಎಂಬುದು ವ್ಯಾಖ್ಯಾನಕಾರರ ಕಲ್ಪನಾಮಾತ್ರವಾಗಿರುತ್ತದೆ; ಭಾಷ್ಯಕಾರರಿಗೆ ಅದು ಸಮ್ಮತವಲ್ಲ; ಏಕೆಂದರೆ ಮೊದಲನೆಯದಾಗಿ ಕಾರಣಬ್ರಹ್ಮವೇ ಪರಬ್ರಹ್ಮವು, ಕಾರ್ಯಬ್ರಹ್ಮವು ಅಪರವು- ಎಂದೇ ಆಚಾರ್ಯರು ಕಂಠೋಕ್ತವಾಗಿ ವಿಭಾಗವನ್ನು ಮಾಡಿಕೊಂಡಿರುತ್ತಾರೆ. ಸೂತ್ರಗಳಲ್ಲಿ ಪರಾಪರಬ್ರಹ್ಮವಿಭಾಗವಿಲ್ಲವೆನ್ನುವವರು 'ಕಾರ್ಯಂ ಬಾದರಿರಸ್ಯ ಗತ್ಯುಪಪತ್ತೇಃ' (೪-೩-೭), 'ಪರಂ ಜೈಮಿನಿರ್ಮುಖ್ಯತ್ವಾತ್' (೪-೩-೧೨) ಎಂಬೀ ಎರಡು ಸೂತ್ರಗಳನ್ನು ಮನಮುಟ್ಟಿ ನೋಡಬೇಕು. ಅಪರಬ್ರಹ್ಮವನ್ನೇ ಅಲ್ಲದೆ ಜಗತ್ಕಾರಣವಾದ **ಪರಬ್ರಹ್ಮವನ್ನೂ** 'ಈಶ್ವರ'ನೆಂದು ಭಾಷ್ಯಕಾರರು ಹಲವುಕಡೆಗಳಲ್ಲಿ ಕರೆದಿರುತ್ತಾರೆಂಬುದು ಸೂರ್ಯಪ್ರಕಾಶದಷ್ಟು ಸ್ಫುಟವಾಗಿರುತ್ತದೆ (೧-೧-೨, ೧-೧-೫, ೧-೨-೨೧. ೩-೪-೮, ೪-೧-೩) ಹೀಗಿದ್ದರೂ ಈಶ್ವರನೆಂದರೆ ಅಪರಬ್ರಹ್ಮವೇ ಎಂದು ಕಲ್ಪಿಸುವವರು ಭಾಷ್ಯವನ್ನು ಕಡೆಗಣಿಸಿರುತ್ತಾರೆಂಬುದಕ್ಕೆ ಅಡ್ಡಿಯೇನು? ಬ್ರಹ್ಮದಲ್ಲಿ ಪರಾಪರವಿಭಾಗವನ್ನು ಮಾಡಿರುವದು ಜ್ಞಾನ, ಉ ಪಾ ಸ ನೆ- ಎಂಬ ಸಾಧನವಿಭಾಗದಿಂದಲೇ ಹೊರತು ಬ್ರಹ್ಮದ ಸ್ವರೂಪದಲ್ಲಿರುವ ವಿಭಾಗದಿಂದಲ್ಲ. ಆದ್ದರಿಂದಲೇ ಆಚಾರ್ಯರು ಅಪರಬ್ರಹ್ಮವನ್ನು ಬ್ರಹ್ಮವಲ್ಲದ ಮತ್ತೊಂದಕ್ಕೆ ಹೋಲಿಸಿದಾಗ ಪರಬ್ರಹ್ಮವೆಂದೇ ಕರೆಯುತ್ತಾರೆ; ಉದಾಹರಣೆಗೆ ೧-೧-೨೨, ೧-೧-೨೮, ೧-೨-೨) ಇವನ್ನು ನೋಡಿರಿ. ಇಲ್ಲಿ ಪರಬ್ರಹ್ಮವೇ ಉಪಾಸ್ಯವಾಗಿ ಉಪದಿಷ್ಟವಾಗಿದೆ ಎಂಬ ಕಾರಣದಿಂದಲೇ ಬ್ರಹ್ಮಕ್ಕೆ ರೂಪಾಕಾರಗಳನ್ನು ಹೇಳುವದು ಹೇಗೆ? (೧-೧-೨೦), ಪ್ರದೇಶವನ್ನೂ (೧-೧-೧೪), ಜೀವಧರ್ಮಗಳನ್ನೂ (೧-೧-೨), ಸ್ಥಾನಾದಿಗಳನ್ನೂ (೧-೨-೧೪) ಹೇಳಿರುವದು ಹೇಗೆ?- ಎಂದು ಮುಂತಾಗಿ ಶಂಕಿಸಿ ಉಪಾಸನೆಗಾಗಿ ಅವನ್ನು ಹೇಳಿದೆ ಎಂಬ ಸಮಾಧಾನವನ್ನು ಕೊಟ್ಟಿದೆ. ಈ ಗುಟ್ಟನ್ನು ಅರಿಯದೆ **ಕರ್ನಲ್ ಜೇಕಬ್** ಎಂಬ ಪಾಶ್ಚಾತ್ತ್ಯವಿದ್ವಾಂಸನು ಶಂಕರಾಚಾರ್ಯರು ತಾವೇ ಮಾಡಿಕೊಂಡ ಪರಾಪರವಿಭಾಗವನ್ನು ಮರೆತು ಅಪರಬ್ರಹ್ಮವನ್ನು ಪರಬ್ರಹ್ಮವೆಂದು ಕರೆದಿರುತ್ತಾರೆಂದೂ ತಮ್ಮ ಕಾಲಕ್ಕೆ ಪ್ರಚಾರದಲ್ಲಿದ್ದ ಯಾವದೋ ಒಂದು ಸಿದ್ಧಾಂತ

ವನ್ನು ಕೈಬಿಟ್ಟು ತಮ್ಮದೇ ಆದ ಹೊಸದೊಂದು ಸಿದ್ಧಾಂತವನ್ನು ಅವರು ತೆಗೆದಿರಬೇಕೆಂಬುದಕ್ಕೆ ಇದೊಂದು ಗಮಕವೆಂದೂ ಕಲ್ಪಿಸಿ ತನ್ನ 'ವೇದಾಂತ ಸಾರ'ದ ಪೀಠಿಕೆಯಲ್ಲಿ ಬರೆದಿರುತ್ತಾನೆ. ಆಚಾರ್ಯರ ಹಿಂದಕ್ಕೆ ಅನೇಕ ವೇದಾಂತಸಂಪ್ರದಾಯಗಳಿದ್ದವೆಂಬುದು ನಿಜವಾದರೂ ಅವರಿಗೆ ಸಮ್ಮತ ವಾಗಿದ್ದ ಸಂಪ್ರದಾಯವೂ ಮೊದಲಿನಿಂದಲೂ ಇದ್ದೇ ಇತ್ತೆಂಬುದಕ್ಕೆ ನಾವು ಆಗಲೆ ಆಧಾರವನ್ನು ಕೊಟ್ಟಿರುತ್ತೇವೆ. ಆಚಾರ್ಯರು ಉಪಾಸ್ಯಬ್ರಹ್ಮ ವನ್ನು ಪರವೆಂದೇ ಕರೆದಿರುತ್ತಾರಾದರೂ ಜ್ಞೇಯಬ್ರಹ್ಮಕ್ಕೆ ಹೋಲಿಸಿದಾಗ ಅದನ್ನು ಅಪರವೆಂದೇ ಸ್ಪಷ್ಟವಾಗಿ ಬರೆದಿರುತ್ತಾರಾದ್ದರಿಂದ (೧-೩-೧೩) ಅವರು ತಾವು ಒಪ್ಪಿರುವ ಪರಾಪರವಿಭಾಗವನ್ನು ಬಹಳ ಎಚ್ಚರಿಕೆಯಿಂದ ಕಾಪಾಡಿಕೊಂಡಿರುತ್ತಾರೆಂದು ಎಲ್ಲರೂ ಒಪ್ಪಬೇಕಾಗಿದೆ. ಕಾರ್ಯಬ್ರಹ್ಮಕ್ಕೆ ಮಾತ್ರ ಗತಿಯನ್ನು ಹೇಳಿದೆ ; ಪರಬ್ರಹ್ಮವಿದ್ಯೆಗೆ ಸದ್ಯೋಮುಕ್ತಿಯನ್ನು ಫಲವಾಗಿ ಹೇಳಿದೆ ಎಂದು ಆಚಾರ್ಯರು ತೋರಿಸಿಕೊಟ್ಟಿರುವದರಿಂದ ಉಪ ನಿಷತ್ತುಗಳಲ್ಲಿ ಪರಾಪರವಿದ್ಯೆಗಳಿಗೆ ಫಲಭೇದವನ್ನು ಹೇಳಿಲ್ಲವೆಂಬ ಥೀಬೋ ಮಹಾಶಯನ ಆಕ್ಷೇಪವೂ ನಿರಾಧಾರವೆಂಬುದು ಸ್ಪಷ್ಟವಾಗಿರುತ್ತದೆ.

ಈ ವ್ಯಾಖ್ಯಾನಪ್ರಸ್ಥಾನವನ್ನವಲಂಬಿಸಿರುವವರು ಕೆಲವರು ಪರಬ್ರಹ್ಮ, ಈಶ್ವರ-ಎಂಬ ವಿಭಾಗವನ್ನು ನಿರಾಧಾರವಾಗಿ ಮಾಡಿಕೊಂಡಿರುತ್ತಾರೆಂದು ತಿಳಿಸಿದ್ದಾಯಿತಷ್ಟೆ. ಇದೇ ಸಂದರ್ಭದಲ್ಲಿ ವ್ಯಾಖ್ಯಾನಕಾರರು ಪ್ರಚಾರಕ್ಕೆ ತಂದಿರುವ ಮತ್ತೊಂದು ತಪ್ಪುಪರಿಭಾಷೆಯನ್ನು ಇಲ್ಲಿ ಹೊರಗೆಡಹುವದು ಅವಶ್ಯವಾಗಿರುತ್ತದೆ ; ವೇದಾಂತವಾಕ್ಯಗಳು ಬ್ರಹ್ಮದಲ್ಲಿಯೇ ಸಮನ್ವಯ ವಾಗುವವೆಂದು (೧-೧-೪) ಭಾಷ್ಯಕಾರರು ಹೇಳಿರುವದನ್ನೂ ಬ್ರಹ್ಮಸೂತ್ರ ಗಳ ಮೊದಲನೆಯ ಅಧ್ಯಾಯಕ್ಕೆ ಸಮನ್ವಯಾಧ್ಯಾಯವೆಂಬ ಹೆಸರು ರೂಢಿಗೆ ಬಂದಿರುವದನ್ನೂ ಕಂಡು ಈ ವ್ಯಾಖ್ಯಾನಕಾರರು 'ತಸ್ಮಾದುಪಾಸ್ಯೇ ಬ್ರಹ್ಮಣಿ ವಾಕ್ಯಂ ಸಮನ್ವಿತಮ್' 'ಧ್ಯೇಯೇ ಸಮನ್ವಯೋಕ್ತೇಃ ಸಂಗತಯಃ' ಎಂದು ಮುಂತಾಗಿ ಬರೆದಿರುತ್ತಾರೆ. ಇದು ಭಾಷ್ಯಕಾರರು ಮಾಡಿಕೊಂಡಿರುವ ವಿಭಾಗಕ್ಕೆ ವಿರುದ್ಧವೆಂದು ನಮ್ಮ ಅಭಿಪ್ರಾಯ. ಏಕೆಂದರೆ ಉಪಾಸನಾ ವಾಕ್ಯಗಳು ವಿಧಿಪ್ರಧಾನವಾಗಿರುವದರಿಂದ ಅವನ್ನು ಬ್ರಹ್ಮದಲ್ಲಿ ಸಮನ್ವಿತ ವೆನ್ನುವದಕ್ಕಿಲ್ಲವಾಗಿದೆ. ಆಚಾರ್ಯರು ಸಮನ್ವಯಸೂತ್ರಭಾಷ್ಯದಲ್ಲಿ ಯಾವ

ಉಪಾಸನಾವಾಕ್ಯಗಳನ್ನೂ ಉದಾಹರಿಸಿಲ್ಲ; ಅಸ್ಥೂಲಾದಿವಾಕ್ಯಗಳು ನಿಷ್ಪ್ರಪಂಚಬ್ರಹ್ಮತತ್ತ್ವವನ್ನೇ ತಾತ್ಪರ್ಯದಿಂದ ಹೇಳುತ್ತವೆ ಎಂಬುದನ್ನು ಸಮನ್ವಯಸೂತ್ರದಲ್ಲಿ ಸ್ಥಾಪಿಸಲಾಗಿದೆ ಎಂದು ಮುಂದೆಯೂ (೩-೨-೧೪) ಹೇಳಿರುತ್ತಾರೆ. ಆದ್ದರಿಂದ ಉಪಾಸನಾವಾಕ್ಯಗಳು ಬ್ರಹ್ಮದಲ್ಲಿ ಸಮನ್ವಿತವಾಗದಿದ್ದರೂ ಅಲ್ಲಿ ಹೇಳಿರುವ ಉಪಾಸ್ಯವು ಬ್ರಹ್ಮವೇ ಎಂಬ ಗತಿಸಾಮಾನ್ಯವನ್ನು ತಿಳಿಸುವದಕ್ಕೆ ಮಾತ್ರವೇ ಈ ವಾಕ್ಯಗಳನ್ನು ಸಮನ್ವಯಾಧ್ಯಾಯದಲ್ಲಿ ಚರ್ಚಿಸಿದೆ ಎಂದು ನಿಶ್ಚಯಿಸಬೇಕು (೧-೧-೧೨, ೧-೨-೨).

## ಭಾಷ್ಯದಲ್ಲಿ ಖಂಡಿಸಿರುವ ಮತಾಂತರಗಳು

ಭಾಷ್ಯದಲ್ಲಿ ತಿರಸ್ಕರಿಸಿರುವ ಮತಗಳಲ್ಲಿ ವೈದಿಕವಾದ ಮೀಮಾಂಸ, ಅವೈದಿಕವಾದ ಸಾಂಖ್ಯಾದಿಗಳು- ಎಂದು ಎರಡು ಪಂಗಡವನ್ನು ಮಾಡಬಹುದು. ಪೂರ್ವಮೀಮಾಂಸಕರೂ ವೇದಾಂತಿಗಳಂತೆ ವೇದವಾಕ್ಯವನ್ನೇ ತಮ್ಮ ಪ್ರತಿಪಾದ್ಯವಿಷಯಕ್ಕೆ ಪ್ರಮಾಣವಾಗಿಟ್ಟುಕೊಂಡಿರುತ್ತಾರಾದರೂ ವೇದಾಂತಗಳು ಕರ್ಮಾಂಗವಾದ ಕರ್ತೃದೇವತಾದಿಗಳನ್ನು ಹೇಳುವದರಿಂದಲೋ ಉಪಾಸನಾದಿಕರ್ಮವನ್ನು ವಿಧಿಸುವದರಿಂದಲೋ ಪ್ರಮಾಣವಾಗಬೇಕು- ಎಂಬ ಅವರ ಪಕ್ಷವನ್ನು ಸಮನ್ವಯಸೂತ್ರಭಾಷ್ಯದ ಒಂದನೆಯ ವರ್ಣಕದಲ್ಲಿ ತಳ್ಳಿಹಾಕಿ ಕರ್ಮದಂತೆ ಬ್ರಹ್ಮವಸ್ತುವನ್ನೂ ವೇದವು ಹೇಳುತ್ತದೆ ಎಂಬುದನ್ನು (೧-೧-೪) ಸ್ಥಾಪಿಸಬೇಕಾಯಿತು. ಕಾಮ್ಯನಿಷಿದ್ಧಗಳನ್ನು ಬಿಟ್ಟು ನಿತ್ಯನೈಮಿತ್ತಿಕಕರ್ಮಗಳನ್ನು ಮಾತ್ರ ಮಾಡುತ್ತಿದ್ದರೆ ಅಷ್ಟುಮಾತ್ರದಿಂದಲೇ ಆತ್ಮಜ್ಞಾನದ ಹಂಗಿಲ್ಲದೆಯೇ ಮುಕ್ತಿಯಾಗುವದು ಎಂಬ ಮೀಮಾಂಸಕರ ಮತವಂತೂ ಅಶಾಸ್ತ್ರೀಯವೆಂದೂ ತರ್ಕವಿರುದ್ಧವೆಂದೂ (೪-೩-೧೪) ತಳ್ಳಿಹಾಕಬೇಕಾಯಿತು ಈ ಎರಡು ವಾದಗಳ ಖಂಡನೆಯಲ್ಲಿ ಶ್ರುತಿಸ್ಮೃತಿಪ್ರಮಾಣಗಳನ್ನೂ ಅದಕ್ಕನುಗುಣವಾದ ತರ್ಕವನ್ನೂ ಉಪಯೋಗಿಸಿದೆ ಎಂಬುದನ್ನು ವಾಚಕರು ಲಕ್ಷಿಸಬೇಕು.

ಆದರೆ ಸಾಂಖ್ಯ, ಯೋಗ, ವೈಶೇಷಿಕ, ಮಾಹೇಶ್ವರ, ಭಾಗವತ- ಈ ಮತಗಳನ್ನು ಬೌದ್ಧಜೈನಮತಗಳಂತೆ ತಾರ್ಕಿಕರ ಮತಗಳೆಂದೇ ಆಚಾರ್ಯರು ಎಣಿಸಿರುತ್ತಾರೆ. ಈ ವಾದಿಗಳಲ್ಲಿ ಕೆಲವರು ವೇದವನ್ನು ಪ್ರಮಾಣ

ವಾಗಿ ಒಪ್ಪಿರುತ್ತಾರೆ ; ಮತ್ತೆ ಕೆಲವರು ತಮ್ಮತಮ್ಮ ಸಂಪ್ರದಾಯದ ಆಗಮ
ಗಳನ್ನು ಒಪ್ಪಿರುತ್ತಾರೆ. ವೇದವನ್ನು ಒಪ್ಪಿರುವವರು ಅದನ್ನು ಆಪ್ತವಾಕ್ಯದ
ಸ್ಥಾನಕ್ಕೆ ಇಳಿಸಿ ತರ್ಕಕ್ಕೆ ಎರಡನೆಯದಾಗಿ ಮಾಡಿಕೊಂಡಿರುತ್ತಾರೆ ; ಅದನ್ನು
ಒಪ್ಪದವರಂತೂ ಸರ್ವಜ್ಞಪ್ರಣೀತವಾದ ಬೇರೊಂದು ಆಗಮವನ್ನೇ ಒಪ್ಪಿರು
ತ್ತಾರಾದ್ದರಿಂದ ಆಗಮಪ್ರಾಮಾಣ್ಯಸಿದ್ಧಿ, ಸರ್ವಜ್ಞತ್ವಸಿದ್ಧಿ– ಇವುಗಳು
ಒಂದನ್ನೊಂದು ಆಶ್ರಯಿಸಿರುವವೆಂಬ ದೋಷವು ಅವರ ಮತಕ್ಕೆ ಗಂಟು
ಬಿದ್ದಿರುತ್ತದೆ (೨–೨–೩೮) ಎಂದು ಆಚಾರ್ಯರ ಅಭಿಪ್ರಾಯ. ಸರ್ವಜ್ಞ
ರಾದ ತಮ್ಮತಮ್ಮ ಮತಸ್ಥಾಪಕರು ಸಿದ್ಧಪುರುಷರು ಎಂದು ಪ್ರತಿಯೊಂದು
ಮತದವನೂ ಹೇಳುವದರಿಂದ ಆ ಸರ್ವಜ್ಞರಿಗೆಲ್ಲ ಮತಭೇದವಿರುವ ಕಡೆಯಲ್ಲಿ
ಅಪೌರುಷೇಯವಾದ ವೇದದ ಪ್ರಾಮಾಣ್ಯವನ್ನು ಒಪ್ಪದವರಿಗೆ ವ್ಯವಸ್ಥೆಗೆ
ಕಾರಣವೇ ಇಲ್ಲವಾಗುವದು (೨–೧–೧) ಎಂದು ಅವರು ಹೇಳಿರುತ್ತಾರೆ.

ಉಪನಿಷತ್ತುಗಳು ಭೂತವಸ್ತುವಾದ ಬ್ರಹ್ಮವನ್ನು ತಿಳಿಸುವ ಪ್ರಮಾಣ
ವೆಂದು ಆಚಾರ್ಯರು ಒಪ್ಪಿದ್ದರಿಂದ ಮೀಮಾಂಸಕರೂ ಸಾಂಖ್ಯಾದಿಗಳೂ
ಭೂತವಸ್ತುವು ಪ್ರತ್ಯಕ್ಷಾದಿಗಳಿಗೂ ವಿಷಯವಾಗಿರಬೇಕೆಂದು ವಾದಿಸ
ಹತ್ತಿದರು. ಆದರೆ ಭಾಷ್ಯಕಾರರು 'ತತ್ತ್ವಮಸಿ' ಮುಂತಾದ ವೇದಾಂತ
ವಾಕ್ಯಗಳಿಂದಾಗುವ ಬ್ರಹ್ಮಾತ್ಮೈಕ್ಯವನ್ನು ಶಾಸ್ತ್ರವಲ್ಲದೆ ಮತ್ತೆ ಯಾವ
ಪ್ರಮಾಣದಿಂದಲೂ ತಿಳಿಯುವದಕ್ಕಾಗುವದಿಲ್ಲ(೧-೧-೪) ಎಂದು ಮೀಮಾಂಸ
ಕರಿಗೆ ಉತ್ತರವನ್ನು ಹೇಳಿರುತ್ತಾರೆ. ತರ್ಕವು ದೃಷ್ಟಾನುಸಾರವಾಗಿರ
ಬೇಕಾದ್ದರಿಂದ ಅನುಭವಕ್ಕೆ ಹತ್ತಿರವಾಗಿದೆ, ಆದರೆ ಶಾಸ್ತ್ರವು ಐತಿಹ್ಯಮಾತ್ರ
ದಿಂದ ಹೇಳುವದರಿಂದ ಅನುಭವಕ್ಕೆ ದೂರವಾಗಿದೆ ; ಆದ್ದರಿಂದ ಭೂತ
ವಸ್ತುವಿನ ವಿಷಯಕ್ಕೆ ಆತ್ಮಾನುಭವವಾದಿಗಳಾದ ವೇದಾಂತಿಗಳು ಅನುಮಾನ
ಪ್ರಮಾಣವನ್ನೂ ಒಪ್ಪಬೇಕು– ಎಂದು ಸಂಖ್ಯಾದಿಗಳು ವಾದಿಸುತ್ತಿದ್ದರು
(೨–೧–೪). ಆದರೆ ಬ್ರಹ್ಮಕ್ಕೆ ರೂಪಾದಿಗಳಾಗಲಿ ಲಿಂಗಾದಿಗಳಾಗಲಿ ಇಲ್ಲದ್ದ
ರಿಂದ ಅದು ಪ್ರತ್ಯಕ್ಷಾದಿಪ್ರಮಾಣಕ್ಕೆ ಗೋಚರವಲ್ಲವೇ ಅಲ್ಲ (೨-೧-೩, ೨-
೧-೧೧) ಎಂದು ಆಚಾರ್ಯರು ತಿಳಿಯಹೇಳಿದ್ದಲ್ಲದೆ ಬರಿಯ ತರ್ಕಕ್ಕೆ ನಿಲು
ಗಡೆಯೇ ಇಲ್ಲವಾದ್ದರಿಂದ ತರ್ಕಮಾತ್ರದಿಂದ ಸಮ್ಯಗ್ಜ್ಞಾನವಾಗಲಾರದು,
ನಿತ್ಯವಾಗಿದ್ದು ಅನುಭವವನ್ನುಂಟುಮಾಡುವ ವೇದವೇ ಸಮ್ಯಗ್ದರ್ಶನಕ್ಕೆ

ಕಾರಣವಾಗಿರುತ್ತದೆ (೨-೧-೧೧, ೨-೧-೧೧) ಎಂಬುದನ್ನು ತೋರಿಸಿಕೊಟ್ಟಿರುತ್ತಾರೆ. ವೇದದಲ್ಲಿಯೂ ಕಾನನರೂಪವಾದ ತರ್ಕವನ್ನೊಪ್ಪಿದೆಯಲ್ಲ!-ಎಂಬ ಆಕ್ಷೇಪಕ್ಕೆ ಆಚಾರ್ಯರು ಕೊಟ್ಟಿರುವ ಸಮಾಧಾನವನ್ನು ಮುಂದೆ ಜ್ಞಾನಸಾಧನವಿಚಾರದಲ್ಲಿ ತಿಳಿಯಿಸುವೆವು. 'ಬ್ರಹ್ಮವಾದಿಯು ಆಗಮಬಲದಿಂದ! ಕಾರಣಾದಿಗಳ ಸ್ವರೂಪವನ್ನು ನಿರೂಪಣಮಾಡುವದರಿಂದ ಅವನು ಯಥಾದೃಷ್ಟವಾಗಿಯೇ ಎಲ್ಲವನ್ನೂ ನಂಬಬೇಕೆಂಬ ನಿಯಮವೇನೂ ಇಲ್ಲ; ಅಪರೆ ದೃಷ್ಟಾಂತಬಲದಿಂದಲೇ ಕಾರಣಾದಿಸ್ವರೂಪದನ್ನು ನಿರ್ಣಯಿಸುವ ತಾರ್ಕಿಕನು ಮಾತ್ರ ದೃಷ್ಟವಾಗಿರುವದಕ್ಕೆ ಅನುಗುಣವಾಗಿಯೇ ಎಲ್ಲವನ್ನೂ ಒಪ್ಪಬೇಕು'. ಹೀಗೆ ವೇದಾಂತಕ್ಕೂ ತಾರ್ಕಿಕರ ಸಿದ್ಧಾಂತಗಳಿಗೂ ಇರುವ ತಾರತಮ್ಯವನ್ನು ಸದ್ಯಕ್ಕೆ ನಾವು ನೆನಪಿಡಬೇಕು. ಏಕೆಂದರೆ 'ಲೋಕದಲ್ಲಿ ಹೀಗೆ ಕಂಡಿದೆ' ಎಂಬ ಹೇತುವನ್ನು ಮತ್ತೆಮತ್ತೆ ಈ ಖಂಡನಭಾಗದಲ್ಲಿ ಮುಂದೊಡ್ಡಿರುವದಕ್ಕೆ ಇದೇ ಕಾರಣವೆಂಬುದು ಇದರಿಂದ ಸ್ಫುಟವಾಗುತ್ತದೆ.

## ಸಾಂಖ್ಯವೈಶೇಷಿಕರ ಜಗತ್ಕಾರಣವಾದ

ಸಾಂಖ್ಯರು ತಾರ್ಕಿಕರಲ್ಲೆಲ್ಲ ಹೆಚ್ಚಿನ ಸ್ಥಾನವನ್ನು ಪಡೆದವರೆಂದು ಭಾಷ್ಯದಲ್ಲಿ ಖಂಡಿಸಿದೆ; ಅವರನ್ನು ಪ್ರಧಾನಮಲ್ಲರೆಂದು ಸಂಭಾವಿಸಿರುತ್ತದೆ (೧-೪-೨೮). ವೈಶೇಷಿಕವನ್ನು ಶಿಷ್ಟರು ಒಂದಿಷ್ಟೂ ಪರಿಗ್ರಹಿಸದ ಮತ, ಅಸಾರತರತರ್ಕದಿಂದ ಕೂಡಿದ ಮತ-ಎಂದು ಅನಾದರದಿಂದ ತಿರಸ್ಕರಿಸಿದೆ (೨-೧-೧೨, ೨-೨-೧೭). ಕೆಲಕೆಲವು ಅಂಶಗಳಲ್ಲಿ ಸಾಂಖ್ಯರ ದರ್ಶನವು ವೇದಾಂತವಾಕ್ಯಕ್ಕೆ ಹತ್ತಿರವಿದೆ ಎಂದು ಹೇಳಿ ( ೧-೪-೨೨ ) ವೈಶೇಷಿಕವು ಅರ್ಧವೈನಾಶಿಕವೆಂದು ಜರಿದಿದೆ. ಆಚಾರ್ಯರ ಕಾಲಕ್ಕೆ ವೈಶೇಷಿಕಮತವು ಅಷ್ಟಾಗಿ ಪ್ರಸಿದ್ಧವಾಗಿರಲಿಲ್ಲವೆಂದೂ ಅಷ್ಟುಹೊತ್ತಿಗೆ ಆಗಲೆ ವೈಶೇಷಿಕರ ಪ್ರಕ್ರಿಯೆಗಳು ಬಗೆಬಗೆಯಾಗಿ ಪ್ರಚಾರದಲ್ಲಿದ್ದವೆಂದೂ ಇಲ್ಲಿ ಊಹಿಸುವದಕ್ಕೆ ಅವಕಾಶವಿದೆ.

ಇದು ಹೇಗಾದರೂ ಇರಲಿ. ಸಾಂಖ್ಯವೈಶೇಷಿಕಮತಗಳನ್ನು ಮುಖ್ಯವಾಗಿ ಆ ದರ್ಶನಗಳ ಕಾರ್ಯಕಾರಣಭಾವವಿಚಾರದ ಖಂಡನೆಗೆಂದೇ ಭಾಷ್ಯ

ಕಾರರು ಪರಾಮರ್ಶಿಸಿರುತ್ತಾರೆಂಬುದು ಖಂಡಿತ. ಸಾಂಖ್ಯರು ಪರಿಣಾಮವಾದಿಗಳು, ಕಾರಣವೇ ಕಾರ್ಯರೂಪದಿಂದ ಪರಿಣಮಿಸುವದೆಂದು ಹೇಳುವವರು ; ವೈಶೇಷಿಕರು ಆರಂಭವಾದಿಗಳು, ಪರಮಾಣುಗಳು ದ್ವ್ಯಣುಕವೇ ಮುಂತಾದ ಕ್ರಮದಿಂದ ಕೂಡಿಕೊಂಡು ಕಾರ್ಯವನ್ನುಂಟುಮಾಡುತ್ತವೆ ಎನ್ನುವವರು. ಇಬ್ಬರಿಗೂ ಕಾರ್ಯಕಾರಣಭಾವವು ಪರಮಾರ್ಥವಾಗಿದೆ. ಪ್ರಧಾನವು ಜಗತ್ತಾಗಿ ಪರಿಣಮಿಸಿದೆ ಎನ್ನುವದಕ್ಕೆ ತರ್ಕವಲ್ಲದೆ ಶ್ರುತಿಯನ್ನೂ ಸಾಂಖ್ಯರು ಮುಂದೊಡ್ಡಿರುತ್ತಾರೆ ; ಪರಮಾಣುಗಳು ಜಗದ್ರೂಪವಾಗಿರುವವೆನ್ನುವದಕ್ಕೆ ವೈಶೇಷಿಕರು ತರ್ಕವನ್ನೇ ಮುಖ್ಯವಾಗಿ ಮುಂದೊಡ್ಡಿರುತ್ತಾರೆ. ಸಾಂಖ್ಯರು ನಿರೀಶ್ವರವಾದಿಗಳೆಂಬುದು ಪ್ರಸಿದ್ಧವಾಗಿದೆ ; ವೈಶೇಷಿಕರು ಪರಮಾಣುಗಳಿಂದ ಜಗತ್ತುಂಟಾಗುವದಕ್ಕೆ ಈಶ್ವರನೂ ನಿಮಿತ್ತಕಾರಣನೆಂದು ಹೇಳಿದಂತೆ ಭಾಷ್ಯದಲ್ಲಿ ಆದೇಕೋ, ಬರೆದಿಲ್ಲ. ಹೇಗೇ ಆಗಲಿ ಚೇತನವಾದ ಬ್ರಹ್ಮವೇ ಜಗತ್ಕಾರಣವೆಂಬ ವೇದಾಂತವಾದಕ್ಕೆ ಈ ಎರಡೂ ಅತ್ಯಂತವಿರುದ್ಧವಾಗಿರುತ್ತವೆ ಎಂಬುದರಲ್ಲಿ ಸಂಶಯವಿಲ್ಲ. ಆಚಾರ್ಯರು ಕಾರ್ಯವೆಂಬುದು ಕಾರಣಕ್ಕಿಂತ ಬೇರೆಯಲ್ಲ, ಕಾರಣವನ್ನು ಬಿಟ್ಟು ಅದು ಮೂರು ಕಾಲದಲ್ಲಿಯೂ ಇಲ್ಲವೇ ಇಲ್ಲ (೨-೧-೭), ನಾಮರೂಪಾತ್ಮಕವಾದ ಜಗತ್ತು ಅವಿದ್ಯಾಕಲ್ಪಿತಮಾಯಾಕಾರ್ಯವಾಗಿರುತ್ತದೆ ( ೨-೧-೧೪ ), ವ್ಯಾಕೃತಾವ್ಯಾಕೃತರೂಪವಾದ ನಾಮರೂಪಗಳು ಅವಿದ್ಯಾಕಲ್ಪಿತವಾಗಿಯೇ ಇರುತ್ತವೆ (೨-೧-೨೭), ಈ ಅವಿದ್ಯಾಕಲ್ಪಿತರೂಪಭೇದದಿಂದ ಬ್ರಹ್ಮವು ಪರಿಣಾಮಿಯೆನಿಸುತ್ತದೆಯಾದರೂ ಪರಮಾರ್ಥವಾಗಿ ಕೂಟಸ್ಥವಾಗಿಯೇ ಇರುತ್ತದೆ (೨-೧-೧೪, ೨-೧-೨೭) ಎಂದು ಹೇಳುವ ಬ್ರಹ್ಮಕಾರಣವಾದಕ್ಕೆ ಈ ಎರಡು ಮತಗಳೂ ತೀರ ವಿರುದ್ಧವಾಗಿರುತ್ತವೆ. 'ಜನ್ಮಾದ್ಯಸ್ಯ ಯತಃ' ಎಂಬ ಸೂತ್ರದಲ್ಲಿ ಭಾಷ್ಯಕಾರರ ಪ್ರಕಾರ ಅಪರಮಾರ್ಥವಾದ ಕಾರ್ಯಕಾರಣಭಾವವನ್ನೇ ತಿಳಿಸಿದೆ ಎಂಬುದರ ಅರಿವಿಲ್ಲದೆಯೇ ಕೆಲವರು ವ್ಯಾಖ್ಯಾನಕಾರರು ಕಾರಣಬ್ರಹ್ಮವು ಪರಬ್ರಹ್ಮವಲ್ಲವೆಂದೂ ಅದು ಈಶ್ವರನೆಂದೂ ವಾದಿಸಿರುವರು ; ಇನ್ನು ಕೆಲವರು ವಿಮರ್ಶಕರು ಸೂತ್ರಭಾಷ್ಯದಲ್ಲಿ ಜಗತ್ಕಾರಣವಾದವಿರುವದರಿಂದ ಇದು ಗೌಡಪಾದರವರ ಅಜಾತಿವಾದಕ್ಕೆ ಭಿನ್ನವಾಗಿದೆ ಎಂದೂ ವಾದಿಸುತ್ತಿರುವರು. ಈ ಅಭಿಪ್ರಾಯಗಳು ಅಜ್ಞಾನಮೂಲವೆಂಬುದು ಈಗ ವಾಚಕರಿಗೆ ಸ್ಪಷ್ಟವಾಗಿರಬೇಕು.

## ನ್ಯಾಯಮತನಿರಾಸ

ಸೂತ್ರಭಾಷ್ಯದಲ್ಲಿ ನ್ಯಾಯಮತವನ್ನು ನೇರಾಗಿ ಖಂಡಿಸಿರುವದಿಲ್ಲ. ನ್ಯಾಯಸೂತ್ರವೊಂದನ್ನು (೧-೧-೨), ತಮಗೆ ಸಮ್ಮತವೆಂಬಂತೆ (೧-೧-೪) ಭಾಷ್ಯಕಾರರು ಉದಾಹರಿಸಿಯೂ ಇರುತ್ತಾರೆ. ಆದರೂ ಪ್ರಮಾಣಪ್ರಮೇಯ ವ್ಯವಹಾರವು ಅಧ್ಯಾಸಿಕವೆಂದೂ (ಅಧ್ಯಾಸಭಾಷ್ಯ) ಈ ವ್ಯವಹಾರವು ಅದ್ವೈತಾತ್ಮಜ್ಞಾನವಾದಬಳಿಕ ನಿಲ್ಲುವದಿಲ್ಲವೆಂದೂ (೧-೧-೪) ಪ್ರತ್ಯಕ್ಷಾದಿ ಪ್ರಮಾಣಗಳು ಸ್ವಪ್ನವ್ಯವಹಾರದಂತೆ ಬ್ರಹ್ಮಜ್ಞಾನವಾಗುವವರೆಗೆ ಪ್ರಮಾಣವಾಗಿರುವವೆಂದೂ ಮತ್ತೆಮತ್ತೆ (೨-೧-೧೪, ೪-೧-೪, ೪-೨-೧೪) ಹೇಳಿರುವದರಿಂದ ನ್ಯಾಯಶಾಸ್ತ್ರದ ವಿಷಯವಾದ ಪ್ರಮಾಣಾದಿಗಳು ವ್ಯಾವಹಾರಿಕವೇ ಹೊರತು ಪರಮಾರ್ಥವಲ್ಲವೆಂದು ತಿಳಿಸಿದಂತಾಗಿರುತ್ತದೆ.

## ಯೋಗಮತದ ಖಂಡನೆ

ಸಾಂಖ್ಯದಂತೆ ಯೋಗವೂ ಪ್ರಧಾನಾದಿಗಳನ್ನೇ ಒಪ್ಪಿರುವದರಿಂದ ಸಾಂಖ್ಯಖಂಡನೆಯಿಂದಲೇ ಅದನ್ನು ಖಂಡಿಸಿದಂತಾಗಿದ್ದರೂ ತತ್ತ್ವದರ್ಶನಕ್ಕೆ ಉಪಾಯವೆಂದು ಯೋಗವನ್ನು ಶ್ರುತಿಯಲ್ಲಿಯೂ ಉಪದೇಶಿಸಿರುವದರಿಂದ ಯೋಗಾನುಷ್ಠಾನವನ್ನು ವೇದಾಂತಿಗಳೂ ಒಪ್ಪಬೇಕು ಎಂಬ ಶಂಕೆಯನ್ನೂ (೨-೧-೩) ವಿಶೇಷವಾಗಿ ಇಲ್ಲಿ ತಿರಸ್ಕರಿಸಿದೆ.

ಸಾಂಖ್ಯಯೋಗಸ್ಮೃತಿಗಳನ್ನೂ ಕೆಲವು ಅಂಶಗಳಲ್ಲಿ ಒಪ್ಪಬಹುದೆಂದು (೨-೧-೩) ಆಚಾರ್ಯರು ಹೇಳಿರುವದನ್ನು ಕೇಳಿ ಅನೇಕರು ಪಾತಂಜಲ ಯೋಗದ ಅಭ್ಯಾಸವು ವೇದಾಂತಜ್ಞಾನಕ್ಕೆ ಅತ್ಯವಶ್ಯವೆಂದು ನಂಬಿರುತ್ತಾರೆ. ಈ ನಂಬಿಕೆಯು ಸರಿಯಲ್ಲ. ಏಕೆಂದರೆ ಶ್ರುತಿಯಲ್ಲಿ ಸಾಂಖ್ಯಯೋಗಗಳಿಂದ ಜಗತ್ಕಾರಣನಾದ ದೇವನ ಪ್ರಾಪ್ತಿಯಾಗುತ್ತದೆ ಎಂದು ಹೇಳಿದ್ದರೂ ಅಲ್ಲಿ ವೈದಿಕಜ್ಞಾನವನ್ನು ಸಾಂಖ್ಯವೆಂತಲೂ ವೈದಿಕಧ್ಯಾನವನ್ನು ಯೋಗವೆಂತಲೂ ಹೇಳಿದೆ ಎಂದು (೨-೧-೩) ಸ್ಪಷ್ಟಪಡಿಸಿರುತ್ತಾರೆ. ದ್ವೈತಿಗಳಾದ ಸಾಂಖ್ಯರ ಜ್ಞಾನವೂ ಯೋಗಿಗಳ ಅನುಷ್ಠಾನವೂ ಅದ್ವೈತಕ್ಕೆ ಉಪಯೋಗವಿಲ್ಲವೆಂದೂ ಕಂಠರವದಿಂದ ಹೇಳಿರುತ್ತಾರೆ. ಇಲ್ಲಿ ತಿಳಿಸಿರುವ ವೈದಿಕಧ್ಯಾನವು ಯಾವದೆಂಬುದನ್ನು ಇಷ್ಟರಲ್ಲಿಯೇ ಜ್ಞಾನಸಾಧನವಿಚಾರದಲ್ಲಿ ವಿಶದಗೊಳಿಸುವೆವು.

## ಶೈವವೈಷ್ಣವಮತಗಳ ಖಂಡನೆ

ತಾಂತ್ರಿಕರಲ್ಲಿ ಮುಖ್ಯವಾಗಿ ಶೈವರಾದ ಮಾಹೇಶ್ವರರನ್ನೂ ವೈಷ್ಣವರಾದ ಭಾಗವತರನ್ನೂ ಇಲ್ಲಿ ಖಂಡಿಸಿರುತ್ತದೆ. ಶಂಕರಾಚಾರ್ಯರು ಶೈವ, ವೈಷ್ಣವ, ಶಾಕ್ತೇಯ, ಗಾಣಾಪತ್ಯ, ಸೌರ, ಕಾಪಾಲಿ– ಎಂಬ ಆರು ಮತಗಳನ್ನು ಸ್ಥಾಪಿಸಿದರೆಂದು ಕೆಲವರು ಹೇಳುತ್ತಾರೆ; ಮತ್ತೆ ಕೆಲವರು ಈ ಆಚಾರ್ಯರು ಒಂದಾನೊಂದು ಲಿಂಗವನ್ನು ತಮ್ಮ ಶಿಷ್ಯರಿಗೆ ಪೂಜೆಗೆಂದು ತಂದುಕೊಟ್ಟ ರೆಂದೂ ಹಲವರ ನಂಬಿಕೆಯಿದೆ. ಆದರೆ ಈ ಎರಡಕ್ಕೂ ಆಚಾರ್ಯರ ಪ್ರಸ್ಥಾನತ್ರಯಭಾಷ್ಯಗಳಲ್ಲಿ ಬೆಂಬಲವು ದೊರೆಯುವದಿಲ್ಲ. ಆಚಾರ್ಯರು ಶೈವವೈಷ್ಣವಾದಿಮತಗಳ ಆಚಾರಗಳನ್ನು ಕುರಿತು ಎಲ್ಲಿಯೂ ಬರೆದಂತೆ ಕಾಣುವದಿಲ್ಲ. 'ಶಾಲಗ್ರಾಮದಲ್ಲಿ ವಿಷ್ಣುವಿನಂತೆ' ಎಂಬ ನ್ಯಾಯವೇನೋ ಅಲ್ಲಲ್ಲಿ ಕಾಣಬರುತ್ತದೆ; ಆದರೆ ಶೈವರು ಪೂಜಿಸುವ ಲಿಂಗದ ಪರಾಮರ್ಶವು ಎಲ್ಲಿಯೂ ಇಲ್ಲವೇ ಇಲ್ಲ.

ಇದು ಹಾಗಿರಲಿ, ಮಾಹೇಶ್ವರರ ಸಿದ್ಧಾಂತವನ್ನು 'ವೇದಬಾಹ್ಯವಾದ ಈಶ್ವರಕಲ್ಪನೆ' ಎಂದು (೨–೨–೩೭) ಕಂಠೋಕ್ತವಾಗಿ ಹೇಳಿರುವದು ಮನನೀಯವಾಗಿದೆ. ಏಕೆಂದರೆ ಈಶ್ವರನು ಜಗತ್ತಿಗೆ ಕೇವಲ ನಿಮಿತ್ತಕಾರಣನೆಂದು ಹೇಳುವ ವಾದಿಗಳನ್ನೆಲ್ಲ ವೇದವಿರೋಧಿಗಳೆಂದೂ ತಾರ್ಕಿಕರೆಂದೂ ಆಚಾರ್ಯರು ಎಣಿಸಿದ್ದರೆಂಬುದಕ್ಕೆ ಇದೊಂದು ಬಲವಾದ ಸಾಕ್ಷಿಯಾಗಿರುತ್ತದೆ.

ಭಾಗವತಮತವನ್ನು ಅನುವಾದಮಾಡಿರುವದನ್ನು ನೋಡಿದರೆ ಆಗಿನ ಪಾಂಚರಾತ್ರರೂ ಅದ್ವೈತಿಗಳಾಗಿದ್ದರೆಂದು ನಂಬುವದಕ್ಕೆ ಅವಕಾಶವಿದೆ. ಜೀವನ ಉತ್ಪತ್ತಿಯ ಹೊರತು ಭಾಗವತಮತಕ್ಕೆ ಒಪ್ಪಾದ ಮತ್ತೆ ಯಾವ ವಾದವೂ ಅದ್ವೈತಿಗಳಿಗೆ ವಿರುದ್ಧವಾಗಿರಲಿಲ್ಲವೆಂದೂ ತೋರುತ್ತದೆ. ಪಾಂಚರಾತ್ರಾಗಮವನ್ನು ಒಪ್ಪಿದ್ದ ದ್ವೈತಿಗಳಾಗಲಿ ವಿಶಿಷ್ಟಾದ್ವೈತಿಗಳಾಗಲಿ ಆ ಕಾಲಕ್ಕೆ ಇರಲಿಲ್ಲವೆಂಬ ಉಪಸಿದ್ಧಾಂತವೊಂದು ಇದರಿಂದ ಹೊರಡುತ್ತದೆ. ಈ ಊಹೆಯು ಎಷ್ಟರಮಟ್ಟಿಗೆ ಸರಿ ಎಂಬುದನ್ನು ವಿದ್ವಾಂಸರು ನಿರ್ಣಯಿಸಬೇಕಾಗಿದೆ.

# ಅವೈದಿಕಮತಗಳ ಖಂಡನೆ

ಚಾರ್ವಾಕಮತ, ಬೌದ್ಧಮತ, ಜೈನಮತ– ಈ ಮೂರು ಅವೈದಿಕ ಮತಗಳನ್ನು ಮಾತ್ರ ಇಲ್ಲಿ ಖಂಡಿಸಿದೆ. ಇವುಗಳನ್ನು ಮೀಮಾಂಸಕರೇ ಮೊದಲಾದವರು ಆಚಾರ್ಯರಿಗಿಂತ ಮೊದಲೇ ಖಂಡಿಸಿದ್ದರಾದರೂ ವೇದಾಂತೋಕ್ತವಾದ ಆತ್ಮಸ್ವರೂಪವನ್ನು ತಿಳಿಸಿಕೊಡುವದಕ್ಕೆಂದು ಮೊದಲನೆಯ ಎರಡು ಮತಗಳನ್ನೂ ಆತ್ಮಜ್ಞಾನವು ನಿಸ್ಸಂಶಯವಾಗಿ ಅವಿದ್ಯೆಯನ್ನು ಕಳೆದು ಮುಕ್ತಿಯನ್ನು ಕೊಡುವದೆಂಬುದನ್ನು ತಿಳಿಸಿಕೊಡುವದಕ್ಕೆಂದು ಮೂರನೆಯದಾದ ಜೈನಮತವನ್ನೂ ಆಚಾರ್ಯರು ಮತ್ತೆ ಖಂಡಿಸಿರಬಹುದೆಂದು ಕಾಣುತ್ತದೆ.

ಬೌದ್ಧರಲ್ಲಿ ಸರ್ವಾಸ್ತಿತ್ವವಾದಿಗಳ ಮತವನ್ನು ಖಂಡಿಸಿರುವದರಲ್ಲಿ ಆಚಾರ್ಯರು ಆ ಮತವನ್ನು ಸರಿಯಾಗಿ ತಿಳಿದುಕೊಳ್ಳದೆ ಅನೇಕ ದೂಷಣೆಗಳನ್ನು ಹೇರಿರುತ್ತಾರೆಂದು ಯಾಮುಕಾಮಿ ಸೋಜೆನ್ ಎಂಬ ಜಪಾನಿ ವಿದ್ವಾಂಸನು, ಬೌದ್ಧತತ್ತ್ವವಿಚಾರದ ಸಿದ್ಧಾಂತಗಳು 'Systems of Buddhistic Thought' ಎಂಬ ತನ್ನದೊಂದು ಗ್ರಂಥದಲ್ಲಿ ಬರೆದಿರುತ್ತಾನೆ. ಆತನ ಅಭಿಪ್ರಾಯವು ಎಷ್ಟರಮಟ್ಟಿಗೆ ಸರಿ ಎಂಬುದನ್ನು ನಿರ್ಣಯಿಸಲು ನಮಗೆ ಬೇಕಾದ ಆಧಾರಗ್ರಂಥಗಳು ದೊರೆತಿಲ್ಲ. ಆಚಾರ್ಯರ ಕಾಲಕ್ಕೆ ಭರತಖಂಡದಲ್ಲಿ ಬೌದ್ಧಮತವು ಆಗಲೆ ಕ್ಷೀಣದಶೆಯಲ್ಲಿತ್ತಾದರೂ ಇನ್ನೂ ಕೆಲವು ಮೂಲಗ್ರಂಥಗಳು ದೊರೆಯುತ್ತಿದ್ದವು. ಆಚಾರ್ಯರು ಉದಾಹರಿಸಿರುವ 'ಪೃಥಿವೀ ಭಗವಃ' ಎಂಬ ವಚನವು ಯಶೋಮಿತ್ರನ 'ಸ್ಫುಟಾರ್ಥ' ಎಂಬ ಗ್ರಂಥದಲ್ಲಿರುವದಾಗಿ ತಿಳಿಯಬಂದಿದೆ. 'ಸಹೋಪಲಂಭನಿಯಮಾದಭೇದಃ' ಎಂಬ ವಾಕ್ಯವು ಧರ್ಮಕೀರ್ತಿಯ ಕಾರಿಕೆಯಲ್ಲಿ ಸಿಕ್ಕುತ್ತದೆಯಂತೆ. ಮತ್ತು 'ಯದಂತರ್ಜ್ಞೇಯರೂಪಂ ತದ್ಬಹಿರ್ವದವಭಾಸತೇ' ಎಂಬ ಶ್ಲೋಕಭಾಗವು 'ಆಲಮ್ಬನಪರೀಕ್ಷಾ' ಎಂಬ ದಿಙ್ನಾಗನ ಗ್ರಂಥದಲ್ಲಿದೆ– ಎಂದು ಈಚೆಗೆ ಟಿಬೆಟ್‌ಭಾಷೆಯಿಂದಾಗಿರುವ ಪರಿವರ್ತನೆಯೊಂದರಿಂದ ಗೊತ್ತಾಗಿದೆ. 'ಬುದ್ಧಿಬೋಧ್ಯಂ ತ್ರಯಾದನ್ಯತ್....' ಎಂಬ ವಾಕ್ಯವು ಗುಣಮತಿಯ 'ಅಭಿಧರ್ಮಕೋಶವ್ಯಾಖ್ಯೆ'ಯಲ್ಲಿರುವದಾಗಿ ಶೋಧಕರು ಹೇಳುತ್ತಿದಾರೆ. ಭಾಷ್ಯದಲ್ಲಿ ಉದಾಹರಿಸಿರುವ ಮಿಕ್ಕ ಮತಗಳ

ಅಭಿಪ್ರಾಯವನ್ನು ಆಚಾರ್ಯರು ತಪ್ಪಾಗಿ ಅನುವಾದಮಾಡಿಕೊಂಡಿರುವರೆಂಬ ದೂರು ಈವರೆಗೆ ಬಂದಿರುವದಿಲ್ಲ. ಹೀಗಿರುವದರಿಂದ ಅವರು ತಮ್ಮ ಕಾಲಕ್ಕೆ ಪ್ರಚಾರದಲ್ಲಿದ್ದ ಯಾವದಾದರೊಂದು ಗ್ರಂಥದಿಂದ ಸರ್ವಾಸ್ತಿತ್ವವಾದಿಗಳ ಅಭಿಪ್ರಾಯಗಳನ್ನು ಉದಾಹರಿಸಲಾರರೆ ?– ಎಂಬುದು ವಿಚಾರಣೀಯವಾಗಿರುತ್ತದೆ.

ಹೇಗೇ ಆಗಲಿ, ಚಾರ್ವಾಕರೂ ಬೌದ್ಧರೂ

ಎಂಬುದು ಸುಪ್ರಸಿದ್ಧವಾಗಿದೆ. ವೇದಾಂತದಲ್ಲಿ ಹೇಳುವ ಸಾಕ್ಷಿಸ್ವರೂಪವನ್ನು ಅವರ ಯಾವ ಪ್ರಭೇದದವರೂ ಒಪ್ಪಿರುವದಿಲ್ಲ. ಇಷ್ಟು ನಿಜವಾದರೆ ಸಾಕು, ಸರ್ವಾಸ್ತಿತ್ವವಾದದ 'ಭೋಗವು ಭೋಗಾರ್ಥವೇ, ಮೋಕ್ಷವು ಮೋಕ್ಷಾರ್ಥವೇ' ಎಂದು ಆಚಾರ್ಯರು ಹೇಳಿರುವ ದೋಷವು ನಿಂತುಕೊಳ್ಳುತ್ತದೆ ; ಅವರ ಕಾರ್ಯಕಾರಣವಾದದಲ್ಲಿ ಅಭಾವದಿಂದ ಭಾವೋತ್ಪತ್ತಿಯೆಂಬ ಕಲಂಕವೂ ತಪ್ಪುವದಿಲ್ಲ. ವಿಜ್ಞಾನವಾದದಲ್ಲಿ ವೇದಾಂತಿಗಳು ಹೇಳುವ ಸಾಕ್ಷಿಚೈತನ್ಯವನ್ನು ಒಪ್ಪುವವರೆಗೆ ಬಾಹ್ಯಾರ್ಥವನ್ನು ತಿರಸ್ಕರಿಸುವದು ಆಗುವದಿಲ್ಲ ಎಂಬ ದೋಷವೂ ಇದ್ದುಕೊಂಡಿರುತ್ತದೆ, ಶೂನ್ಯವಾದವು ನಿಷ್ಪ್ರಮಾಣಕವೆಂಬ ದೂರೂ ಅದಕ್ಕೆ ತಪ್ಪಿದ್ದಲ್ಲ.

ಬೌದ್ಧಮತಖಂಡನೆಯ ಅಂತ್ಯದಲ್ಲಿ ಆಚಾರ್ಯರು ಆ ಮತದಲ್ಲಿ ಇತರೇತರವಿರುದ್ಧವಾದ ಪ್ರಭೇದಗಳುಂಟಾಗಿವೆಯಾದ್ದರಿಂದ ಬುದ್ಧನು ಅಸಂಬದ್ಧಪ್ರಲಾಪಿಯು ಅಥವಾ ಪ್ರಜಾಪ್ರದ್ವೇಷಿ ಎಂದಾಗುತ್ತದೆ– ಎಂದು ಸ್ವಲ್ಪ ಕಟುವಾಗಿಯೇ ಟೀಕಿಸಿರುತ್ತಾರೆ. ಆದರೆ ಬೌದ್ಧರ ಅನೇಕ ಪ್ರಸ್ಥಾನಗಳಲ್ಲಿ ಯಾವದು ಬುದ್ಧನಿಗೊಪ್ಪು ಎಂಬುದನ್ನು ನಿರ್ಧರಿಸಬೇಕು– ಎಂಬುದೇ ಅವರ ಆಶಯವೆಂಬುದು ಸ್ಪಷ್ಟವಾಗಿರುತ್ತದೆ. ಈಗ್ಗೆ ಅದ್ವೈತಿಗಳಲ್ಲಿಯೂ ಹೀಗೆ ಅನೇಕ ಪ್ರಸ್ಥಾನಗಳು ಎದ್ದುಕೊಂಡಿರುತ್ತವೆ ಎಂಬುದು "ಸಿದ್ಧಾಂತಲೇಶಸಂಗ್ರಹ"ವೇ ಮುಂತಾದ ಗ್ರಂಥಗಳಿಂದ ವ್ಯಕ್ತವಾಗುತ್ತಿದೆ. ಆದ್ದರಿಂದ ಆಚಾರ್ಯರ ಈ ಆಕ್ಷೇಪವನ್ನು ಅವರ ದ್ವೇಷಿಗಳು ಅವರಮೇಲೆಯೇ ಹಾಕುವದಕ್ಕೆ ಬರುವಂತಾಗಿದೆ. ಇದೂ ಅಲ್ಲದೆ ಆಚಾರ್ಯರು ಖಂಡಿಸಿರುವ ವಿಜ್ಞಾನವಾದಶೂನ್ಯವಾದಗಳ ಪ್ರಕ್ರಿಯೆಯೇ ಅದ್ವೈತಿಗಳದ್ದು ಎಂದು ಹೇಳುತ್ತಾ ಅವರನ್ನು 'ಪ್ರಚ್ಛನ್ನಬೌದ್ಧರು' ಎಂದು ಕರೆಯುವವರೂ ಅಲ್ಲಲ್ಲಿ

ಇರುತ್ತಾರೆ. ಅದ್ವೈತವೇದಾಂತದಲ್ಲಿ ಬದ್ಧಾದರರಾದವರಿಗೆ ಈ ದೂರನ್ನು ದೂರಮಾಡುವದು ಕರ್ತವ್ಯವಾಗಿರುತ್ತದೆ. ಈ ವಿಷಯಕ್ಕೆ ನಮ್ಮ ಅಭಿಪ್ರಾಯ ವನ್ನು ಸಂಗ್ರಹವಾಗಿ ನಾವು ಮಾಂಡೂಕ್ಯೋಪನಿಷದ್ಭಾಷ್ಯದ ಪೀಠಿಕೆಯಲ್ಲಿ ಯೂ ಪರಿಶಿಷ್ಟದಲ್ಲಿಯೂ ಯಥಾಶಕ್ತಿಯಾಗಿ ವ್ಯಕ್ತಗೊಳಿಸಿರುತ್ತೇವೆ.

ಜೈನರ ಸ್ಯಾದ್ವಾದವು ಅಪೇಕ್ಷಾದೃಷ್ಟಿಯಿಂದ ಸರಿಯಾಗಬಹುದಾದರೂ ಪರಮಾರ್ಥದೃಷ್ಟಿಯಿಂದ ಸಮ್ಯಗ್ದರ್ಶನವೊಂದಿದೆ ಎಂದು ಎಲ್ಲರೂ ಒಪ್ಪ ಬೇಕು. ಇಲ್ಲದಿದ್ದರೆ ಜೈನರ ಸ್ವಸಿದ್ಧಾಂತವೂ ನಿಲ್ಲುವದಿಲ್ಲ ಎಂಬ ಭಾಷ್ಯ ಕಾರರ ಉಕ್ತಿಯನ್ನು ನಾವು ಮನನಮಾಡಬೇಕು. ವ್ಯಾವಹಾರಿಕದೃಷ್ಟಿ, ಪಾರಮಾರ್ಥಿಕದೃಷ್ಟಿ-- ಎಂಬ ವಿಭಾಗವನ್ನು ಒಪ್ಪಿರುವ ಅದ್ವೈತಿಗಳು ಪರಮಾರ್ಥವೊಂದುಂಟೆಂಬುದನ್ನು ಅನುಭವಸಮ್ಮತವಾಗಿ ತೋರಿಸಿಕೊಡ ಬೇಕು ; ಇಲ್ಲದಿದ್ದರೆ ಅವರು ಹೇಳುವ ಅನಿರ್ವಚನೀಯವಾದದಂತೆ ಅವರ ಸಿದ್ಧಾಂತವೂ ಅನಿರ್ವಚನೀಯವಾಗಿಬಿಡುತ್ತದೆ.

## ಜ್ಞಾನಸಾಧನಗಳೂ ಜ್ಞಾನಫಲವೂ

ಬ್ರಹ್ಮಸೂತ್ರಗಳಲ್ಲಿ ಬ್ರಹ್ಮಜ್ಞಾನವೆಂಬ ಶಬ್ದಕ್ಕೆ ಉಪಾಸನೆಯೆಂಬರ್ಥ ವೂ ಉಂಟೆಂದು ಆಗಲೆ ಹೇಳಿರುತ್ತೇವೆ. (೧) ಉಪನಿಷತ್ತುಗಳಲ್ಲಿ ಕಾಣ ಬರುವ ಉಪಾಸನಾರೂಪವಾದ ಕೆಲಕೆಲವು ವಿದ್ಯೆಗಳು ಬೇರೆಬೇರೆಯೊ, ಒಂದೊ ?– ಎಂಬುದನ್ನು ಇಲ್ಲಿ ಮೀಮಾಂಸಾನ್ಯಾಯದಿಂದ ನಿರ್ಣಯಿಸಿರು ತ್ತದೆ. (೨) ಉಪಾಸನೆಗಳಿಗೆ ಬೇಕಾಗುವ ಗುಣಗಳ ಉಪಸಂಹಾರ, ಉಪಾ ಸನೆಗಳ ಸಮುಚ್ಚಯವಿಕಲ್ಪಗಳು– ಇವುಗಳನ್ನೇ ಅಲ್ಲದೆ, (೩) ಉಪಾಸನೆ ಗಳನ್ನು ಮಾಡುವದಕ್ಕೆ ಅನುಸರಿಸಬೇಕಾದ ಕ್ರಮ, ಉಪಾಸನೆಗಳಿಗೆ ಅವಶ್ಯ ವಾಗಿರುವ ಸಾಕ್ಷಾತ್ಕಾರ, ಉಪಾಸಕನು ದೇಹತ್ಯಾಗವನ್ನು ಮಾಡಿದ ಬಳಿಕ ಅವನು ಹೋಗಿ ಲೋಕಾಂತರದಲ್ಲಿ ಪಡೆಯುವ ಮೋಕ್ಷದ ಸ್ವರೂಪ– ಇವು ಗಳನ್ನೆಲ್ಲ ಇಲ್ಲಿ ಶ್ರುತಿಪ್ರಮಾಣದಿಂದ ಚರ್ಚಿಸಿ ನಿರ್ಣಯಿಸಿರುತ್ತದೆ. ಉಪಾ ಸನೆಯೂ ಮಾನಸಕರ್ಮವೇ ಆಗಿದ್ದರೂ ಕರ್ಮದಲ್ಲಿ ಅದನ್ನು ಅವಶ್ಯವಾಗಿ ಮಾಡಲೇಬೇಕೆಂಬ ನಿರ್ಬಂಧವಿಲ್ಲದ್ದರಿಂದಲೂ ಕರ್ಮದ ಹಂಗಿಲ್ಲದೆ ಮಾಡ ಬಹುದಾದ ಉಪಾಸನೆಗಳನ್ನೂ, ಕೆಲಕೆಲವು ಪ್ರತೀಕಗಳಲ್ಲಿ ಬ್ರಹ್ಮದೃಷ್ಟಿ

ಯಿಟ್ಟು ಮಾಡಬೇಕಾದ ಉಪಾಸನೆಗಳನ್ನೂ, ಇಲ್ಲಿ ಹೇಳಬೇಕಾಗಿರುವದರಿಂದಲೂ ಧರ್ಮಜಿಜ್ಞಾಸಾಶಾಸ್ತ್ರದಲ್ಲಿ ಇವುಗಳ ವಿಚಾರಕ್ಕೆ ಎಡೆಯಿಲ್ಲವಾಯಿತು.

ಆದರೆ ಶಾರೀರಕಮೀಮಾಂಸಕ್ಕೆ ವಿಷಯವಾಗಿರುವ ಬ್ರಹ್ಮವಸ್ತುಜ್ಞಾನದ ಸಾಧನಗಳನ್ನೂ ಆ ಜ್ಞಾನದ ಫಲವನ್ನೂ ಇಲ್ಲಿ ಹೇಳಿರುವದನ್ನು ನಾವು ಮನದಂದುಕೊಳ್ಳುವದು ಅವಶ್ಯವಾಗಿದೆ. ಹಿಂದೆ ಅನೇಕವೃತ್ತಿಕಾರರು ಉಪಾಸನಾರೂಪವಾದ ಜ್ಞಾನವನ್ನೇ ಹೇಳಿದ್ದರಿಂದ ಅವರು ಜ್ಞಾನಕರ್ಮಸಮುಚ್ಚಯವಾದಿಗಳಾಗಿದ್ದರು ; ಅವರು ಜ್ಞಾನದಿಂದ ಕಾಲಾಂತರದಲ್ಲಿ ಪಡೆಯುವ ಮೋಕ್ಷವನ್ನು ಹೇಳುತ್ತಿದ್ದದ್ದೂ ಸ್ವಾಭಾವಿಕವಾಗಿದೆ. ಆದರೆ ಶಾಂಕರಪ್ರಸ್ಥಾನದಲ್ಲಿ ಜ್ಞಾನದಿಂದ ಈ ಜನ್ಮದಲ್ಲಿಯೇ ಆಗುವ ಸದ್ಯೋಮುಕ್ತಿಯನ್ನು ಹೇಳಿದ್ದರಿಂದ ಸಾಧನಗಳು ಜ್ಞಾನದ ಉತ್ಪತ್ತಿಗೆ ಹೇಗೆ ಕಾರಣವಾಗುವವು, ಅವುಗಳ ಸ್ವಭಾವವೇನು, ಅವುಗಳಲ್ಲಿ ಅಂತರಂಗಬಹಿರಂಗಭಾವವು ಹೇಗೆ ?– ಎಂಬಿದೇ ಮುಂತಾದ ವಿಚಾರಗಳು ಎದ್ದುಕೊಳ್ಳುತ್ತವೆ.

ಆಚಾರ್ಯರು ಹೇಳಿರುವ ಸಾಧನವಿಚಾರವನ್ನು ಇಲ್ಲಿ ಸಂಗ್ರಹಿಸುವದರಿಂದ ಪ್ರಯೋಜನವುಂಟು : (೧) ಯಜ್ಞಾದಿಗಳು ಜ್ಞಾನದ ಉತ್ಪತ್ತಿಗೆ ಬಹಿರಂಗಸಾಧನೆಗಳಾಗಿರುತ್ತವೆ ; ಅವು ಜ್ಞಾನೋತ್ಪತ್ತಿಗೆ ಪರಂಪರಾಕಾರಣವಾಗಿರುತ್ತವೆ, ಜನ್ಮಾಂತರದಲ್ಲಿ ಮಾಡಿದ್ದರೂ ಈ ಜನ್ಮದ ಜ್ಞಾನಕ್ಕೆ ಅವು ಕಾರಣವಾಗಬಹುದು. ಆದ್ದರಿಂದ ವಿಧುರಾದಿಗಳು ಮಾಡುವ ಸಾಮಾನ್ಯಕರ್ಮಗಳೂ ಜ್ಞಾನಕ್ಕೆ ಸಾಧನವಾಗಬಹುದು ; ಈ ಯಜ್ಞಾದಿಗಳು ಉಪಾಸನಾಯುಕ್ತವಾದರೂ ಆಗದಿದ್ದರೂ ಯಥಾಯೋಗ್ಯವಾಗಿ ಜ್ಞಾನಕ್ಕೆ ಸಾಧನಗಳಾಗುವವು. (೨) ಪರಿವ್ರಾಜಕರಿಗೆ ಜ್ಞಾನಕ್ಕಾಗಿ ಯಜ್ಞಾದಿಕರ್ಮಗಳು ಬೇಕಿಲ್ಲ, ಅವರು ಅವನ್ನು ಬಿಟ್ಟರೆ ಪ್ರತ್ಯವಾಯವೂ ಇಲ್ಲ. ಆದರೆ ಅಂತರಂಗಸಾಧನಗಳಾದ ಶಮಾದಿಗಳು ಅವರಿಗಿರುವವು. (೩) ಯಜ್ಞಾದಿಗಳು ಜ್ಞಾನೋತ್ಪತ್ತಿಯಾದಮೇಲೆ ಬೇಡವೇಬೇಡ. (೪) ಶ್ರವಣಮನನನಿಧಿಧ್ಯಾಸನಗಳೂ ಜ್ಞಾನಕ್ಕಾಗಿಯೇ ಬೇಕು, ಜ್ಞಾನವಾದಮೇಲೆ ಮಾಡತಕ್ಕವಲ್ಲ (೧–೧–೪). (೫) ಶ್ರವಣಮನನನಿದಿಧ್ಯಾಸನಗಳು ಆತ್ಮದರ್ಶನಕ್ಕೆ ನೇರಾಗಿ ಸಾಧನವಾಗಿರುವದರಿಂದ ಅವನ್ನು ದರ್ಶನವಾಗುವ

ವರೆಗೂ ಮಾಡಬೇಕು. (೬) ತತ್ತ್ವಮಸ್ಯಾದಿವಾಕ್ಯಗಳ ಶ್ರವಣಮಾತ್ರದಿಂದ ಬ್ರಹ್ಮಾತ್ಮತ್ವದ ಅನುಭವವುಂಟಾದರೆ ಮತ್ತೇನೂ ಮಾಡಬೇಕಾದದ್ದೇ ಇಲ್ಲ; ಹಾಗೆ ಆಗದವನು ವಾಕ್ಯದ ಪದಾರ್ಥಜ್ಞಾನದ ಪ್ರತಿಬಂಧಕವು ಹೋಗುವದಕ್ಕಾಗಿ ಶಾಸ್ತ್ರಯುಕ್ತಿಗಳ ಆವೃತ್ತಿಯನ್ನು ಮಾಡಬೇಕು. (೭) ಪಾರಿವ್ರಾಜ್ಯವನ್ನು ಬ್ರಹ್ಮಜ್ಞಾನದ ಪರಿಪಾಕಕ್ಕೆ ಅಂಗವಾಗಿ ವಿಧಿಸಿದೆ; ಪಾಣ್ಡಿತ್ಯ, ಬಾಲ್ಯ, ಮೌನ-ಎಂಬ ಮೂರು ಸಹಕಾರಿಸಾಧನಗಳು ಜ್ಞಾನಿಯಾದ ಸಂನ್ಯಾಸಿಗೆ ಶಾಸ್ತ್ರದಲ್ಲಿ ಉಕ್ತವಾಗಿವೆ. (೮) ಈ ಸಾಧನಗಳನ್ನು ಮಾಡಿದರೂ ಈ ಜನ್ಮದಲ್ಲಿಯೇ ಜ್ಞಾನವುಂಟಾಗದೆ ಇದ್ದರೆ ಪೂರ್ವಜನ್ಮದ ಕರ್ಮದ ಫಲಭೋಗವು ಅದಕ್ಕೆ ಅಡ್ಡಿಯಾಗಿದೆ ಎಂದು ತಿಳಿಯಬೇಕು. ಪ್ರತಿಬಂಧವು ಹೋದಕೂಡಲೇ ಅವಶ್ಯವಾಗಿ ಜ್ಞಾನವಾಗುವದು.

## ಮನನನಿದಿಧ್ಯಾಸನಗಳ ಸ್ವರೂಪ

ಇಲ್ಲಿ ಹೇಳಿರುವ ಮನನಕ್ಕೂ ತಾರ್ಕಿಕರು ಉಪಯೋಗಿಸುವ ತರ್ಕಕ್ಕೂ ಏನು ಹೆಚ್ಚುಕಡಿಮೆಯಿದೆ ಎಂಬುದನ್ನು ನಾವು ತಿಳಿದುಕೊಳ್ಳುವದು ಅವಶ್ಯವಾಗಿದೆ. ಏಕೆಂದರೆ ಆಚಾರ್ಯರು ತಾರ್ಕಿಕರ ಸ್ಮೃತಿಗಳು ತರ್ಕೋಪಪತ್ತಿಗಳಿಂದ ತತ್ತ್ವಜ್ಞಾನಕ್ಕೆ ಉಪಕಾರಕಗಳಾಗಿರಬಹುದಾದರೂ ತತ್ತ್ವಜ್ಞಾನವು ವೇದಾಂತವಾಕ್ಯದಿಂದಲೇ ಆಗುತ್ತದೆ-ಎಂದು ಹೇಳಿರುತ್ತಾರೆ. ಶ್ರವಣವಾದ ಬಳಿಕ ಮನನವನ್ನು ಶ್ರುತಿಯಲ್ಲಿ ವಿಧಿಸಿರುವದು ನಿಜವಾದರೂ ಶ್ರುತ್ಯನುಗೃಹೀತವಾದ ತರ್ಕವನ್ನೇ ಅನುಭವಕ್ಕೆ ಅಂಗವಾಗಿ ಇಲ್ಲಿ ಆಶ್ರಯಿಸತಕ್ಕದ್ದಾಗಿದೆ ಎಂದು ಅವರು ಹೇಳಿರುತ್ತಾರೆ. ಆ ತರ್ಕದ ಜಾತಿಯನ್ನು ಅವರು (೩-೧-೬) ತಿಳಿಸಿರುವದನ್ನೂ ಲಕ್ಷ್ಯದಲ್ಲಿಡಬೇಕು. ಕನಸು, ಎಚ್ಚರ-ಎಂಬೀ ಅವಸ್ಥೆಗಳು ಒಂದರಲ್ಲೊಂದು ಇರುವದಿಲ್ಲವಾದ್ದರಿಂದ ಅವುಗಳ ದೋಷವು ಆತ್ಮನಿಗಿಲ್ಲವೆಂಬುದೂ ಸುಷುಪ್ತಿಯಲ್ಲಿ ಪ್ರಪಂಚವನ್ನೆಲ್ಲಾ ಬಿಟ್ಟು ಸದ್ರೂಪನಾದ ಆತ್ಮನಲ್ಲಿ ಒಂದಾಗಿರುವದರಿಂದ ಆತ್ಮನು ನಿಷ್ಪ್ರಪಂಚನಾದ ಸದ್ರೂಪನೇ ಎಂಬುದು ಒಂದು ಜಾತಿಯ ತರ್ಕವು. ಸೂತ್ರಗಳಲ್ಲಿ ಅವಸ್ಥಾವಿಚಾರವನ್ನು ಮಾಡಿರುವದೇಕೆ ? ಎಂಬ ಪ್ರಶ್ನೆಗೆ ಇಲ್ಲಿ ಉತ್ತರವು ಸಿಕ್ಕುತ್ತದೆ. ಪ್ರಪಂಚವು ಬ್ರಹ್ಮದಿಂದ ಉಂಟಾಗಿರುವದರಿಂದ ಬ್ರಹ್ಮಕ್ಕಿಂತ ವ್ಯತಿರಿಕ್ತ

ವಾಗಿಲ್ಲ ಎಂಬ ಕಾರ್ಯಕಾರಣಾನನ್ಯತ್ವನ್ಯಾಯವು ಮತ್ತೊಂದು ಬಗೆಯ ಶ್ರೌತತರ್ಕವು. ಜಗತ್ತಿನ ಜನ್ಮಾದಿಗಳು ಬ್ರಹ್ಮದಿಂದಲೇ ಆಗಿವೆ ಎಂಬುದನ್ನು ಸೂತ್ರಗಳಲ್ಲಿ ಸಾಧಿಸಿರುವದು ನಿಷ್ಪ್ರಪಂಚಬ್ರಹ್ಮಾತ್ಮತ್ವವನ್ನು ತಿಳಿಸಿಕೊಡುವದಕ್ಕೇ– ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಅಂತೂ ಒಟ್ಟಿನಲ್ಲಿ ಆತ್ಮೈಕತ್ವಜ್ಞಾನವನ್ನು ಕೊಡುವ ಶ್ರುತ್ಯನುಗೃಹೀತತರ್ಕವನ್ನೇ ಇಲ್ಲಿ ಮನನವೆಂದಿದೆ ಎಂದಂತಾಯಿತು.

ಈಗ **ನಿದಿಧ್ಯಾಸನವೆಂದರೇನೆಂಬುದನ್ನು** ವಿಚಾರಿಸುವದಕ್ಕೆ ಸಮಯವಾಗಿದೆ. ಇದೂ ಉಪಾಸನೆಯಂತೆ ಮಾನಸಸಾಧನವೇ ಆದರೂ ಉಪಾಸನೆಗೆ ಲೋಕಾಂತರದಲ್ಲಾಗುವ ಬ್ರಹ್ಮಪ್ರಾಪ್ತಿಯೇ ಫಲವಾಗಿರುವದರಿಂದ ಭಾವನಾರೂಪವಾದ ಆ ಸಾಧನಕ್ಕೂ ಬ್ರಹ್ಮದರ್ಶನಕ್ಕಾಗಿ ಮಾಡುವ ನಿದಿಧ್ಯಾಸನಕ್ಕೂ ಹೆಚ್ಚುಕಡಿಮೆಯಿರಬೇಕೆಂಬುದು ಮೇಲೆಯೇ ಕಾಣಿಸುತ್ತದೆ. ನಿದಿಧ್ಯಾಸನವೂ ಒಂದು ಬಗೆಯ ಧ್ಯಾನವೇ ; ಅದರಲ್ಲಿಯೂ ಆವೃತ್ತಿಗುಣವು ಸೇರಿಕೊಂಡಿದೆ ಎಂದು ಆಚಾರ್ಯರು ಬರೆದಿರುತ್ತಾರೆ[1]. ಆದ್ದರಿಂದ ಇದನ್ನು 'ಉಪಾಸನೆ'ಯೆಂದೂ ಆಚಾರ್ಯರು ಕರೆದಿರುತ್ತಾರೆ. ಹೀಗಿದ್ದರೂ ಉಪಾಸನೆಯಲ್ಲಿ ಶಾಸ್ತ್ರಸಮರ್ಪಿತವಾದ ವಿಷಯವನ್ನು ಶಾಸ್ತ್ರೋಕ್ತವಾದ ಕ್ರಮದಲ್ಲಿ ಭಾವಿಸುತ್ತಿರಬೇಕು ; ಉಪಾಸ್ಯವು ಸಾಕ್ಷಾತ್ಕಾರವಾಗುವದು ಅದರ ಗುರಿ. ಅದನ್ನು ಸಾಯುವವರೆಗೂ ಮಾಡುತ್ತಲೇ ಇರಬೇಕು. ಆದರೆ ನಿದಿಧ್ಯಾಸನಕ್ಕೆ ವಸ್ತುತಂತ್ರವಾದ ಜ್ಞಾನವೇ ಗುರಿಯಾಗಿರುವದರಿಂದ ವಸ್ತುವಿಗನುಗುಣವಾಗಿ

---

1. ಆಚಾರ್ಯರು ನಿದಿಧ್ಯಾಸನವನ್ನು ಧ್ಯಾನವೆಂದು ಕರೆದಿದ್ದರಿಂದಲೋ, ಅಥವಾ ಬೇರೊಂದು ಕಾರಣದಿಂದಲೋ, ವ್ಯಾಖ್ಯಾನಪ್ರಸ್ಥಾನದವರು ಕೆಲವರು ಇದನ್ನು ಯೋಗಸಮಾಧಿಗೆ ಅಂಗವಾಗಿರುವ ಧ್ಯಾನವೆಂದು ಭ್ರಮಿಸಿರುತ್ತಾರೆ. ಇದು ಧ್ಯಾನವಲ್ಲವೆಂದೂ 'ಅಪರಾಯತ್ತಬೋಧ' ಎಂದರೆ ತನ್ನ ಅನುಭವದ ರೂಪದ ಜ್ಞಾನವೇ ಎಂದೂ ವಾರ್ತಿಕಕಾರರು ಬರೆದುಬಿಟ್ಟಿರುತ್ತಾರೆ. (ಬೃ. ವಾ. ೨-೪-೨೧೭, ೨೩೩). ಆದರೆ ಆಚಾರ್ಯರ ಮತದಲ್ಲಿ ನಿದಿಧ್ಯಾಸನವೂ ಜ್ಞಾನಕ್ಕೆ ಸಾಧನವೇ ಎಂಬುದು ಸ್ಪಷ್ಟವಾಗಿದೆ. ಶ್ರವಣದ ಜೊತೆಗೆ ಮನನವನ್ನೂ ವಿಧಿಸಿರುವದರಿಂದಲೇ ಆತ್ಮಜ್ಞಾನವು ಉಪಾಸನೆಯಲ್ಲವೆಂದೂ ಏರ್ಪಡುತ್ತದೆ ; ಏಕೆಂದರೆ ಉಪಾಸನೆಗೆ ಮನನದ ಆವಶ್ಯಕತೆಯೇನೂ ಇಲ್ಲ.

ಅದನ್ನೇ ಏಕಾಗ್ರದಿಂದ– ರತ್ನಪರೀಕ್ಷಕನು ರತ್ನದ ತಿಳಿವಳಿಕೆಯನ್ನುಂಟು ಮಾಡಿಕೊಳ್ಳುವದಕ್ಕೆ ನೋಡುವಂತೆ–ನಿಟ್ಟಿಸಿ ನೋಡುತ್ತಿರಬೇಕು. ಇದರಲ್ಲಿ ಅನಾತ್ಮಚಿಂತನೆಯನ್ನು ಬಿಟ್ಟು ಆತ್ಮನಕಡೆಗೆ ಮನಸ್ಸನ್ನು ತಿರುಗಿಸಿಕೊಳ್ಳು ವದೇ ಮುಖ್ಯಪ್ರಯತ್ನವು. ಇದರ ಕ್ರಮವನ್ನು ಕಾಠಕೋಪನಿಷತ್ತಿನ ಒಂದು ವಾಕ್ಯದ ಆಧಾರದಿಂದ (೧–೪–೩) ಆಚಾರ್ಯರು ವಿವರಿಸಿರುತ್ತಾರೆ. ಉಪನಿಷತ್ತಿನಲ್ಲಿ ಇದನ್ನು ಅಧ್ಯಾತ್ಮಯೋಗವೆಂದು ಕರೆದಿದ್ದರೂ ಇದು ಯೋಗಶಾಸ್ತ್ರದಲ್ಲಿ ಹೇಳಿರುವ ಚಿತ್ತವೃತ್ತಿನಿರೋಧವಲ್ಲ ಎಂಬುದನ್ನು ತಿಳಿಸು ವದಕ್ಕಾಗಿಯೇ ಇದನ್ನು ವೈದಿಕಧ್ಯಾನವೆಂದು (೨–೧–೩), ಭಾಷ್ಯಕಾರರು ಕರೆದಿರುತ್ತಾರೆ. ಗೀತೆಯ ಆರನೆಯ ಅಧ್ಯಾಯದಲ್ಲಿ ಹೇಳಿರುವ ಧ್ಯಾನ ಯೋಗವೂ ಈ ನಿದಿಧ್ಯಾಸನವೇ. ಶ್ರವಣಮನನನಿದಿಧ್ಯಾಸನಗಳು ಆತ್ಮ ಜ್ಞಾನಕ್ಕಾಗಿಯೇ ಇರುವದರಿಂದ ಹೀಗೆ ಅವುಗಳನ್ನು ಒಂದಕ್ಕೊಂದನ್ನು ಹೊಂದಿಸಿಕೊಂಡು ಆತ್ಮನಲ್ಲಿಯೇ ಮನಸ್ಸನ್ನು ನಿಲ್ಲಿಸಿಕೊಳ್ಳುವದನ್ನು ವೇದಾಂತಿಗಳು 'ಸಮಾಧಿ' ಎಂದು ಕರೆದಿರುತ್ತಾರೆ.

## ಜ್ಞಾನದ ಫಲವಾದ ಮುಕ್ತಿ

ಉಪಾಸನಾರೂಪವಾದ ಸಗುಣವಿದ್ಯೆಯ ಫಲವನ್ನು ಅಮೃತತ್ವ, ಮುಕ್ತಿ– ಎಂದು ಕರೆದರೂ ಅದು ಗತಿಪೂರ್ವಕವಾಗಿ ಪಡೆಯತಕ್ಕದ್ದು ! ಆದ್ದರಿಂದ ಅದು ಅವಿದ್ಯಾದಿಗಳು ನಾಶವಾಗದೆ ಇರುವಾಗ ಪಡೆದುಕೊಳ್ಳತಕ್ಕ ಆಪೇಕ್ಷಿಕ ಅಮೃತತ್ವವು (೪–೨–೭), ಸ್ವರ್ಗಾದಿಗಳಂತೆ ಒಂದಾನೊಂದು ಅವಸ್ಥೆಯು (೪–೪–೧೬), ಈ ಮುಕ್ತಿಯನ್ನು ಪಡೆದವರು ತಮ್ಮ ಇಚ್ಛೆ ಯಿಂದ ಸಶರೀರರಾಗಿಯೂ ಅಶರೀರರಾಗಿಯೂ ಇದ್ದುಕೊಂಡು ಸಶರೀರ ರಾದಾಗ ತಮಗೆ ಇಷ್ಟವಿದ್ದಷ್ಟು ಶರೀರಗಳನ್ನು ಕಲ್ಪಿಸಿಕೊಂಡು ಸಂಕಲ್ಪ ಮಾತ್ರದಿಂದ ಮುಕ್ತಿಸುಖವನ್ನು ಭೋಗಿಸುವರು. ಇವರು ಮತ್ತೊಬ್ಬರಿಗೆ ಅಡಿಯಾಳಾಗದೆ ಇರುವರಾದರೂ ಜಗತ್ಸೃಷ್ಟಿಸ್ಥಿತಿಲಯಗಳನ್ನು ಮಾಡುವ ಶಕ್ತಿಯಿಲ್ಲದವರಾಗಿರುತ್ತಾರೆ; ಆ ಸೃಷ್ಟ್ಯಾದಿಗಳನ್ನು ಮಾಡುವ ಪರಮೇಶ್ವರ ನಿಗೆ ಅಧೀನರಾಗಿಯೇ ತಮ್ಮ ಐಶ್ವರ್ಯವನ್ನು ಅನುಭವಿಸುತ್ತಾರೆ.

ಇನ್ನು ನಿರ್ಗುಣವಾದ ಪರಬ್ರಹ್ಮದ ಜ್ಞಾನದಿಂದಾಗುವ ಫಲವಾದ ಮುಖ್ಯಮುಕ್ತಿಯು ಹೇಗಿರುವದೆಂದರೆ: ಅದು ನಿತ್ಯಶುದ್ಧವಾದ ತನ್ನ ಸ್ವರೂಪದ

ಪ್ರಾಪ್ತಿಯೇ; ಪರಮಾತ್ಮನಲ್ಲಿ ಐಕ್ಯವಾಗಿರುವದೇ ಅದು; ಆಗ ಅವಿದ್ಯಕವಾದ ಜೀವನ ಜೀವತ್ವವೂ ಬ್ರಹ್ಮದ ಸ್ರಷ್ಟೃತ್ವವೂ ಬಾಧಿತವಾಗಿಬಿಡುತ್ತದೆ. ಇದು ಒಂದಾನೊಂದು ಅವಸ್ಥೆಯಲ್ಲಿ ದೊರಕುವದಿಲ್ಲ, ನಿತ್ಯಪ್ರಾಪ್ತವು (೩-೧೩), ಮುಕ್ತರು ಮೊದಲಿನಿಂದಲೂ ತಾವು ಅಶರೀರರೇ ಎಂದು ಅರಿತುಕೊಂಡಿರುವರು (೧-೧-೪). ಸಗುಣೋಪಾಸನೆಯಿಂದ ಮುಕ್ತರಾದವರಿಗಿರುವಂತೆ ಅವರಲ್ಲಿ ವಿಶೇಷಜ್ಞಾನವಿರುವದಿಲ್ಲ, ಏಕೆಂದರೆ ಅವರು ಚಿನ್ಮಾತ್ರಸ್ವರೂಪರಾಗಿರುತ್ತಾರೆ; ಅವರಿಗೆ ಐಶ್ವರ್ಯವಿರುವದೆಂಬುದು ವ್ಯವಹಾರದೃಷ್ಟಿಯಿಂದ. ಉಪಾಸಕರಿಗೆ ಉಪಾಸನಾನುಗುಣವಾದ ಫಲವು ತಾರತಮ್ಯದಿಂದ ಆಗುವಂತೆ ಮುಖ್ಯ ಜ್ಞಾನಿಗಳಿಗೆ ತಾರತಮ್ಯದ ಫಲವು ಆಗುವದಿಲ್ಲ, ಏಕೆಂದರೆ ಮುಕ್ತ್ಯವಸ್ಥೆ ಎಂಬುದು ಬ್ರಹ್ಮವೇ ಆಗಿರುತ್ತದೆ.

## ಶಂಕರಸಿದ್ಧಾಂತದ ಸಾರ

ಶಾಂಕರಪ್ರಸ್ಥಾನದಂತೆ ವೇದಾಂತಸಿದ್ಧಾಂತಸಾರವಿಷ್ಟು; ಆತ್ಮನು ನಿತ್ಯ ಶುದ್ಧಬುದ್ಧಮುಕ್ತಸ್ವಭಾವದ ಬ್ರಹ್ಮವೇ ಆಗಿದ್ದರೂ ಅವಿದ್ಯೆಯಿಂದ ಅಶುದ್ಧನಾಗಿಯೂ ಅಜ್ಞನಾಗಿಯೂ ಬದ್ಧನಾಗಿಯೂ ಕಾಣಿಸುತ್ತಿರುವನು. ತಾನು ಬ್ರಹ್ಮವೇ ಎಂಬುದನ್ನು ಶ್ರವಣಮನನನಿದಿಧ್ಯಾಸನಗಳಿಂದ ಅರಿತುಕೊಂಡರೆ ಅವನು ಆಮೇಲೆ ಅರಿಯತಕ್ಕದ್ದು ಏನೂ ಉಳಿಯುವದಿಲ್ಲ; ಅವನು ಮಾಡಬೇಕಾದದ್ದನ್ನು ಮಾಡಿದಂತಾಯಿತು, ಪಡೆಯತಕ್ಕದ್ದನ್ನು ಪಡೆದುಕೊಂಡಂತೆ ಆಯಿತು. ಈ ಪರಮಾರ್ಥವನ್ನು ಅರಿತುಕೊಳ್ಳದೆ ಇದ್ದರೂ ಯಾರಿಗೆ ಕರ್ಮಫಲವು ಬೇಕಿಲ್ಲವಾಗಿರುವದೋ ಬ್ರಹ್ಮಪ್ರಾಪ್ತಿಯೇ ಇಷ್ಟವಾಗಿರುವದೋ ಅವರು ಬ್ರಹ್ಮವನ್ನು ಶಾಸ್ತ್ರದಲ್ಲಿ ಹೇಳಿರುವ ವಿಶೇಷರೂಪತಿಂದ ಉಪಾಸನೆಮಾಡಬೇಕು. ಈ ಉಪಾಸ್ಯೋಪಾಸಕಾದಿವ್ಯವಹಾರವು ಅವಿದ್ಯಾಭೂಮಿಯಲ್ಲಿಯೇ ಇರುವದಾದರೂ ಬ್ರಹ್ಮಪ್ರಾಪ್ತಿಗೆಂದೇ ಉಪಾಸನೆಮಾಡುವವರಿಗೆ ಅದೇ ಲಭಿಸುತ್ತದೆ (೧-೧-೧), ಬ್ರಹ್ಮವನ್ನು ಉಪಾಸನೆಯಿಂದ ಸಾಕ್ಷಾತ್ಕಾರಮಾಡಿಕೊಂಡವರು ದೇವಯಾನಮಾರ್ಗದಿಂದ ಬ್ರಹ್ಮಲೋಕಕ್ಕೆ ಹೋಗಿ ತಮಗೆ ಬೇಕಾದ ಭೋಗಗಳನ್ನೆಲ್ಲ ಅನುಭವಿಸುವರು. ಈ ಭೋಗಕ್ಕೆ ಅಂತವುಂಟಾದರೂ ಬ್ರಹ್ಮಲೋಕದಲ್ಲಿ ಆತ್ಮಜ್ಞಾನವನ್ನು ಹೊಂದಿ ಕಾರ್ಯಬ್ರಹ್ಮಲೋಕವು

ಪ್ರಲಯವಾಗುವಾಗ ಆ ಲೋಕದೊಡೆಯನಾದ ಹಿರಣ್ಯಗರ್ಭನೊಡನೆ ಪರಬ್ರಹ್ಮಸ್ವರೂಪವನ್ನೇ ಪಡೆಯುವರು. ಆದ್ದರಿಂದ ಸಗುಣೋಪಾಸಕರಿಗೂ ಜ್ಞಾನದ್ವಾರದಿಂದ ಕ್ರಮಮುಕ್ತಿಯಾಗುವದು. ಆದ್ದರಿಂದ ಬ್ರಹ್ಮವನ್ನೇ ಆಶ್ರಯಿಸಿದವರಿಗೆ ಯಾರಿಗೂ ಸಂಸಾರಕ್ಕೆ ಪುನರಾವೃತ್ತಿಯಿಲ್ಲ.

ಪ್ರಸನ್ನಗಂಭೀರನಾಗಿರುವ ಶಾಂಕರಭಾಷ್ಯದಲ್ಲಿ ಜಿಜ್ಞಾಸುಗಳು ಲಕ್ಷ್ಯದಲ್ಲಿಡಬೇಕಾದ ಪ್ರಧಾನವಿಷಯಗಳನ್ನು ಇಲ್ಲಿ ಪೀಠಿಕಾಭಾಗದಲ್ಲಿ ಚರ್ಚಿಸಿರುತ್ತೇವೆ. ಸಾಧನಸಂಪತ್ತಿನಿಂದ ಕೂಡಿರುವಾತನಿಗೆ ಶ್ರವಣಮನನನಿದಿಧ್ಯಾಸನಗಳಿಂದ ಪರಬ್ರಹ್ಮಜ್ಞಾನವಾಗಿ ಪರಮಪುರುಷಾರ್ಥವು ದೊರೆಯುವದು ಸ್ವಾನುಭವಗಮ್ಯವೆಂಬುದನ್ನು ಇಲ್ಲಿ ಸ್ಪಷ್ಟಗೊಳಿಸಲಾಗಿದೆ ಎಂದು ನಮ್ಮ ನಂಬಿಕೆ.

# ಬ್ರಹ್ಮಸೂತ್ರಗಳ ಸಾರ

(ಶ್ರೀಶಂಕರಾಚಾರ್ಯರ ಭಾಷ್ಯದಂತೆ)

ಒಂದೊಂದು ವಿಷಯವನ್ನು ಕುರಿತು ವಿಚಾರಮಾಡುವ ಸೂತ್ರಕ್ಕೆ ಅಥವಾ ಸೂತ್ರಗಳ ಗುಂಪಿಗೆ **ಅಧಿಕರಣ** ಎಂದು ಹೆಸರು. ಪ್ರತಿಯೊಂದು ಅಧಿಕರಣಕ್ಕೂ (ಶಾಸ್ತ್ರಸಂಗತಿ, ಅಧ್ಯಾಯಸಂಗತಿ, ಪಾದಸಂಗತಿ, ಸೂತ್ರ ಸಂಗತಿ ಎಂಬ ರೂಪದ) **ಸಂಗತಿ** ಅಥವಾ ಸಂಬಂಧ; ವಿಷಯ, **ಸಂಶಯ**, **ಪೂರ್ವಪಕ್ಷ**, ಸಿದ್ಧಾಂತ, ಫಲ–ಎಂಬ ಐದು ಅವಯವಗಳಿರುತ್ತವೆ. ಈ ವಿಭಾಗಗಳನ್ನು ಯಥಾಸಂಭವವಾಗಿ ತೋರಿಸಿರುತ್ತೇವೆ. ಈ ಶಾಸ್ತ್ರದಲ್ಲಿ ಪ್ರತಿಯೊಂದು ಅಧಿಕರಣದ ವಿಷಯವನ್ನೂ ಒಂದೊಂದು ವೇದಾಂತವಾಕ್ಯ ವನ್ನು ಉದಾಹರಿಸಿ ಚರ್ಚಿಸಲಾಗಿದೆ. ಆದರೆ ಇಲ್ಲಿ ಕೊಟ್ಟಿರುವ ವಿಷಯ ವಾಕ್ಯವು ಉದಾಹರಣೆಗಾಗಿ ಕೊಟ್ಟದ್ದೆಂದೂ ಅದೇ ಅರ್ಥದ ಮಿಕ್ಕ ವೇದಾಂತ ವಾಕ್ಯಗಳನ್ನೂ ವಿಷಯವಾಕ್ಯವೆಂದೇ ಪರಿಗಣಿಸಬೇಕೆಂದೂ ತಿಳಿಯಬೇಕು. ವಾಕ್ಯವನ್ನು ಕುರಿತು ಚರ್ಚಿಸುವ ನ್ಯಾಯವೇ ಇಲ್ಲಿ ಮುಖ್ಯವಾಗಿರುತ್ತದೆ.

## ಒಂದನೆಯ ಅಧ್ಯಾಯ

### ಒಂದನೆಯ ಪಾದ

### ೧. ಜಿಜ್ಞಾಸಾಧಿಕರಣ

**ಓಂ || ಅಥಾತೋ ಬ್ರಹ್ಮಜಿಜ್ಞಾಸಾ || ೧ ||**

**ವಿಷಯವೂ ಸಂಶಯವೂ :** 'ತದ್ವಿಜಿಜ್ಞಾಸಸ್ವ | ತದ್ಬ್ರಹ್ಮೇತಿ' (ತೈ. ೩-೧) ಮುಂತಾದ ಶ್ರುತಿವಾಕ್ಯಗಳಲ್ಲಿ ಹೇಳಿರುವ ಬ್ರಹ್ಮಜಿಜ್ಞಾಸೆಯನ್ನು ಮಾಡತಕ್ಕದ್ದೆ, ಅಲ್ಲವೆ ?

ಪೂರ್ವಪಕ್ಷ : ಈ ಜಿಜ್ಞಾಸೆಯನ್ನು ಮಾಡತಕ್ಕದ್ದಲ್ಲ, ಏಕೆಂದರೆ ಜಿಜ್ಞಾಸೆಗೆ ತಕ್ಕ ವಿಷಯವಾಗಲಿ ಪ್ರಯೋಜನವಾಗಲಿ ಅಧಿಕಾರಿಯಾಗಲಿ ಇರುವದಿಲ್ಲ. ಜಿಜ್ಞಾಸೆಗೆ ವಿಷಯವೆಂದು ಹೇಳಲಾಗಿರುವ ಬ್ರಹ್ಮವು ಜಿಜ್ಞಾಸುವಿನ ಆತ್ಮನೇ ಆಗಿರುವದರಿಂದ ನಿಸ್ಸಂದಿಗ್ಧವಾಗಿರುತ್ತದೆ. ಬ್ರಹ್ಮವು ನಿತ್ಯಪ್ರಾಪ್ತವಾಗಿರುವದರಿಂದ ಅದನ್ನು ತಿಳಿದುಕೊಳ್ಳುವದರಿಂದ ಹೊಸದಾಗಿ ಆಗಬೇಕಾಗಿರುವ ಪ್ರಯೋಜನವು ಯಾವದೂ ಇರುವದಿಲ್ಲ. ವಿಷಯವಿಲ್ಲದ ನಿಷ್ಪ್ರಯೋಜನವಾದ ಜಿಜ್ಞಾಸೆಯನ್ನು ಮಾಡಬೇಕೆನ್ನುವ ಅಧಿಕಾರಿಗಳು ಯಾರೂ ಇರುವದಿಲ್ಲ.

ಸಿದ್ಧಾಂತ : ಈ ಜಿಜ್ಞಾಸೆಯು ಮಾಡತಕ್ಕದ್ದು. ಏಕೆಂದರೆ ಬ್ರಹ್ಮವು ಆತ್ಮನಾಗಿರುವದರಿಂದ ಪ್ರಸಿದ್ಧವಾಗಿದ್ದರೂ ಆತ್ಮನು ದೇಹಾದಿರೂಪನೊ, ಅದಕ್ಕಿಂತ ಬೇರೆಯಾಗಿರುವ ಕರ್ತೃಭೋಕ್ತೃಸ್ವರೂಪನೊ, ಅಥವಾ ಸರ್ವಾತ್ಮನಾದ ಅಸಂಸಾರಿಯೊ? ಎಂಬ ಬಗ್ಗೆ ಮತಭೇದವಿರುವದರಿಂದ ಬ್ರಹ್ಮವು ಸಂದಿಗ್ಧವಾಗಿರುತ್ತದೆ. ಅದು ನಿತ್ಯಪ್ರಾಪ್ತವಾಗಿದ್ದರೂ ಅಜ್ಞಾನದಿಂದ ಅಪ್ರಾಪ್ತವಾದಂತೆ ಇದೆ; ಆದ್ದರಿಂದ ಅದನ್ನು ಅರಿತುಕೊಂಡರೆ ಪರಮಪುರುಷಾರ್ಥರೂಪವಾದ ಮುಕ್ತಿಯು ದೊರಕುವದೆಂದು ಶ್ರುತಿಯಲ್ಲಿ ಹೇಳಿದೆ. ಕರ್ಮದಿಂದ ಆಗುವ ಗತಿಯು ಅನಿತ್ಯವೆಂದೂ ಶ್ರುತಿಯಲ್ಲಿ ಹೇಳಿದೆ. ಆದ್ದರಿಂದ ನಿತ್ಯಾನಿತ್ಯವಿವೇಕ, ಕರ್ಮಫಲದಲ್ಲಿ ವೈರಾಗ್ಯ, ಶಮಾದಿಷಟ್ಕಸಂಪತ್ತಿ– ಇವುಗಳಿಂದೊಡಗೂಡಿ ನಿತ್ಯವಾದ ಮುಕ್ತಿಯನ್ನೇ ಪಡೆಯಬೇಕೆಂದು ಹವಣಿಸುವವರು ಈ ಜಿಜ್ಞಾಸೆಗೆ ಅಧಿಕಾರಿಗಳು. ಹೀಗೆ ವಿಷಯಾದಿಗಳು ಇರುವದರಿಂದ ಜಿಜ್ಞಾಸೆಯನ್ನು ಮಾಡಬೇಕು.*

* ಇಲ್ಲಿ ಪೂರ್ವಪಕ್ಷವು ಸರಿಯಾದರೆ ಜ್ಞಾನಮಾತ್ರದಿಂದ ಮುಕ್ತಿಯಾಗಲಾರದೆಂಬ ಫಲ, ಸಿದ್ಧಾಂತವು ಸರಿಯಾದರೆ ಜ್ಞಾನಮಾತ್ರದಿಂದ ಮುಕ್ತಿಯಾಗುತ್ತದೆ ಎಂಬ ಫಲ–ಹೀಗೆ ಪ್ರತಿಯೊಂದು ಅಧಿಕರಣದಲ್ಲಿಯೂ ಪೂರ್ವಪಕ್ಷಕ್ಕೂ ಸಿದ್ಧಾಂತಕ್ಕೂ ಫಲಭೇದವಿರುತ್ತದೆ. ಪ್ರತಿಯೊಂದು ಅಧಿಕರಣದ ಚರ್ಚೆಗೂ ಹೀಗೆಯೇ ಫಲಭೇದವನ್ನು ಊಹಿಸಿಕೊಳ್ಳಬೇಕು.

## ೨. ಜನ್ಮಾದ್ಯಧಿಕರಣ

### ಜನ್ಮಾದ್ಯಸ್ಯ ಯತಃ ॥ ೨ ॥

**ವಿಷಯವೂ ಸಂಶಯವೂ :** 'ಯತೋ ವಾ ಇಮಾನಿ' (ತೈ. ೩,೧) ಮುಂತಾದ ಶ್ರುತಿಗಳಲ್ಲಿ ಹೇಳಿರುವ ಜಗತ್ಕಾರಣತ್ವವು ಬ್ರಹ್ಮಕ್ಕೆ ಲಕ್ಷಣವೆ, ಅಲ್ಲವೆ ?

**ಪೂರ್ವಪಕ್ಷ :** ಪ್ರಧಾನವು, ಪರಮಾಣುಗಳು ಅಥವಾ ಯಾವನಾವ ರೊಬ್ಬ ಜೀವನು ಜಗತ್ತಿಗೆ ಕಾರಣವಾಗಿರಬಹುದಾಗಿದೆ. ಅಥವಾ ಸ್ವಭಾವ ದಿಂದಲೇ ಜಗತ್ತು ಹೀಗೆಯೇ ಇದ್ದುಕೊಂಡಿರಲೂಬಹುದು, ಬ್ರಹ್ಮವು ಜಗ ತ್ಕಾರಣವೆಂದಮಾತ್ರದಿಂದ ಅದರ ಸ್ವರೂಪವನ್ನು ಗೊತ್ತುಪಡಿಸಿದಂತೆಯೂ ಆಗುವದಿಲ್ಲ. ಆದ್ದರಿಂದ ಜಗತ್ಕಾರಣವಾಕ್ಯದಲ್ಲಿ ಬ್ರಹ್ಮಲಕ್ಷಣವಿಲ್ಲ.

**ಸಿದ್ಧಾಂತ** ನಾಮರೂಪಗಳಾಗಿ ವಿಂಗಡಿಸಿಕೊಂಡು ಅನೇಕ ಕರ್ತೃ ಭೋಕ್ತೃಗಳಿಂದ ಕೂಡಿರುವ ಈ ಜಗತ್ತಿಗೆ ಅಚೇತನವಾದ ಪ್ರಧಾನಾದಿ ಗಳಾಗಲಿ ಜೀವನಾಗಲಿ ಕಾರಣವೆಂದು ಕಲ್ಪಿಸುವದು ಸರಿಯಾಗಲಾರದು. ಗೊತ್ತಾದ ದೇಶಕಾಲನಿಮಿತ್ತಗಳನ್ನನುಸರಿಸಿ ಉಂಟಾಗುತ್ತಿರುವ ಕ್ರಿಯಾಫಲ ಗಳಿಗೆ ಆಶ್ರಯವಾದ ಈ ಜಗತ್ತು ಸ್ವಭಾವದಿಂದಲೇ ಹೀಗಿರುವದೆಂದು ಕಲ್ಪಿಸುವದೂ ಸರಿಯಾಗುವದಿಲ್ಲ. ಜಗತ್ಕಾರಣವಾದ ಬ್ರಹ್ಮವನ್ನು ತಿಳಿಸುವ ಶ್ರುತಿಯಲ್ಲಿ ಬ್ರಹ್ಮವು ಆನಂದರೂಪವಾಗಿದೆ, ಸರ್ವಜ್ಞವಾಗಿದೆ, ಸರ್ವಶಕ್ತಿ ಯುತವಾಗಿದೆ, ನಿತ್ಯಶುದ್ಧಬುದ್ಧಮುಕ್ತಸ್ವಭಾವವಾಗಿದೆ ಎಂದು ಹೇಳಿರುವದ ರಿಂದ ಬ್ರಹ್ಮದ ಸ್ವರೂಪವೂ ವಾಕ್ಯದಿಂದ ನಿರ್ಣಯನಾಗುತ್ತದೆ. ಆದ್ದರಿಂದ ಉದಾಹರಿಸಿದ ಶ್ರುತಿಯನ್ನು ಲಕ್ಷಣವಾಕ್ಯವೆನ್ನಬಹುದು.

**ಸಂಬಂಧ :** ಇಲ್ಲಿ ಬ್ರಹ್ಮಸ್ವರೂಪವು ಜಗತ್ಕಾರಣವೆಂದು ಲಕ್ಷಣ ವಾಕ್ಯದಿಂದ ಸಂಭಾವಿತವಾಗಿರುವದರಿಂದ ಅದನ್ನು ಜಿಜ್ಞಾಸೆಮಾಡಬಹುದು ಎಂದಾಯಿತು.

# ಶಾಸ್ತ್ರಯೋನಿತ್ವಾಧಿಕರಣ

## ಶಾಸ್ತ್ರಯೋನಿತ್ವಾತ್ ೩ ||

ಒಂದನೆಯ ವರ್ಣಕ

**ವಿಷಯವೂ ಸಂಶಯವೂ :** ಬ್ರಹ್ಮವು ಜಗತ್ಕಾರಣವೆಂದದ್ದರಿಂದ ಸೂಚಿತವಾಗಿರುವ ಸರ್ವಜ್ಞತ್ವವು ‘ಅಸ್ಯ ಮಹತೋ ಭೂತಸ್ಯ ನಿಃಶ್ವಸಿತಮೇತದ್ಯದೃಗ್ವೇದೋ ಯಜುರ್ವೇದಃ’ (ಬೃ. ೨–೪–೧೦) ಮುಂತಾದ ಶ್ರುತಿಗಳಿಂದ ದೃಢವಾಗುತ್ತದೆಯೆ, ಇಲ್ಲವೆ ?

**ಪೂರ್ವಪಕ್ಷ :** ಹಿಂದೆ ಹೇಳಿದ ಜಗತ್ಕಾರಣತ್ವದಿಂದ ಸರ್ವಜ್ಞತ್ವವು ಸೂಚಿತವಾಗಿದೆ ಎಂಬುದೇ ಸರಿಯಲ್ಲ. ಒಂದುವೇಳೆ ಅಲ್ಲಿ ಸೂಚಿತವಾಗಿದ್ದರೂ ಜಗತ್ಕಾರಣವಲ್ಲಿಯೇ ವೇದಕಾರಣತ್ವವೂ ಸೇರಿರುವದರಿಂದ ಇಲ್ಲಿ ಹೊಸ ಯುಕ್ತಿಯೇನೂ ಇಲ್ಲ. ಆದ್ದರಿಂದ ಇಲ್ಲಿ ಸರ್ವಜ್ಞತ್ವವನ್ನು ದೃಢಗೊಳಿಸಿದೆ ಎಂಬುದು ಸರಿಯಲ್ಲ.

**ಸಿದ್ಧಾಂತ :** ಜಗತ್ತಿನ ಸ್ವರೂಪದ ವಿವರಣೆಯಿಂದಲೇ ಪ್ರಧಾನಾದಿಗಳಾಗಲಿ ಅಸರ್ವಜ್ಞನಾದ ಜೀವನಾಗಲಿ ಅದಕ್ಕೆ ಕಾರಣವಲ್ಲವೆಂದು ಏರ್ಪಡುತ್ತದೆ. ಆದ್ದರಿಂದ ಜಗತ್ತಿನ ಸ್ವರೂಪವನ್ನು ಬಲ್ಲ ಸರ್ವಜ್ಞನೇ ಕಾರಣವೆಂದು ಏರ್ಪಡುತ್ತದೆ. ಸರ್ವವಿಷಯಗಳ ತಿಳಿವಳಿಕೆಯನ್ನೂ ಉಂಟುಮಾಡುವ ಸಕಲಶಾಸ್ತ್ರಗಳಿಗೂ ಮೂಲವಾದ ವೇದವನ್ನು ಯಾವ ಪ್ರಯತ್ನವೂ ಇಲ್ಲದೆ ಸೃಷ್ಟಿಸಿರುವದರಿಂದ ವೇದದಲ್ಲಿರುವ ತಿಳಿವಳಿಕೆಗಿಂತಲೂ ಹೆಚ್ಚಿನ ಜ್ಞಾನವು ಬ್ರಹ್ಮದಲ್ಲಿರಬೇಕೆಂದು ಸಿದ್ಧವಾಗುತ್ತದೆ, ಆದ್ದರಿಂದ ವೇದಕಾರಣತ್ವವನ್ನು ಹೇಳುವ ಶ್ರುತಿಯಿಂದ ಹಿಂದೆ ಸಿದ್ಧವಾಗಿರುವ ಸರ್ವಜ್ಞತ್ವವನ್ನು ಗಟ್ಟಿಗೊಳಿಸಿರುತ್ತದೆ.

ಎರಡನೆಯ ವರ್ಣಕ

**ಸಂಗತಿ :** ಹಿಂದಿನ ಅಧಿಕರಣದಲ್ಲಿ ಲಕ್ಷಣವಾಕ್ಯದಿಂದ ಸಂಭಾವಿತವಾಗಿರುವ ಬ್ರಹ್ಮಕ್ಕೆ ಇಲ್ಲಿ ಪ್ರಮಾಣವನ್ನು ತಿಳಿಸಿದೆ.

**ವಿಷಯವೂ ಸಂಶಯವೂ :** ‘ತಂ ತ್ವೌಪನಿಷದಂ ಪುರುಷಂ ಪೃಚ್ಛಾಮಿ’ (ಬೃ. ೩–೯–೨೬) ಮುಂತಾದ ಶ್ರುತಿಗಳಲ್ಲಿ ಹೇಳಿರುವಂತೆ ಶಾಸ್ತ್ರವೊಂದೇ ಬ್ರಹ್ಮಕ್ಕೆ ಪ್ರಮಾಣವೊ, ಪ್ರತ್ಯಕ್ಷಾದಿಗಳೂ ಪ್ರಮಾಣವಾಗಬಹುದೊ ?

**ಪೂರ್ವಪಕ್ಷ :** ಬ್ರಹ್ಮವು ಭೂತವಸ್ತುವಾಗಿರುವದರಿಂದ ಪ್ರತ್ಯಕ್ಷಾದಿಗಳೂ ಅದಕ್ಕೆ ಪ್ರಮಾಣವಾಗಬಹುದು.

**ಸಿದ್ಧಾಂತ :** ಬ್ರಹ್ಮವು ಇಂದ್ರಿಯಗೋಚರವಲ್ಲದ್ದರಿಂದಲೂ ಇಂದ್ರಿಯಗೋಚರವಾದ ಲಿಂಗಾದಿಗಳೂ ಅದಕ್ಕೆ ಇಲ್ಲವಾದ್ದರಿಂದಲೂ ಅದಕ್ಕೆ ಪ್ರತ್ಯಕ್ಷಾದಿಗಳು ಪ್ರಮಾಣವಲ್ಲ; ಶಾಸ್ತ್ರವೊಂದೇ ಪ್ರಮಾಣವು.

## ೪. ಸಮನ್ವಯಾಧಿಕರಣ

### ತತ್ತು ಸಮನ್ವಯಾತ್ ॥೪॥

ಒಂದನೆಯ ವರ್ಣಕ

**ಸಂಗತಿ :** ಹಿಂದೆ ಹೇಳಿದ ಶಾಸ್ತ್ರಪ್ರಮಾಣಕತ್ವವನ್ನು ಇಲ್ಲಿ ಆಕ್ಷೇಪಿಸಿ ಪರಿಹರಿಸಿರುತ್ತದೆ.

**ವಿಷಯವೂ ಸಂಶಯವೂ :** 'ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್' (ಛಾಂ. ೬-೨-೧), 'ತದೇತದ್ಬ್ರಹ್ಮಾಪೂರ್ವಮನಪರಮನನ್ತರಮಬಾಹ್ಯಮಯಮಾತ್ಮಾ ಬ್ರಹ್ಮ ಸರ್ವಾನುಭೂಃ' (ಬೃ. ೨-೫-೧೯) ಮುಂತಾದ ವಾಕ್ಯಗಳು ಬ್ರಹ್ಮವನ್ನು ತಿಳಿಸುವ ಪ್ರಮಾಣವೆ, ಅಲ್ಲವೆ?

**ಪೂರ್ವಪಕ್ಷ :** ಶಾಸ್ತ್ರವು ಕ್ರಿಯೆಯನ್ನೇ ಹೇಳಬೇಕೆಂದು ಪೂರ್ವಮೀಮಾಂಸದಲ್ಲಿ ನಿರ್ಣಯಿಸಿರುತ್ತದೆ. ಸಿದ್ಧವಸ್ತುವು ಪ್ರತ್ಯಕ್ಷಾದಿಗಳಿಗೇ ವಿಷಯವಾಗಿರುವದರಿಂದ ಬ್ರಹ್ಮವನ್ನು ತಿಳಿಸುವ ಶಾಸ್ತ್ರವು ಅನುವಾದಮಾತ್ರವಾಗುವದು. ಹೇಯೋಪಾದೇಯವಲ್ಲದ ಸಿದ್ಧವಸ್ತುವಿನ ಜ್ಞಾನದಿಂದ ಯಾವ ಪ್ರಯೋಜನವೂ ಇರುವದಿಲ್ಲ. ಆದ್ದರಿಂದ ಈ ವಾಕ್ಯಗಳು ಬ್ರಹ್ಮವನ್ನು ತಿಳಿಸುವ ಪ್ರಮಾಣವಲ್ಲ. ಇವು ಅರ್ಥವಾದಗಳೆಂದೋ, ಕರ್ಮಕ್ಕೆ ಬೇಕಾದ ಕರ್ತೃದೇವತಾದಿಗಳನ್ನು ತಿಳಿಸುವವೆಂದೋ, ಉಪಾಸನೆಯೇ ಮುಂತಾದ ಕ್ರಿಯಾಂತರವನ್ನು ವಿಧಿಸುವವೆಂದೋ ತಿಳಿಯಬೇಕು.

**ಸಿದ್ಧಾಂತ :** ಶಾಸ್ತ್ರವು ಕ್ರಿಯೆಯನ್ನು ಮಾತ್ರ ತಿಳಿಸುವದೆಂಬ ನಿಯಮವು ಕರ್ಮಕಾಂಡಕ್ಕೆ ಸಂಬಂಧಿಸಿದ್ದು. ಬ್ರಹ್ಮಾತ್ಮಸ್ವರೂಪವು ಪ್ರತ್ಯಕ್ಷಾದಿಗೋಚರವಲ್ಲ. ಅದರ ಜ್ಞಾನದಿಂದ ಸರ್ವಕ್ಲೇಶಗಳೂ ಪರಿಹಾರವಾಗುವದ

ರಿಂದ ಬ್ರಹ್ಮವಸ್ತುವಿನ ಉಪದೇಶದಿಂದ ಪ್ರಯೋಜನವೂ ಇದೆ. ಈ ವಾಕ್ಯಗಳು ಜಗತ್ಕಾರಣವಾದ ಬ್ರಹ್ಮದ ಸ್ವರೂಪವನ್ನೇ ತಾತ್ಪರ್ಯದಿಂದ ಬೋಧಿಸುತ್ತವೆಯಾದ್ದರಿಂದ ಅದರ ವಿಷಯಕ್ಕೆ ಪ್ರಮಾಣವೆನ್ನುವದಕ್ಕೆ ಯಾವ ಅಡ್ಡಿಯೂ ಇಲ್ಲ.

ಎರಡನೆಯ ವರ್ಣಕ

**ಸಂಗತಿ :** ಬ್ರಹ್ಮಕ್ಕೆ ಶಾಸ್ತ್ರವು ಪ್ರಮಾಣವೆಂದು ಒಪ್ಪಿದರೂ ಶಾಸ್ತ್ರವು ಸ್ವತಂತ್ರವಾಗಿ ಬ್ರಹ್ಮವನ್ನು ಬೋಧಿಸುವದಿಲ್ಲ ಎಂಬ ಶಂಕೆಗೆ ಇಲ್ಲಿ ಪರಿಹಾರವನ್ನು ಹೇಳಿದೆ.

**ವಿಷಯವೂ ಸಂಶಯವೂ :** 'ಆತ್ಮಾ ವಾ ಅರೇ ದ್ರಷ್ಟವ್ಯಃ....' (ಬೃ. ೨-೪-೫) 'ವಿಜ್ಞಾನಮಾನಂದಂ ಬ್ರಹ್ಮ' (ಬೃ. ೩-೯-೨೮)-ಮುಂತಾದ ವಿಧಿರೂಪವಾಗಿಯೂ ಸ್ವರೂಪನಿರ್ದೇಶರೂಪವಾಗಿಯೂ ಇರುವ ವಚನಗಳು ಇಲ್ಲಿ ವಿಷಯವಾಕ್ಯಗಳು. ಇಲ್ಲಿ ಬ್ರಹ್ಮಾತ್ಮನ ಸ್ವರೂಪನಿರ್ದೇಶವನ್ನು ಮಾಡುವ 'ವಿಜ್ಞಾನಮಾನನ್ದಮ್' ಮುಂತಾದ ವಾಕ್ಯಗಳು ಬ್ರಹ್ಮವನ್ನು ನೇರಾಗಿ ತಿಳಿಸುವ ಪ್ರಮಾಣಗಳೆ? ಅಥವಾ ಅವು 'ಆತ್ಮಾ ವಾ ಅರೇ ದ್ರಷ್ಟವ್ಯಃ' ಮುಂತಾದ ವಾಕ್ಯಗಳಲ್ಲಿರುವ ಜ್ಞಾನವಿಧಿಗೆ ಅಂಗವಾಗಿ ಬ್ರಹ್ಮವನ್ನು ತಿಳಿಸುವವೆ? ಎಂಬುದು ಸಂಶಯವು.

**ಪೂರ್ವಪಕ್ಷ :** ಶಾಸ್ತ್ರಕ್ಕೆ ಪ್ರವೃತ್ತಿನಿವೃತ್ತಿಗಳೇ ಪ್ರಯೋಜನವು. ಸಿದ್ಧವಸ್ತುವನ್ನು ಹೇಳುವಾಗಲೂ ಆ ವಸ್ತು ಕ್ರಿಯೆಗೆ ಅಂಗವಾಗಿರಬಹುದೇ ಹೊರತು ಸ್ವಪ್ರಧಾನವಾಗಿರಲಾರದು. ಕ್ರಿಯೆಗೆ ಸಂಬಂಧಪಡದ ಬರಿಯ ವಸ್ತುವನ್ನು ಉಪದೇಶಿಸುವದರಿಂದ ಪ್ರಯೋಜನವಿಲ್ಲ; ಕೇವಲ ವಸ್ತುವಾದಿಯಾದ ವಾಕ್ಯವು ವೇದದಲ್ಲಿ ಇಲ್ಲವೂ ಇಲ್ಲ. ಬ್ರಹ್ಮವಿಷಯವಾದ ವಾಕ್ಯಶ್ರವಣವನ್ನು ಮಾಡಿದವರೂ ಮುನ್ನಿನಂತೆಯೇ ಸಂಸಾರಿಗಳಾಗಿರುತ್ತಾರೆ; ಆದ್ದರಿಂದಲೇ ಶಾಸ್ತ್ರವು ಶ್ರವಣವಾದ ಬಳಿಕ ಮನನನಿದಿಧ್ಯಾಸನಗಳನ್ನೂ ಮಾಡಬೇಕೆಂದು ವಿಧಿಸಿರುತ್ತದೆ. ಆದ್ದರಿಂದ ಉಪನಿಷತ್ತುಗಳಲ್ಲಿ ಬ್ರಹ್ಮದ ಉಪಾಸನೆಯ ರೂಪವಾದ ವಾಕ್ಯಗಳೇ ಪ್ರಧಾನವಾಗಿರುವವು; ಈ ಉಪಾಸನೆಗೆ ಅಂಗವಾಗಿಯೇ ಬ್ರಹ್ಮವನ್ನು ವಸ್ತುಬೋಧಕವಾಕ್ಯಗಳು ಉಪದೇಶಿಸುತವೆ ಎಂದು ತಿಳಿಯಬೇಕು.

**ಸಿದ್ಧಾಂತ :** ಈ ವಾಕ್ಯಗಳು ನೇರಾಗಿಯೇ ಬ್ರಹ್ಮವನ್ನು ತಿಳಿಸುವ ಪ್ರಮಾಣಗಳು. ಶ್ರುತಿವು ಪ್ರವೃತ್ತಿನಿವೃತ್ತಿಗಳನ್ನೇ ಅಲ್ಲದೆ ಕೇವಲ ವಸ್ತುವನ್ನೂ ಹೇಳಬಹುದು. ವಸ್ತುವಿನ ಉಪದೇಶದಿಂದ ಪ್ರಯೋಜನವಿರಬೇಕೆಂಬ ನಿಯಮವಿದೆಯೇ ಹೊರತು ವಸ್ತುವು ಕ್ರಿಯೆಗೆ ಅಂಗವಾಗಿಯೇ ಇರಬೇಕೆಂಬ ನಿರ್ಬಂಧವೇನೂ ಇಲ್ಲ. ಪ್ರಕೃತದಲ್ಲಿ ಬ್ರಹ್ಮಜ್ಞಾನದಿಂದ ಅಜ್ಞಾನನಿವೃತ್ತಿಯಾಗಿ ಸದ್ಯೋಮುಕ್ತಿಯಾಗುವದೆಂಬ ಪ್ರಯೋಜನವಿದೆ. ಶ್ರವಣದ ಜೊತೆಗೆ ಮನನನಿದಿಧ್ಯಾಸನಗಳನ್ನೂ ಉಪದೇಶಿಸಿರುವದು ನಿಜ ; ಆದರೆ ಅವುಗಳೂ ಶ್ರವಣದಂತೆ ಬ್ರಹ್ಮಜ್ಞಾನಕ್ಕಾಗಿಯೇ ವಿಹಿತವಾಗಿರುತ್ತವೆ. ಜ್ಞಾನವು ಬಂದಮೇಲೆ ಸಂಸಾರವು ಇರುವದೇ ಇಲ್ಲವಾದ್ದರಿಂದ ಜ್ಞಾನವು ನಿಷ್ಪ್ರಯೋಜನವೆಂದು ಹೇಳುವದಕ್ಕಾಗುವದಿಲ್ಲ.

ಬ್ರಹ್ಮವು ಯಾವ ಕ್ರಿಯೆಗೂ ವಿಷಯವಲ್ಲದ ನಿತ್ಯಸಿದ್ಧವಾದ ಆತ್ಮರೂಪವಾಗಿರುತ್ತದೆ ; ಆದ್ದರಿಂದ ಬ್ರಹ್ಮಪ್ರಾಪ್ತಿರೂಪವಾದ ಮೋಕ್ಷಕ್ಕೆ ಯಾವ ಕ್ರಿಯೆಯೂ ಬೇಕಿರುವದಿಲ್ಲ. ಜ್ಞಾನವೇ ಒಂದು ಕ್ರಿಯೆಯಲ್ಲವೆ ? ಎಂವರೆ ಅಲ್ಲ ; ಏಕೆಂದರೆ ಅದು ವಸ್ತುತಂತ್ರವಾಗಿರುತ್ತದೆ, ಶಾಸ್ತ್ರವಿಹಿತವಾದ ಕ್ರಿಯೆಗಳಂತೆ ಪುರುಷವ್ಯಾಪಾರತಂತ್ರವಾಗಿರುವದಿಲ್ಲ.

ಬ್ರಹ್ಮಜ್ಞಾನದಿಂದ ತೆಗೆದುಕೊಳ್ಳುವದು ಅಥವಾ ಬಿಡುವದು ಯಾವದೂ ಇಲ್ಲವಾದ್ದರಿಂದ ನಿಷ್ಪ್ರಯೋಜನವೆಂಬುದೂ ಸರಿಯಲ್ಲ ; ಬ್ರಹ್ಮಜ್ಞಾನವಾದ ಬಳಿಕ ಕೃತಕೃತ್ಯನಾಗುವನೆಂಬುದು ಜ್ಞಾನಕ್ಕೆ ಭೂಷಣವೇ ಹೊರತು ದೂಷಣವಲ್ಲ. ಬರಿಯ ವಸ್ತುವನ್ನು ಉಪದೇಶಿಸುವ ಜ್ಞಾನವಾಕ್ಯವೇ ವೇದದಲ್ಲಿಲ್ಲವೆಂಬುದು ಸಾಹಸವು ; ಏಕೆಂದರೆ ಉಪನಿಷತ್ತುಗಳಲ್ಲಿ ಕ್ರಿಯಾಶೇಷವಲ್ಲದ ಆತ್ಮವಸ್ತುವನ್ನೇ ಹೇಳಿರುತ್ತದೆ. ಅಹಂಪ್ರತ್ಯಯವಿಷಯವಾಗಿರುವ ಆತ್ಮನನ್ನು ಮಾತ್ರ ಬೋಧಿಸಿದರೆ ಉಪನಿಷತ್ತುಗಳು ಅನುವಾದಮಾತ್ರವಾಗುವವೆಂಬ ಆಕ್ಷೇಪವೂ ಸರಿಯಲ್ಲ. ಏಕೆಂದರೆ ಅಹಂಪ್ರತ್ಯಯಗಮ್ಯನಾದ ಕರ್ತೃವಿಗಿಂತಲೂ ವಿಲಕ್ಷಣವಾಗಿ ಸಾಕ್ಷಿರೂಪನಾದ ಆತ್ಮನನ್ನೇ ಉಪನಿಷತ್ತುಗಳು ತಿಳಿಸುತ್ತವೆ. ಆ ಸಾಕ್ಷಿಯು ಮತ್ತೆ ಯಾವ ಪ್ರಮಾಣದಿಂದಲೂ ತಿಳಿಯಬರುವಂತಿಲ್ಲ. ಆದ್ದರಿಂದ ಬ್ರಹ್ಮವು ಸ್ವತಂತ್ರವಾಗಿಯೇ ಶಾಸ್ತ್ರಪ್ರಮಾಣಕವಾಗಿರುತ್ತದೆ.

## ೫. ಈಕ್ಷತ್ಯಧಿಕರಣ

ಈಕ್ಷತೇರ್ನಾಶಬ್ದಮ್ ॥೫॥ ಗೌಣಶ್ಚೇನ್ನಾತ್ಮಶಬ್ದಾತ್ ॥೬॥ ತನ್ನಿಷ್ಠಸ್ಯ ಮೋಕ್ಷೋಪದೇಶಾತ್ ॥೭॥ ಹೇಯತ್ವಾವಚನಾಚ್ಚ ॥೮॥ ಸ್ವಾಪ್ಯಯಾತ್ ॥೯॥ ಗತಿಸಾಮಾನ್ಯಾತ್ ॥೧೦॥ ॥೧೧॥

**ಸಂಗತಿ :** ಸಿದ್ಧವಸ್ತುವನ್ನು ಶಾಸ್ತ್ರವು ಹೇಳಬಹುದೆಂದು ಹಿಂದಿನ ಅಧಿಕರಣದಲ್ಲಿ ನಿರ್ಣಯಮಾಡಿತ್ತಷ್ಟೆ. ಸಿದ್ಧವಸ್ತುವು ಪ್ರಮಾಣಾಂತರಕ್ಕೂ ಗೋಚರವಾಗಿರುವದರಿಂದ ಅನುಮಾನಪ್ರಮಾಣದಿಂದ ಸಿದ್ಧವಾಗುವ ಪ್ರಧಾನಾದಿಗಳನ್ನೇ ಶಾಸ್ತ್ರದಲ್ಲಿಯೂ ಜಗತ್ಕಾರಣವೆಂದು ಹೇಳಿದೆ ಎಂದು ಏತಕ್ಕೆ ಕಲ್ಪಿಸಬಾರದು? ಎಂಬ ಆಕ್ಷೇಪವನ್ನು ತೆಗೆದು ಇಲ್ಲಿ ಪರಿಹಾರವನ್ನು ಹೇಳಿದೆ.

**ವಿಷಯವೂ ಸಂಶಯವೂ :** 'ಸದೇವ ಸೋಮ್ಯೇದಮಗ್ರ ಆಸೀತ್' (ಛಾಂ. ೬-೨-೧) ಎಂದು ಮುಂತಾಗಿರುವ ಶ್ರುತಿಯಲ್ಲಿ ಸಚ್ಛಬ್ದವಾಚ್ಯವಾಗಿರುವದು ಬ್ರಹ್ಮವೋ, ಪ್ರಧಾನವೋ ?

**ಪೂರ್ವಪಕ್ಷ :** ಇಲ್ಲಿ ಹೇಳಿರುವದು ಪ್ರಧಾನವೆ. ಅದು ಮಹದಾದಿ ಕಾರ್ಯಗಳ ರೂಪದಲ್ಲಿ ಪರಿಣಮಿಸುವ ಶಕ್ತಿಗಳುಳ್ಳದ್ದಾದ್ದರಿಂದ ಸರ್ವಶಕ್ತಿಯುತವಾಗಿದೆ. ಸಕಲಜ್ಞಾನಕ್ಕೂ ಕಾರಣವಾಗಿರುವ ಸತ್ತ್ವದಿಂದೊಡಗೂಡಿರುವದರಿಂದ ಸರ್ವಜ್ಞವೂ ಆಗಿದೆ. ಬ್ರಹ್ಮವು ಅಶರೀರವಾಗಿರುವದರಿಂದಲೂ ಜ್ಞಾನಸ್ವರೂಪವಾಗಿರುವದರಿಂದಲೂ ಅದನ್ನು 'ಸರ್ವಜ್ಞ' ಎಂದು ಕರೆಯುವದು ಸರಿಯಲ್ಲ. ನಿರವಯವವಾಗಿರುವದರಿಂದ ಯಾವ ಕಾರ್ಯದ ರೂಪವಾಗಿ ಪರಿಣಮಿಸುವ ಶಕ್ತಿಯೂ ಅದಕ್ಕಿಲ್ಲವಾಗಿ ಅದನ್ನು 'ಸರ್ವಶಕ್ತಿ' ಎಂದು ಕರೆಯುವದೂ ಸರಿಯಲ್ಲ.

**ಸಿದ್ಧಾಂತ :** ಸಚ್ಛಬ್ದವಾಚ್ಯವಾದ ಜಗತ್ಕಾರಣವು 'ಯೋಚಿಸಿ ನೋಡಿತು' ಎಂದು ಶ್ರುತಿಯಲ್ಲಿರುವದರಿಂದ ಜಗತ್ಕಾರಣವು ಚೇತನವಾಗಿರಬೇಕೆಂದು ಸಿದ್ಧವಾಗುತ್ತದೆ. ಈ ಪ್ರಪಂಚದಲ್ಲಿ ಅಚೇತನವಾದ ಅಪ್ಪು ತೇಜಸ್ಸುಗಳೂ ಯೋಚಿಸಿನೋಡಿದವೆಂದು ಶ್ರುತಿಯಲ್ಲಿ ಹೇಳಿರುವದರಿಂದ ಈ ನೋಟವು ಗೌಣವೆನ್ನೋಣ-ಎಂದರೆ ಅದು ಆಗುವಹಾಗಿಲ್ಲ ; ಏಕೆಂದರೆ

ಸದ್ವಸ್ತುವು ಜೀವನ ಆತ್ಮನೆಂದು ಹೇಳಿರುವದರಿಂದ ಅದು ಚೇತನವೇ ಆಗಿರಬೇಕಾಗಿದೆ. ಈ ಆತ್ಮಶಬ್ದವೂ ಗೌಣವೆನ್ನೋಣ ಎಂಬುದು ಸರಿಯಲ್ಲ; ಏಕೆಂದರೆ ಸದ್ವಸ್ತುವನ್ನು ತಾನೆಂದು ಅರಿತವನಿಗೆ ಮೋಕ್ಷವಾಗುವದೆಂದು ಶ್ರುತಿಯಲ್ಲಿದೆ; ಜಡವಾದ ಪ್ರಧಾನವು (ಪ್ರಕೃತಿಯು) ಜೀವನ ಆತ್ಮನಾಗುವಂತಿಲ್ಲ. ಇದು ಸ್ಥೂಲಾರುಂಧತೀನ್ಯಾಯದಿಂದ ಹೇಳಿದ ಮಾತು ಎನ್ನುವದಕ್ಕಿಲ್ಲ; ಏಕೆಂದರೆ ಶ್ರುತಿಯಲ್ಲಿ ಸದ್ವಸ್ತು ನಿಜವಾಗಿ ಆತ್ಮನಲ್ಲವೆಂದು ಹೇಳಿಲ್ಲ, ಬೇರೊಬ್ಬ ಆತ್ಮನನ್ನು ತಿಳಿಸಿಯೂ ಇಲ್ಲ. ಸುಷುಪ್ತಿಯಲ್ಲಿ ಜೀವನು ತನ್ನ ಸ್ವರೂಪವಾಗಿರುವ ಸದ್ವಸ್ತುವಿನಲ್ಲಿಯೇ ಲಯವಾಗುತ್ತಾನೆಂದು ಹೇಳಿರುವದರಿಂದಲೂ ಸಚ್ಛಬ್ದವಾಚ್ಯವಾದ ಕಾರಣವು ಪ್ರಧಾನವಲ್ಲ. ಸೃಷ್ಟಿವಾಕ್ಯಗಳೆಲ್ಲವೂ ಚೇತನರೂಪನಾದ ಆತ್ಮನೇ ಜಗತ್ಕಾರಣನೆಂದು ಹೇಳುತ್ತವೆ; ಸರ್ವಜ್ಞನೂ ಸರ್ವಶಕ್ತನೂ ಆದ ಪರಮೇಶ್ವರನೇ ಜಗತ್ತಿಗೆ ಮೂಲಕಾರಣನೆಂದು ಶ್ವೇತಾಶ್ವತರೋಪನಿಷತ್ತಿನಲ್ಲಿ ಸುಸ್ಪಷ್ಟವಾಗಿ ಹೇಳಿಯೂ ಇದೆ. ಆದ್ದರಿಂದ ಚೇತನವಾದ ಬ್ರಹ್ಮವೇ ಜಗತ್ಕಾರಣವಲ್ಲದೆ ವೇದಬಾಹ್ಯವಾದ ಅಚೇತನವಾದ ಪ್ರಧಾನಾದಿಗಳು ಕಾರಣವಾಗಲಾರವು.

ಪ್ರಧಾನವು ಸತ್ತ್ವಗುಣದಿಂದ ಕೂಡಿರುವ ಕಾರಣದಿಂದ ಸರ್ವಜ್ಞನೆನಿಸಲಾರದು; ಏಕೆಂದರೆ ಜ್ಞಾನಕ್ಕೆ ಅಡ್ಡಿಯಾಗಿರುವ ರಜಸ್ತಮೋಗುಣಗಳಿಂದ ಕೂಡಿರುವ ಕಾರಣದಿಂದ ಅದನ್ನು ಕಿಂಚಿಜ್ಜ್ಞವೆಂದೂ ಕರೆಯಬೇಕಾಗುವದು. ಅದು ಶಬ್ದಪ್ರಮಾಣಕವಲ್ಲದ್ದರಿಂದ ಸರ್ವಶಕ್ತಿಯುತವೂ ಅಲ್ಲ. ನಿತ್ಯಜ್ಞಾನಸ್ವರೂಪವಾಗಿರುವದರಿಂದ ಬ್ರಹ್ಮಕ್ಕೆ ಜ್ಞಾನೋತ್ಪತ್ತಿಗಾಗಿ ಶರೀರವಿರಬೇಕಾದದ್ದಿಲ್ಲ; ಅದು ನಿರವಯವವಾದರೂ ಸರ್ವಶಕ್ತಿಯುತವಾಗಿರುವದೆಂದು ಶ್ರುತಿಯಲ್ಲಿ ಹೇಳಿರುವದರಿಂದ ಅದು ಸರ್ವಕಾರ್ಯವನ್ನೂ ಉಂಟುಮಾಡಬಹುದಾಗಿದೆ. ಆದ್ದರಿಂದ ಚೇತನವಾದ ಬ್ರಹ್ಮವೇ ಸಚ್ಛಬ್ದವಾಚ್ಯವಾದ ಜಗತ್ಕಾರಣವು.

**ಮುಂದಿನ ಗ್ರಂಥದ ಸಂಬಂಧ:** ಇನ್ನುಮುಂದೆ ಸೋಪಾಧಿಕಬ್ರಹ್ಮವನ್ನು ಹೇಳುವ ವಾಕ್ಯಗಳನ್ನೂ ನಿರುಪಾಧಿಕಬ್ರಹ್ಮವನ್ನು ಹೇಳುವ ವಾಕ್ಯಗಳನ್ನೂ ಗೊತ್ತುಪಡಿಸಲಾಗುವದು. ಸೋಪಾಧಿಕಬ್ರಹ್ಮವು ಉಪಾಧಿಯಿಂದೊಡಗೂಡಿ ಉಪಾಸ್ಯವಾಗಿರುತ್ತದೆ; ನಿರುಪಾಧಿಕಬ್ರಹ್ಮವು ಉಪಾಧಿಯ ಮೂಲಕವೇ ತಿಳಿಯಬಂದರೂ ತನ್ನ ರೂಪದಿಂದಲೇ ಜ್ಞೇಯವಾಗಿರುತ್ತದೆ.

# ೬. ಆನಂದಮಯಾಧಿಕರಣ

ಆನನ್ದಮಯೋಽಭ್ಯಾಸಾತ್ ||೧೨|| ವಿಕಾರಶಬ್ದಾನ್ನೇತಿ ಚೇನ್ನ ಪ್ರಾಚುರ್ಯಾತ್ ||೧೩|| ತದ್ಧೇತುವ್ಯಪದೇಶಾಚ್ಚ ||೧೪|| ಮಾನ್ತ್ರವರ್ಣಿಕಮೇವ ಚ ಗೀಯತೇ ||೧೫|| ನೇತರೋಽನುಪಪತ್ತೇಃ ||೧೬|| ಭೇದವ್ಯಪದೇಶಾಚ್ಚ ||೧೭|| ಕಾಮಾಚ್ಚ ನಾನುಮಾನಾಪೇಕ್ಷಾ ||೧೮|| ಅಸ್ಮಿನ್ನಸ್ಯ ಚ ತದ್ಯೋಗಂ ಶಾಸ್ತಿ ||೧೯||

## ವೃತ್ತಿಕಾರರ ಮತದಂತೆ

ವಿಷಯವೂ ಸಂಶಯವೂ : ತೈತ್ತಿರೀಯೋಪನಿಷತ್ತಿನಲ್ಲಿರುವ 'ಅನ್ಯೋಽನ್ತರ ಆತ್ಮಾನನ್ದಮಯಃ' (ತೈ. ೨-೫) ಎಂಬ ವಾಕ್ಯದ ಆನಂದಮಯನು ಪರಬ್ರಹ್ಮವೊ, ಅಥವಾ ಅನ್ನಮಯಾದಿಗಳಂತೆ ಬ್ರಹ್ಮಕ್ಕಿಂತ ಭಿನ್ನಪದಾರ್ಥವೊ ?

ಪೂರ್ವಪಕ್ಷ : ಅನಾತ್ಮರ ಸಾಲಿನಲ್ಲಿ ಹೇಳಿರುವದರಿಂದಲೂ ಪ್ರಿಯಾದ್ಯವಯವಗಳನ್ನು ತಿಳಿಸಿರುವದರಿಂದಲೂ ಶಾರೀರನೆಂದು ಕರೆದಿರುವದರಿಂದಲೂ 'ಆನಂದಮಯ' ಎಂದು ವಿಕಾರಾರ್ಥದ ಮಯಟ್‌ಪ್ರತ್ಯಯ ಪ್ರಯೋಗವಿರುವದರಿಂದಲೂ ಆನಂದಮಯನು ಅಬ್ರಹ್ಮವೇ.

ಸಿದ್ಧಾಂತ : ಆನಂದಮಯನನ್ನು ಆನಂದವೆಂಬರ್ಥದ ಶಬ್ದಗಳಿಂದ ಮತ್ತೆಮತ್ತೆ ಕರೆದಿರುವದರಿಂದಲೂ ಆನಂದಕ್ಕೆ ಕಾರಣನೆಂದು ಹೇಳಿರುವದರಿಂದಲೂ ಉಪಕ್ರಮಮಂತ್ರದಲ್ಲಿ ಹೇಳಿರುವ ಬ್ರಹ್ಮವನ್ನೇ ಬ್ರಾಹ್ಮಣದಲ್ಲಿ ವಿಸ್ತರಿಸಿ ಉಪಸಂಹಾರಮಾಡಿದೆ-ಎಂದಿಟ್ಟುಕೊಳ್ಳುವದೇ ನ್ಯಾಯವಾದ್ದರಿಂದಲೂ ಆನಂದಮಯನು ಬ್ರಹ್ಮವೇ. ಆನಂದಮಯ ಎಂಬಲ್ಲಿ ಮಯಟ್ ಪ್ರತ್ಯಯವನ್ನು ವಿಕಾರಾರ್ಥದಲ್ಲಿ ಪ್ರಯೋಗಿಸಿಲ್ಲ, ಪ್ರಾಚುರ್ಯಾರ್ಥದಲ್ಲಿ ಪ್ರಯೋಗಿಸಿದೆ. ಪ್ರಿಯಾದಿಗಳನ್ನು ಹೇಳಿರುವದು ಉಪಾಧಿಯಿಂದ ಬಂದದ್ದು; ಶಾರೀರನೆಂದು ಕರೆದಿರುವದು ಅನ್ನಮಯಾದಿಶರೀರಪರಂಪರೆಯಿಂದ ತಿಳಿಯತಕ್ಕವನೆಂಬ ಕಾರಣದಿಂದ. ಆದ್ದರಿಂದ ಆನಂದಮಯನು ಜೀವನಲ್ಲ, ಪ್ರಧಾನವೇ ಮುಂತಾದ ಜಡವಸ್ತುವೂ ಅಲ್ಲ ; ಉಪಾಸ್ಯವಾದ ಬ್ರಹ್ಮವೇ.

## ಭಾಷ್ಯಕಾರರ ಮತದಂತೆ

**ವಿಷಯವೂ ಸಂಶಯವೂ :** 'ಬ್ರಹ್ಮ ಪುಚ್ಛಂ ಪ್ರತಿಷ್ಠಾ' ಎಂಬಲ್ಲಿ ಬ್ರಹ್ಮವನ್ನು ಆನಂದಮಯನ ಅವಯವವಾಗಿ ಹೇಳಿದೆಯೆ, ಸ್ವತಂತ್ರವಾಗಿಯೇ ಹೇಳಿದೆಯೆ ?

**ಪೂರ್ವಪಕ್ಷ :** ಪುಚ್ಛವೆಂಬ ಶಬ್ದವಿರುವದರಿಂದ ಆನಂದಮಯನಿಗೆ ಬ್ರಹ್ಮವು ಅವಯವವೆಂದು ತಿಳಿಯಬೇಕು.

**ಸಿದ್ಧಾಂತ :** ಮುಂದೆ 'ಅಸನ್ನೇವ ಸ ಭವತಿ | ಅಸದ್ ಬ್ರಹ್ಮೇತಿ ವೇದ ಚೇತ್' ಎಂದು ಬ್ರಹ್ಮಶಬ್ದದ ಅಭ್ಯಾಸವೇ ಇರುವದರಿಂದಲೂ, ಅವಯವಗಳನು ಹೇಳುವದು ಪ್ರಚುರವಾಗಿರುವ ಸಂದರ್ಭದಲ್ಲಿ ಬ್ರಹ್ಮವನ್ನು ಪುಚ್ಛವೆಂದು ಕರೆದಿದೆಯೇ ಹೊರತು ಅದು ಆನಂದಮಯನ ಅವಯವವೇ ಎಂಬ ಅಭಿಪ್ರಾಯವಿಲ್ಲ ಎಂದೂ ಹೇಳಬಹುದಾದ್ದರಿಂದಲೂ, ಬ್ರಹ್ಮವು ಆನಂದಮಯಸಹಿತವಾದ ಜಗತ್ತೆಲ್ಲವನ್ನೂ ಸೃಷ್ಟಿಸಿತೆಂದು ಜಗದ್ಧೇತುತ್ವವಚನವಿರುವದರಿಂದಲೂ ಬ್ರಹ್ಮವು ಸ್ವಪ್ರಧಾನವೇ 'ಬ್ರಹ್ಮವಿದಾಪ್ನೋತಿ ಪರಂ' ಎಂದು ಪ್ರಾರಂಭಿಸಿ 'ಸತ್ಯಂ ಜ್ಞಾನಮನನ್ತಂ ಬ್ರಹ್ಮ' ಎಂಬ ಮಂತ್ರದಲ್ಲಿ ಪ್ರಕೃತವಾಗಿರುವ ಬ್ರಹ್ಮವನ್ನೇ 'ಬ್ರಹ್ಮ ಪುಚ್ಛಂ ಪ್ರತಿಷ್ಠಾ' ಎಂದು ಸ್ವತಂತ್ರವಾಗಿ ಹೇಳಿದೆಯೆನ್ನುವದೇ ಯುಕ್ತವು. ಆನಂದಮಯಶಬ್ದದ ಅಭ್ಯಾಸವಿಲ್ಲದ್ದರಿಂದಲೂ ಆನಂದಮಯನಿಗಿಂತ ಭಿನ್ನವಾಗಿ ಬ್ರಹ್ಮವನ್ನು ಹೇಳಿರುವದರಿಂದಲೂ 'ಸೋಽಕಾಮಯತ' ಎಂಬ ಪುಲ್ಲಿಂಗಶ್ರುತಿಯು ಆತ್ಮಶಬ್ದವಾಚ್ಯವಾದ ಬ್ರಹ್ಮಕ್ಕೂ ಆಗಬಹುದಾದ್ದರಿಂದ ಅದನ್ನು ತಿಳಿದಮಾತ್ರದಿಂದಲೇ ಆನಂದಮಯನು ನಿರ್ವಿಶೇಷವಾದ ಬ್ರಹ್ಮದ ಸ್ವರೂಪವಾಗಿ ಅಭಯವನ್ನು ಪಡೆಯುವನೆಂದು ಶ್ರುತಿಯು ಹೇಳುವದರಿಂದಲೂ ಆನಂದಮಯನು ಬ್ರಹ್ಮವಲ್ಲ. ಆದ್ದರಿಂದ ಪುಚ್ಛವಾಕ್ಯದಲ್ಲಿ ಜ್ಞೇಯವಾದ ನಿರ್ವಿಶೇಷಬ್ರಹ್ಮವನ್ನು ಸ್ವಪ್ರಧಾನವಾಗಿ ಹೇಳಿದೆ.

## ೭. ಅಂತರಧಿಕರಣ

**ಅನ್ತಸ್ತದ್ಧರ್ಮೋಪದೇಶಾತ್ ||೨೦||**

**ಭೇದವ್ಯಪದೇಶಾಚ್ಚಾನ್ಯಃ ||೨೧||**

**ವಿಷಯವೂ ಸಂಶಯವೂ :** ಛಾಂದೋಗ್ಯ(೧–೬)ರಲ್ಲಿ 'ಅಥ ಯ

ಏಷೋಽನ್ತರಾದಿತ್ಯೇ ಹಿರಣ್ಮಯಃ ಪುರುಷೋ ದೃಶ್ಯತೇ', 'ಅಥ ಯ ಏಷೋನ್ತರಕ್ಷಿಣಿ ಪುರುಷೋ ದೃಶ್ಯತೇ' ಎಂದು ಹೇಳಿರುವ ಆದಿತ್ಯಾಂತರ್ಗತ ಪುರುಷನೂ ಅಕ್ಷ್ಯಂತರ್ಗತಪುರುಷನೂ ಪರಮೇಶ್ವರನೊ, ಸಂಸಾರಿಯೊ ?

ಪೂರ್ವಪಕ್ಷ : ಈ ಪುರುಷನಿಗೆ ರೂಪ, ಆಧಾರ, (ಇವನ) ಐಶ್ವರ್ಯಕ್ಕೆ ಇಷ್ಟು ಲೋಕಗಳ ಒಡೆತನವೆಂಬ ಎಲ್ಲೆಕಟ್ಟು–ಇವುಗಳನ್ನು ಹೇಳಿರುವದರಿಂದ ಇವನು ಸಂಸಾರಿಯೇ.

ಸಿದ್ಧಾಂತ : ಪರಮೇಶ್ವರನಿಗೂ ಸಾಧಕಾನುಗ್ರಹಾರ್ಥವಾಗಿ ಮಾಯಾಮಯವಾದ ರೂಪವಿರಬಹುದು ; ಉಪಾಸನೆಗಾಗಿ ಆಧಾರವನ್ನೂ ಅಧ್ಯಾತ್ಮಾಧಿದೈವವಿಭಾಗನಿಮಿತ್ತವಾದ ಐಶ್ವರ್ಯಮರ್ಯಾದೆಯನ್ನೂ ಹೇಳಬಹುದು. ಆದಿತ್ಯಾದಿಜೀವರುಗಳಿಗಿಂತ ಬೇರೆಯಾದ ಅಂತರ್ಯಾಮಿಯಾದ ಈಶ್ವರನನ್ನು ಬೇರೆಯ ಶ್ರುತಿಯಲ್ಲಿಯೂ ಹೇಳಿದೆ. ಆದ್ದರಿಂದ ಈ ಪುರುಷನು ಉಪಾಸ್ಯನಾದ ಈಶ್ವರನೇ.

## ೮. ಆಕಾಶಾಧಿಕರಣ

### ಆಕಾಶಸ್ತಲ್ಲಿಂಗಾತ್ ||೨೨||

ವಿಷಯವೂ ಸಂಶಯವೂ : ಛಾಂದೋಗ್ಯದಲ್ಲಿ 'ಅಸ್ಯ ಲೋಕಸ್ಯ ಕಾ ಗತಿರಿತಿ | ಆಕಾಶ ಇತಿ ಹೋವಾಚ' (೧–೯) ಎಂದು ಹೇಳಿರುವ ಆಕಾಶವು ಭೂತಾಕಾಶವೋ, ಬ್ರಹ್ಮವೋ ?

ಪೂರ್ವಪಕ್ಷ : ಭೂತಾಕಾಶದಲ್ಲಿ ಆಕಾಶಶಬ್ದವು ರೂಢವಾಗಿರುವದರಿಂದಲೂ, ವಾಯ್ವಾದಿಗಳು ಆಕಾಶದಿಂದ ಹುಟ್ಟುವದರಿಂದ ಸರ್ವಭೂತಗಳಿಗೂ ಈ ಆಕಾಶವು ಕಾರಣವೆಂಬ ಶ್ರುತಿಯೂ ಹೊಂದುವದರಿಂದಲೂ, ಮಿಕ್ಕ ವಿಶೇಷಣಗಳನ್ನೂ ಭೂತಾಂತರಾಪೇಕ್ಷೆಯಿಂದ ಭೂತಾಕಾಶಕ್ಕೇ ಹೊಂದಿಸಬಹುದಾದ್ದರಿಂದಲೂ, ಇಲ್ಲಿ ಆಕಾಶವೆಂದರೆ ಭೂತಾಕಾಶವೇ.

ಸಿದ್ಧಾಂತ : ಆಕಾಶವೇ ಮುಂತಾದ ಎಲ್ಲಾ ಭೂತಗಳಿಗೂ ಬ್ರಹ್ಮವೇ ಕಾರಣವು. ಅದರಲ್ಲಿಯೇ ಎಲ್ಲಾ ಭೂತಗಳೂ ಲಯವಾಗುತ್ತವೆ. ನಿರಪೇಕ್ಷ

ವಾದ ಜ್ಯಾಯಸ್ತ್ವಪರಾಯಣತ್ವಗಳೂ ಅನಂತತ್ವವೂ ಬ್ರಹ್ಮಕ್ಕೇ ಹೊಂದುತ್ತವೆ. ಆದ್ದರಿಂದ ಶ್ರುತಿಯಲ್ಲಿ ಹೇಳಿರುವವೆಲ್ಲ ಬ್ರಹ್ಮಲಿಂಗಗಳು. ವೇದದಲ್ಲಿ ಬ್ರಹ್ಮಕ್ಕೂ ಆಕಾಶಶಬ್ದವನ್ನು ಉಪಯೋಗಿಸಿರುವದುಂಟು. ಆದ್ದರಿಂದ ವಾಕ್ಯಶೇಷದಲ್ಲಿ ಬ್ರಹ್ಮದ ಅಸಾಧಾರಣಲಿಂಗಗಳಿರುವದರಿಂದ ಉಪಕ್ರಮದಲ್ಲಿರುವ ಆಕಾಶಶಬ್ದವನ್ನು ಬ್ರಹ್ಮವೆಂಬ ಅರ್ಥದಲ್ಲಿಯೇ ಗ್ರಹಿಸಬೇಕು.

## ೯. ಪ್ರಾಣಾಧಿಕರಣ

### ಅತ ಏವ ಪ್ರಾಣಃ ||೨೩||

**ವಿಷಯವೂ ಸಂಶಯವೂ :** ಛಾಂದೋಗ್ಯದಲ್ಲಿ 'ಕತಮಾ ಸಾ ದೇವತೇತಿ | ಪ್ರಾಣ ಇತಿ ಹೋವಾಚ' (ಛಾಂ. ೧-೧೧-೪) ಎಂಬ ವಾಕ್ಯದಲ್ಲಿರುವ ಪ್ರಸ್ತಾವದೇವತೆಯು ಪ್ರಾಣವೋ, ಬ್ರಹ್ಮವೊ ?

**ಪೂರ್ವಪಕ್ಷ :** ಪ್ರಾಣಶಬ್ದಕ್ಕೆ ಪ್ರಾಣವೇ ಮುಖ್ಯಾರ್ಥವಾಗಿರುವದರಿಂದಲೂ ಭೂತಗಳು ಇದರಲ್ಲಿಯೇ ಲಯವಾಗಿ ಇದರಿಂದಲೇ ಹೊರಕ್ಕೆ ಬರುವವೆಂದು ಶ್ರುತಿಯಲ್ಲಿ ಹೇಳಿರುವದು ಪ್ರಾಣಕ್ಕೂ ಶ್ರುತಿಪ್ರತ್ಯಕ್ಷಪ್ರಮಾಣಗಳು ಹೊಂದುವದರಿಂದಲೂ ಇದರ ಸನ್ನಿಧಿಯಲ್ಲಿ ಹೇಳಿರುವ ಉದ್ಗೀಥ ಪ್ರತಿಹಾರಗಳ ದೇವತೆಗಳು ಅಬ್ರಹ್ಮವಾಗಿರುವದರಿಂದಲೂ ಇಲ್ಲಿ ಹೇಳಿರುವದು ವಾಯುವಿಕಾರವಾದ ಪ್ರಾಣವೇ, ಬ್ರಹ್ಮವಲ್ಲ.

**ಸಿದ್ಧಾಂತ :** ಎಲ್ಲಾ ಭೂತಗಳೂ ಇದರಲ್ಲಡಗಿ ಹೊರಕ್ಕೆ ಬರುವವೆಂಬುದು ಬ್ರಹ್ಮಕ್ಕೆ ಅಸಾಧಾರಣಲಿಂಗವು. ಸುಷುಪ್ತಿಯಲ್ಲಿ ಇಂದ್ರಿಯಗಳು ಮಾತ್ರ ಪ್ರಾಣದಲ್ಲಿ ಅಡಗುತ್ತವೆ, ಎಚ್ಚರದಲ್ಲಿ ಹೊರಕ್ಕೆ ಬರುತ್ತವೆ ಎಂಬುದು ಮತ್ತೊಬ್ಬರ ಪ್ರತ್ಯಕ್ಷದಿಂದ ಕಂಡುಬರುತ್ತದೆ; ಎಲ್ಲಾ ಭೂತಗಳೂ ಅದರಲ್ಲಿ ಪ್ರಲಯವಾಗುವದಿಲ್ಲ, ಅದರಿಂದ ಹೊರಟುಬರುವದೂ ಕಂಡಿಲ್ಲ. ವಾಕ್ಯಶೇಷದಲ್ಲಿ ಪ್ರಾಣನೆಂದರೆ ಬ್ರಹ್ಮವೇ ಎಂದು ನಿಶ್ಚಯವಾಗುತ್ತಿರುವದರಿಂದ ಆದಿತ್ಯ, ಅನ್ನ-ಎಂಬ ಅಬ್ರಹ್ಮಗಳನ್ನು ಉದ್ಗೀಥಪ್ರತಿಹಾರದೇವತೆಗಳಾಗಿ ಹೇಳಿರುತ್ತದೆಯೆಂಬ ಸನ್ನಿಧಿಯನ್ನೂ ಅನಾದರಮಾಡಬೇಕಾಗಿದೆ. ಪ್ರಾಣಶಬ್ದವು ಬ್ರಹ್ಮದಲ್ಲಿಯೂ ವೇದದಲ್ಲಿ ಪ್ರಯೋಗವಾಗುತ್ತಿರುವದು ಕಂಡುಬರು

ತ್ತಿರುವದರಿಂದ ಅದು ಪಂಚವೃತ್ತಿಪ್ರಾಣದ ವಾಚಕವೇ ಆಗಿರಬೇಕೆಂಬ ನಿರ್ಬಂಧವಿಲ್ಲ. ಆದ್ದರಿಂದ ಇಲ್ಲಿ ಪ್ರಸ್ತಾವದೇವತೆ ಎಂದು ಉಪಾಸ್ಯವಾಗಿರುವ ಪ್ರಾಣವು ಬ್ರಹ್ಮವೇ.

## ೧೦. ಜ್ಯೋತಿಶ್ಚರಣಾಧಿಕರಣ

**ಜ್ಯೋತಿಶ್ಚರಣಾಭಿಧಾನಾತ್ ||೨೪|| ಛಂದೋಽಭಿಧಾನಾನ್ನೇತಿ ಚೇನ್ನ ತಥಾ ಚೇತೋಽರ್ಪಣನಿಗದಾತ್ ತಥಾ ಹಿ ದರ್ಶನಮ್ ||೨೫|| ಭೂತಾದಿಪಾದವ್ಯಪದೇಶೋಪಪತ್ತೇಶ್ಚೈವಮ್ ||೨೬|| ಉಪದೇಶಭೇದಾನ್ನೇತಿ ಚೇನ್ನೋಭಯಸ್ಮಿನ್ನಪ್ಯವಿರೋಧಾತ್ ||**

ವಿಷಯವೂ ಸಂಶಯವೂ : 'ಅಥ ಯದತಃ ಪರೋ ದಿವೋ ಜ್ಯೋತಿಃ' ಎಂದು ಮುಂತಾಗಿರುವ ಛಾಂದೋಗ್ಯ (೩–೧೩–೭) ವಾಕ್ಯದಲ್ಲಿ ಜ್ಯೋತಿ ಎಂದರೆ ಆದಿತ್ಯನೇ ಮುಂತಾದ ಬೆಳಕೆ, ಬ್ರಹ್ಮವೇ ?

ಪೂರ್ವಪಕ್ಷ : ಜ್ಯೋತಿ ಎಂಬ ಶಬ್ದವು ಬೆಳಕು ಎಂಬರ್ಥದಲ್ಲಿ ಪ್ರಸಿದ್ಧವಾಗಿದೆ. ದೀಪ್ಯತೇ (ಬೆಳಗುತ್ತದೆ) ಎಂಬುದೂ ಆದಿತ್ಯಾದಿಗಳಿಗೇ ಹೊಂದುತ್ತದೆ. 'ದ್ಯುಲೋಕದಿಂದಾಚೆಗೆ' ಎಂಬ ಎಲ್ಲೆಕಟ್ಟಿನ ಮಾತೂ ಕಾರ್ಯವಾದ ಬೆಳಕಿಗೆ ಒಪ್ಪುತ್ತದೆ. 'ಉತ್ತಮವಾದ ಲೋಕಗಳಲ್ಲಿ' ಎಂಬ ಆಧಾರಬಹುತ್ವವೂ ಅದಕ್ಕೇ ಸಲ್ಲುತ್ತದೆ. ಹೊಟ್ಟೆಯಲ್ಲಿರುವ ಬೆಳಕಿನಲ್ಲಿ ಇದನ್ನು ಉಪಾಸನೆಗಾಗಿ ಅಧ್ಯಾಸಮಾಡಿರುವದರಿಂದ ಅದೂ ಅದರಂತೆ ಬೆಳಕೇ ಆಗಿರಬೇಕೆಂದು ಊಹಿಸಬಹುದಾಗಿದೆ. ಇದರ ಉಪಾಸನೆಗೆ ಅಲ್ಪಫಲವನ್ನು ಹೇಳಿರುವದರಿಂದಲೂ ಇದು ಅಬ್ರಹ್ಮವೆನ್ನಬೇಕಾಗಿದೆ. ಈ ವಾಕ್ಯದಲ್ಲಿ ಬ್ರಹ್ಮಕ್ಕೇ ಸಲ್ಲುವ ಬೇರೆ ಯಾವ ಲಿಂಗವೂ ಇಲ್ಲ. ಆದ್ದರಿಂದ ಇಲ್ಲಿ ಜ್ಯೋತಿ ಎಂಬುದು ಬೆಳಕೇ.

ಸಿದ್ಧಾಂತ : ಹಿಂದಿನ ವಾಕ್ಯದಲ್ಲಿ ಬ್ರಹ್ಮವನ್ನು ಹೇಳಿ ಅದರ ಅಮೃತವಾದ ಮೂರು ಪಾದಗಳು ದ್ಯುಲೋಕದಲ್ಲಿವೆಯೆಂದು ಹೇಳಿದೆ ; ಅದನ್ನೇ ಇಲ್ಲಿ ದ್ಯುಲೋಕದಿಂದಾಚೆ ಇರುವ ಜ್ಯೋತಿ ಎಂದು ಕರೆದಿದೆ ಎಂಬುದು ಯುಕ್ತವು. ಅಲ್ಲಿ ಗಾಯತ್ರಿಯನ್ನು ಹೇಳಿರುವಂತೆ ತೋರಿದರೂ ಗಾಯತ್ರಿ ಎಂಬ ವಿಕಾರದಲ್ಲಿರುವ ಬ್ರಹ್ಮವನ್ನೇ 'ಗಾಯತ್ರಿಯೇ ಇದೆಲ್ಲವೂ' ಎಂಬ ವಾಕ್ಯದಿಂದ ಹೇಳಿರುತ್ತದೆ. ಅಥವಾ ಗಾಯತ್ರೀ ಎಂಬ ಶಬ್ದವನ್ನು ಸಂಖ್ಯಾ

ಸಾಮಾನ್ಯದಿಂದ ಬ್ರಹ್ಮಕ್ಕೇ ಉಪಯೋಗಿಸಿದೆ ಎನ್ನಲೂಬಹುದು. ಗಾಯತ್ರಿಗೆ ಭೂತಪೃಥಿವೀಶರೀರಹೃದಯಗಳೆಂಬ ನಾಲ್ಕು ಪಾದಗಳಿವೆಯೆಂದು ಹೇಳಿರುವದರಿಂದಲೂ ಅಲ್ಲಿ ಗಾಯತ್ರಿಯು ಬ್ರಹ್ಮವೇ. ಆ ವಾಕ್ಯದಲ್ಲಿ 'ದಿವಿ' ಎಂದು ಸಪ್ತಮೀವಿಭಕ್ತಿಯನ್ನೂ ಇಲ್ಲಿ 'ದಿವಃ' ಎಂದು ಪಂಚಮೀವಿಭಕ್ತಿಯನ್ನೂ ಹೇಳಿದ್ದರೂ ದ್ಯುಲೋಕದ ಸಂಬಂಧವು ಎರಡರಲ್ಲಿಯೂ ಸಮಾನವಾಗಿದೆ. ಮರದ ತುದಿಗೆ ಸಂಬಂಧಪಟ್ಟಿರುವ, ಅಥವಾ ಸಂಬಂಧಪಡದಿದ್ದರೂ ಅದರಿಂದ ತಿಳಿದುಬರುವ, ಹಕ್ಕಿಯನ್ನು 'ಮರದ ತುದಿಯಲ್ಲಿರುವ ಗಿಡುಗ', 'ಮರದ ತುದಿಯಿಂದಾಚೆಗಿರುವ ಗಿಡುಗ' ಎಂದು ಎರಡು ಬಗೆಯಿಂದಲೂ ತಿಳಿಸಬಹುದಾಗಿರುವಂತೆ ಇಲ್ಲಿ ಬ್ರಹ್ಮವನ್ನು ವಿಭಕ್ತಿಭೇದದಿಂದ ತಿಳಿಸಿರುವದು ವಿರುದ್ಧವಲ್ಲ. ಬ್ರಹ್ಮಕ್ಕೂ ಉಪಾಧಿವಶದಿಂದ ಆಧಾರಬಹುತ್ವವನ್ನು ಹೇಳಬಹುದು. ಬ್ರಹ್ಮದ ಉಪಾಸನೆಗೆ ಅಲ್ಪಫಲವೂ ಆಗಬಹುದು. ಇಷ್ಟು ಫಲಕ್ಕಾಗಿಯೇ ಬ್ರಹ್ಮೋಪಾಸನೆಯನ್ನು ಶ್ರುತಿಯಲ್ಲಿ ವಿಧಿಸಿರುತ್ತದೆ ಎಂಬ ನಿಯಮವೇನೂ ಇರುವದಿಲ್ಲ. ಜ್ಯೋತಿ ಎಂಬುದು ಅವಭಾಸಕವಾದ (ತೋರಿಸಿಕೊಡುವ) ಪದಾರ್ಥಕ್ಕೆಲ್ಲ ಹೆಸರಾಗಬಹುದು ; ಈ ಅರ್ಥದಲ್ಲಿ ಬ್ರಹ್ಮವನ್ನು ತಿಳಿಸುವ ಜ್ಯೋತಿಃಶಬ್ದದ ಪ್ರಯೋಗವೂ ಶ್ರುತಿಯಲ್ಲಿ ಇದೆ. ಆದ್ದರಿಂದ ಜ್ಯೋತಿ ಎಂದರೆ ಉಪಾಸ್ಯವಾದ ಬ್ರಹ್ಮವೇ.

## ೧೧. ಪ್ರತರ್ದನಾಧಿಕರಣ

ಪ್ರಾಣಸ್ತಥಾನುಗಮಾತ್ ॥೨೮॥ ನ ವಕ್ತುರಾತ್ಮೋಪದೇಶಾದಿತಿ ಚೇದಧ್ಯಾತ್ಮಸಂಬಂಧಭೂಮಾ ಹ್ಯಸ್ಮಿನ್ ॥೨೯॥ ಶಾಸ್ತ್ರದೃಷ್ಟ್ಯಾ ತೂಪದೇಶೋ ವಾಮದೇವವತ್ ॥೩೦॥ ಜೀವಮುಖ್ಯಪ್ರಾಣಲಿಂಗಾನ್ನೇತಿ ಚೇನ್ನೋಪಾಸಾತ್ರೈವಿಧ್ಯಾದಾಶ್ರಿತತ್ವಾದಿಹ ತದ್ಯೋಗಾತ್ ॥೩೧॥

ವಿಷಯವೂ ಸಂಶಯವೂ : ಕೌಷೀತಕಿಬ್ರಾಹ್ಮಣೋಪನಿಷತ್ತಿನಲ್ಲಿ 'ಪ್ರಾಣೋಽಸ್ಮಿ ಪ್ರಜ್ಞಾತ್ಮಾ ತಂ ಮಾಮಾಯುರಮೃತಮಿತ್ಯುಪಾಸ್ಸ್ವ' (೩-೧) ಎಂಬ ವಾಕ್ಯದಲ್ಲಿ ಪ್ರಾಣ ಎಂಬ ಶಬ್ದದಿಂದ ಹೇಳಿರುವದು ದೇವತೆಯೆ, ಮುಖ್ಯಪ್ರಾಣವೆ, ಜೀವನೆ, ಅಥವಾ ಬ್ರಹ್ಮವೆ ?

ಪೂರ್ವಪಕ್ಷ : ಇಂದ್ರನು 'ನನ್ನನ್ನೇ ಉಪಾಸನೆಮಾಡು' ಎಂದು ತನ್ನನ್ನೇ ಹೇಳಿಕೊಂಡಿದ್ದಾನೆ; ತಾನು ಮಾಡಿದ್ದ ಕ್ರೂರಕರ್ಮಗಳಿಗೆ ಯಾವ ದುಷ್ಫಲವೂ ಜ್ಞಾನಿಯಾದ ತನಗೆ ಆಗಲಿಲ್ಲ ಎಂದು ಹೊಗಳಿಕೊಂಡಿರುತ್ತಾನೆ. ಆದ್ದರಿಂದ ದೇವತೆಯೇ ಪ್ರಾಣನು. ಇಂದ್ರನು ಬಲಾಭಿಮಾನಿಯಾದ್ದರಿಂದ ಅವನನ್ನು ಪ್ರಾಣನೆಂದಿದೆ. ಅಥವಾ 'ವಕ್ತೃವನ್ನು ಅರಿತುಕೊಳ್ಳಬೇಕು' (೩-೮) ಎಂದು ಸ್ಪಷ್ಟವಾಗಿ ಜೀವಲಿಂಗವು ಕಂಡುಬರುತ್ತದೆ; 'ಈ ಪ್ರಾಣವೇ ಶರೀರವನ್ನು ಹಿಡಿದೆತ್ತಿ ನಿಲ್ಲಿಸಿಕೊಡುತ್ತದೆ' (೩-೩) ಎಂದು ಮುಖ್ಯಪ್ರಾಣ ಲಿಂಗವೂ ಇದೆ. ಆದ್ದರಿಂದ ಜೀವಮುಖ್ಯಪ್ರಾಣಗಳಲ್ಲಿ ಒಂದು ಅಥವಾ ಎರಡೂ ಪ್ರಾಣಶಬ್ದದಿಂದ ಹೇಳಲ್ಪಟ್ಟಿರುತ್ತವೆ. ಪ್ರಜ್ಞಾತ್ಮನೆಂಬ ವಿಶೇಷಣವನ್ನು ಇವೆರಡಕ್ಕೂ ಹೊಂದಿಸಬಹುದು. ಜೀವಪ್ರಾಣಗಳು ಎರಡೂ ಜೊತೆಯಲ್ಲಿರುವದರಿಂದ 'ಎರಡೂ ಜೊತೆಯಲ್ಲಿರುತ್ತವೆ. ಜೊತೆಯಲ್ಲಿಯೇ ಹೋಗುತ್ತವೆ' ಎಂಬ ವಚನವು ಅವಕ್ಕೇ ಸರಿಯಾಗಿ ಹೊಂದುತ್ತದೆ.

ಸಿದ್ಧಾಂತ : ಇಂದ್ರನು ಹೇಳುವ ಜ್ಞಾನವು ಮನುಷ್ಯನಿಗೆ ಹಿತತಮವೆಂಬುದೂ ಪಾಪಕರ್ಮದ ಫಲವು ಜ್ಞಾನದಿಂದ ನಾಶವಾಯಿತೆಂಬುದೂ ಬ್ರಹ್ಮಕ್ಕೇ ಹೊಂದುತ್ತದೆ. ಪ್ರಜ್ಞಾತ್ಮತ್ವ, ಆನಂದ, ಅಜರ, ಅಮೃತ– ಎಂಬ ವಿಶೇಷಣಗಳೂ ಕರ್ಮಫಲದಾತೃತ್ವವೂ ಲೋಕೇಶತ್ವವೂ ಪ್ರಾಣವನ್ನು ಬ್ರಹ್ಮವೆಂದಿಟ್ಟುಕೊಂಡರೇ ಸರಿಯಾಗುವವು. ಇಂದ್ರನು ತನ್ನನ್ನೇ ಉಪಾಸನೆಮಾಡೆಂದು ಹೇಳುವದು ಶಾಸ್ತ್ರದೃಷ್ಟಿಯಿಂದ. ದೇವತೆಯನ್ನೇ ಉಪಾಸನೆ ಮಾಡಬೇಕೆಂದಲ್ಲ. ಜೀವಮುಖ್ಯಪ್ರಾಣಗಳನ್ನೂ ತೆಗೆದುಕೊಂಡರೆ ಜೀವನ ಉಪಾಸನೆ, ಪ್ರಾಣದ ಉಪಾಸನೆ, ಬ್ರಹ್ಮದ ಉಪಾಸನೆ– ಎಂದು ಮೂರು ಉಪಾಸನೆಗಳನ್ನು ವಿಧಿಸಿದಂತಾಗಿ ವಾಕ್ಯಭೇದವಾಗುವದು. ಆದ್ದರಿಂದ ಪ್ರಾಣಾಧಿಕರಣದಲ್ಲಿ ನಿರ್ಣಯಿಸಿದಂತೆ ಇಲ್ಲಿಯೂ ಪ್ರಾಣಶಬ್ದವನ್ನು ಬ್ರಹ್ಮಪರವೆಂದು ನಿಶ್ಚಯಿಸುವದೇ ಉತ್ತಮ. ಪ್ರಾಣಪ್ರಜ್ಞಾತ್ಮರ ಭೇದವು ಉಪಾಧಿವಶದಿಂದ ಆತ್ಮನಿಗೂ ಆಗಬಹುದು; ಉಪಹಿತರೂಪದಿಂದ ಅವೆರಡಕ್ಕೂ ಅಭೇದವನ್ನೂ ಹೇಳಬಹುದು. ಅಥವಾ ವೃತ್ತಿಕಾರರು ಹೇಳುವಂತೆ ಒಂದು ಬ್ರಹ್ಮವನ್ನೇ ಪ್ರಾಣಧರ್ಮ, ಜೀವಧರ್ಮ, ತನ್ನ ಧರ್ಮ–ಎಂದು ಮೂರು ಬಗೆಯ ಧರ್ಮಗಳಿಂದ ಉಪಾಸನೆಮಾಡಬೇಕೆಂಬ ಅಭಿಪ್ರಾಯದಿಂದ ಪ್ರಾಣ

ಜೀವರ ಲಿಂಗಗಳುಳ್ಳ ವಾಕ್ಯಗಳನ್ನು ಇಲ್ಲಿ ಉಪಯೋಗಿಸಿದೆ. ಎಂದಾವರೂ ಇಟ್ಟುಕೊಳ್ಳಬಹುದು. ಹೇಗಾದರೂ ಇಲ್ಲಿ ಪ್ರಾಣವೆಂದರೆ ಬ್ರಹ್ಮವೇ, ದೇವತಾದಿಗಳಲ್ಲ.

## ಎರಡನೆಯ ಪಾದ

ಇಲ್ಲಿಯೂ ಮುಂದಿನ ಪಾದದಲ್ಲಿಯೂ ಅಸ್ಪಷ್ಟಬ್ರಹ್ಮಲಿಂಗವುಳ್ಳ ವೇದಾಂತವಾಕ್ಯಗಳನ್ನು ವಿಚಾರಮಾಡಿರುತ್ತದೆ. ಈ ಪಾದದಲ್ಲಿ ಉಪಾಸ್ಯ ಬ್ರಹ್ಮವಾಕ್ಯಗಳೇ ಹೆಚ್ಚಾಗಿವೆ.

### ೧. ಸರ್ವತ್ರಪ್ರಸಿದ್ಧ್ಯಧಿಕರಣ

ಸರ್ವತ್ರ ಪ್ರಸಿದ್ಧೋಪದೇಶಾತ್ ॥ ೧ ॥ ವಿವಕ್ಷಿತಗುಣೋಪಪತ್ತೇಶ್ಚ ॥೨॥ ಅನುಪಪತ್ತೇಸ್ತು ನ ಶಾರೀರಃ ॥೩॥ ಕರ್ಮಕರ್ತೃವ್ಯಪದೇಶಾಚ್ಚ ॥೪॥ ಶಬ್ದವಿಶೇಷಾತ್ ॥೫॥ ಸ್ಮೃತೇಶ್ಚ ॥೬॥ ಅರ್ಭಕೌಕಸ್ತ್ವಾತ್ತದ್ವ್ಯಪದೇಶಾಚ್ಚ ನೇತಿ ಚೇನ್ನ ನಿಚಾಯ್ಯತ್ವಾದೇವಂ ವ್ಯೋಮವಚ್ಚ ॥ ೭ ॥ ಸಂಭೋಗಪ್ರಾಪ್ತಿರಿತಿ ಚೇನ್ನ ವೈಶೇಷ್ಯಾತ್ ॥೮॥

**ವಿಷಯವೂ ಸಂಶಯವೂ :** ಛಾಂದೋಗ್ಯದಲ್ಲಿ 'ಮನೋಮಯಃ ಪ್ರಾಣಶರೀರಃ' (ಛಾಂ. ೩–೧೪–೨) ಎಂಬ ಶಾಂಡಿಲ್ಯವಿದ್ಯಾವಾಕ್ಯದಲ್ಲಿ ಮನೋಮಯತ್ವಾದಿಗುಣಗಳುಳ್ಳವನು ಶಾರೀರನೊ, ಪರಬ್ರಹ್ಮವೊ ?

**ಪೂರ್ವಪಕ್ಷ :** ಕಾರ್ಯಕರಣವಂತನಾಗಿರುವ ಶಾರೀರನಿಗೇ ಮನ ಆದಿಗಳ ಸಂಬಂಧವು ಹೊಂದುವವದರಿಂದ ಅವನೇ ಇಲ್ಲಿ ಉಪಾಸ್ಯನಾಗಿರುತ್ತಾನೆ. ಹೃದಯವೆಂಬ ಪರಿಚ್ಛಿನ್ನಸ್ಥಾನದಲ್ಲಿರುವ ಆತ್ಮನೆಂದೂ ಅಣುತರವಾದ ಸ್ವರೂಪದವನೆಂದೂ ಹೇಳಿರುವ ಈ ಮನೋಮಯನು ಪರಮಾತ್ಮನಾಗಲಾರನು. 'ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನಿತಿ ಶಾನ್ತ ಉಪಾಸೀತ' ಎಂಬುದು ಶಮವಿಧಿಪರವಾಗಿರುವದರಿಂದ ಬ್ರಹ್ಮೋಪಾಸನೆಯನ್ನು ವಿಧಿಸಿದೆಯೆನ್ನುವದಕ್ಕೆ ಬರುವದಿಲ್ಲ. (ಸರ್ವಕಾಮ) ಮುಂತಾದ ವಿಶೇಷಣಗಳನ್ನು ಹೇಗಾದರೂ ಮಾಡಿ ಜೀವನಿಗೇ ಹೊಂದಿಸಬೇಕು.

ಸಿದ್ಧಾಂತ : 'ಸರ್ವಂ ಖಲ್ವಿದಂ ಬ್ರಹ್ಮ' ಎಂದು ಉಪಕ್ರಮದಲ್ಲಿ ಬ್ರಹ್ಮವು ಪ್ರಕೃತವಾಗಿರುವದರಿಂದಲೂ ಉಪಾಸನೆಮಾಡಬೇಕೆಂದು ಹೇಳಿರುವ ಸತ್ಯಕಾಮತ್ವಸತ್ಯಸಂಕಲ್ಪತ್ವಾದಿಗುಣಗಳು ಬ್ರಹ್ಮಕ್ಕೇ ಹೊಂದುವದರಿಂದಲೂ ಉಪಾಸಕನಾದ ಶಾರೀರನು ಉಪಾಸ್ಯನಾಗಿರುವ ಮನೋಮಯಾದಿಗುಣ ಯುತನಾದ ಆತ್ಮನನ್ನು ಮುಂದೆ ಪಡೆಯುವನೆಂದು ಹೇಳಿರುವದರಿಂದಲೂ ಸಮಾನಪ್ರಕರಣವಾದ (ಶತ. ಬ್ರಾ.) ಶ್ರುತ್ಯಂತರದಲ್ಲಿಯೂ ಸ್ಮೃತಿಯಲ್ಲಿಯೂ (ಗೀ. ೧೮–೬೧) ಶಾರೀರನಿಗಿಂತ ಅವನು ಬೇರೆಯೆಂದು ಹೇಳಿರುವದರಿಂದಲೂ ಬ್ರಹ್ಮವೇ ಇಲ್ಲಿ ಹೇಳಿರುವ ಮನೋಮಯತ್ವಾದಿಗುಣಕನಾದ ಆತ್ಮನು, ಪರಮಾತ್ಮನು ಹೃದಯದಲ್ಲಿರುವನೆಂದು ಹೇಳಿರುವದು ಉಪಾಸನೆಗಾಗಿ ; ಅವನು ಜೀವರ ಹೃದಯದಲ್ಲಿದ್ದರೂ ಜೀವರಿಗೆ ಮಿಥ್ಯಾಜ್ಞಾನದಿಂದಾಗಿರುವ ಸುಖದುಃಖಭೋಗವು ಪರಮಾರ್ಥರೂಪನಾದ ಅವನಿಗೆ ಅಂಟುವದಿಲ್ಲ.

## ೨. ಅತ್ರಧಿಕರಣ

ಅತ್ತಾ ಚರಾಚರಗ್ರಹಣಾತ್ ॥೯॥ ಪ್ರಕರಣಾಚ್ಚ ॥೧೦॥

ವಿಷಯವೂ ಸಂಶಯವೂ : ಕಠವಲ್ಲಿಗಳಲ್ಲಿ 'ಯಸ್ಯ ಬ್ರಹ್ಮ ಚ ಕ್ಷತ್ರಂ ಚೋಭೇ ಭವತ ಓದನಃ । ಮೃತ್ಯುರ್ಯಸ್ಯೋಪಸೇಚನಮ್' (ಕ. ೧–೨–೨೪) ಎಂಬ ವಾಕ್ಯದಲ್ಲಿ ಉಪದೇಶಿಸಿರುವ ಅತ್ತೃವು ಅಗ್ನಿಯೊ, ಜೀವನೊ, ಪರಮಾತ್ಮನೊ ?

ಪೂರ್ವಪಕ್ಷ : ಶ್ರುತ್ಯಂತರದಲ್ಲಿ ಅಗ್ನಿಯನ್ನೂ ಜೀವರನ್ನೂ ಅತ್ತೃವೆಂದು ಹೇಳಿರುವದರಿಂದ ಅವರಿಬ್ಬರಲ್ಲಿ ಒಬ್ಬನು ಅತ್ತೃವಾಗಬಹುದು. ಪರಮಾತ್ಮನು ತಿನ್ನುವವನಲ್ಲ, ನೋಡುತ್ತಿರುವವನು ಎಂದು ಶ್ರುತಿಯಲ್ಲಿರುವದರಿಂದ ಈ ವಾಕ್ಯವು ಅವನನ್ನು ಹೇಳಲಾರದು.

ಸಿದ್ಧಾಂತ : ಮೃತ್ಯುವಿನಿಂದೊಡಗೂಡಿದ ಸರ್ವಜಗತ್ತನ್ನೂ ತಿನ್ನುವವನು ಪರಮಾತ್ಮನೇ ಆಗಬೇಕು. ಅವನು ತಿನ್ನುವವನಲ್ಲ ಎನ್ನುವ ಶ್ರುತಿಗೆ ಕರ್ಮಫಲಭೋಗವನ್ನು ನಿಷೇಧಮಾಡುವದರಲ್ಲಿ ತಾತ್ಪರ್ಯವೇ ಹೊರತು ಜಗತ್ಸಂಹಾರನಿಷೇಧದಲ್ಲಿ ತಾತ್ಪರ್ಯವಿಲ್ಲ. ಈ ವಾಕ್ಯವು ಪರಮಾತ್ಮನ ಪ್ರಕರಣದಲ್ಲಿ ಬಂದಿರುವದರಿಂದಲೂ ಈ ಅತ್ತೃವು ಪರಮಾತ್ಮನೆಂದೇ ತಿಳಿಯಬೇಕು.

## ೩. ಗುಹಾಪ್ರವಿಷ್ಟಾಧಿಕರಣ

**ಗುಹಾಂ ಪ್ರವಿಷ್ಟಾವಾತ್ಮಾನೌ ಹಿ ತದ್ದರ್ಶನಾತ್ ||೧೧||**

**ವಿಶೇಷಣಾಚ್ಚ || ೧೨ ||**

**ವಿಷಯವೂ ಸಂಶಯವೂ :** 'ಋತಂ ಪಿಬನ್ತೌ ಸುಕೃತಸ್ಯ ಲೋಕೇ ಗುಹಾಂ ಪ್ರವಿಷ್ಟೌ' (ಕ. ೧-೩-೧) ಎಂಬ ಕಠವಾಕ್ಯದಲ್ಲಿ ಗುಹೆಯನ್ನು ಹೊಕ್ಕಿರುವವರೆಂದು ಹೇಳಿರುವದು ಬುದ್ಧಿಜೀವರನ್ನೋ, ಜೀವಪರಮಾತ್ಮರನ್ನೋ? ಇಲ್ಲಿ ಜೀವನನ್ನೂ ಹೇಳಬೇಕಾದದ್ದಿದೆ. ಆದ್ದರಿಂದ ಸಂಶಯವುಂಟಾಗುತ್ತದೆ.

**ಪೂರ್ವಪಕ್ಷ :** 'ಗುಹೆಯಲ್ಲಿ ಹೊಕ್ಕಿರುವವರು' ಎಂಬ ವಿಶೇಷಣವು ಸರ್ವಗತನಾದ ಪರಮಾತ್ಮನಿಗಿಂತಲೂ ಬುದ್ಧಿಜೀವರಿಗೇ ಹೊಂದುವದರಿಂದಲೂ 'ಸುಕೃತದ ಲೋಕದಲ್ಲಿ' ಎಂಬ ಕರ್ಮಗೋಚರತ್ವವು ಜೀವನಿಗೇ ಹೊಂದುವದರಿಂದಲೂ 'ನೆರಳುಬಿಸಿಲುಗಳು' ಎಂಬುದು ಚೇತನಾಚೇತನರಾದ ಬುದ್ಧಿಜೀವರಿಗೇ ಒಪ್ಪುವದರಿಂದಲೂ ಬುದ್ಧಿಜೀವರನ್ನೇ ಇಲ್ಲಿ ಹೇಳಿದೆ.

**ಸಿದ್ಧಾಂತ :** 'ಋತಂ ಪಿಬನ್ತೌ' ಎಂದು ಜೊತೆಯಲ್ಲಿರುವವರೆಂದು ಹೇಳಿರುವ ಇಬ್ಬರೂ ಸಮಾನಸ್ವಭಾವದವರಾಗಿರಬೇಕು. ಜೀವಪರಮಾತ್ಮರಿಬ್ಬರೂ ಚೇತನರಾಗಿರುವದರಿಂದ ಸಮಾನಸ್ವಭಾವದವರಾಗಿರುತ್ತಾರೆ. ಋತಪಾನವೆಂಬ ವಿಶೇಷಣದಿಂದ ಇವರಲ್ಲಿ ಒಬ್ಬನು ಜೀವನೆಂದಾಗುವದರಿಂದ ಇನ್ನೊಬ್ಬನು ಪರಮಾತ್ಮನೇ ಆಗಿರಬೇಕು. ಪರಮಾತ್ಮನು ಗುಹೆಯಲ್ಲಿರುವನೆಂದು ಶ್ರುತಿಯಲ್ಲಿ ಮತ್ತೆಮತ್ತೆ ಹೇಳಿದೆ. ಅವನು ಸರ್ವಗತನಾದರೂ ಅವನನ್ನು ಅಲ್ಲಿಯೇ ಅರಿತುಕೊಳ್ಳಬೇಕೆಂಬ ಕಾರಣದಿಂದ ಹೃದಯಗುಹೆಯಲ್ಲಿರುವನೆಂದು ಹೇಳಿದೆ. 'ಸುಕೃತದ ಲೋಕದಲ್ಲಿ' ಎಂಬುದು ಛತ್ರಿನ್ಯಾಯದಿಂದ ಪರಮಾತ್ಮನಿಗೂ ಆಗಬಹುದು. 'ನೆರಳುಬಿಸಿಲುಗಳು' ಎಂಬ ವಿಶೇಷಣವು ಜೀವನು ಸಂಸಾರಿ, ಪರಮಾತ್ಮನು ಅಸಂಸಾರಿ ಎಂಬ ವೈಲಕ್ಷಣ್ಯವನ್ನು ತಿಳಿಸುತ್ತದೆ. ಇಲ್ಲಿರುವ ಜೀವಪರಮಾತ್ಮರನ್ನು ಗಂತೃಗಂತವ್ಯರೆಂಬ ವಿಶೇಷಣಗಳಿಂದ ಹೇಳಿರುವದರಿಂದಲೂ ಇದು ಪರಮಾತ್ಮಪ್ರಕರಣವಾಗಿರುವದರಿಂದಲೂ ಇಲ್ಲಿ ಜೀವಪರಮಾತ್ಮರನ್ನೇ ಹೇಳಿದೆ. ಆದ್ದರಿಂದ ಜೀವನ ಪರಮಾರ್ಥಸ್ವರೂಪವಾದ ಪರಮಾತ್ಮನನ್ನು ತಿಳಿಸುವದಕ್ಕೇ ಈ ವಾಕ್ಯವು ಬಂದಿದೆ.

## ೪. ಅಂತರಧಿಕರಣ

**ಅಂತರ ಉಪಪತ್ತೇಃ ||೧೩|| ಸ್ಥಾನಾದಿವ್ಯಪದೇಶಾಚ್ಚ ||೧೪|| ಸುಖವಿಶಿಷ್ಟಾಭಿಧಾನಾದೇವ ಚ ||೧೫|| ಶ್ರುತೋಪನಿಷತ್ಕಗತ್ಯಭಿಧಾನಾಚ್ಚ ||೧೬|| ಅನವಸ್ಥಿತೇರಸಂಭವಾಚ್ಚ ನೇತರಃ ||೧೭||**

ವಿಷಯವೂ ಸಂಶಯವೂ : 'ಯ ಏಷೋಽಕ್ಷಿಣಿ ಪುರುಷೋ ದೃಶ್ಯತ ಏಷ ಆತ್ಮೇತಿ ಹೋವಾಚೈತದಮೃತಮಭಯಮೇತದ್ಬ್ರಹ್ಮೇತಿ' (ಛಾಂ. ೪-೧೫-೧) ಎಂದು ಮುಂತಾಗಿರುವ ಉಪಕೋಸಲವಿದ್ಯೆಯ ವಾಕ್ಯದಲ್ಲಿ ಅಕ್ಷಿಯಲ್ಲಿರುವನೆಂದು ಹೇಳಿರುವ ಉಪಾಸ್ಯಪುರುಷನು ಛಾಯಾತ್ಮನೆ, ವಿಜ್ಞಾನಾತ್ಮನೆ, ದೇವತಾತ್ಮನೆ, ಅಥವಾ ಈಶ್ವರನೆ ?

ಪೂರ್ವಪಕ್ಷ : 'ದೃಶ್ಯತೇ' (ಕಾಣಿಸುತ್ತಾನೆ) ಎಂದು ಪ್ರಸಿದ್ಧವಾಗಿರುವದನ್ನು ಹೇಳಿರುವದರಿಂದ ಛಾಯಾತ್ಮನನ್ನೇ ಉಪಾಸನೆಮಾಡಬೇಕೆಂದು ಇಲ್ಲಿ ಹೇಳಿದೆ. ವಿಜ್ಞಾನಾತ್ಮನು ಕಣ್ಣಿನಿಂದ ರೂಪವನ್ನು ನೋಡುವದರಿಂದಲೂ ಆದಿತ್ಯಪುರುಷನು ರಶ್ಮಿಗಳಿಂದ ಕಣ್ಣಿನಲ್ಲಿರುವನೆಂದು ಶ್ರುತಿಯಲ್ಲಿರುವದರಿಂದಲೂ ಅವರನ್ನೂ ಬೇಕಾದರೆ ಅಕ್ಷಿಪುರುಷನೆಂದು ಭಾವಿಸಬಹುದು. ಕಣ್ಣೆಂಬ ಒಂದು ಗೊತ್ತಾದ ಸ್ಥಾನವನ್ನು ಹೇಳಿರುವದರಿಂದ ಇಲ್ಲಿ ಉಪಾಸ್ಯನೆಂದು ಹೇಳಿರುವ ಪುರುಷನು ಸರ್ವಗತನಾದ ಈಶ್ವರನಲ್ಲ.

ಸಿದ್ಧಾಂತ : ಆತ್ಮ, ಅಮೃತ, ಅಭಯ-ಎಂದು ಹೇಳಿರುವ ಗುಣಗಳು ಪರಮೇಶ್ವರನಿಗೆ ಮಾತ್ರ ಮುಖ್ಯವೃತ್ತಿಯಿಂದ ಹೊಂದುತ್ತವೆ. ಇಲ್ಲಿ ಅಕ್ಷಿಸ್ಥಾನವು ನಿರ್ಲೇಪವಾಗಿರುವದೆಂದು ಹೇಳಿರುವದು ಯಾವ ದೋಷವೂ ಇಲ್ಲದ ಪರಮೇಶ್ವರನಿಗೇ ಅನುಗುಣವಾಗಿದೆ. ಸಂಯದ್ವಾಮ, ವಾಮನೀ, ಭಾಮನೀ ಎಂಬ ವಿಶೇಷಣಗಳೂ ಆತನಿಗೇ ಹೊಂದುತ್ತವೆ. ಪರಮೇಶ್ವರನಿಗೆ ಹೇಳಿರುವ ಅನೇಕಸ್ಥಾನಗಳಲ್ಲಿ ಅಕ್ಷಿಯೂ ಒಂದು; ಪರಮಾತ್ಮನಿಗೆ ಉಪಾಧಿಯ ಸಂಬಂಧದಿಂದ ಸ್ಥಾನ, ನಾಮ, ರೂಪ- ಮುಂತಾದವುಗಳೆಲ್ಲವನ್ನೂ ಉಪಾಸನೆಗಾಗಿ ಹೇಳಿದರೆ ತಪ್ಪಿಲ್ಲ. ವಾಕ್ಯದ ಉಪಕ್ರಮದಲ್ಲಿ ಸುಖವಿಶಿಷ್ಟವಾದ ಬ್ರಹ್ಮವನ್ನೇ ಹೇಳಿರುವದರಿಂದಲೂ ಉಪಾಸನೆಗೆ ಬೇಕಾಗಿರುವ ಗತಿಯನ್ನು ಆಚಾರ್ಯನು

ಹೇಳುವನೆಂದು ಅಗ್ನಿಗಳು ಉಪಕೋಸಲನಿಗೆ ಹೇಳಿರುವದರಿಂದಲೂ ಇಲ್ಲಿ ಹೇಳಿರುವ ಗತಿಯು ಬ್ರಹ್ಮೋಪಾಸಕರಿಗೆ ಶ್ರುತಿಯಲ್ಲಿ ಹೇಳಿರುವ ದೇವ ಯಾನವೇ ಆಗಿರುವದರಿಂದಲೂ ಬ್ರಹ್ಮವೇ ಇಲ್ಲಿ ಉಪಾಸ್ಯನೆಂದು ಹೇಳಿದೆ ಎಂದು ನಿಶ್ಚಯವಾಗುತ್ತದೆ. ಛಾಯಾತ್ಮನು ಅಕ್ಷಿಯಲ್ಲಿ ಯಾವಾಗಲೂ ಇರುವದಿಲ್ಲ; ವಿಜ್ಞಾನಾತ್ಮನು ಶರೀರಕ್ಕೆಲ್ಲ ಸಂಬಂಧಪಟ್ಟವನಾದ್ದರಿಂದ ಬರಿಯ ಕಣ್ಣಿನಲ್ಲಿಯೇ ಇರುವನೆಂದು ಹೇಳುವದಕ್ಕಾಗುವದಿಲ್ಲ; ಆದಿತ್ಯನು ಆತ್ಮನಲ್ಲ. ಈ ಮೂವರಿಗೂ ಇಲ್ಲಿ ಹೇಳಿರುವ ಅಮೃತತ್ವಾದಿಗುಣಗಳು ಹೊಂದುವದಿಲ್ಲ; ಆದ್ದರಿಂದ ಈ ಉಪಕೋಸಲವಿದ್ಯೆಯಲ್ಲಿ ಅವರನ್ನು ಹೇಳಿಲ್ಲ. ಪ್ರಕೃತವಾಗಿರುವ ಬ್ರಹ್ಮಕ್ಕೇ ಅಕ್ಷಿಸ್ಥಾನವನ್ನೂ ಸಂಯದ್ವಾಮ ತ್ವಾದಿಗುಣಗಳನ್ನೂ ಹೇಳಿ ಅದನ್ನು ಇಲ್ಲಿ ಹಾಗೆಂದು ಉಪಾಸನೆಮಾಡಿ ದವರಿಗೇ ದೇವಯಾನಗತಿಯನ್ನು ಹೇಳಿದೆ ಎಂಬುದು ಯುಕ್ತ.

## ೫. ಅಂತರ್ಯಾಮ್ಯಧಿಕರಣ

ಅನ್ತರ್ಯಾಮ್ಯಧಿದೈವಾದಿಷು ತದ್ಧರ್ಮವ್ಯಪದೇಶಾತ್ ॥೧೮॥ ನ ಚ ಸ್ಮಾರ್ತಮತದ್ಧರ್ಮಾಭಿಲಾಪಾತ್ ॥೧೯॥ ಶಾರೀರ ಶ್ಚೋಭಯೇಽಪಿ ಹಿ ಭೇದೇನೈನಮಧೀಯತೇ ॥೨೦॥

**ವಿಷಯವೂ ಸಂಶಯವೂ :** 'ಯಃ ಪೃಥಿವ್ಯಾಂ ತಿಷ್ಠನ್ ಪೃಥಿವ್ಯಾ ಅನ್ತರೋ ಯಂ ಪೃಥಿವೀ ನ ವೇದ ಯಸ್ಯ ಪೃಥಿವೀ ಶರೀರಂ ಯಃ ಪೃಥಿವೀ ಮನ್ತರೋ ಯಮಯತ್ಯೇಷ ತ ಆತ್ಮಾನ್ತರ್ಯಾಮ್ಯಮೃತಃ' (ಬೃ. ೩-೭-೩) ಎಂದು ಮುಂತಾಗಿರುವ ವಾಕ್ಯಗಳಲ್ಲಿ ಹೇಳಿರುವ ಅಂತರ್ಯಾಮಿಯು ಆಯಾ ಅಭಿಮಾನಿಯಾದ ದೇವತಾತ್ಮನೊ, ಯಾವನಾದರೊಬ್ಬ ಯೋಗಿ ಯೊ, ಪರಮಾತ್ಮನೊ, ಅಥವಾ ಮತ್ತ ಯಾವನಾದರೊಬ್ಬನೊ ?

**ಪೂರ್ವಪಕ್ಷ :** ಅಂತರ್ಯಾಮಿ ಎಂಬ ಹೆಸರು ಅಪೂರ್ವವಾಗಿರುವದ ರಿಂದ ಯಾವನೋ ಒಬ್ಬ ಅಪ್ರಸಿದ್ಧಪುರುಷನನ್ನು ಇಲ್ಲಿ ಹೇಳಿದೆ. ಅಥವಾ ಆಯಾ ದೇವತೆಯೋ ಒಬ್ಬ ಯೋಗಿಯೋ ಪೃಥಿವ್ಯಾದಿಗಳನ್ನು ಕಟ್ಟಿನಲ್ಲಿಟ್ಟು ಕೊಂಡಿರುವವನಾಗಿರಬಹುದು. ಶರೀರೇಂದ್ರಿಯಗಳಿಲ್ಲದ ಪರಮೇಶ್ವರನು ಅಂತರ್ಯಾಮಿಯಾಗಲಾರನು.

ಸಿದ್ಧಾಂತ : ಪರಮಾತ್ಮನು ಎಲ್ಲಕ್ಕೂ ಕಾರಣನಾಗಿರುವದರಿಂದ ಎಲ್ಲವನ್ನೂ ಕಟ್ಟಿನಲ್ಲಿಟ್ಟುಕೊಂಡಿರುತ್ತಾನೆಂದು ಹೇಳುವದು ಯುಕ್ತವಾಗಿದೆ. ಅವನು ಆತ್ಮನು, ಅಮೃತನು ಎಂದು ಹೇಳಿರುವದರಿಂದಲೂ ದೇವತೆಗಳಿಗೂ ಅವಿಜ್ಞೇಯನೆಂದಿರುವದರಿಂದಲೂ ಅದೃಷ್ಟತ್ವವೇ ಮುಂತಾದ ಧರ್ಮಗಳನ್ನು ಹೇಳಿರುವದರಿಂದಲೂ ಮತ್ತೆ ಯಾರೂ ಅಂತರ್ಯಾಮಿಯಾಗಲಾರರು. ಪರಮಾತ್ಮನಿಗೆ ಬೇರೆ ಕಾರ್ಯಕರಣಗಳು ಇಲ್ಲವಾದರೂ ಆವರವರ ಕಾರ್ಯಕರಣಗಳನ್ನು ಪಯೋಗಿಸಿಕೊಂಡೇ ಅ ವ ರ ವ ರ ನ್ನು ನಿಯಮಿಸಬಹುದು. ಪ್ರಧಾನದಲ್ಲಿ ಅದೃಷ್ಟತ್ವವೇ ಮುಂತಾದ ಗುಣಗಳಿದ್ದರೂ ಇಲ್ಲಿ ಹೇಳಿರುವ ದ್ರಷ್ಟೃತ್ವಾದಿಗಳಿಲ್ಲ ; ಶಾರೀರನಲ್ಲಿ ದ್ರಷ್ಟೃತ್ವಾದಿಗಳಿದ್ದರೂ ಅವನಲ್ಲಿಯೂ ಒಳಗಿದ್ದುಕೊಂಡು ಅವನನ್ನೂ ಅಂತರ್ಯಾಮಿಯು ನಿಯಮಿಸುತ್ತಾನೆಂದು ಇಲ್ಲಿ ಹೇಳಿದೆ. ಆದ್ದರಿಂದ ಈಶ್ವರನೇ ಇಲ್ಲಿ ಅಂತರ್ಯಾಮಿ ಎಂದು ತಿಳಿಯಬೇಕು.

## ೬. ಅದೃಶ್ಯತ್ವಾಧಿಕರಣ

ಅದೃಶ್ಯತ್ವಾದಿಗುಣಕೋ ಧರ್ಮೋಕ್ತೇಃ ||೨೧|| ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ |೨೨| ರೂಪೋಪನ್ಯಾಸಾಚ್ಚ ||೨೩||

ವಿಷಯವೂ ಸಂಶಯವೂ : 'ಅಥ ಪರಾ ಯಯಾ ತದಕ್ಷರಮಧಿಗಮ್ಯತೇ ಯತ್ತದದ್ರೇಶ್ಯಮಗ್ರಾಹ್ಯಮಗೋತ್ರಮ್.... ತದವ್ಯಯಂ ಯದ್ಭೂತಯೋನಿಂ ಪರಿಪಶ್ಯನ್ತಿ ಧೀರಾಃ' (ಮುಂ. ೧-೧-೫, ೬) ಎಂಬ ವಾಕ್ಯದಲ್ಲಿರುವ ಅದೃಶ್ಯತ್ವಾದಿಗುಣಗಳುಳ್ಳ ಭೂತಯೋನಿಯು ಪ್ರಧಾನವೊ, ಶಾರೀರನೊ, ಅಥವಾ ಪರಮೇಶ್ವರನೊ ?

ಪೂರ್ವಪಕ್ಷ : ಭೂತಯೋನಿಗೆ ಅಚೇತನವಾದ ಜೇಡರಹುಳು, ಮನುಷ್ಯಶರೀರ- ಇವನ್ನೇ ದೃಷ್ಟಾಂತವಾಗಿ ಕೊಟ್ಟಿರುವದರಿಂದಲೂ ಅದೃಶ್ಯತ್ವವೇ ಮುಂತಾದ ಧರ್ಮಗಳೆಲ್ಲವೂ ಪ್ರಧಾನಕ್ಕೆ ಹೊಂದುವದರಿಂದಲೂ ಚೇತನಧರ್ಮವನ್ನು ಹೇಳುವ ಸರ್ವಜ್ಞನೆಂಬ ವಿಶೇಷಣವು ಮುಂದೆ 'ಅಕ್ಷರಾತ್ ಪರತಃ ಪರಃ' (ಮುಂ. ೨-೧-೨) ಎಂಬ ವಾಕ್ಯದಲ್ಲಿರುವ ಅಕ್ಷರವಾದ

ಪ್ರಧಾನಕ್ಕಿಂತಲೂ ಹೆಚ್ಚಿನ ಮತ್ತೊಂದು ತತ್ತ್ವಕ್ಕೆ ಹೊಂದುವದರಿಂದಲೂ ಪ್ರಧಾನವೇ ಇಲ್ಲಿ ಭೂತಯೋನಿಯಾದ ಅಕ್ಷರವು; ಅಥವಾ ಭೂತಯೋನಿ ಎಂದರೆ ಭೂತಗಳಿಗೆ ನಿಮಿತ್ತಕಾರಣನು ಎಂದು ಅರ್ಥಮಾಡಿದರೆ ಧರ್ಮಾಧರ್ಮಗಳಿಂದ ಭೂತಗಳಿಗೆ ಕಾರಣನಾಗಿರುವ ಶಾರೀರನೇ ಭೂತಯೋನಿಯಾಗಬಹುದು.

ಸಿದ್ಧಾಂತ: ಸರ್ವಜ್ಞನೆಂಬ ವಿಶೇಷಣವು ಹುಟ್ಟುವದಕ್ಕೆಲ್ಲ ಕಾರಣವಾಗಿರುವ ಪ್ರಕೃತವಾದ ಅಕ್ಷರವನ್ನೇ ಹೇಳುತ್ತಿರುವದರಿಂದ ಈ ಭೂತಯೋನಿಯು ಪ್ರಧಾನವಲ್ಲ. ಇದನ್ನು ತಿಳಿಸುವ ವಿದ್ಯೆಯನ್ನು 'ಪರವಿದ್ಯೆ', 'ಬ್ರಹ್ಮವಿದ್ಯೆ' ಎಂದು ಕರೆದಿರುವದರಿಂದಲೂ 'ಅಕ್ಷರಾತ್ ಪರತಃ ಪರಃ' (ಮುಂ. ೨–೧–೨) ಎಂಬ ವಾಕ್ಯದಲ್ಲಿ ಪ್ರಕೃತವಾದ ಭೂತಯೋನಿಯು ಪ್ರಧಾನಕ್ಕಿಂತಲೂ ಬೇರೆಯಾಗಿದೆಯೆಂದೂ 'ಅಪ್ರಾಣೋ ಹ್ಯಮನಾಃ' (ಮುಂ. ೨–೧–೨) ಎಂಬ ವಾಕ್ಯದಲ್ಲಿ ಶಾರೀರನಿಗಿಂತ ಬೇರೆಯಾಗಿದೆಯೆಂದೂ ತಿಳಿಸಿರುವದರಿಂದಲೂ 'ಅಗ್ನಿರ್ಮೂರ್ಧಾ' (ಮುಂ. ೨–೧–೪) ಎಂಬ ವಾಕ್ಯದಲ್ಲಿ ಅಥವಾ 'ಪುರುಷ ಏವೇದಂ ವಿಶ್ವಂ ಕರ್ಮ' (ಮುಂ. ೨–೩–೧೦) ಎಂಬ ವಾಕ್ಯದಲ್ಲಿ ಈ ಭೂತಯೋನಿಯು ಸರ್ವಾತ್ಮಕವಾಗಿರುವದೆಂದು ರೂಪೋಪನ್ಯಾಸವನ್ನು ಮಾಡಿರುವದರಿಂದಲೂ ಈ ಭೂತಯೋನಿಯು ಪರಮೇಶ್ವರನೇ, ಪ್ರಧಾನವಲ್ಲ, ಶಾರೀರನೂ ಅಲ್ಲ–ಎಂದು ತಿಳಿಯಬೇಕು.

## ೭. ವೈಶ್ವಾನರಾಧಿಕರಣ

**ವೈಶ್ವಾನರಃ ಸಾಧಾರಣಶಬ್ದವಿಶೇಷಾತ್ ॥೨೪॥ ಸ್ಮರ್ಯಮಾಣಮನುಮಾನಂ ಸ್ಯಾದಿತಿ ॥೨೫॥ ಶಬ್ದಾದಿಭ್ಯೋಽನ್ತಃಪ್ರತಿಷ್ಠಾನಾನ್ನೇತಿ ಚೇನ್ನ ತಥಾ ದೃಷ್ಟ್ಯುಪದೇಶಾದಸಂಭವಾತ್ ಪುರುಷಮಪಿ ಚೈನಮಧೀಯತೇ ॥೨೬॥ ಅತ ಏವ ನ ದೇವತಾಭೂತಂ ಚ ॥೨೭॥ ಸಾಕ್ಷಾದಪ್ಯವಿರೋಧಂ ಜೈಮಿನಿಃ ॥೨೮॥ ಅಭಿವ್ಯಕ್ತೇರಿತ್ಯಾಶ್ಮರಥ್ಯಃ ॥೨೯॥ ಅನುಸ್ಮೃತೇರ್ಬಾದರಿಃ ॥೩೦॥ ಸಂಪತ್ತೇರಿತಿ ಜೈಮಿನಿಸ್ತಥಾ ಹಿ ದರ್ಶಯತಿ ॥೩೧॥ ಆಮನನ್ತಿ ಚೈನಮಸ್ಮಿನ್ ॥೩೨॥**

ವಿಶಯವೂ ಸಂಶಯವೂ : ಛಾಂದೋಗ್ಯದಲ್ಲಿರುವ 'ಯಸ್ತ್ವೇತ ಮೇವಂ ಪ್ರಾದೇಶಮಾತ್ರಮಭಿವಿಮಾನಮಾತ್ಮಾನಂ ವೈಶ್ವಾನರಮುಪಾಸ್ತೇ ಸ ಸರ್ವೇಷು ಲೋಕೇಷು ಸರ್ವೇಷು ಭೂತೇಷು ಸರ್ವೇಷ್ವಾತ್ಮಸ್ವನ್ನಮತ್ತಿ || ತಸ್ಯ ಹ ವಾ ಏತಸ್ಯಾತ್ಮನೋ ವೈಶ್ವಾನರಸ್ಯ ಮೂರ್ಧೈವ ಸುತೇಜಾಶ್ಚಕ್ಷು ರ್ವಿಶ್ವರೂಪಃ ಪ್ರಾಣಃ ಪೃಥಗ್ವರ್ತ್ಮಾತ್ಮಾ ಸಂದೇಹೋ ಬಹುಲೋ ಬಸ್ತಿರೇವ ರಯಿಃ ಪೃಥಿವ್ಯೇವ ಪಾದಾವುರ ಏವ ವೇದಿರ್ಲೋಮಾನಿ ಬರ್ಹಿರ್ಹೃದಯಂ ಗಾರ್ಹಪತ್ಯೋ ಮನೋಽನ್ವಾಹಾರ್ಯಪಚನ ಆಸ್ಯಮಾಹವನೀಯಃ' (ಛಾಂ. ೫–೧೮–೧, ೨) ಎಂಬ ವಾಕ್ಯದಲ್ಲಿರುವ ವೈಶ್ವಾನರನು ಜಾಠರಾಗ್ನಿ ಯೊ, ದೇವತೆಯೊ, ಶಾರೀರನೊ, ಅಥವಾ ಪರಮೇಶ್ವರನೊ ?

ಪೂರ್ವಪಕ್ಷ : ವೈಶ್ವಾನರ ಎಂಬ ಶಬ್ದವನ್ನು ಜಾಠರಾಗ್ನಿ, ಭೂತಾಗ್ನಿ, ಅಗ್ನಿದೇವತೆ– ಈ ಮೂರಕ್ಕೂ ವೇದದಲ್ಲಿ ಪ್ರಯೋಗಿಸಿದೆ. ಆದ್ದರಿಂದ ಅವು ಗಳಲ್ಲಿ ಒಂದು ವೈಶ್ವಾನರನಾಗಬಹುದು. ಇಲ್ಲಿ 'ಕೋ ನ ಆತ್ಮಾ' (ನಮ್ಮ ಆತ್ಮನು ಯಾರು?) ಎಂದು (ಛಾಂ. ೫–೧೧–೧) ಆತ್ಮಶಬ್ದದಿಂದ ಉಪಕ್ರಮಿ ಸಿರುವದರಿಂದಲೂ ಪ್ರಾದೇಶಮಾತ್ರ (ಗೇಣುದ್ದದವನು) ಎಂಬ ವಿಶೇಷಣ ವಿರುವದರಿಂದಲೂ ಶಾರೀರನಾದರೂ ಆಗಬಹುದು. ವೈಶ್ವಾನರ, ಅಗ್ನಿ–ಎಂಬ ಶಬ್ದಗಳು, ಗಾರ್ಹಪತ್ಯವೇ ಮುಂತಾದ ಅಗ್ನಿತ್ರಯವನ್ನು ಕಲ್ಪಿಸಿರುವದು, ಪ್ರಾಣಾಹುತಿಗೆ ಅಧಿಕರಣವೆಂದು ಹೇಳಿರುವದು– ಎಂಬೀ ಕಾರಣಗಳಿಂದಲೂ ವೈಶ್ವಾನರನು ಪುರುಷನ ಒಳಗೆ ಇದ್ದುಕೊಂಡಿರುವನು ಎಂಬುದು ಹೊಂದದಿರು ವದರಿಂದಲೂ ವೈಶ್ವಾನರನು ಪರಮೇಶ್ವರನಲ್ಲ.

ಸಿದ್ಧಾಂತ : 'ಮೂರ್ಧೈವ ಸುತೇಜಾಃ' (ಸುತೇಜಸ್ಸ್ವಗುಣದಿಂದ ಕೂಡಿದ ದ್ಯುಲೋಕವೇ ಮೂರ್ಧವು) ಎಂದು ಮುಂತಾಗಿರುವ ವಿಶೇಷಣವು ಸರ್ವಕಾರಣನಾಗಿರುವ ಪರಮೇಶ್ವರನಿಗೇ ಹೊಂದುತ್ತದೆ ; ಪರಮೇಶ್ವರನಿಗೇ ಈ ಬಗೆಯ ಸರ್ವಾತ್ಮತ್ವವನ್ನು ಸ್ಮೃತಿಯಲ್ಲಿ ವರ್ಣಿಸಿರುತ್ತದೆ. ಪುರುಷ ನೊಳಗಿರುವನೆಂಬುದು ಜಾಠರಾಗ್ನಿಪ್ರತೀಕನಾದ ಅಥವಾ ಜಾಠರಾಗ್ನ್ಯು ಪಾಧಿಕನಾದ ಪರಮೇಶ್ವರನಿಗೂ ಉಪಾಸನೆಯ ನಿಮಿತ್ತದಿಂದ ಆಗಬಹು ದಾಗಿದೆ. ಅವನು ಪುರುಷವಿಧನೆಂದು ಆದೇ (ಶತ. ಬ್ರಾ.) ಶ್ರುತಿಯಲ್ಲಿರುವ

ವಿಶೇಷಣವು ಪರಮೇಶ್ವರನಿಗೆ ಮಾತ್ರ ಹೊಂದುತ್ತದೆ ; ಏಕೆಂದರೆ ಅಧಿದೈವತ ವಾಗಿಯೂ ಅಧ್ಯಾತ್ಮವಾಗಿಯೂ ಪರಮೇಶ್ವರನು ಮೂರ್ಧಾದಿಗಳ ಮೂಲಕ ಪುರುಷವಿಧನಾಗಿರುತ್ತಾನೆ. ಪುರುಷಾವಯವಗಳಲ್ಲಿ ಕಲ್ಪಿತವಾಗಿರುವ ಪರ ಮೇಶ್ವರನ ಪುರುಷವಿಧತ್ವವನ್ನು ತಿಳಿಸುವದಕ್ಕೆ ಅಥವಾ ಪುರುಷವಿಧತ್ವೋ ಪಾಧಿಯುಳ್ಳ ಪರಮೇಶ್ವರನ ಸಾಕ್ಷಿರೂಪವನ್ನೇ ತಿಳಿಸುವದಕ್ಕೆ 'ಪುರುಷವಿಧಂ ಪುರುಷೇಽನ್ತಃಪ್ರತಿಷ್ಠಿತಂ ವೇದ' ಎಂದು ಶ್ರುತ್ಯಂತರದಲ್ಲಿ ಹೇಳಿದೆ ಎಂದು ಕೂಡ ಶ್ರವಾದಿಸಬಹುದು. ಇನ್ನು 'ಪ್ರಾದೇಶಮಾತ್ರ'ನೆಂಬ ಶ್ರುತಿಯು, ಪ್ರಾದೇಶಮಾತ್ರವಾದ ಪರಿಮಾಣದಿಂದ ಪರಮೇಶ್ವರನು ಉಪಾಸಕರಿಗೆ ಅಭಿವ್ಯಕ್ತನಾಗುವದರಿಂದ ಅಥವಾ ಹೃದಯಾದಿಪ್ರದೇಶಗಳಲ್ಲಿ ಅಭಿವ್ಯಕ್ತ ನಾಗುವದರಿಂದ ಹೊಂದುವದೆಂದಾಗಲಿ, ಪ್ರಾದೇಶಮಾತ್ರವಾದ ಹೃದಯ ದಲ್ಲಿರುವ ಮನಸ್ಸಿನಿಂದ ಸ್ಮರಣೆಮಾಡಲ್ಪಡುವದರಿಂದ ಹೊಂದುವದೆಂದಾಗಲಿ, ಜಾಬಾಲಶ್ರುತಿಯಲ್ಲಿ ಹೇಳಿರುವಂತೆ ವೈಶ್ವಾನರಾವಯವಗಳನ್ನು ಪುರುಷನ ಮೂರ್ಧಾದಿಚುಬುಕಾಂತಾವಯವಗಳಲ್ಲಿ ಸಂಪಾದನೆಮಾಡಿ ಉಪಾಸನೆ ಮಾಡಬೇಕೆಂಬುದರಿಂದ ಹೊಂದುವದೆಂದಾಗಲಿ, ಕಲ್ಪಿಸಬಹುದು. ಆದ್ದರಿಂದ ಪ್ರಕೃತವಾಕ್ಯದಲ್ಲಿ ಉಪಸಂಹಾರಮಾಡಬೇಕೆಂದು ಹೇಳಿರುವ ವೈಶ್ವಾನರನು ಪರಮೇಶ್ವರನೇ.

## ಮೂರನೆಯ ಪಾದ

## ೧. ದ್ಯುಭ್ವಾದ್ಯಧಿಕರಣ

**ದ್ಯುಭ್ವಾದ್ಯಾಯತನಂ ಸ್ವಶಬ್ದಾತ್ ||೧|| ಮುಕ್ತೋಪಸೃಪ್ಯ ವ್ಯಪದೇಶಾತ್ ||೨|| ನಾನುಮಾನಮತಚ್ಛಬ್ದಾತ್ ||೩|| ಪ್ರಾಣ ಭೃಚ್ಚ ||೪|| ಭೇದವ್ಯಪದೇಶಾತ್ ||೫|| ಪ್ರಕರಣಾತ್ ||೬|| ಸ್ಥಿತ್ಯದನಾಭ್ಯಾಂ ಚ ||೭||**

**ವಿಷಯವೂ ಸಂಶಯವೂ :** 'ಯಸ್ಮಿನ್ ದ್ಯೌಃ ಪೃಥಿವೀ ಚಾನ್ತ ರಿಕ್ಷಮ್....' (ಮುಂ. ೨-೨-೫) ಎಂಬ ಮುಂಡಕವಾಕ್ಯದಲ್ಲಿ ದ್ಯುಲೋಕಾದಿ

ಗಳಿಗೆ ಆಶ್ರಯವೆಂದು ಹೇಳಿರುವದು ಪರಬ್ರಹ್ಮವೋ, ಬೇರೊಂದು ಪದಾರ್ಥವೋ ?

ಪೂರ್ವಪಕ್ಷ : ಇದನ್ನು ಸೇತುವೆಂದು ಕರೆದಿರುವದರಿಂದ ಇದು ಬ್ರಹ್ಮವಾಗಲಾರದು. ಎಲ್ಲಕ್ಕೂ ಕಾರಣನೆಂದು ಸಾಂಖ್ಯರು ಒಪ್ಪಿರುವ ಪ್ರಧಾನ, ಅಥವಾ ಎಲ್ಲವನ್ನೂ ಹಿಡಿದೆತ್ತಿರುವನೆಂದು ಶ್ರುತಿಯಲ್ಲಿ ಹೇಳಿರುವ ಸಮಷ್ಟಿವಾಯು ಅಥವಾ ಭೋಕ್ತೃವಾದ ಶಾರೀರ–ಇವುಗಳಲ್ಲಿ ಯಾವದೋ ಒಂದನ್ನು ಇಲ್ಲಿ ಹೇಳಿದೆ ಎನ್ನಬಹುದು.

ಸಿದ್ಧಾಂತ : ಇಲ್ಲಿ 'ತಮೇವೈಕಂ ಜಾನಥ ಆತ್ಮಾನಮ್' ಎಂದು ಆತ್ಮಶಬ್ದವಿರುವದರಿಂದಲೂ ಸದ್ರೂಪವಾದ ಬ್ರಹ್ಮವೇ ಜಗತ್ತಿಗೆ ಆಶ್ರಯವೆಂದು ಛಾಂದೋಗ್ಯದಲ್ಲಿ ಹೇಳಿರುವದರಿಂದಲೂ ಇದು ಬ್ರಹ್ಮವೇ. ಇಲ್ಲಿ ಆಶ್ರಯಾಶ್ರಯಿಭಾವವು ವಿವಕ್ಷಿತವಾಗಿಲ್ಲ; ಕಾರ್ಯಪ್ರಪಂಚವನ್ನು ಲಯಮಾಡಿ ಆತ್ಮನೊಬ್ಬನನ್ನೇ ತಿಳಿದುಕೊಳ್ಳಬೇಕೆಂದು ಹೇಳಿದೆ. ಸೇತು ಎಂಬುದು ಎಲ್ಲವನ್ನೂ ತಡೆದಿಟ್ಟಿರುವದೆಂಬ ಬ್ರಹ್ಮಧರ್ಮವನ್ನು ಹೇಳುತ್ತದೆ; ಅಥವಾ ಆತ್ಮಜ್ಞಾನವನ್ನೂ ಅನಾತ್ಮಗಳ ಮಾತನ್ನು ಬಿಡುವಿಕೆಯನ್ನೂ ಅಮೃತಕ್ಕೆ ಸೇತು ಎಂದು ಹೇಳಿದೆ. ಆದ್ದರಿಂದ ಸೇತುಶ್ರುತಿಯು ಬ್ರಹ್ಮವಾದಕ್ಕೆ ಅಡ್ಡಿಯಲ್ಲ. ರಾಗಾದಿಕ್ಲೇಶಗಳಿಂದ ಮುಕ್ತರಾದವರೇ ಇದನ್ನು ಪಡೆದುಕೊಳ್ಳಬಹುದೆಂದು ಹೇಳಿರುವದರಿಂದಲೂ ಇದು ಬ್ರಹ್ಮವೇ. ಚೇತನವಾದ ಪ್ರಧಾನವನ್ನು ತಿಳಿಸುವ ಶಬ್ದವು ಯಾವದೂ ಇಲ್ಲಿಲ್ಲ; ಅಚೇತನವನ್ನು ತಿಳಿಸುವ ಸರ್ವಜ್ಞನೆಂಬ ಶಬ್ದವು ಇದೆ. ಆದ್ದರಿಂದ ಇದು ಪ್ರಧಾನವಲ್ಲ. ವಾಯುವಾಚಕವಾದ ಶಬ್ದವು ಯಾವದೂ ಇಲ್ಲದ್ದರಿಂದ ಇದು ವಾಯುವೂ ಅಲ್ಲ. ಜೀವನನ್ನು ಅನುವಾದಮಾಡಿಕೊಂಡು ಅವನಿಗಿಂತ ಬೇರೆಯಾಗಿರುವ ಈಶ್ವರನನ್ನು ಹೇಳಿರುವದರಿಂದ ಇಲ್ಲಿ ಜೀವನನ್ನೂ ಹೇಳಿಲ್ಲ.

## ೨. ಭೂಮಾಧಿಕರಣ

**ಭೂಮಾ ಸಂಪ್ರಸಾದಾದಧ್ಯುಪದೇಶಾತ್ ||೮|| ಧರ್ಮೋಪಪತ್ತೇಶ್ಚ ||೯||**

**ವಿಷಯವೂ ಸಂಶಯವೂ :** ಛಾಂದೋಗ್ಯದಲ್ಲಿ 'ಯತ್ರ ನಾನ್ಯತ್

ಪಶ್ಯತಿ ನ್ಯಾಚ್ಛೃಣೋತಿ' ಎಂಬ ವಾಕ್ಯದಲ್ಲಿ ಹೇಳಿರುವ ಭೂಮವು ಪ್ರಾಣನೊ, ಪರಬ್ರಹ್ಮವೊ ?

**ಪೂರ್ವಪಕ್ಷ :** ಇಲ್ಲಿ ಒಂದಕ್ಕಿಂತ ಒಂದು ಹೆಚ್ಚಿನವನ್ನು ಕೇಳುತ್ತಲೂ ಹೇಳುತ್ತಲೂ ಬಂದಿದೆ. ಪ್ರಾಣನನ್ನು ಹೇಳಿದಮೇಲೆ ಪ್ರಾಣನಿಗಿಂತ ಹೆಚ್ಚಿನದು ಇದೆಯೆ ? ಎಂದು ಕೇಳಿಲ್ಲ ; ಇಂಥದ್ದೊಂದು ಇದೆ ಎಂದು ಉತ್ತರವನ್ನೂ ಕೊಟ್ಟಿಲ್ಲ. ಭೂಮಕ್ಕೆ ಹೇಳಿರುವ ದ್ವಿತೀಯವಸ್ತುವಿಲ್ಲದಿರುವದೇ ಮುಂತಾದ ಧರ್ಮಗಳು ಸುಷುಪ್ತ್ಯವಸ್ಥೆಯಲ್ಲಿರುವ ಪ್ರಾಣನಿಗೂ ಹೊಂದುತ್ತದೆ. ಆದ್ದರಿಂದ ಪ್ರಾಣನೇ ಭೂಮವು.

**ಸಿದ್ಧಾಂತ :** ನಾಮಾದಿಗಳಿಗಿಂತ ಮುಂದೆ ಹೇಳಿರುವ ವಾಕ್ಕು ಮುಂತಾದವುಗಳು ಅದಕ್ಕಿಂತ ಬೇರೆಯಾಗಿರುವಂತೆ ಪ್ರಾಣನಿಗಿಂತ ಮುಂದೆ ಹೇಳಿರುವ ಭೂಮವು ಪ್ರಾಣನಿಗಿಂತ ಬೇರೆಯಾಗಿರಬೇಕೆಂದು ಏರ್ಪಡುತ್ತದೆ. 'ಏಷ ತು ವಾ ಅತಿವದತಿ ಯಃ ಸತ್ಯೇನಾತಿವದತಿ' ಎಂಬ ವಾಕ್ಯದಲ್ಲಿ ಹೇಳಿರುವ ಅತಿವಾದಿತ್ವವು ಸತ್ಯದಿಂದ ಅತಿವಾದಿಯಾಗಿರುವವನಿಗೆ ಹೊಂದುತ್ತದೆಯೇ ಹೊರತು ಪ್ರಾಣವಿಜ್ಞಾನಿಗೆ ಹೊಂದುವದಿಲ್ಲ. ಇಲ್ಲಿ 'ತು' ಎಂಬ ಶಬ್ದವು ಪ್ರಕರಣಭೇದವನ್ನು ಸೂಚಿಸುತ್ತದೆ. ಇಲ್ಲಿ ಹೇಳಿರುವ ಆತ್ಮತ್ವಾದಿಗಳೂ ಶೋಕನಾಶಕತ್ವವೂ ಮಿಕ್ಕ ಧರ್ಮಗಳೂ ಪರಮಾತ್ಮನಿಗೇ ಹೊಂದುತ್ತವೆ. ಆದ್ದರಿಂದ ಭೂಮವು ಪರಮಾತ್ಮನೇ

## ೩. ಅಕ್ಷರಾಧಿಕರಣ

**ಅಕ್ಷರಮಂಬರಾಂತಧೃತೇಃ ||೧೦|| ಸಾ ಚ ಪ್ರಶಾಸನಾತ್ ||೧೧|| ಅನ್ಯಭಾವವ್ಯಾವೃತ್ತೇಶ್ಚ ||೧೨**

**ವಿಷಯವೂ ಸಂಶಯವೂ :** ಬೃಹದಾರಣ್ಯಕದ 'ಸ ಹೋವಾಚೈತದ್ವೈ ತದಕ್ಷರಂ ಗಾರ್ಗಿ' (೩-೮-೮) ಎಂಬ ವಾಕ್ಯದಲ್ಲಿ ಹೇಳಿರುವ ಅಕ್ಷರವು ಓಂಕಾರವೆ, ಪರಮೇಶ್ವರನೆ ?

ಪೂರ್ವಪಕ್ಷ : ಅಕ್ಷರಶಬ್ದವು ವರ್ಣದಲ್ಲಿ ರೂಢವಾಗಿರುವದರಿಂದಲೂ ಓಂಕಾರವನ್ನು ಶ್ರುತಿಯಲ್ಲಿ ಉಪಾಸನೆಗಾಗಿ ಸರ್ವಾತ್ಮಕವೆಂದು ಹೊಗಳಿರುವದು ಕಂಡುಬರುವದರಿಂದಲೂ ಓಂಕಾರವೇ ಈ ಅಕ್ಷರವು.

ಸಿದ್ಧಾಂತ : ಅವ್ಯಾಕೃತಾಕಾಶದವರೆಗಿನದೆಲ್ಲವೂ ಈ ಅಕ್ಷರದಲ್ಲಿ ಓತಪ್ರೋತವಾಗಿರುವದೆಂದು ಹೇಳಿರುವದರಿಂದ ಬ್ರಹ್ಮವೇ ಅಕ್ಷರವು. ಓಂಕಾರವನ್ನು ಸರ್ವಾತ್ಮಕವೆಂದು ಶ್ರುತಿಯಲ್ಲಿ ಹೊಗಳಿರುವದು ನಿಜ; ಆದರೆ ಹಾಗೆ ಹೊಗಳಿರುವದು ಓಂಕಾರವು ಬ್ರಹ್ಮಜ್ಞಾನಕ್ಕೆ ಉಪಾಯವೆಂಬ ಕಾರಣದಿಂದ ನಾಶವಾಗುವದಲ್ಲ, ಎಲ್ಲವನ್ನೂ ವ್ಯಾಪಿಸಿಕೊಂಡಿದೆ- ಎಂಬರ್ಥದಲ್ಲಿ ಅಕ್ಷರ ಎಂಬ ಹೆಸರು ಬ್ರಹ್ಮಕ್ಕೂ ಸಲ್ಲುತ್ತದೆ. ಸೂರ್ಯಚಂದ್ರಾದಿಗಳನ್ನೂ ಇದು ತನ್ನ ಅಪ್ಪಣೆಯಂತೆ ನಡೆಸುತ್ತದೆ ಎಂದು ಹೇಳಿರುವದರಿಂದ ಇದು ಚೇತನವು, ಅಚೇತನವಾದ ಪ್ರಧಾನವಲ್ಲ. 'ಇದಕ್ಕಿಂತ ಬೇರೆ ದ್ರಷ್ಟೃವಿಲ್ಲ' ಎಂದು ಆತ್ಮಭೇದವನ್ನು ಅಲ್ಲಗಳೆದಿರುವದರಿಂದಲೂ ಚಕ್ಷುರಾದಿಗಳಿಲ್ಲವೆಂದು ಉಪಾಧಿಗಳನ್ನು ಅಲ್ಲಗಳೆದಿರುವದರಿಂದಲೂ ಇದು ಜೀವನೂ ಅಲ್ಲ.

## ೪. ಈಕ್ಷತಿಕರ್ಮವ್ಯಪದೇಶಾಧಿಕರಣ

**ಈಕ್ಷತಿಕರ್ಮವ್ಯಪದೇಶಾತ್ ಸಃ ॥೧೩॥**

**ವಿಷಯವೂ ಸಂಶಯವೂ :** 'ಯಃ ಪುನರೇತಂ ತ್ರಿಮಾತ್ರೇಣೋಮಿತ್ಯೇತೇನೈವಾಕ್ಷರೇಣ ಪರಂ ಪುರುಷಮಭಿಧ್ಯಾಯೀತ' (ಪ್ರ. ೫-೫) ಎಂಬ ಪ್ರಶ್ನೋಪನಿಷತ್ತಿನ ವಾಕ್ಯದಲ್ಲಿ ಅಭಿಧ್ಯಾನಕ್ಕೆ ಕರ್ಮವು ಪರಬ್ರಹ್ಮವೊ, ಅಪರಬ್ರಹ್ಮವೊ ?

**ಪೂರ್ವಪಕ್ಷ :** ಇದು ಅಪರಬ್ರಹ್ಮವೇ. ಏಕೆಂದರೆ ಸೂರ್ಯನಲ್ಲಿ ಸೇರಿಕೊಳ್ಳುವದು, ಬ್ರಹ್ಮಲೋಕಕ್ಕೆ ಹೋಗುವದು- ಎಂಬ ದೇಶಪರಿಚ್ಛಿನ್ನವಾದ ಫಲವನ್ನು ಇಲ್ಲಿ ಹೇಳಿರುತ್ತದೆ. "ಪರಂ ಪುರುಷಮ್* ಎಂಬಲ್ಲಿ ಪರ ಎಂಬ ವಿಶೇಷಣವಿರುವದು ನಿಜ ; ಆದರೆ ವಿರಾಟ್ಪುರುಷನ ಅಪೇಕ್ಷೆಯಿಂದ ಅಪರಬ್ರಹ್ಮವೂ ಪರವೆನಿಸಬಹುದಾಗಿದೆ.

**ಸಿದ್ಧಾಂತ :** ಇದು ಪರಬ್ರಹ್ಮವೇ. ಏಕೆಂದರೆ 'ಪರಾತ್ಪರಂ ಪುರುಷಮೀಕ್ಷತೇ' (೫-೫) ಎಂದು ನೋಡುವದೆಂಬ ಕ್ರಿಯೆಗೆ ಕರ್ಮವೆಂದು ಪುರುಷ

11

ನನ್ನು ಹೇಳಿರುತ್ತದೆ. ಜೀವಘನನಾದ ಪರನಿಗಿಂತ ಪರನಾದ ಪುರುಷನನ್ನು ಕಾಣುತ್ತಾನೆ' ಎಂಬ ವಾಕ್ಯವಿದೆಯಷ್ಟೆ ; ಅದಕ್ಕೆ ಜೀವಘನನಿಗಿಂತ ಅಥವಾ ಬ್ರಹ್ಮಲೋಕಕ್ಕಿಂತ ಹೆಚ್ಚಿನವನಾದ ಪುರುಷನನ್ನು ಕಾಣುತ್ತಾನೆ ಎಂದರ್ಥ. ಫಲವಾಕ್ಯದಲ್ಲಿ 'ಪರಪುರುಷನನ್ನು ಕಾಣುತ್ತಾನೆ' ಎಂದು ಹೇಳಿರುವದರಿಂದ ಅವನನ್ನೇ ಅಭಿಧ್ಯಾನಮಾಡಬೇಕೆಂದು ಪ್ರಕೃತಶ್ರುತಿಯಲ್ಲಿ ಹೇಳಿದೆ ಎಂದು ತಿಳಿಯುವದೇ ಯುಕ್ತ. ಓಂಕಾರದ ಮೂಲಕವಾಗಿ ಮಾಡುವ ಧ್ಯಾನ ವಿದ್ದರಿಂದ, ಬ್ರಹ್ಮಲೋಕಕ್ಕೆ ಹೋಗಿ ಅತ ಜ್ಞಾನವನ್ನು ಪಡೆದು ಕ್ರಮ ಮುಕ್ತಿಯನ್ನು ಪಡೆದುಕೊಳ್ಳುತ್ತಾನೆ. ಆದ್ದರಿಂದ ಇಲ್ಲಿ ದೇಶಸಂಬಿಚ್ಛಿನ್ನ ವಾದ ಫಲವನ್ನು ಹೇಳಿರುವದು ಸಿದ್ಧಾಂತಕ್ಕೆ ವಿರುದ್ಧವಲ್ಲ

## ೫. ದಹರಾಧಿಕರಣ

**ದಹರ ಉತ್ತರೇಭ್ಯಃ ||೧೪|| ಗತಿಶಬ್ದಾಭ್ಯಾಂ ತಥಾ ಹಿ ದೃಷ್ಟಂ ಲಿಂಗಂ ಚ ||೧೫|| ಧೃತೇಶ್ಚ ಮಹಿಮ್ನೋಽಸ್ಯಾಸ್ಮಿನ್ನುಪಲಬ್ಧೇ. ||೧೬|| ಪ್ರಸಿದ್ಧೇಶ್ಚ ||೧೭|| ಇತರಪರಾಮರ್ಶಾತ್ ಸ ಇತಿ ಚೇನ್ನಾಸಂಭವಾತ್ ||೧೮|| ಉತ್ತರಾಚ್ಚೇದಾವಿರ್ಭೂತ ಸ್ವರೂಪಸ್ತು ||೧೯|| ಅನ್ಯಾರ್ಥಶ್ಚ ಪರಾಮರ್ಶಃ ||೨೦|| ಅಲ್ಪ ಶ್ರುತೇರಿತಿ ಚೇತ್ತದುಕ್ತಮ್ ||೨೧||**

**ವಿಷಯವೂ ಸಂಶಯವೂ :** 'ಅಥ ಯದಿದಮಸ್ಮಿನ್ ಬ್ರಹ್ಮಪುರೇ ದಹರಂ ಪುಂಡರೀಕಂ ವೇಶ್ಮ ದಹರೋಽಸ್ಮಿನ್ನಂತರಾಕಾಶಃ' (ಛಾಂ. ೮-೧-೧) ಎಂದು ಉಪಾಸ್ಯನಾಗಿ ಹೇಳಿರುವ ದಹರಾಕಾಶವು ಭೂತಾಕಾಶವೆ, ವಿಜ್ಞಾನಾತ್ಮನೆ, ಅಥವಾ ಪರಮಾತ್ಮನೆ ?

**ಪೂರ್ವಪಕ್ಷ :** ಆಕಾಶಶಬ್ದವು ಭೂತಾಕಾಶದಲ್ಲಿ ರೂಢವಾಗಿರುವದ ರಿಂದ ಭೂತಾಕಾಶವನ್ನೇ ಇಲ್ಲಿ ಹೇಳಿದೆ; ಆಧ್ಯಾತ್ಮಿಕ, ಆಧಿಭೌತಿಕ- ಎಂಬ ಭೇದದಿಂದ ಆಕಾಶವನ್ನೇ ಆಕಾಶಕ್ಕೆ ಹೋಲಿಸಬಹುದಾದ್ದರಿಂದ ಹೃದಯಾಕಾಶವನ್ನು ಹೊರಗಿನ ಆಕಾಶಕ್ಕೆ ಹೋಲಿಸಿರುವ ವಾಕ್ಯವೇನೂ ಈ ನಮ್ಮ ಮತಕ್ಕೆ ವಿರುದ್ಧವಲ್ಲ. ಅಥವಾ ಜೀವನೇ ದಹರಾಕಾಶವು. ಶರೀರವನ್ನು 'ಬ್ರಹ್ಮಪುರ' ಎಂದು ಇಲ್ಲಿ ಕರೆದಿರುವದು ಜೀವನಿಗೆ ಹೊಂದುತ್ತದೆ, ಶರೀರದ

ಒಡೆತನವಿಲ್ಲ; ಬ್ರಹ್ಮಕ್ಕೆ ಹೊಂದುವದಿಲ್ಲ. ಜೀವನನ್ನು ಬ್ರಹ್ಮವೆಂದು ಕರೆದಿರುವದೂ ಆಕಾಶಕ್ಕೆ ಹೋಲಿಸಿರುವ ಅವನು ಬ್ರಹ್ಮಕ್ಕಿಂತ ಬೇರೆಯಲ್ಲ ಎಂದು ತಿಳಿಸುವದಕ್ಕೆ. ಜೀವನಿಗೆ ಮನಸ್ಸು ಉಪಾಧಿಯಾಗಿರುವದರಿಂದಲೂ ಮನಸ್ಸು ಬಲುಮಟ್ಟಿಗೆ ಹೃದಯದಲ್ಲಿಯೇ ಇರುವದರಿಂದಲೂ ದಹರಾಕಾಶ ರೂಪನಾದ ಜೀವನು ಹೃದಯದೊಳಗೆ ಇರುತ್ತಾನೆಂದು ಹೇಳಿರುವದೂ ಹೊಂದುತ್ತದೆ. ಇದೂ ಅಲ್ಲದೆ ಪ್ರಕೃತವಾಕ್ಯದಲ್ಲಿ ಆಕಾಶವನ್ನು ಉಪಾಸನೆ ಮಾಡಬೇಕೆಂದೇನೂ ಹೇಳಿಲ್ಲ; ಅದರಲ್ಲಿರುವದನ್ನು ಉಪಾಸನೆಮಾಡ ಬೇಕೆಂದಿದೆ. ಆದ್ದರಿಂದ ಜೀವನೇ ದಹರವು, ಅದರಲ್ಲಿರುವ ಬ್ರಹ್ಮವನ್ನು ಉಪಾಸನೆಮಾಡಬೇಕು ಎಂದೂ ವಾಕ್ಯಕ್ಕೆ ಅರ್ಥವನ್ನು ಮಾಡಬಹುದು.

ಸಿದ್ಧಾಂತ: ಬ್ರಹ್ಮವೇ ದಹರಾಕಾಶವು. ಏಕೆಂದರೆ 'ಹೃದಯವು ದಹರವಾಗಿದೆ. ಅದರಲ್ಲಿರುವ ಆಕಾಶವು ಇನ್ನೂ ಅಲ್ಪವಾಗಿದೆ; ಅಲ್ಲಿ ಉಪಾಸನೆಮಾಡತಕ್ಕದ್ದು ಯಾವದಿದೆ ?' ಎಂಬ ಆಕ್ಷೇಪವನ್ನು ತೆಗೆದು ಅದರಲ್ಲಿ ದ್ಯಾವಾಪೃಥಿವಿಗಳೆರಡೂ ಇವೆ- ಎಂದು ಮುಂತಾಗಿ ಅಲ್ಪತ್ವಪರಿ ಹಾರವನ್ನು ಹೇಳಿರುವದರಿಂದ ಇದು ಭೂತಾಕಾಶವಾಗಲಾರದು. ಕಲ್ಪಿತ ಭೇದವನ್ನು ಆಕಾಶಕ್ಕೆ ಒಪ್ಪಿದರೂ ಹೃದಯದ ಆಕಾಶವು ಹೊರಗಿನ ಆಕಾಶಕ್ಕೆ ಸಮವಾಗಲಾರದು. ಆದ್ದರಿಂದ ದಹರಾಕಾಶವು ಭೂತಾಕಾಶವೆಂದಿಟ್ಟು ಕೊಂಡರೆ ಈ ಎರಡು ಆಕಾಶಗಳೂ ಸಮನಾಗಿರುತ್ತವೆ ಎಂದಿರುವ ಶ್ರುತಿಯು ಹೊಂದುಗೆಯಾಗುವದಿಲ್ಲ. ಜೀವನೂ ದಹರಾಕಾಶವಲ್ಲ. ಏಕೆಂದರೆ ಜೀವನು ಪರಿಚ್ಛಿನ್ನನಾಗಿರುತ್ತಾನಾದ್ದರಿಂದ ಅಲ್ಪತ್ವವನ್ನು ಅಲ್ಲಗಳೆದು ದಹರವು ಹೊರ ಗಿನ ಆಕಾಶಕ್ಕೆ ಸಮವೆಂದು ಹೇಳುವ ಶ್ರುತಿಯು ಜೀವನ ವಿಷಯದಲ್ಲಿ ಹೊಂದುಗಡೆಯಾಗದೆಹೋಗುತ್ತದೆ. ಹೃದಯದಲ್ಲಿ ಬ್ರಹ್ಮದ ಸಾಕ್ಷಾತ್ಕಾರ ವಾಗುವದರಿಂದ, ಅಥವಾ ಶಾಲಿಗ್ರಾಮದಲ್ಲಿ ವಿಷ್ಣುವಿನಂತೆ ಅಲ್ಲಿ ಉಪಾಸ್ಯ ವಾಗಿರುವದರಿಂದ, ಹೃದಯವನ್ನು ಬ್ರಹ್ಮಪುರವೆಂದು ಮುಖ್ಯಾರ್ಥದಲ್ಲಿಯೇ ಕರೆಯಬಹುದಾಗಿದೆ. ದಹರಾಕಾಶವು ಉಪಾಸ್ಯವಲ್ಲ ಎಂದು ಪೂರ್ವಪಕ್ಷಿ ಹೇಳಿರುವದು ಸರಿಯಲ್ಲ. ಏಕೆಂದರೆ ದಹರಾಕಾಶವೇ ಆತ್ಮನು; ಆ ಆತ್ಮನನ್ನೂ ದಹರದಲ್ಲಿರುವ ಸತ್ಯಕಾಮತ್ವಾದಿಗಳನ್ನೂ ಉಪಾಸನೆಯಿಂದ ಸಾಕ್ಷಾತ್ಕರಿಸಿ ಕೊಂಡವನಿಗೆ ಎಲ್ಲಾ ಲೋಕಗಳಲ್ಲಿಯೂ ಕಾಮಚಾರವುಂಟಾಗುವದು ಎಂದು

ಶ್ರುತಿಯಲ್ಲಿದೆ. ಪ್ರಕೃತವಾದ ದಹರವನ್ನು ಬ್ರಹ್ಮಲೋಕವೆಂದು ಕರೆದಿರುತ್ತದೆ; ಅದು ಲೋಕಗಳು ನಾಶವಾಗದಿರುವಂತೆ ನೋಡಿಕೊಳ್ಳುವ ವಿಧೃತಿಯಾಗಿದೆ ಎಂದು ಹೊಗಳಿರುವದೂ ಇದು ಬ್ರಹ್ಮವೇ ಎಂಬುದಕ್ಕೆ ಬೆಂಬಲವಾದ ಲಿಂಗವು. ಆಕಾಶಶಬ್ದವು ಶ್ರುತಿಯಲ್ಲಿ ಬ್ರಹ್ಮವೆಂಬರ್ಥದಲ್ಲಿ ಪ್ರಸಿದ್ಧವಾಗಿರುತ್ತದೆಯಾದ್ದರಿಂದಲೂ ಇದು ಬ್ರಹ್ಮವೇ. ಆಕಾಶದ ಹೋಲಿಕೆ, ಅಪಹತಪಾಪ್ಮತ್ವಾದಿಗಳು– ಯಾವವೂ ಜೀವನಿಗೆ ಹೊಂದುವದಿಲ್ಲ. ಮುಂದೆ ಪ್ರಜಾಪತಿವಾಕ್ಯದಲ್ಲಿ ಅವಸ್ಥಾತ್ರಯಪರೀಕ್ಷೆಯ ಮೂಲಕವಾಗಿ ಜೀವನಲ್ಲಿ ಅಪಹತಪಾಪ್ಮತ್ವವೇ ಮುಂತಾದವುಗಳು ಇರುವವೆಂದು ತೋರಿಸಿಕೊಟ್ಟಿರುವದು ನಿಜ; ಆದರೆ ಆ ವಾಕ್ಯವು ಜೀವನನ್ನು ಅವಸ್ಥಾತೀತನಾದ ಬ್ರಹ್ಮಸ್ವರೂಪನೆಂದು ತಿಳಿಸುವದಕ್ಕೇ ಬಂದಿರುತ್ತದೆ. ಬ್ರಹ್ಮವು ಸರ್ವಗತವಾಗಿರುವದರಿಂದ ದಹರಾಕಾಶವು ಹೇಗಾದೀತೆಂದು ಶಂಕಿಸಬಾರದು; ಏಕೆಂದರೆ ಉಪಾಸನೆಗಾಗಿ ಅದನ್ನು ಉಪಾಧಿವಶದಿಂದ ದಹರಾಕಾಶವೆಂದು ಶ್ರುತಿಯು ತಿಳಿಸಿರುತ್ತದೆ.

## ೬. ಅನುಕೃತ್ಯಧಿಕರಣ

**ಅನುಕೃತೇಸ್ತಸ್ಯ ಚ ॥ ೨೨ ॥ ಅಪಿ ಚ ಸ್ಮರ್ಯತೇ ॥ ೨೩ ॥**

**ವಿಷಯವೂ ಸಂಶಯವೂ :** "ನ ತತ್ರ ಸೂರ್ಯೋ ಭಾತಿ ನ ಚನ್ದ್ರತಾರಕಂ ನೇಮಾ ವಿದ್ಯುತೋ ಭಾನ್ತಿ ಕುತೋಽಯಮಗ್ನಿಃ । ತಮೇವ ಭಾನ್ತಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತಿ" (ಮುಂ. ೨-೨-೧೧) ಎಂಬ ಮುಂಡಕವಾಕ್ಯದಲ್ಲಿ ಅದು ಬೆಳಗುವದನ್ನನುಸರಿಸಿ ಎಲ್ಲವೂ ಬೆಳಗುತ್ತದೆ, ಅದರ ಬೆಳಕಿನಿಂದ ಎಲ್ಲವೂ ಬೆಳಗುತ್ತದೆ– ಎಂದು ವರ್ಣಿಸಿರುವದು ಯಾವದಾದರೊಂದು ತೇಜೋಧಾತುವೆ, ಅಥವಾ ಚೈತನ್ಯರೂಪನಾದ ಪರಮಾತ್ಮನೆ ?

**ಪೂರ್ವಪಕ್ಷ :** 'ಅಲ್ಲಿ ಸೂರ್ಯನು ಬೆಳಗುವದಿಲ್ಲ' ಎಂದು ಮುಂತಾಗಿ ತೇಜೋಧಾತುಗಳನ್ನೇ ಬೆಳಗುವದಿಲ್ಲವೆಂದು ಹೇಳಿರುವದರಿಂದಲೂ ತೇಜೋಧಾತುಗಳು ತೇಜೋಧಾತುವನ್ನೇ ಅನುಸರಿಸಿ ಬೆಳಗುವವೆಂಬುದು ಯುಕ್ತವಾಗಿರುವದರಿಂದಲೂ ಇದು ತೇಜೋಧಾತುವೇ.

ಸಿದ್ಧಾಂತ : ಇದು ಪರಮಾತ್ಮನೇ. ಒಂದು ದೀಪವು ಮತ್ತೊಂದು ದೀಪವನ್ನನುಸರಿಸಿ ಬೆಳಗುವದಿಲ್ಲವಾದ್ದರಿಂದ ತೇಜೋಧಾತುಗಳು ಬೆಳಗುವದಕ್ಕೆ ಮತ್ತೊಂದು ತೇಜೋಧಾತು ಬೇಕೆನ್ನುವದು ಸರಿಯಲ್ಲ. ಒಂದು ತೇಜಸ್ಸಿನಿಂದ ಮತ್ತೊಂದು ಮಂಕಾಗುವದು ಕಂಡಿದೆಯೇ ಹೊರತು ಅದನ್ನನುಸರಿಸಿ ಬೆಳಗುವದು ಕಂಡಿಲ್ಲ. ಪರಮಾತ್ಮನು ಭಾರೂಪನೆಂದು ಶ್ರುತ್ಯಂತರದಲ್ಲಿದೆ. ಕಬ್ಬಿಣವು ಭಿನ್ನಸ್ವಭಾವಕವಾದ ಅಗ್ನಿಯನ್ನನುಸರಿಸಿ ಸುಡುವದು ಕಂಡುಬರುವದರಿಂದ ಭಿನ್ನಸ್ವಭಾವಕನಾದ ಚಿದಾತ್ಮನನ್ನನುಸರಿಸಿ ಸೂರ್ಯಾದಿಗಳು ಬೆಳಗುವದೆಂಬುದು ವಿರುದ್ಧವಲ್ಲ. 'ಅದರ ಬೆಳಕಿನಿಂದ ಎಲ್ಲವೂ ಬೆಳಗುತ್ತದೆ' ಎಂದಿರುವದರಿಂದ ಸೂರ್ಯಾದಿಗಳು ಮಾತ್ರ ಅದರಿಂದ ಬೆಳಗುತ್ತಾರೆಂದು ಕಲ್ಪಿಸುವದೂ ಸರಿಯಲ್ಲ. ಬ್ರಹ್ಮಚೈತನ್ಯವು ಎಲ್ಲವನ್ನೂ ತೋರಿಸಿಕೊಡುತ್ತದೆ, ಅದನ್ನು ಯಾವದೂ ತೋರಿಸಿಕೊಡಲಾರದು ; ಆದ್ದರಿಂದ ಅದನ್ನು ಸೂರ್ಯಾದಿಗಳು ಬೆಳಗುವದಿಲ್ಲ ಎಂಬುದೂ ಯುಕ್ತವಾಗಿದೆ. ಭಗವದ್ಗೀತೆಯಲ್ಲಿಯೂ ಪ್ರಾಜ್ಞಾತ್ಮನಿಗೆ ಪ್ರಕಾಶರೂಪವನ್ನು ಹೇಳಿದೆ.

## ೭. ಪ್ರಮಿತಾಧಿಕರಣ

**ಶಬ್ದಾದೇವ ಪ್ರಮಿತಃ ೨೪ || ಹೃದ್ಯಪೇಕ್ಷಯಾ ತು ಮನುಷ್ಯಾಧಿಕಾರತ್ವಾತ್ ೨೫**

ವಿಷಯವೂ ಸಂಶಯವೂ : "ಅಂಗುಷ್ಠಮಾತ್ರಃ ಪುರುಷಃ" (ಕ. ೨-೧-೧೨, ೨-೧-೧೦) ಎಂಬ ಕಠವಾಕ್ಯಗಳಲ್ಲಿ ಹೇಳಿರುವ ಪುರುಷನು ಜೀವನೊ, ಪರಮಾತ್ಮನೊ ?

ಪೂರ್ವಪಕ್ಷ : ಪರಿಮಾಣವು ಸೋಪಾಧಿಕನಾದ ಜೀವನಿಗೆ ಒಪ್ಪುತ್ತದೆಯೇ ಹೊರತು ಅನಂತನಾದ ಪರಮಾತ್ಮನಿಗೆ ಒಪ್ಪುವದಿಲ್ಲ, ಆದ್ದರಿಂದ ಇವನು ಜೀವನೇ.

ಸಿದ್ಧಾಂತ : ವಾಕ್ಯಶೇಷದಲ್ಲಿ 'ಭೂತಭವ್ಯಕ್ಕೆ ಈಶಾನನು' ಎಂದು ಬ್ರಹ್ಮವನ್ನು ತಿಳಿಸುವ ಈಶಾನನೆಂಬ ಶಬ್ದವೇ ಇರುವದರಿಂದಲೂ 'ಇದೇ ಅದು' ಎಂದು ಪ್ರಕೃತವಾದ ಬ್ರಹ್ಮವನ್ನೇ ಪರಾಮರ್ಶಿಸಿರುವದರಿಂದಲೂ ಇದು

ಬ್ರಹ್ಮವೇ. ಶಾಸ್ತ್ರಾಧಿಕಾರಿಗಳಾದ ಮನುಷ್ಯರ ಹೃದಯವೆಂಬ ಉಪಾಧಿಯ ವಶದಿಂದ ಅಲ್ಲಿರುವ ಪರಮಾತ್ಮನಿಗೂ ಅಂಗುಷ್ಠಪರಿಮಾಣವನ್ನು ಹೇಳಿರುತ್ತದೆಯಾದ್ದರಿಂದ ಪರಮಾತ್ಮನ ಅನಂತತ್ವಕ್ಕೆ ಹಾನಿಯಿಲ್ಲ. ಜೀವನು ಅಂಗುಷ್ಠಮಾತ್ರನಾದರೂ ಪರಮಾರ್ಥವಾಗಿ ಪರಮಾತ್ಮನೇ ಎಂಬುದನ್ನು ಈ ಶ್ರುತಿಯು ತಿಳಿಸುತ್ತದೆಯಾದ್ದರಿಂದ ಯಾರಿಗೂ ಪರಿಮಾಣವನ್ನು ಹೇಳುವದಕ್ಕೆ ಬಂದಿರುವದೇ ಇಲ್ಲ.

## ೮. ದೇವತಾಧಿಕರಣ

**ತದುಪರ್ಯಪಿ ಬಾದರಾಯಣಃ ಸಂಭವಾತ್ ‖ ೨೬ ‖ ವಿರೋಧಃ ಕರ್ಮಣೀತಿ ಚೇನ್ನಾನೇಕಪ್ರತಿಪತ್ತೇರ್ದರ್ಶನಾತ್ ‖ ೨೭ ‖ ಶಬ್ದ ಇತಿ ಚೇನ್ನಾತಃ ಪ್ರಭವಾತ್ ಪ್ರತ್ಯಕ್ಷಾನುಮಾನಾಭ್ಯಾಮ್‖೨೮‖ ಅತ ಏವ ಚ ನಿತ್ಯತ್ವಮ್ ‖ ೨೯ ‖ ಸಮಾನನಾಮರೂಪತ್ವಾಚ್ಚಾ-ವೃತ್ತಾವಪ್ಯವಿರೋಧೋ ದರ್ಶನಾತ್ ಸ್ಮೃತೇಶ್ಚ ‖ ೩೦ ‖ ಮಧ್ವಾದಿಷ್ವಸಂಭವಾದನಧಿಕಾರಂ ಜೈಮಿನಿಃ ‖ ೩೧ ‖ ಜ್ಯೋತಿಷಿ ಭಾವಾಚ್ಚ ‖ ೩೨ ‖ ಭಾವಂ ತು ಬಾದರಾಯಣೋಽಸ್ತಿ ಹಿ‖೩೩‖**

**ವಿಷಯವೂ ಸಂಶಯವೂ :** ಶಾಸ್ತ್ರವು ಮನುಷ್ಯರಿಗೆ ಎಂದು ಹಿಂದಿನ ಸೂತ್ರದಲ್ಲಿ ಹೇಳಿದೆ. ಮನುಷ್ಯರಿಗೆ ಮಾತ್ರವೇ ಈ ಶಾಸ್ತ್ರದಲ್ಲಿ ಅಧಿಕಾರವೊ, ದೇವಾದಿಗಳಿಗೂ ಉಂಟೊ ?

**ಪೂರ್ವಪಕ್ಷ :** ದೇವತೆಗಳಿಗೆ ಶರೀರಾದಿಗಳಿಲ್ಲ. ಶರೀರಾದಿಗಳು ಅವರಿಗಿದ್ದರೆ ಅವರು ಎಲ್ಲಾ ಕರ್ಮಗಳಲ್ಲಿಯೂ ಸಂನಿಹಿತರಾಗಿದ್ದು ಕರ್ಮಕ್ಕೆ ಅಂಗವಾಗಿರುವರೆಂದು ಒಪ್ಪಬೇಕಾಗುವದು ; ಅದನ್ನು ಯಾರೂ ಕಂಡಿಲ್ಲ. ಶರೀರವಿದ್ದರೆ ಅವರಿಗೆ ಜನನಮರಣಗಳೂ ಉಂಟು— ಎಂದಾಗುವದು. ಆಗ ನಿತ್ಯವಾದ ಶಬ್ದಕ್ಕೂ ನಿತ್ಯವಾದ ಅರ್ಥಕ್ಕೂ ನಿತ್ಯಸಂಬಂಧವಿರುತ್ತದೆ ಎಂಬ ಸಿದ್ಧಾಂತಕ್ಕೆ ಹಾನಿಯು ಬರುವದು ; ಪ್ರಲಯದಲ್ಲಿ ಎಲ್ಲವೂ ನಿರ್ಲೇಪವಾಗಿ ನಾಶವಾಗುವದರಿಂದಲೂ ಈ ಸಿದ್ಧಾಂತಕ್ಕೆ ಹಾನಿಯಾಗುವದು. ಆದಿತ್ಯಾದಿ ದೇವತೆಗಳಿಗೆ ಆದಿತ್ಯಾದಿಗಳನ್ನು ಉಪಾಸನೆಮಾಡುವ ಮಧ್ವಾದಿವಿದ್ಯೆಗಳಲ್ಲಿ

ಅಧಿಕಾರವೂ ಇರುವಹಾಗಿಲ್ಲ. ನಿಜವಾಗಿ ನೋಡಿದರೆ ಸೂರ್ಯಮಂಡಲಕ್ಕಿಂತ ಬೇರೆಯಾದ ಆದಿತ್ಯನೆಂಬ ದೇವತೆಯೇ ಇಲ್ಲ. ಈ ಎಲ್ಲಾ ಕಾರಣಗಳಿಂದ ದೇವಾದಿಗಳಿಗೆ ಬ್ರಹ್ಮವಿದ್ಯೆಯಲ್ಲಿ ಅಧಿಕಾರವಿಲ್ಲ.

ಸಿದ್ಧಾಂತ : ದೇವತೆಗಳಿಗೆ ಶರೀರವುಂಟೆಂದು ಮಂತ್ರ, ಅರ್ಥವಾದ, ಇತಿಹಾಸ, ಪುರಾಣ, ಲೋಕಪ್ರಸಿದ್ಧಿ– ಇವುಗಳಿಂದ ಸಿದ್ಧವಾಗುತ್ತದೆ. ಅವರಿಗೆ ಅರ್ಥಿತ್ವವೇ ಮುಂತಾದ ಅಧಿಕಾರಕಾರಣವೂ ಉಂಟು. ಆದ್ದರಿಂದ ಅವರಿಗೂ ವಿದ್ಯೆಯಲ್ಲಿ ಅಧಿಕಾರವಿದೆ. ಉಪನಯನವಿಲ್ಲದಿದ್ದರೂ ಅವರು ಸ್ವಯಂಪ್ರತಿಭಾತವೇದರಾಗಿರುವದರಿಂದ ಅಧಿಕಾರಕ್ಕೆ ಯಾವ ಅಡ್ಡಿಯೂ ಇರುವದಿಲ್ಲ.

ದೇವತೆಗಳಿಗೆ ಶರೀರಾದಿಗಳುಂಟು ಎಂದು ತಿಳಿದಮಾತ್ರದಿಂದ ಕರ್ಮ ವಿಷಯದಲ್ಲಿ ಯಾವ ವಿರೋಧವೂ ಇರುವದಿಲ್ಲ; ಏಕೆಂದರೆ ದೇವತೆಯು ತನಗೆ ಸಹಜವಾಗಿರುವ ಸಿದ್ಧಿಯಿಂದ ಒಂದೇ ಕಾಲದಲ್ಲಿ ಅನೇಕ ರೂಪಗಳನ್ನು ಧರಿಸಿ ಅನೇಕ ಯಾಗಗಳಲ್ಲಿ ಅಂಗವಾಗಬಹುದು ; ತನಗೆ ಅಂತರ್ಧಾನಾದಿಶಕ್ತಿ ಯಿರುವದರಿಂದ ಮತ್ತೊಬ್ಬರಿಗೆ ಕಾಣಿಸದೆಯೂ ಇರಬಹುದು. ಇದಲ್ಲದೆ ಯಾಗವೆಂದರೆ ದೇವತೆಗಳನ್ನುದ್ದೇಶಿಸಿ ಮಾಡುವ ದ್ರವ್ಯತ್ಯಾಗವು; ಆದ್ದರಿಂದ ಒಬ್ಬ ದೇವತೆಯನ್ನುದ್ದೇಶಿಸಿ ಅನೇಕರು ಏಕಕಾಲದಲ್ಲಿ ತಮ್ಮತಮ್ಮ ದ್ರವ್ಯ ವನ್ನು ತ್ಯಾಗಮಾಡುವದಕ್ಕೆ ಅಡ್ಡಿಯಿರುವದಿಲ್ಲ. ಇದರಂತೆ ಶಬ್ದವಿಷಯ ದಲ್ಲಿಯೂ ಯಾವ ವಿರೋಧವೂ ಇಲ್ಲ. ಏಕೆಂದರೆ ಇಂದ್ರಾದಿವ್ಯಕ್ತಿಗಳು ಹುಟ್ಟುವರಾದರೂ ಅವುಗಳ ಆಕೃತಿಗಳು ಹುಟ್ಟುವದಿಲ್ಲ; ಆದ್ದರಿಂದ ಶಬ್ದಾರ್ಥ ಸಂಬಂಧವು ನಿತ್ಯವಾಗಿರುವದೆಂಬ ಸಿದ್ಧಾಂತಕ್ಕೆ ಇದು ವಿರುದ್ಧವಾಗುವದಿಲ್ಲ, ವೇದನಿತ್ಯತ್ವಕ್ಕೂ ವಿರುದ್ಧವಾಗುವದಿಲ್ಲ. ವೇದಶಬ್ದಗಳನ್ನು ಸ್ಮರಿಸಿಕೊಂಡೇ ಸೃಷ್ಟಿಕರ್ತನು ಸೃಷ್ಟಿಸುವನೆಂದು ವೇದವು ಹೇಳುತ್ತಿರುವದರಿಂದಲೂ ಸೃಷ್ಟಿ ಪ್ರಲಯಗಳು ಮತ್ತೆಮತ್ತೆ ಆಗುತ್ತಿರುವವಾದರೂ ಪ್ರತಿಯೊಂದು ಸೃಷ್ಟಿ ಯಲ್ಲಿಯೂ ಸಮಾನನಾಮರೂಪಗಳ ವಸ್ತುಗಳೇ ಸೃಷ್ಟಿಯಾಗುತ್ತಿರುವದ ರಿಂದಲೂ ಸಿದ್ಧಾಂತದಲ್ಲಿ ಯಾವ ವಿರೋಧವೂ ಇರುವದಿಲ್ಲ.

ಆದಿತ್ಯಾದಿಸಂಬದ್ಧವಾದ ಮಧ್ವಾದಿವಿದ್ಯೆಗಳಲ್ಲಿ ಆದಿತ್ಯಾದಿಗಳಿಗೆ ಅಧಿಕಾರ ವಿಲ್ಲದಿದ್ದರೂ ಶುದ್ಧಬ್ರಹ್ಮವಿದ್ಯೆಯಲ್ಲಿ ಅಧಿಕಾರವಿರುವದಕ್ಕೆ ಅಡ್ಡಿಯಿರುವದಿಲ್ಲ.

ದೇವತೆಗಳಿಗೂ ಋಷಿಗಳಿಗೂ ವಿದ್ಯೆಯಲ್ಲಿ ಅಧಿಕಾರವುಂಟೆಂದು ಸೂಚಿಸುವ ಶ್ರುತಿವಾಕ್ಯವೂ ಇದೆ. ಆದಿತ್ಯಾದಿಶಬ್ದಗಳು ಸೂರ್ಯಮಂಡಲವೇ ಮುಂತಾದವುಗಳನ್ನು ಹೇಳುವವೆಂಬುದು ನಿಜ. ಆದರೆ ಚೇತನಾವಂತರಾದ ದೇವತೆಗಳನ್ನು ಅವು ಹೇಳುವವೆಂಬುದು ಮಂತ್ರಾರ್ಥವಾದಗಳಿಂದ ತಿಳಿದುಬರುತ್ತದೆ. ಅರ್ಥವಾದವೇ ಮುಂತಾದ ವಾಕ್ಯಗಳು ಅನ್ಯಪರವಾಗಿದ್ದರೂ ಅವಾಂತರತಾತ್ಪರ್ಯದಿಂದ ತಮ್ಮತಮ್ಮ ಅರ್ಥವನ್ನೂ ತಿಳಿಸಬಹುದು. ಹಿಂದಿನ ಕಾಲದವರು ದೇವತೆಗಳೊಡನೆ ವ್ಯವಹಾರಮಾಡುತ್ತಿದ್ದರೆಂದೂ ಸ್ಮೃತಿಯಲ್ಲಿದೆ. ಆದ್ದರಿಂದ ದೇವತೆಗಳಿದಾರೆ; ಅವರಿಗೆ ಬ್ರಹ್ಮವಿದ್ಯೆಯಲ್ಲಿ ಅಧಿಕಾರವುಂಟು.

## ೯. ಅಪಶೂದ್ರಾಧಿಕರಣ

**ಶುಗಸ್ಯ ತದನಾದರಶ್ರವಣಾತ್ ತದಾದ್ರವಣಾತ್ ಸೂಚ್ಯತೇ ಹಿ ||೩೪|| ಕ್ಷತ್ರಿಯತ್ವಗತೇಶ್ಚೋತ್ತರತ್ರ ಚೈತ್ರರಥೇನ ಲಿಂಗಾತ್ ||೩೫|| ಸಂಸ್ಕಾರಪರಾಮರ್ಶಾತ್ ತದಭಾವಾಭಿಲಾಪಾಚ್ಚ ||೩೬|| ತದಭಾವನಿರ್ಧಾರಣೇ ಚ ಪ್ರವೃತ್ತೇಃ ||೩೭|| ಶ್ರವಣಾಧ್ಯಯನಾರ್ಥಪ್ರತಿಷೇಧಾತ್ ಸ್ಮೃತೇಶ್ಚ**

ವಿಷಯವೂ ಸಂಶಯವೂ : ದೇವತಾಧಿಕಾರಪ್ರಸಂಗದಿಂದ ಈ ವಿಚಾರವು ಬಂದಿರುತ್ತದೆ. ಉಪನಯನವಿಲ್ಲದ ಅಮನುಷ್ಯರಾದ ದೇವತೆಗಳಿಗೂ ಅಧಿಕಾರವಿರುವದಾದರೆ ಶೂದ್ರರಿಗೂ ಇರಬಹುದೆಂದು ತೋರುತ್ತದೆ. ಶೂದ್ರರಿಗೂ ಬ್ರಹ್ಮವಿದ್ಯೆಯಲ್ಲಿ ಅಧಿಕಾರವುಂಟೆ, ಇಲ್ಲವೆ ?

ಪೂರ್ವಪಕ್ಷ ; ಶೂದ್ರನಿಗೆ ವಿದ್ಯೆಯಲ್ಲಿ ಅಧಿಕಾರವಿಲ್ಲವೆಂದು ಶ್ರುತಿಯಲ್ಲಿ ಹೇಳಿಲ್ಲ. ಶೂದ್ರನಿಗೆ ಅಗ್ನಿಯಿಲ್ಲದ್ದರಿಂದ ಯಜ್ಞದಲ್ಲಿ ಅಧಿಕಾರವಿಲ್ಲವೆಂದು ಶ್ರುತಿಯಲ್ಲಿ ಹೇಳಿದ್ದು ಯುಕ್ತ; ಆದರೆ ಅಗ್ನಿಯು ವಿದ್ಯೆಗೆ ಬೇಕಿರುವದಿಲ್ಲ. ಸಂವರ್ಗವಿದ್ಯೆಯಲ್ಲಿ ಬ್ರಹ್ಮವಿದ್ಯೆಯನ್ನು ಶೂದ್ರನಿಗೆ ಉಪದೇಶಿಸಿದ ಸಂದರ್ಭವಿದೆ. ಶೂದ್ರನಿಗೆ ಅರ್ಥಿತ್ವಸಾಮರ್ಥ್ಯಗಳು ಇರಬಹುದಾಗಿವೆ. ಶೂದ್ರಯೋನಿಯಲ್ಲಿ ಹುಟ್ಟಿದ ವಿದುರನೇ ಮುಂತಾದವರು ಮಹಾಜ್ಞಾನಿಗಳಾಗಿದ್ದರೆಂದು ಸ್ಮೃತಿಯಲ್ಲಿದೆ. ಆದ್ದರಿಂದ ಶೂದ್ರನಿಗೆ ಅಧಿಕಾರವುಂಟು.

ಸಿದ್ಧಾಂತ ವೇದಪೂರ್ವಕವಾದ ಬ್ರಹ್ಮವಿದ್ಯೆಯಲ್ಲಿ ಶೂದ್ರನಿಗೆ ಅಧಿಕಾರವಿಲ್ಲ. ಏಕೆಂದರೆ ಅವನಿಗೆ ವೇದಾಧ್ಯಯನವಿಲ್ಲದ್ದರಿಂದ ಶಾಸ್ತ್ರೀಯವಾದ ಸಾಮರ್ಥ್ಯವಿಲ್ಲ; ಆದ್ದರಿಂದ ಬರಿಯ ಅರ್ಥಿತ್ವವು ಪ್ರಯೋಜನಕ್ಕೆ ಬರುವದಿಲ್ಲ. ಶೂದ್ರನಿಗೆ ಯಜ್ಞದಲ್ಲಿ ಅಧಿಕಾರವಿಲ್ಲವೆಂಬುದಕ್ಕೆ ವೇದಾಧ್ಯಯನವಿಲ್ಲವೆಂಬ ನ್ಯಾಯವಿರುತ್ತದೆ ; ಆ ನ್ಯಾಯವು ವಿದ್ಯೆಗೂ ಅಧಿಕಾರವಿಲ್ಲವೆಂಬುದಕ್ಕೆ ದ್ಯೋತಕವಾಗಬಹುದಾಗಿದೆ.

ಸಂವರ್ಗವಿದ್ಯೆಯಲ್ಲಿರುವ ಶೂದ್ರಶಬ್ದವು ಅಧಿಕಾರವನ್ನು ಸೂಚಿಸುವ ಲಿಂಗವಾಗಲಾರದು ; ಏಕೆಂದರೆ ಅದಕ್ಕೆ ಬೆಂಬಲವಾಗಿ ನ್ಯಾಯವಿರುವದಿಲ್ಲ. ಕ್ಷತ್ರಿಯನಾದ್ದರಿಂದ ಅಧಿಕಾರಿಯಾಗಿದ್ದ ಜಾನಶ್ರುತಿಯನ್ನೇ ರೈಕ್ವನು ಶೂದ್ರನೆಂದು ಶೋಕದಿಂದ ತನ್ನ ಬಳಿಗೆ ಬಂದನೆಂಬುದು ತನಗೆ ತಿಳಿದಿರುವದೆಂಬ ಪರೋಕ್ಷಜ್ಞಾನವನ್ನು ತೋರಪಡಿಸುವದಕ್ಕಾಗಿ ಕರೆದಿರುತ್ತಾನೆ– ಎಂದು ಈ ಶೂದ್ರಶಬ್ದವನ್ನು ಯೌಗಿಕಾರ್ಥದಲ್ಲಿಯೇ ಹೊಂದಿಸಿಕೊಳ್ಳುವದಕ್ಕೂ ಬರುತ್ತದೆ. ಕ್ಷತ್ತೃಪ್ರೇಷಣವೇ ಮುಂತಾದ ಗುರುತುಗಳಿಂದ ಜ್ಞಾನಶ್ರುತಿಯು ಕ್ಷತ್ರಿಯನೆಂಬುದು ಸ್ಪಷ್ಟವಾಗಿರುತ್ತದೆ. ಆದ್ದರಿಂದ ಶೂದ್ರನಿಗೆ ವಿದ್ಯೆಯಲ್ಲಿ ಅಧಿಕಾರವುಂಟೆಂಬುದಕ್ಕೆ ಶ್ರುತಿಯ ಲಿಂಗಲಿಲ್ಲ. ಬ್ರಹ್ಮವಿದ್ಯೆಯನ್ನು ಉಪದೇಶಿಸುವಾಗ ಉಪನಯನಾದಿಸಂಸ್ಕಾರಗಳನ್ನು ಮಾಡಿಸಿದ ಪರಾಮರ್ಶವು ಶ್ರುತಿಯಲ್ಲಿದೆ ; ಶೂದ್ರನು ವೇದಶ್ರವಣಾಧ್ಯಯನಾದಿಗಳನ್ನು ಮಾಡಕೂಡದೆಂಬ ನಿಷೇಧವು ಸ್ಮೃತಿಯಲ್ಲಿದೆ.

ವಿದುರಾದಿಗಳು ಜ್ಞಾನಿಗಳಾಗಿದ್ದರೆಂಬುದನ್ನು ನಾವು ಅಲ್ಲಗಳೆಯುವದಿಲ್ಲ. ಶೂದ್ರರಿಗೂ ಜ್ಞಾನದ ಫಲವು ಅವಶ್ಯವಾಗಿ ಉಂಟಾಗುತ್ತದೆ. ಇತಿಹಾಸ ಪುರಾಣವನ್ನು ಶ್ರವಣಮಾಡುವದಕ್ಕೆ ಶೂದ್ರರಿಗೂ ಅಧಿಕಾರವುಂಟು ; ಆದ್ದರಿಂದ ಅವುಗಳ ಮೂಲಕವಾಗಿ ಅವರಿಗೂ ಜ್ಞಾನವೂ ಅದರ ಫಲವೂ ಉಂಟಾಗಬಹುದು.

## ೧೦. ಕಂಪನಾಧಿಕರಣ

### ಕಮ್ಪನಾತ್ ೩೯

**ವಿಷಯವೂ ಸಂಶಯವೂ :** 'ಯದಿದಂ ಕಿಂ ಚ ಜಗತ್ಸರ್ವಂ ಪ್ರಾಣ ಏಜತಿ ನಿಃಸೃತಮ್ ಮಹದ್ಭಯಂ ವಜ್ರಮುದ್ಯತಂ ಯ ಏತದ್ವಿದು

ರಮೃತಾಸ್ತೇ ಭವನ್ತಿ ||' (ಕೃ. ೨-೩-೨) ಎಂಬಲ್ಲಿ ಹೇಳಿದ ಪ್ರಾಣವೂ ವಜ್ರವೂ ಯಾವದು ?

**ಪೂರ್ವಪಕ್ಷ** : ಪಂಚವೃತ್ತಿಗಳುಳ್ಳ ವಾಯುವೇ ಪ್ರಾಣ, ಸಿಡಿಲೇ ವಜ್ರ. ವಾಯುವನ್ನಾಶ್ರಯಿಸಿ ಎಲ್ಲವೂ ಅಲುಗಾಡುತ್ತದೆಯೆಂದೂ ವಾಯುವು ಮೋಡ ವಾಗುವಾಗ ಸಿಡಿಲೇ ಉಂಟಾಗುವದೆಂದೂ ಇಲ್ಲಿ ವಾಯುವಿನ ಮಾಹಾತ್ಮ್ಯೆ ಯನ್ನು ಹೇಳಿದೆ. ವಾಯುವಿನ ಉಪಾಸನೆಯಿಂದಲೇ ಅಮೃತತ್ವವನ್ನು ಇಲ್ಲಿ ಹೇಳಿದೆ. 'ವಾಯುಜ್ಞಾನದಿಂದ ಪುನರ್ಮೃತ್ಯುವನ್ನು ಜಯಿಸುತ್ತಾರೆ' ಎಂಬ ಬೃಹದಾರಣ್ಯಕವಾಕ್ಯವೂ ಇದಕ್ಕೆ ಅನುಗುಣವಾಗಿದೆ.

ಸಿದ್ಧಾಂತ : ಹಿಂದುಮುಂದಿನ ಗ್ರಂಥಭಾಗದಲ್ಲಿ ಬ್ರಹ್ಮವನ್ನೇ ಹೇಳಿ ರುವದರಿಂದ ಇಲ್ಲಿಯೂ ಪ್ರಾಣ, ವಜ್ರ- ಎಂಬ ಮಾತುಗಳಿಂದ ಬ್ರಹ್ಮವನ್ನೇ ಹೇಳಿದೆ ಎಂಬುದು ಯುಕ್ತ. 'ಪ್ರಾಣಸ್ಯ ಪ್ರಾಣಮ್' ಮುಂತಾದ ಶ್ರುತಿ ಗಳಲ್ಲಿ ಪ್ರಾಣಶಬ್ದವನ್ನು ಬ್ರಹ್ಮವೆಂಬರ್ಥದಲ್ಲಿ ಉಪಯೋಗಿಸಿರುತ್ತದೆ. ಪ್ರಾಣ ನಲ್ಲಿದ್ದುಕೊಂಡು ಅಲುಗಾಡುತ್ತದೆ ಎಂದರೆ ಪರಮಾತ್ಮನನ್ನು ಆಶ್ರಯಿಸಿ ಕೊಂಡು ಬಾಳುತ್ತದೆ-ಎಂದರ್ಥ. ಮುಂದೆ (೨-೨-೫) ಇದಕ್ಕೆ ಬೆಂಬಲವನ್ನು ಕೊಡುವ ವಾಕ್ಯವಿದೆ. ವಜ್ರವೆಂಬುದು ಭಯಹೇತುತ್ವವನ್ನು ತಿಳಿಸುತ್ತದೆ. ಬ್ರಹ್ಮವೇ ಭಯಹೇತು ಎಂದು ಮುಂದೆ (೨-೬-೩) ಹೇಳಿಯೂ ಇದೆ. ಅಮೃತತ್ವವೆಂಬ ಫಲವನ್ನು ಹೇಳಿರುವದರಿಂದಲೂ ಇದು ಬ್ರಹ್ಮವಿಷಯದ ವಾಕ್ಯವೆನ್ನಬೇಕು. ವಾಯುಜ್ಞಾನದಿಂದ ಆಗುವ ಅಮೃತತ್ವವು ಆಪೇಕ್ಷಿಕ ವಾದ್ದರಿಂದ ಮುಖ್ಯಾರ್ಥದ ಅಮೃತತ್ವವನ್ನು ಬಿಟ್ಟು ಅದನ್ನು ಗ್ರಹಿಸುವದು ಯುಕ್ತವಾಗುವದಿಲ್ಲ. ಈ ಪ್ರಕರಣವು ಬ್ರಹ್ಮದ್ದೇ ಆದ್ದರಿಂದಲೂ ಈ ವಾಕ್ಯವು ಬ್ರಹ್ಮವನ್ನು ಹೇಳುತ್ತದೆ ಎಂದು ನಿಶ್ಚಯಿಸಬೇಕು.

## ೧೧. ಜ್ಯೋತಿರಧಿಕರಣ

### ಜ್ಯೋತಿರ್ದರ್ಶನಾತ್ || ೪೦ ||

**ವಿಷಯವೂ ಸಂಶಯವೂ** : 'ಏಷ ಸಂಪ್ರಸಾದೋಽಸ್ಮಾಚ್ಛರೀರಾತ್ ಸಮುತ್ಥಾಯ ಪರಂಜ್ಯೋತಿರುಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತೇ' (ಛಾಂ. ೮-೧೨-೩) ಎಂಬ ಪ್ರಜಾಪತಿವಾಕ್ಯದಲ್ಲಿ ಜ್ಯೋತಿಯೆಂಬುದು ಬೆಳಕೆ, ಅಥವಾ ಪರಬ್ರಹ್ಮವೆ ?

ಪೂರ್ವಪಕ್ಷ : ಇದು ಪ್ರಸಿದ್ಧವಾದ ಬೆಳಕೇ. ಇಲ್ಲಿ ಬೆಳಕೆಂಬ ರೂಢಿಯ ಅರ್ಥವನ್ನು ಬಿಡಬೇಕೆಂಬುದಕ್ಕೆ ಪ್ರಕರಣವೇ ಮುಂತಾದ ಯಾವ ಕಾರಣವೂ ಇರುವದಿಲ್ಲ. ಹಿಂದಿನ ನಾಡೀಖಂಡದಲ್ಲಿ ಮುಮುಕ್ಷುವಾದವನಿಗೆ ಆದಿತ್ಯ ಪ್ರಾಪ್ತಿಯನ್ನು ಹೇಳಿರುವದೂ ಇಲ್ಲಿ ಜ್ಯೋತಿ ಎಂದರೆ ಬೆಳಕೇ ಎಂಬುದಕ್ಕೆ ಸಾಧಕವಾಗಿರುತ್ತದೆ.

ಸಿದ್ಧಾಂತ : ಇಲ್ಲಿ ಜ್ಯೋತಿ ಎಂದರೆ ಬ್ರಹ್ಮವೇ. ಏಕೆಂದರೆ ಇದು ಬ್ರಹ್ಮದ ವಿಷಯವನ್ನು ಹೇಳುವ ಪ್ರಕರಣವೆಂಬುದನ್ನು ಉಪಕ್ರಮದಲ್ಲಿ ಅಪಹತಪಾಪ್ಮತ್ವಾದಿಗುಣಗಳುಳ್ಳ ಆತ್ಮನನ್ನು ಹುಡುಕಿ ಅರಿಯಬೇಕೆಂದು ಹೇಳಿರುವದು, 'ಇವನನ್ನೇ ನಿನಗೆ ಮತ್ತೂ ಹೇಳುತ್ತೇನೆ' ಎಂದು ಪರಾಮರ್ಶಿಸಿರುವದು, ಜ್ಯೋತಿಯನ್ನು ಸೇರುವದು ಅಶರೀರತ್ವಕ್ಕೋಸ್ಕರ ಎಂಬುದನ್ನು ಅಶರೀರನಿಗೆ ಪ್ರಿಯಾಪ್ರಿಯಗಳ ಸೋಂಕಿಲ್ಲವೆಂಬ ವಾಕ್ಯದಿಂದ ತಿಳಿಸುವದು–ಇವುಗಳಿಂದ ಗೊತ್ತುಮಾಡಬಹುದಾಗಿದೆ. 'ಪರಂ ಜ್ಯೋತಿಃ', 'ಉತ್ತಮಃ ಪುರುಷಃ' ಎಂಬ ವಿಶೇಷಣಗಳೂ ಇದು ಬ್ರಹ್ಮವೆಂಬುದಕ್ಕೆ ಲಿಂಗವಾಗಿವೆ. ಆದಿತ್ಯಾದಿಪ್ರಾಪ್ತಿಯನ್ನು ಹೇಳುವ ವಾಕ್ಯವು ಆತ್ಯಂತಿಕ ಮೋಕ್ಷವಿಷಯವಲ್ಲ ; ಪ್ರಕೃತವಾಕ್ಯವು ಆತ್ಯಂತಿಕಮುಕ್ತಿಯನ್ನು ಕೊಡುವ ಬ್ರಹ್ಮಜ್ಞಾನದ ವಾಕ್ಯವು- ಆದ್ದರಿಂದ ಪೂರ್ವಾಪರವಿರೋಧವಿಲ್ಲ.

## ೧೨. ಅರ್ಥಾಂತರವ್ಯಪದೇಶಾಧಿಕರಣ

**ಆಕಾಶೋಽರ್ಥಾನ್ತರತ್ವಾದಿವ್ಯಪದೇಶಾತ್ ||೪೧||**

**ವಿಷಯವೂ ಸಂಶಯವೂ :** 'ಆಕಾಶೋ ವೈ ನಾಮ ನಾಮರೂಪಯೋರ್ನಿರ್ವಹಿತಾ ತೇ ಯದನ್ತರಾ ತದ್ಬ್ರಹ್ಮ ತದಮೃತಂ ಸ ಆತ್ಮಾ" ( ಛಾಂ. ೮–೧೪–೧ ) ಎಂಬ ವಾಕ್ಯದಲ್ಲಿರುವ ಆಕಾಶವು ಪರಬ್ರಹ್ಮವೋ, ಭೂತಾಕಾಶವೋ ?

**ಪೂರ್ವಪಕ್ಷ :** ಆಕಾಶಶಬ್ದವು ಭೂತಾಕಾಶದಲ್ಲಿಯೇ ರೂಢವಾಗಿರುವದರಿಂದಲೂ ನಾಮರೂಪನಿರ್ವಹಣವೆಂಬುದು ಅವಕಾಶವನ್ನು ಕೊಡುವದರ ಮೂಲಕ ಆಕಾಶಕ್ಕೂ ಹೊಂದುವದರಿಂದಲೂ ಇದು ಭೂತಾಕಾಶವೇ. ಇದು ಬ್ರಹ್ಮವೆಂಬುದಕ್ಕೆ ಸ್ಪಷ್ಟವಾದ ಬ್ರಹ್ಮಲಿಂಗವು ಯಾವದೂ ಇಲ್ಲ.

**ಸಿದ್ಧಾಂತ :** ಇದು ಪರಬ್ರಹ್ಮವೇ. ಏಕೆಂದರೆ ಈ ಆಕಾಶವು ನಾಮರೂಪಗಳಿಗಿಂತ ಬೇರೆಯಾಗಿರುವ ವಸ್ತುವೆಂದು ಹೇಳಿದೆ. ಬ್ರಹ್ಮವನ್ನು ಬಿಟ್ಟರೆ ಮತ್ತೆ ಯಾವದೂ ನಾಮರೂಪಗಳಿಗಿಂತ ಬೇರೆಯಾಗಿರಲಾರದು. ನಾಮರೂಪನಿರ್ವಹಣವೂ ಬ್ರಹ್ಮಕ್ಕೇ ನಿರಂಕುಶವಾಗಿ ಹೊಂದುತ್ತದೆ. ಜೀವನಿಗೂ ನಾಮರೂಪನಿರ್ವಹಣವು ಕಂಡಿದೆಯಾದರೂ ಬ್ರಹ್ಮವೇ ಜೀವರೂಪದಿಂದ ನಾಮರೂಪನಿರ್ವಾಹವನ್ನು ಮಾಡುತ್ತಿರುವದೆಂದು ಹೇಳುವವಕ್ಕೇ ಶ್ರುತಿಯು ಬಂದಿರುವದರಿಂದ ಅದೇನೂ ಬ್ರಹ್ಮವಾದಕ್ಕೆ ಬಾಧಕವಲ್ಲ. ಈ ನಾಮರೂಪನಿರ್ವಾಹವನ್ನು ಹೇಳಿದ್ದರಿಂದಲೇ ಸ್ರಷ್ಟೃತ್ವಾದಿಗಳನ್ನೂ ಹೇಳಿದಂತೆ ಆಗಿದೆ. 'ಅದು ಬ್ರಹ್ಮವು, ಅದು ಅಮೃತವು, ಅದು ಆತ್ಮನು' ಎಂದು ಹೇಳಿರುವದೂ ಬ್ರಹ್ಮವಾದಕ್ಕೆ ಲಿಂಗಗಳಾಗಿರುತ್ತವೆ.

## ೧೦. ಸುಷುಪ್ತ್ಯುತ್ಕ್ರಾಂತ್ಯಧಿಕರಣ

**ಸುಷುಪ್ತ್ಯುತ್ಕ್ರಾಂತ್ಯೋರ್ಭೇದೇನ ||೪೨||**
**ಪತ್ಯಾದಿಶಬ್ದೇಭ್ಯಃ ||೪೩||**

**ವಿಷಯುವೂ ಸಂಶಯುವೂ :** ಬೃಹದಾರಣ್ಯಕೋಪನಿಷತ್ತಿನಲ್ಲಿ 'ಕತಮ ಆತ್ಮೇತಿ ಯೋಽಯಂ ವಿಜ್ಞಾನಮಯಃ ಪ್ರಾಣೇಷು' (ಬೃ. ೪-೩-೭)ಎಂದು ಮೊದಲಾಗಿರುವ ಆತ್ಮನಿರೂಪಣೆಯು ಸಂಸಾರಿಸ್ವರೂಪವನ್ನು ಅನುವಾದ ಮಾಡುತ್ತದೆಯೊ, ಅಥವಾ ಅಸಂಸಾರಿಸ್ವರೂಪವನ್ನು ತಿಳಿಸಿಕೊಡುತ್ತದೆಯೊ?

**ಪೂರ್ವಪಕ್ಷ :** ಉಪಕ್ರಮದಲ್ಲಿಯೂ ಉಪಸಂಹಾರದಲ್ಲಿಯೂ 'ವಿಜ್ಞಾನಮಯಃ ಪ್ರಾಣೇಷು' ( ಬೃ. ೪-೩-೭, ೪-೪-೨೨ ) ಎಂಬ ವಿಶೇಷಣವಿರುವದರಿಂದಲೂ ನಡುವೆ ಜಾಗರಿತಾದ್ಯವಸ್ಥೆಗಳನ್ನು ಹೇಳಿರುವದರಿಂದಲೂ ಇದು ಜೀವನ ವರ್ಣನೆ.

**ಸಿದ್ಧಾಂತ :** ಇದು ಅಸಂಸಾರಿಯಾದ ಪರಮೇಶ್ವರನ ಸ್ವರೂಪವನ್ನು ತಿಳಿಸುತ್ತದೆ. ಏಕೆಂದರೆ ಸುಷುಪ್ತಿ, ಉತ್ಕ್ರಾಂತಿ- ಇವುಗಳಲ್ಲಿ ಜೀವನಿಗಿಂತ ವ್ಯತಿರಿಕ್ತನೆಂದು ಪರಮೇಶ್ವರನನ್ನು ತಿಳಿಸಿದೆ. ಹೇಗೆಂದರೆ, ಸುಷುಪ್ತಿಯಲ್ಲಿ 'ಈ ಪುರುಷನು ಪ್ರಾಜ್ಞನಿಂದ ಆಲಿಂಗಿತನಾಗಿರುವದರಿಂದ ಒಳಗುಹೊರಗುಗಳನ್ನು ಅರಿಯದೆ ಇರುತ್ತಾನೆ' ಎಂದಿದೆ. ಇಲ್ಲಿ ಪುರುಷನೆಂದರೆ ಜೀವನು;

ಏಕೆಂದರೆ ಅವನೇ ಜ್ಞಾತೃಸ್ವಭಾವವುಳ್ಳವನು. ಇದರಂತೆ ಉತ್ಕ್ರಾಂತಿಯಲ್ಲಿ 'ಈ ಶಾರೀರನಾದ ಆತ್ಮನು ಪ್ರಾಜ್ಞನಿಂದ ಅನ್ವಾರೂಢನಾಗಿ ಕೂಗುಹಾಕುತ್ತಾ ಹೋಗುವನು' ಎಂದಿದೆ. ಇಲ್ಲಿ ಶಾರೀರನೆಂದರೆ ಶರೀರಸ್ವಾಮಿಯಾದ ಜೀವನು. ಈ ಎರಡು ಸಂದರ್ಭಗಳಲ್ಲಿಯೂ ಜೀವವ್ಯತಿರಿಕ್ತವಾದ ಪ್ರಾಜ್ಞಸ್ವರೂಪವನ್ನು ತಿಳಿಸಿದೆ. ಇಲ್ಲಿ ಪ್ರಾಜ್ಞನೆಂದರೆ ಪರಮೇಶ್ವರನು; ಏಕೆಂದರೆ ಸರ್ವಜ್ಞತ್ವ ಸ್ವರೂಪನಾದ ಪ್ರಜ್ಞೆಯು ಯಾವಾಗಲೂ ಅವನ ಸ್ವರೂಪವಾಗಿರುತ್ತದೆ. ಉಪಕ್ರಮದಲ್ಲಿಯೂ ಉಪಸಂಹಾರದಲ್ಲಿಯೂ ಸಂಸಾರಿಸ್ವರೂಪವನ್ನು ವರ್ಣಿಸಿರುವದು ನಿಜ; ಆದರೆ ಶ್ರುತಿಯು ಆ ಸ್ವರೂಪವನ್ನು ಅನುವಾದಮಾಡಿಕೊಂಡು ಪ್ರಾಜ್ಞನಾದ ಪರಮೇಶ್ವರನಿಗೂ ಅವನಿಗೂ ಐಕ್ಯವನ್ನು ಹೇಳುವದಕ್ಕೆ ಹೊರಟಿದೆ. ಉಪಕ್ರಮದಲ್ಲಿ 'ಧ್ಯಾಯತೀವ ಲೇಲಾಯತೀವ' ಎಂದು ಜ್ಞಾನಕರ್ಮೇಂದ್ರಿಯಗಳ ವ್ಯಾಪಾರಗಳು ಆತ್ಮನಿಗೆ ಸೇರಿಲ್ಲವೆಂದಿದೆ; ಉಪಸಂಹಾರದಲ್ಲಿ ಈ ವಿಜ್ಞಾನಮಯನೇ 'ಮಹಾನ್, ಅಜ, ಆತ್ಮ' ಎಂದು ಬಣ್ಣಿಸಿದೆ. ನಡುವೆ ಅವಸ್ಥಾತ್ರಯವನ್ನು ಹೇಳಿರುವದೂ ಅವಸ್ಥಾರಹಿತವಾದ ಅಸಂಸಾರಿಸ್ವರೂಪವನ್ನು ತಿಳಿಸುವದಕ್ಕೇ ಎಂಬುದು 'ವಿಮೋಕ್ಷಕ್ಕೇ ಹೇಳು' ಎಂಬ ಜನಕನ ಪ್ರಶ್ನೆಯಿಂದಲೂ 'ಪುಣ್ಯಪಾಪಗಳಿಂದ ಅನನ್ವಾಗತನಾಗಿರುತ್ತಾನೆ' ಎಂಬ ಯಾಜ್ಞವಲ್ಕ್ಯನ ಉತ್ತರದಿಂದಲೂ ವ್ಯಕ್ತವಾಗುತ್ತದೆ. ಈ ಆತ್ಮನು 'ಎಲ್ಲವನ್ನೂ ತನ್ನ ವಶದಲ್ಲಿಟ್ಟುಕೊಂಡಿರುತ್ತಾನೆ, ಎಲ್ಲಕ್ಕೂ ಒಡೆಯನು, ಎಲ್ಲಕ್ಕೂ ಅಧಿಪತಿಯು, ಒಳ್ಳೆಯಕರ್ಮದಿಂದ ಹೆಚ್ಚುವದಿಲ್ಲ, ಕೆಟ್ಟದ್ದರಿಂದ ಕುಗ್ಗುವದಿಲ್ಲ' ಎಂದು ಅಸಂಸಾರಿಸ್ವಭಾವವನ್ನು ತಿಳಿಸುವ ಮತ್ತು ಸಂಸಾರಿಸ್ವಭಾವವನ್ನು ಅಲ್ಲಗಳೆಯುವ ಮಾತುಗಳೂ ಇದು ಅಸಂಸಾರಿಯಾದ ಪರಮೇಶ್ವರನನ್ನು ಹೇಳುವ ವಾಕ್ಯವೆಂಬುದನ್ನು ಬಲಪಡಿಸುತ್ತದೆ.

## ನಾಲ್ಕನೆಯ ಪಾದ

### ೧. ಆನುಮಾನಿಕಾಧಿಕರಣ

ಅನುಮಾನಿಕಮಪ್ಯೇಕೇಷಾಮಿತಿ ಚೇನ್ನ ಶರೀರರೂಪಕವಿನ್ಯಸ್ತ ಗೃಹೀತೇರ್ದರ್ಶಯತಿ ಚ ||೧|| ಸೂಕ್ಷ್ಮಂ ತು ತದರ್ಹತ್ವಾತ್ ||೨|| ತದಧೀನತ್ವಾದರ್ಥವತ್ ||೩|| ಜ್ಞೇಯತ್ವಾವಚನಾಚ್ಚ

**||೪|| ವದತೀತಿ ಚೇನ್ನ ಪ್ರಾಜ್ಞೋ ಹಿ ಪ್ರಕರಣಾತ್ ||೫|| ತ್ರಯಾಣಾಮೇವ ಚೈವಮುಪನ್ಯಾಸಃ ಪ್ರಶ್ನಶ್ಚ ||೬|| ಮಹದ್ವಚ್ಚ ||೭||**

**ವಿಷಯವೂ ಸಂಶಯವೂ ;** 'ಮಹತಃ ಪರಮವ್ಯಕ್ತಮ್' (ಕ. ೧-೩-೧೧) ಎಂಬ ಕಠೋಪನಿಷದ್ವಾಕ್ಯದಲ್ಲಿ ಅವ್ಯಕ್ತಶಬ್ದವು ಪ್ರಧಾನವನ್ನು ಹೇಳುತ್ತದೆಯೆ, ಇಲ್ಲವೆ ?

**ಪೂರ್ವಪಕ್ಷ :** ಸಾಂಖ್ಯಸ್ಮೃತಿಯಲ್ಲಿರುವ ಮಹತ್ತು, ಅವ್ಯಕ್ತ, ಪುರುಷ-ಈ ತತ್ತ್ವಗಳನ್ನು ಅದೇ ಹೆಸರಿನಿಂದ, ಅದೇ ಕ್ರಮದಲ್ಲಿ, ಹೇಳಿರುವದರಿಂದ ಅವ್ಯಕ್ತವು ಪ್ರಧಾನವೇ.

**ಸಿದ್ಧಾಂತ :** ಇಲ್ಲಿ ಅವ್ಯಕ್ತವೆಂಬ ಶಬ್ದಮಾತ್ರವಿದೆ. ಈ ಶಬ್ದವು ಸ್ವತಂತ್ರವಾದ ತ್ರಿಗುಣಾತ್ಮಕಪ್ರಧಾನವನ್ನು ಹೇಳುವದಿಲ್ಲ, ಶರೀರವನ್ನು ಹೇಳುತ್ತದೆ. ಏಕೆಂದರೆ ಹಿಂದೆ 'ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ತು' (ಕ. ೧-೩-೩) ಎಂದು ಮುಂತಾಗಿ ರೂಪಕದಲ್ಲಿ ಹೇಳಿರುವ ಪದಾರ್ಥಗಳನ್ನೇ 'ಇಂದ್ರಿಯೇಭ್ಯಃ ಪರಾ ಹ್ಯರ್ಥಾಃ' (೧-೩-೧೦) ಎಂದು ಮುಂತಾಗಿರುವ ವಾಕ್ಯದಲ್ಲಿ ಹೇಳಿರುತ್ತದೆ. ಆ ಇಂದ್ರಿಯಾದಿಗಳನ್ನೇ ಇಲ್ಲಿ ಪರಮಪದವನ್ನು ತಿಳಿಸುವದಕ್ಕಾಗಿ ಹೇಳಿರುವದರಿಂದ ಅಲ್ಲಿ ಪ್ರಕೃತವಾಗಿರುವ ಶರೀರವನ್ನೇ ಇಲ್ಲಿ ಅವ್ಯಕ್ತಶಬ್ದದಿಂದ ಹೇಳಿಗೆ ಎಂದು ಪರಿಶೇಷನ್ಯಾಯದಿಂದ ತಿಳಿಯಬಹುದಾಗಿದೆ. ಮುಂದೆ ಆ ಪರಮಪದವಾದ ಪರಮಾತ್ಮನನ್ನು ತಿಳಿಯುವದಕ್ಕೆ ಅಧ್ಯಾತ್ಮಯೋಗವನ್ನು ತಿಳಿಸಿರುತ್ತದೆ ; ಅಲ್ಲಿಯೂ ಮಹಾನಾತ್ಮಾ ಎಂಬ ಶಬ್ದದಿಂದ ಭೋಕ್ತೃವನ್ನು ಅಥವಾ ಹಿರಣ್ಯಗರ್ಭನ ಬುದ್ಧಿಯನ್ನು ತಿಳಿಸಿದೆ. ಆದ್ದರಿಂದಲೂ ಇಲ್ಲಿ ಅವ್ಯಕ್ತವೆಂದರೆ ಶರೀರವೇ. ನಿಜವಾಗಿ ಅವ್ಯಕ್ತವೆಂದರೆ ಮಹತ್ತಿಗಿಂತ-ಎಂದರೆ ಜೀವನಿಗಿಂತ ಅಥವಾ ಸಮಷ್ಟಿ ಬುದ್ಧಿಗಿಂತ- ಹೆಚ್ಚಿನದಾದ ಅವಿದ್ಯೆ ಅಥವಾ ಮಾಯೆ. ಪ್ರಕೃತದಲ್ಲಿ ಆ ಅವಿದ್ಯೆಯ ಅಥವಾ ಮಾಯೆಯ ಕಾರ್ಯವಾದ ಶರೀರವನ್ನೇ ಕಾರಣವಾಚಕವಾದ ಅವ್ಯಕ್ತಶಬ್ದದಿಂದ ಹೇಳಿರುತ್ತದೆ. ಅವ್ಯಕ್ತಶಬ್ದವಾಚಕವಾದ ಮಾಯೆಯೇ ಪ್ರಧಾನವಾಗಲಿ ಎನ್ನುವದು ಸರಿಯಲ್ಲ ; ಏಕೆಂದರೆ ಪ್ರಧಾನದಂತೆ

ಮಾಯೆಯು ಸ್ವತಂತ್ರವಾಗಿರುವದಿಲ್ಲ, ಪರಮಾತ್ಮನ ಅಧೀನವಾಗಿರುತ್ತದೆ. ಅವ್ಯಕ್ತಶಬ್ದವಾಚ್ಯವಾದ ಮಾಯೆಯನ್ನು (ಅಥವಾ ಅವಿದ್ಯೆಯನ್ನು) ಅವಶ್ಯವಾಗಿ ಅಂಗೀಕರಿಸಬೇಕು ; ಏಕೆಂದರೆ ಅದರಿಂದಲೇ ಈಶ್ವರನ ಸ್ರಷ್ಟೃತ್ವವು (ಅಥವಾ ಜೀವರ ಬಂಧಮೋಕ್ಷವ್ಯವಹಾರವು) ಸಿದ್ಧನಾಗುತ್ತದೆ. ಆ ಅವ್ಯಕ್ತದ ಕಾರ್ಯವಾದ ಶರೀರವನ್ನೂ ಅಭೇದೋಪಚಾರದಿಂದ ಇಲ್ಲಿ ಅವ್ಯಕ್ತವೆಂದು ಅಂಗೀಕರಿಸಿದೆಯೇ ಹೊರತು ಪ್ರಧಾನವನ್ನಲ್ಲ.

ಸಾಂಖ್ಯರ ಪ್ರಧಾನವು ಜ್ಞೇಯವಾಗಿದೆ ; ಇಲ್ಲಿ ಅವ್ಯಕ್ತವನ್ನು ಜ್ಞೇಯವೆಂದಿಲ್ಲ. 'ಅಶಬ್ದಮಸ್ಪರ್ಶಮ್' ಎಂದು ಮುಂತಾಗಿರುವ ತತ್ತ್ವವನ್ನು ಜ್ಞೇಯವೆಂದು ಇಲ್ಲಿ ಹೇಳಿರುವದು ನಿಜ ; ಆದರೆ ಆ ತತ್ತ್ವವು ಪರಮಾತ್ಮನೇ, ಪ್ರಧಾನವಲ್ಲ. ಇದಲ್ಲದೆ ಅಗ್ನಿ, ಜೀವ, ಪರಮಾತ್ಮ– ಎಂಬ ಮೂರು ವಿಷಯದ ಪ್ರಶ್ನೆಯೂ ಉತ್ತರವೂ ಇದೆ ; ಇಲ್ಲಿ ಪ್ರಧಾನವನ್ನು ನಚಿಕೇತನು ಕೇಳಿರುವದಿದಿವಾದ್ದರಿಂದ ಅದನ್ನು ಯಮನು ಹೇಳಬೇಕಾದದ್ದೂ ಇಲ್ಲ. ಮಹತ್ ಎಂಬ ಶಬ್ದವೂ ಇಲ್ಲಿದೆ ; ಆದರೆ ಆತ್ಮಶಬ್ದವೇ ಮುಂತಾದವುಗಳ ಜೊತೆಯಲ್ಲಿರುವದರಿಂದ ಅದು ಸಾಂಖ್ಯರ ಮಹತ್ತತ್ತ್ವವನ್ನು ಹೇಳುವದಿಲ್ಲವೆಂದು ಸ್ಪಷ್ಟವಾಗಿದೆ ; ಅದರಂತೆ ಅವ್ಯಕ್ತಶಬ್ದದಿಂದ ಪ್ರಧಾನವನ್ನೂ ಹೇಳಿಲ್ಲವೆಂಬುದು ಯುಕ್ತವಾಗಿದೆ.

**ಪ್ರಯೋಜನ :** ಈ ಪಾದದ ಮೊದಲನೆಯ ಮೂರು ಅಧಿಕರಣಗಳಲ್ಲಿಯೂ ಪ್ರಧಾನವು ವೇದಪ್ರಮಾಣಕವೆಂದು ಸಾಧಿಸುವದು ಪೂರ್ವಪಕ್ಷದ ಗುರಿಯು.

## ೨. ಚಮಸಾಧಿಕರಣ

**ಚಮಸವದವಿಶೇಷಾತ್ ॥ ೮ ॥ ಜ್ಯೋತಿರುಪಕ್ರಮಾ ತು ತಥಾ ಹ್ಯಧೀಯತ ಏಕೇ ॥ ೯ ॥ ಕಲ್ಪಿತೋಪದೇಶಾಚ್ಚ ಮಧ್ವಾದಿವದವಿರೋಧಃ ॥ ೧೦ ॥**

**ವಿಷಯವೂ ಸಂಶಯವೂ :** 'ಅಜಾಮೇಕಾಮ್' (ಶ್ವೇ. ೪–೫) ಎಂಬ ಶ್ವೇತಾಶ್ವತರವಾಕ್ಯದಲ್ಲಿ ಅಜಾಶಬ್ದದಿಂದ ಹೇಳಿರುವದು ಪ್ರಧಾನವೊ, ಅಲ್ಲವೊ ?

**ಪೂರ್ವಪಕ್ಷ :** ಇಲ್ಲಿ ಕೆಂಪು, ಬಿಳುಪು, ಕಪ್ಪು– ಎಂಬ ವಿಶೇಷಣಗಳಿರುವದರಿಂದ ರಜಸ್ಸು, ಸತ್ತ್ವ, ತಮಸ್ಸು– ಎಂಬ ಗುಣಗಳುಳ್ಳ ಪ್ರಧಾನವನ್ನೇ ಹೇಳಿದೆ. ಅದು ಪ್ರಕೃತಿಯು, ವಿಕೃತಿಯಲ್ಲ ಎಂದು ಸಾಂಖ್ಯರು ಅಂಗೀಕರಿಸುತ್ತಾರಾದ್ದರಿಂದ ಅದನ್ನು ಅಜಾ (ಹುಟ್ಟುವದಲ್ಲ) ಎಂದು ಕರೆದಿದೆ. ಅವಿದ್ಯೆಯಿಂದ ಪ್ರಧಾನಸಕ್ತನಾದ ಜೀವನು ಸಂಸಾರವನ್ನು ಹೊಂದುತ್ತಾನೆಂದೂ ವಿವೇಕಿಯಾದ ಜೀವನು ಅದನ್ನು ಬಿಟ್ಟುಬಿಡುತ್ತಾನೆಂದೂ ವರ್ಣಿಸಿದೆ. ಆದ್ದರಿಂದ ಇಲ್ಲಿ ಅಜಾ ಎಂದರೆ ಪ್ರಧಾನವೇ.

**ಸಿದ್ಧಾಂತ :** ಅಜಾ ಎಂಬ ಶಬ್ದವಿದ್ದಮಾತ್ರದಿಂದ ಪ್ರಧಾನವೆಂದು ನಿರ್ಣಯಿಸುವದಕ್ಕಾಗುವದಿಲ್ಲ. 'ಅರ್ವಾಗ್ಬಿಲಶ್ಚಮಸ ಊರ್ಧ್ವಬುಧ್ನಃ' (ಬೃ. ೨–೨–೩) ಎಂಬ ವಾಕ್ಯದಲ್ಲಿರುವ ಚಮಸಶಬ್ದದಂತೆ ಇದೂ ಸಾಮಾನ್ಯವಾಚಕವಾಗಿದೆ. ಅಲ್ಲಿ ವಾಕ್ಯಶೇಷದಿಂದ ಚಮಸವೆಂಬುದು ಶಿರಸ್ಸೆಂದು ಗೊತ್ತಾಗುತ್ತದೆ ; ಅದರಂತೆ ಇಲ್ಲಿಯೂ ಛಾಂದೋಗ್ಯದಲ್ಲಿ ಹೇಳಿರುವ ತೇಜೋಽಬನ್ನರೂಪವಾದ ಪ್ರಕೃತಿಯನ್ನೇ ಹೇಳಿದೆ ಎಂಬುದು ತೇಜಆದಿಗಳ ವರ್ಣಗಳಾದ ಶುಕ್ಲಾದಿಗಳನ್ನೇ ಜಗತ್ಕಾರಣವಾದ ಪರಮಾತ್ಮನ ಶಕ್ತಿಗೆ ಹೇಳಿರುವದರಿಂದ ಗೊತ್ತಾಗುತ್ತದೆ. ಶಕ್ತಿಯು ಕಾರ್ಯವಾದ ತೇಜೋಽಬನ್ನಗಳ ಬಣ್ಣವನ್ನು ಲಕ್ಷ್ಯದಲ್ಲಿಟ್ಟು ಶಕ್ತಿಯೂ ಆ ಮೂರು ಬಣ್ಣಗಳುಳ್ಳದ್ದೆಂದು ಹೇಳಿರುವದು ಯುಕ್ತವಾಗಿರುತ್ತದೆ. ತೇಜೋಽಬನ್ನಗಳು ಕಾರ್ಯವಾಗಿರುವದರಿಂದ ಅವನ್ನು ಅಜಾ (ಹುಟ್ಟುವದಲ್ಲ) ಎಂದು ಕರೆಯುವದು ಸರಿಯಲ್ಲ ಎಂದು ಆಕ್ಷೇಪಿಸಬಾರದು. ಆಡಿನ ಹೋಲಿಕೆಯನ್ನು ಕೊಟ್ಟು ಅದನ್ನು ಅಜಾ ಎಂದು ಕರೆದಿರುವದರಿಂದ ಇಲ್ಲಿ ಯಾವ ದೋಷವೂ ಇಲ್ಲ. ಅವನ್ನು ಅವಿವೇಕಿಯಾದ ಜೀವನು ಸೇವಿಸಿ ಸಂಸಾರದಲ್ಲಿ ತೊಳಲುತ್ತಾನೆಂದೂ ವಿವೇಕಿಯಾದವನು ಬಿಟ್ಟು ಮುಕ್ತನಾಗುತ್ತಾನೆಂದೂ ಇಲ್ಲಿ ಹೇಳಿರುತ್ತದೆ. ಮಧುವಲ್ಲದ ಆದಿತ್ಯಾಗಳನ್ನು 'ಮಧು' ಎಂದು ಮುಂತಾಗಿ ಕಲ್ಪಿಸಿರುವಂತೆ ಇಲ್ಲಿ ತೇಜೋಽಬನ್ನಾತ್ಮಕಪ್ರಕೃತಿಯನ್ನು 'ಅಜಾ' ಎಂದು ಕಲ್ಪಿಸಿದೆಯಾದ್ದರಿಂದ ಇಲ್ಲಿ ಪ್ರಧಾನವಾದಕ್ಕೆ ಅವಕಾಶವಿಲ್ಲ.

## ೩. ಸಂಖ್ಯೋಪಸಂಗ್ರಹಾಧಿಕರಣ

**ನ ಸಂಖ್ಯೋಪಸಂಗ್ರಹಾದಪಿ ನಾನಾಭಾವಾದತಿರೇಕಾಚ್ಚ ॥೧೧॥**
**ಪ್ರಾಣಾದಯೋ ವಾಕ್ಯಶೇಷಾತ್ ॥ ೧೨ ॥**
**ಜ್ಯೋತಿಷೈಕೇಷಾಮಸತ್ಯನ್ನೇ ॥ ೧೩ ॥**

ವಿಷಯವೂ ಸಂಶಯವೂ : 'ಯಸ್ಮಿನ್ ಪಞ್ಚ ಪಞ್ಚಜನಾಃ' (ಬೃ. ೪-೪-೧೭) ಎಂಬ ಮಂತ್ರದಲ್ಲಿ ಪ್ರಧಾನವಾದಕ್ಕೆ ಅವಕಾಶವಿದೆಯೆ, ಇಲ್ಲವೆ ?

ಪೂರ್ವಪಕ್ಷ : ಸಾಂಖ್ಯರು ಇಪ್ಪತ್ತೈದು ತತ್ತ್ವಗಳನ್ನು ಒಪ್ಪಿರುತ್ತಾರೆ : ಇಲ್ಲಿ 'ಪಞ್ಚ ಪಞ್ಚಜನಾಃ' ಎಂದಿರುವದರಿಂದ ಇಪ್ಪತ್ತೈದನ್ನೇ ಹೇಳಿದೆ. ಆದ್ದರಿಂದ ಸಾಂಖ್ಯವಾದವೇ ಇದು.

ಸಿದ್ಧಾಂತ : ಇಲ್ಲಿ ಸಾಂಖ್ಯಪ್ರಕ್ರಿಯೆಯಿಲ್ಲ. ಏಕೆಂದರೆ ಸಾಂಖ್ಯರ ಇಪ್ಪತ್ತೈದು ತತ್ತ್ವಗಳನ್ನು ಐದು ಪಂಚಕಗಳಾಗಿ ವಿಂಗಡಿಸುವಕ್ಕೆ ಬರುವದಿಲ್ಲ ; ಇಲ್ಲಿ ಐದು ಐದು ಎಂದು ಕಂಡುಬರುತ್ತಿದೆ. ತತ್ತ್ವಗಳನ್ನು 'ಪಂಚ ಪಂಚಜನ' ಎಂದರೆ ಅವಯವದ್ವಾರವಾಗಿ ಲಕ್ಷಣೆಯಿಂದ ಹೇಳಿದೆ ಎನ್ನಬೇಕಾಗುತ್ತದೆ. ಮುಖ್ಯಾರ್ಥವು ಹೊಂದುವಾಗ ಲಕ್ಷಣೆಯನ್ನು ಅಂಗೀಕರಿಸುವದು ಸರಿಯಲ್ಲ. ಇದೂ ಅಲ್ಲದೆ 'ಪಞ್ಚಜನಾಃ' ಎಂಬುದು ಸಮಸ್ತಪದವೆಂದು ಭಾಷಿಕಸ್ವರದಿಂದಲೂ ತೈತ್ತಿರೀಯದ 'ಪಞ್ಚಾನಾಂ ತ್ವಾ ಪಞ್ಚಜನಾನಾಮ್' ಎಂಬ ಪ್ರಯೋಗದಿಂದಲೂ ಸ್ಪಷ್ಟವಾಗುತ್ತದೆ. ಆದ್ದರಿಂದ ಐದು ಐದು ಎಂದು ವಿಶೇಷ್ಯವಿಶೇಷಣಭಾವವನ್ನು ಕಲ್ಪಿಸುವದಕ್ಕಾಗುವದಿಲ್ಲ. 'ಪಞ್ಚಜನಾಃ' ಎಂಬುದು ಪಞ್ಚಪೂಲೀಶಬ್ದದಂತೆ ಸಮಾಹಾರವನ್ನು ಹೇಳುವದಿಲ್ಲವಾದ್ದರಿಂದಲೂ ಇಲ್ಲಿ ಇಪ್ಪತ್ತೈದು ಎಂಬರ್ಥವು ಸಿಕ್ಕುವದಿಲ್ಲ. ಅಂತೂ ಸಾಂಖ್ಯರ ಇಪ್ಪತ್ತೈದು ತತ್ತ್ವಗಳು ಬೇರೆಬೇರೆಯಾಗಿದ್ದು ಐದು ಪಂಚಕಗಳಾಗುವಂತಿಲ್ಲವಾದ್ದರಿಂದ ಮಂತ್ರದಲ್ಲಿರುವದು ಅವುಗಳ ವಿಷಯವೆನ್ನುವದಕ್ಕಿಲ್ಲ.

ಇದೂ ಅಲ್ಲದೆ ಆತ್ಮ, ಆಕಾಶ– ಇವುಗಳನ್ನು ಬಿಟ್ಟೇ ಇಲ್ಲಿ 'ಪಞ್ಚಪಞ್ಚಜನಾಃ' ಎಂದು ಪ್ರಯೋಗಿಸಿದೆ. ಯಾವ ಆತ್ಮನಲ್ಲಿ ಪಂಚ ಪಂಚಜನರೂ

ಆಕಾಶವೂ ಇದೆಯೋ ಅವನನ್ನು ಅರಿತವನು ಅಮೃತನಾಗುವನು' ಎಂಬುದು ಮಂತ್ರದ ಅರ್ಥವು. ಆದ್ದರಿಂದ ಆತ್ಮನೂ ಆಕಾಶವೂ ಸೇರಿದರೆ ಇಪ್ಪತ್ತೇಳಾಗಬೇಕಾಗುವದರಿಂದಲೂ ಇದು ಸಾಂಖ್ಯರ ತತ್ತ್ವಗಳನ್ನು ಹೇಳುವದಿಲ್ಲ.

ಇಲ್ಲಿ ಹೇಳಿರುವ ಪಂಚಜನರು ಎಂಬುದು 'ಸಪ್ತರ್ಷಿಗಳು' ಎಂಬಂತೆ ಸಂಜ್ಞಾರ್ಥಕವಾದ ಶಬ್ದವು. ಪ್ರಾಣ, ಚಕ್ಷುಸ್ಸು, ಶ್ರೋತ್ರ, ಅನ್ನ, ಮನಸ್ಸು— ಎಂಬ ವಾಕ್ಯಶೇಷದಲ್ಲಿರುವ ಪಂಚಜನರನ್ನು ಹೇಳಿದೆ ಎನ್ನುವದೇ ಯುಕ್ತ, ಕಾಣ್ವಪಾಠದಲ್ಲಿ ಅನ್ನ ಎಂಬುದಿಲ್ಲ; ಅಲ್ಲಿ ಜ್ಯೋತಿ ಎಂಬ ತತ್ತ್ವವನ್ನು ಹಿಂದಿನ ವಾಕ್ಯದಿಂದ ಸೇರಿಸಿಕೊಂಡು ಅರ್ಥಮಾಡಬಹುದು. ಅಂತೂ ಇಲ್ಲಿ ಪ್ರಧಾನವಾದಕ್ಕೆ ಅವಕಾಶವೇ ಇಲ್ಲ.

## ೪. ಕಾರಣತ್ವಾಧಿಕರಣ

**ಕಾರಣತ್ವೇನ ಚಾಕಾಶಾದಿಷು ಯಥಾ ವ್ಯಪದಿಷ್ಟೋಕ್ತೇಃ ||೧೪||**
**ಸಮಾಕರ್ಷಾತ್ ೧೫**

**ವಿಷಯವೂ ಸಂಶಯವೂ :** ಬ್ರಹ್ಮಕ್ಕೆ ಜನ್ಮಾದಿಕಾರಣತ್ವವೂ ಗತಿಸಾಮಾನ್ಯವೂ ಹಿಂದಿನ ಗ್ರಂಥಭಾಗದಲ್ಲಿ ಉಕ್ತವಾಗಿದೆಯಷ್ಟೆ. ಆದ್ದರಿಂದ ಬ್ರಹ್ಮದಲ್ಲಿಯೇ ವೇದಾಂತವಾಕ್ಯಗಳ ತಾತ್ಪರ್ಯವಿರುವದೆಂದು ಹೇಳಬಹುದೊ, ಇಲ್ಲವೊ ?

**ಪೂರ್ವಪಕ್ಷ ;** ಹೇಳಕೂಡದು. ಏಕೆಂದರೆ ಸೃಷ್ಟಿಕ್ರಮವನ್ನು ಒಂದೊಂದು ಉಪನಿಷತ್ತಿನಲ್ಲಿ ಒಂದೊಂದು ಬಗೆಯಾಗಿ ಹೇಳಿದೆ. ಸೃಷ್ಟಿಯ ಕ್ರಮದಲ್ಲಿ ಆಕಾಶವು ಮೊದಲೆಂದು ಒಂದು ಕಡೆ, ತೇಜವು ಮೊದಲೆಂದು ಒಂದು ಕಡೆ, ಪ್ರಾಣವು ಮೊದಲೆಂದು ಒಂದು ಕಡೆ, ಯಾವ ಕ್ರಮವೂ ಇಲ್ಲದೆ ಲೋಕಗಳು ಸೃಷ್ಟವಾಗಿವೆ ಎಂದು ಒಂದು ಕಡೆ, ಅಸತ್ತಿನಿಂದ ಸೃಷ್ಟಿಯಾಗಿದೆ ಎಂದು ಒಂದು ಕಡೆ, ತಾನೇ ಜಗತ್ತು ಸೃಷ್ಟಿಯಾಗಿದೆ ಎಂದು ಒಂದು ಕಡೆ— ಹೀಗೆಲ್ಲ ಹೇಳಿರುವದರಿಂದ ಬ್ರಹ್ಮವೇ ಜಗತ್ಕಾರಣವೆಂಬುದಕ್ಕೆ ವೇದಾಂತಪ್ರಮಾಣವಿಲ್ಲ. ಆದ್ದರಿಂದ ಸ್ಮೃತಿಯುಕ್ತಿಗಳ ಆಶಯದಿಂದ ಪ್ರಧಾನಾದಿಕಾರಣವಾದವನ್ನು ಒಪ್ಪಬೇಕು.

ಸಿದ್ಧಾಂತ : ಕಾರ್ಯದ ವಿಷಯದಲ್ಲಿ ವಿಗಾನವಿದ್ದರೂ ಕಾರಣವು ಬ್ರಹ್ಮವೇ ಎಂಬ ವಿಷಯದಲ್ಲಿ ಗತಿಸಾಮಾನ್ಯವಿದೆ. ಇದನ್ನೇ ಪ್ರತಿವೇದಾಂತದಲ್ಲಿಯೂ ತಾತ್ಪರ್ಯದಿಂದ ಹೇಳಿದೆ. ಕಾರ್ಯವಿಷಯದಲ್ಲಿ ವಿಗಾನವಿದ್ದ ಮಾತ್ರದಿಂದ ಕಾರಣವಾದ ಬ್ರಹ್ಮವನ್ನು ತಾತ್ಪರ್ಯದಿಂದ ವೇದಾಂತವಾಕ್ಯಗಳು ಹೇಳುತ್ತಿರುವದನ್ನು ಅಲ್ಲಗಳೆಯುವದು ಯುಕ್ತವಲ್ಲ. ಇದಲ್ಲದೆ ಕಾರ್ಯವಿಷಯದಲ್ಲಿಯೂ ವಿಗಾನವಿಲ್ಲವೆಂಬುದನ್ನು ಮುಂದೆ ಸೂತ್ರಕಾರರು ತೋರಿಸಿಕೊಡುತ್ತಾರೆ. ಆ ವಿಷಯದಲ್ಲಿ ಒಂದುವೇಳೆ ವಿಗಾನವಿದ್ದರೂ ಬಾಧಕವಿಲ್ಲ. ಏಕೆಂದರೆ ಸೃಷ್ಟಿಜ್ಞಾನದಿಂದ ಯಾವ ಫಲವಾದರೂ ಆಗುವದೆಂದು ಶ್ರುತಿಯಲ್ಲಿ ಹೇಳಿರುವದಿಲ್ಲ. ಸೃಷ್ಟಿಯನ್ನು ಬ್ರಹ್ಮಜ್ಞಾನಕ್ಕೇ ಉಪಾಯವಾಗಿ ಹೇಳಿರುತ್ತದೆ. ಬ್ರಹ್ಮಜ್ಞಾನದಿಂದಲಾದರೆ ಪರಮಪುರುಷಾರ್ಥವುಂಟಾಗುವದೆಂದು ಶ್ರುತಿಯಲ್ಲಿ ಹೇಳಿರುತ್ತದೆ ; ಅದು ಅನುಭವಕ್ಕೆ ಬರುವ ಫಲವೂ ಆಗಿರುತ್ತದೆ.

ಅಸತ್ತು ಕಾರಣವೆಂದು ಶ್ರುತಿಯಲ್ಲಿ ಹೇಳಿಲ್ಲ : ಕೆಲವು ಕಡೆಯಲ್ಲಿ ಅಸದ್ವಾದವನ್ನು ಖಂಡಿಸಿದೆ. ಇನ್ನು ಕೆಲವು ಕಡೆಗಳಲ್ಲಿ ಅವ್ಯಾಕೃತವನ್ನೇ ಅಸತ್ತೆಂದು ಕರೆದಿದೆ. ಜಗತ್ತು ನಾಮರೂಪಗಳಾಗಿ ತಾನೇ ವ್ಯಾಕೃತವಾಯಿತು ಎಂದು ಶ್ರುತಿಯಲ್ಲಿ ಹೇಳಿರುವ ಕಡೆಯಲ್ಲಿ ವ್ಯಾಕರಣಕರ್ತೃವಾದ ಈಶ್ವರನನ್ನು ಇಟ್ಟುಕೊಂಡೇ ಹಾಗೆಂದು ಹೇಳಿರುತ್ತದೆ.

ಆದ್ದರಿಂದ ಬ್ರಹ್ಮಕಾರಣವಾದವು ಶ್ರುತಿಸಿದ್ಧವಾಗಿದೆ ; ಬ್ರಹ್ಮದ ವಿಷಯದಲ್ಲಿ ಶ್ರುತಿಗಳ ಗತಿಸಾಮಾನ್ಯವೂ ಇದೆ.

## ೫. ಬಾಲಾಕ್ಯಧಿಕರಣ

**ಜಗದ್ವಾಚಿತ್ವಾತ್ ॥ ೧೬ ॥ ಜೀವಮುಖ್ಯಪ್ರಾಣಲಿಂಗಾನ್ನೇತಿ ಚೇತ್ ತದ್ವ್ಯಾಖ್ಯಾತಮ್ ॥ ೧೭ ॥ ಅನ್ಯಾರ್ಥಂ ತು ಜೈಮಿನಿಃ ಪ್ರಶ್ನವ್ಯಾಖ್ಯಾನಾಭ್ಯಾಮಪಿ ಚೈವಮೇಕೇ ॥ ೧೮ ॥**

ವಿಷಯವೂ ಸಂಶಯವೂ : 'ಯೋ ವೈ ಬಾಲಾಕ ಏತೇಷಾಂ ಪುರುಷಾಣಾಂ ಕರ್ತಾ ಯಸ್ಯ ವೈ ತತ್ ಕರ್ಮ ಸ ವೇದಿತವ್ಯಃ' (ಕೌ. ೪–

೧೮) ಎಂಬ ವಾಕ್ಯದಲ್ಲಿ ಜ್ಞೇಯವೆಂದು ಹೇಳಿರುವದು ಜೀವನನ್ನೋ, ಪ್ರಾಣನನ್ನೋ, ಪರಮಾತ್ಮನನ್ನೋ ?

**ಪೂರ್ವಪಕ್ಷ :** ಕರ್ಮವೆಂದರೆ ಚಲನೆಯು. ಇದು ಪ್ರಾಣಕ್ಕೆ ಹೊಂದುತ್ತದೆ. ಆದಿತ್ಯಾದಿಪುರುಷರಿಗೆ ಪ್ರಾಣನೂ ಕರ್ತನಾಗಬಹುದು. ಸುಷುಪ್ತಿಯಲ್ಲಿ ಜೀವನು ಪ್ರಾಣನೊಡನೆ ಒಂದಾಗುತ್ತಾನೆ ಎಂದು ಪ್ರಾಣಶಬ್ದವಿದೆ. ಅಥವಾ ಜೀವನಿಗೆ ಧರ್ಮಾಧರ್ಮರೂಪವಾದ ಕರ್ಮವುಂಟು ; ಅವನು ಭೋಕ್ತೃವಾದ್ದರಿಂದ ಭೋಗೋಪಕರಣರಾಗಿರುವ ಪುರುಷರ ಕರ್ತೃವೂ ಆಗಬಹುದು. ನಿದ್ರಿಸುತ್ತಿದ್ದ ಪುರುಷನನ್ನು ಎಬ್ಬಿಸಿ ಪ್ರಾಣನಿಗಿಂತ ಬೇರೆಯಾದ ಭೋಕ್ತೃವನ್ನು ಅಜಾತಶತ್ರುವು ತೋರಿಸಿಕೊಟ್ಟನೆಂದಿರುವದರಿಂದ ಇದು ಜೀವನೇ ಎನ್ನಬಹುದು. ಇವನು ಪ್ರಾಣಧಾರಣೆಮಾಡಿಕೊಂಡಿರುವದರಿಂದ ಪ್ರಾಣನೆಂದೂ ಕರೆಯಬಹುದು. ಅಂತೂ ಜೀವಮುಖ್ಯಪ್ರಾಣರಲ್ಲಿ ಒಬ್ಬನು ಪುರುಷರ ಕರ್ತನು ; ಪರಮಾತ್ಮನಲ್ಲ, ಏಕೆಂದರೆ ಇಲ್ಲಿ ಪರಮಾತ್ಮಲಿಂಗವೇ ಇಲ್ಲ.

**ಸಿದ್ಧಾಂತ :** ಇಲ್ಲಿ ಉಪಕ್ರಮದಲ್ಲಿ 'ಬ್ರಹ್ಮವನ್ನು ಹೇಳುತ್ತೇನೆ' ಎಂದು ಬಾಲಕಿ ಪ್ರಾರಂಭಿಸಿರುತ್ತಾನೆ ; 'ಬ್ರಹ್ಮನನ್ನು ಹೇಳುತ್ತೇನೆಂದು ಸುಳ್ಳುಹೇಳಿದೆಯಲ್ಲ !' ಎಂದು ಅಜಾತಶತ್ರು ಹಂಗಿಸಿರುತ್ತಾನೆ. ಆಮೇಲೆ ಪುರುಷರ ಕರ್ತೃವನ್ನು ಹೇಳಿರುತ್ತಾನೆ. ಆದ್ದರಿಂದ ಉಪಕ್ರಮದ ಬಲದಿಂದ ಇದು ಬ್ರಹ್ಮವೇ ಆಗಿರಬೇಕೆಂದು ನಿಶ್ಚಯವಾಗುತ್ತದೆ. ಆದಿತ್ಯಾದಿಪುರುಷರ ಕರ್ತೃ ಎಂಬುದು ಪರಮೇಶ್ವರನಿಗೇ ಒಪ್ಪುತ್ತದೆ. 'ಇದು ಯಾರ ಕರ್ಮವೋ' ಎಂದಿರುವದು ಚಲನರೂಪವಾದ ಅಥವಾ ಧರ್ಮಾಧರ್ಮರೂಪವಾದ ಕರ್ಮವಲ್ಲ ; ಮಾಡಲ್ಪಡುವ ಜಗದ್ರೂಪವಾದ ಕರ್ಮವು. ಈಶ್ವರನು ಈ ಪುರುಷರಿಗೆ– ಅಥವಾ ಇವರಿಗೆ– ಏಕೆ ? ಇಡಿಯ ಜಗತ್ತಿಗೇ– ಕರ್ತೃ ಎಂದು ಅಜಾತಶತ್ರು ಹೇಳಿರುತ್ತಾನೆ.

ಜೀವಮುಖ್ಯಪ್ರಾಣಲಿಂಗಗಳೂ ಇಲ್ಲವೆ ?– ಎಂದರೆ ಮೂರು ಬೇರೆ ಬೇರೆಯ ಉಪಾಸನೆಗಳನ್ನು ಇಲ್ಲಿ ಹೇಳಿದೆ ಎಂದು ಒಪ್ಪಬೇಕಾಗುವದರಿಂದ ಇದು ಸರಿಯಲ್ಲ. ಉಪಕ್ರಮೋಪಸಂಹಾರಗಳಿಂದ ಇದು ಬ್ರಹ್ಮವಿಷಯವೇ ಎಂದು ನಿರ್ಣಯವಾಗುತ್ತದೆ. ಆದ್ದರಿಂದ ಇಲ್ಲಿರುವ ಪ್ರಾಣಶಬ್ದವು ಬ್ರಹ್ಮ

ಪರವು. ಜೀವಲಿಂಗವು ಬ್ರಹ್ಮಾಭೇದಾಭಿಪ್ರಾಯದಿಂದ ಬ್ರಹ್ಮಕ್ಕೇ ಅನ್ವಯಿಸತಕ್ಕದ್ದು. ಅಥವಾ ಇಲ್ಲಿರುವ ಜೀವಪರಾಮರ್ಶವು ಬ್ರಹ್ಮಜ್ಞಾನಕ್ಕಾಗಿಯೇ ಎಂಬುದು 'ಈ ಪುರುಷನು ಎಲ್ಲಿ ಮಲಗಿದ್ದನು, ಎಲ್ಲಿ ಹೀಗೆ ಇರುತ್ತಿದ್ದನು, ಎಲ್ಲಿಂದ ಹೀಗೆ ಬಂದನು ?' ಎಂಬ ಪ್ರಶ್ನೆಯಿಂದಲೂ 'ಸುಷುಪ್ತಿಯಲ್ಲಿ ಈ ಪ್ರಾಣನಲ್ಲಿಯೇ ಒಂದಾಗುತ್ತಾನೆ, ಈ ಆತ್ಮನಿಂದಲೇ ಪ್ರಾಣಾದಿಗಳು ಹೊರಟುಬರುತ್ತಾರೆ'— ಎಂಬ ಪ್ರತಿವಚನದಿಂದಲೂ ಸ್ಪಷ್ಟವಾಗುತ್ತದೆ. ಆದ್ದರಿಂದ ಸುಷುಪ್ತಿಯಲ್ಲಿ ಪ್ರಾಣಜೀವರುಗಳಿಗಿಂತ ವ್ಯತಿರಿಕ್ತವಾದ ಬ್ರಹ್ಮದಲ್ಲಿಯೇ ಸೇರಿಕೊಂಡಿದ್ದು ಆದರಿಂದಲೇ ಎಲ್ಲವೂ ಎಚ್ಚರದಲ್ಲಿ ಹೊರಕ್ಕೆ ಬರುತ್ತದೆ ಎಂಬ ವೇದಾಂತಸಿದ್ಧಾಂತವನ್ನೇ ಇಲ್ಲಿ ಹೇಳಿರುತ್ತದೆ ಎಂದು ತಿಳಿಯಬೇಕು.

## ೬. ವಾಕ್ಯಾನ್ವಯಾಧಿಕರಣ

ವಾಕ್ಯಾನ್ವಯಾತ್ ॥ ೧೯ ॥ ಪ್ರತಿಜ್ಞಾಸಿದ್ಧೇರ್ಲಿಂಗಮಾಶ್ಮರಥ್ಯಃ ॥ ೨೦ ॥ ಉತ್ಕ್ರಮಿಷ್ಯತ ಏವಂಭಾವಾದಿತ್ಯೌಡುಲೋಮಿಃ॥೨೧॥ ಅವಸ್ಥಿತೇರಿತಿ ಕಾಶಕೃತ್ಸ್ನಃ ॥ ೨೨ ॥

ವಿಷಯವೂ ಸಂಶಯವೂ : ಮೈತ್ರೇಯೀಬ್ರಾಹ್ಮಣದಲ್ಲಿ 'ನ ವಾ ಅರೇ ಪತ್ಯುಃ ಕಾಮಾಯ ಪತಿಃ ಪ್ರಿಯೋ ಭವತಿ' ಎಂದು ಮುಂತಾಗಿರುವ ವಾಕ್ಯವಿದೆ. ಅಲ್ಲಿ 'ಆತ್ಮನ ಕಾಮಕ್ಕಾಗಿಯೇ ಎಲ್ಲವೂ ಪ್ರಿಯವಾಗುತ್ತದೆ. ಆತ್ಮನೇ ದ್ರಷ್ಟವ್ಯನು, ಶ್ರೋತವ್ಯನು, ಮಂತವ್ಯನು, ನಿದಿಧ್ಯಾಸಿತವ್ಯನು ; ಎಲೆ ಮೈತ್ರೇಯಿ, ಆತ್ಮನ ದರ್ಶನದಿಂದ, ಶ್ರವಣದಿಂದ, ಮತಿಯಿಂದ, ವಿಜ್ಞಾನದಿಂದ— ಇದೆಲ್ಲವೂ ವಿದಿತವಾಗುವದು' (ಬೃ. ೨-೪-೫) ಎಂದು ಹೇಳಿರುತ್ತದೆ. ಈ ವಾಕ್ಯವು ವಿಜ್ಞಾನಾತ್ಮವಿಷಯವೋ, ಪರಮಾತ್ಮವಿಷಯವೋ ?

ಪೂರ್ವಪಕ್ಷ : ಪ್ರಿಯಸಂಸೂಚಿತವಾದ ಭೋಕ್ತೃವಾದ ಆತ್ಮನನ್ನೇ ಉಪಕ್ರಮಿಸಿ ಈ ಆತ್ಮದರ್ಶನಾದಿಗಳನ್ನು ಹೇಳಿರುವದರಿಂದ ವಿಜ್ಞಾನಾತ್ಮನನ್ನೇ ಹೇಳಿದೆ ಎನ್ನಬೇಕು. 'ಈ ಮಹದ್ಭೂತವು ಅನಂತವು, ಅಪಾರವು ; (ಇದು) 'ಈ ಭೂತಗಳೊಳಗಿಂದ ಎದ್ದು ಅವುಗಳನ್ನೇ ಅನುಸರಿಸಿ ನಾಶವಾಗು

ತ್ತದೆ' ಎಂದು ವಿಜ್ಞಾತೃಸ್ವರೂಪವನ್ನೇ ಹೇಳಿದೆ. 'ಎಲೆ, ವಿಜ್ಞಾತೃವನ್ನು ಏತರಿಂದ ಅರಿತಾನು ?' ಎಂದು ಕರ್ತೃವಾಚಕ ತೃಚ್‌ಪ್ರತ್ಯಯದ ವಿಜ್ಞಾತೃ ಶಬ್ದವನ್ನು ಉಪಯೋಗಿಸಿರುವದರಿಂದಲೂ ಇದು ವಿಜ್ಞಾನಮಯನೆಂದು ಗೊತ್ತಾಗುತ್ತದೆ. ಆದಕಾರಣ ಜ್ಞಾನಾತ್ಮನು ಭೋಕ್ತೃವಾಗಿರುವದ ರಿಂದಲೂ ಭೋಕ್ತೃವಿಗಾಗಿಯೇ ಭೋಗ್ಯವೆಲ್ಲವೂ ಇದ್ದುಕೊಂಡಿರುವದ ರಿಂದಲೂ ಆತ್ಮವಿಜ್ಞಾನದಿಂದ ಎಲ್ಲವನ್ನೂ ಅರಿತುಕೊಂಡಂತಾಗುವದೆಂದು ಹೇಳಿದೆ ಎನ್ನಬೇಕು.

**ಸಿದ್ಧಾಂತ** ಈ ವಾಕ್ಯದ ಅವಯವಗಳೆಲ್ಲ ಪರಮಾತ್ಮನಲ್ಲಿಯೇ ಅನ್ವಿತವಾಗಿರುವದರಿಂದ ಇದು ಪರಮಾತ್ಮೋಪದೇಶವೇ. ಹೇಗೆಂದರೆ (೧) ಯಾಜ್ಞವಲ್ಕ್ಯನು ವಿತ್ತದಿಂದ ಅಮೃತತ್ವವು ಸಿಕ್ಕುವ ಆಶೆಯಿಲ್ಲವೆಂದು ಹೇಳಲು ಅಮೃತತ್ವಕಾರಣವನ್ನೇ ಹೇಳು ಎಂದು ಮೈತ್ರೇಯಿ ಕೇಳಿರುತ್ತಾಳೆ. ಆದ್ದರಿಂದ ಇದು ಪರಮಾತ್ಮವಿಚಾರ. (೨) ಆತ್ಮವಿಜ್ಞಾನದಿಂದ ಸರ್ವವನ್ನೂ ತಿಳಿದಂತಾಗುವದೆಂದು ಯಾಜ್ಞವಲ್ಕ್ಯನು ಹೇಳಿರುವದು ಪರಮಾತ್ಮನ ವಿಷಯ ದಲ್ಲಿಯೇ ಮುಖ್ಯಾರ್ಥದಿಂದ ಹೊಂದುತ್ತದೆ. (೩) ಇದೆಲ್ಲವೂ ಈ ಆತ್ಮನೇ ಎಂದು ಜಗತ್ತೆಲ್ಲವೂ ಆತ್ಮನಿಗಿಂತ ಬೇರೆಯಿಲ್ಲವೆಂದು ಹೇಳಿದೆ; ದುಂದುಭ್ಯಾದಿ ದೃಷ್ಟಾಂತಗಳಿಂದ ಇದನ್ನೇ ಗಟ್ಟಿಗೊಳಿಸಿದೆ. (೪) ನಾಮರೂಪಕರ್ಮಾತ್ಮಕ ವಾದ ಋಗ್ವೇದಾದಿಜಗತ್ತು ಈ ಆತ್ಮನ ಉಸಿರೆಂದು ಹೇಳಿದೆ. (೫) ವಿಷಯ, ಇಂದ್ರಿಯ, ಅಂತಃಕರಣ– ಇವೆಲ್ಲವೂ ಸೇರಿದ ಜಗತ್ತು ಅನಂತರವೂ ಅಬಾ ಹ್ಯವೂ ಆಗಿರುವ ಪರಿಪೂರ್ಣವಾದ ಒಂದರಲ್ಲಿ ಲಯವಾಗುವದೆಂದು ಹೇಳಿರುತ್ತದೆ.

ಇಲ್ಲಿ ಪ್ರಿಯಸಂಸೂಚಿತನಾದ ಜೀವನ ಉಪಕ್ರಮವಿದೆಯಲ್ಲ !– ಎಂಬ ಶಂಕೆಗೆ ಮೂರು ಜನ ಆಚಾರ್ಯರು ಮೂರು ವಿಧವಾಗಿ ಸಮಾಧಾನವನ್ನು ಕೊಟ್ಟಿರುತ್ತಾರೆ: (೧) ಏಕವಿಜ್ಞಾನದಿಂದ ಸರ್ವವಿಜ್ಞಾನವಾಗುವದು, ಇದೆಲ್ಲವೂ ಆತ್ಮನೇ ಎಂಬ ಪ್ರತಿಜ್ಞೆಯ ಸಿದ್ಧಿಗಾಗಿ ಜೀವಬ್ರಹ್ಮರ ಅಭೇದಾಂಶ ವನ್ನು ಉಪಕ್ರಮವದಲ್ಲಿ ಹೇಳಿದೆ ಎಂದು ಆಶ್ಮರಥ್ಯನು; (೨) ಜ್ಞಾನಧ್ಯಾನ ಗಳಿಂದ ಸಂಸ್ಕೃತನಾದ ಜೀವನು ಸತ್ತಬಳಿಕ ಪರಮಾತ್ಮನಲ್ಲಿ ಐಕ್ಯವನ್ನು ಪಡೆಯುವನಾದ್ದರಿಂದ ಹೀಗೆ ಉಪಕ್ರಮಿಸಿದೆ ಎಂದು ಔಡುಲೋಮಿ;

(೩) ಪರಮಾತ್ಮನೇ ಈಗಲೂ ಅವಿದ್ಯೆಯಿಂದ ಜೀವರೂಪನಾಗಿ ಕಾಣುತ್ತಿರುವನಾದ್ದರಿಂದ ಹೀಗೆಂದು ಉಪಕ್ರಮಿಸಿದೆ ಎಂದು ಕಾಶಕೃತ್ಸ್ನ. ಈ ಮೂರರಲ್ಲಿ ಕೊನೆಯದೇ ವೇದಾಂತಸಿದ್ಧಾಂತವು; ಏಕೆಂದರೆ ಹಾಗೆ ಒಪ್ಪದಿದ್ದರೆ ಜ್ಞಾನದಿಂದ ಮೋಕ್ಷವೆಂಬುದನ್ನೂ ಮೋಕ್ಷವು ನಿತ್ಯವೆಂಬುದನ್ನೂ ಅದು ಆತ್ಮನ ಸ್ವಭಾವವೇ ಎಂಬುವನ್ನೂ ತಿರಸ್ಕರಿಸಬೇಕಾಗುವದು.

## ೭. ಪ್ರಕೃತ್ಯಧಿಕರಣ

**ಪ್ರಕೃತಿಶ್ಚ ಪ್ರತಿಜ್ಞಾದೃಷ್ಟಾನ್ತಾನುಪರೋಧಾತ್ ||೨೩|| ಅಭಿಧ್ಯೋಪದೇಶಾಚ್ಚ ||೨೪|| ಸಾಕ್ಷಾಚ್ಚೋಭಯಾಮ್ನಾನಾತ್ ||೨೫|| ಆತ್ಮಕೃತೇಃ ಪರಿಣಾಮಾತ್ ||೨೬|| ಯೋನಿಶ್ಚ ಹಿ ಗೀಯತೇ ||೨೭||**

ವಿಷಯವೂ ಸಂಶಯವೂ : ಬ್ರಹ್ಮವು ಜಗತ್ಕಾರಣವು ಎಂದು ಹೇಳುವ ವಾಕ್ಯಗಳು ಬರಿಯ ನಿಮಿತ್ತಕಾರಣವನ್ನು ಹೇಳುವವೊ, ಅಥವಾ ಉಪಾದಾನಕಾರಣವನ್ನು ಹೇಳುವವೊ ?

ಪೂರ್ವಪಕ್ಷ : ಬರಿಯ ನಿಮಿತ್ತಕಾರಣವನ್ನೇ ಹೇಳುತ್ತವೆ. ಏಕೆಂದರೆ ಬ್ರ ಕುಂಬಾರನೇ ಮುಂತಾದವರಂತೆ ಯೋಚಿಸಿ ಸೃಷ್ಟಿಸಿತು ಎಂದು ಶ್ರುತಿಯಲ್ಲಿ ಹೇಳಿದೆ. ಒಂದು ಕ್ರಿಯೆಗೆ ಅನೇಕ ಕಾರಕಗಳು ಬೇಕೆಂಬುದು ಲೋಕದಲ್ಲಿ ಕಂಡಿದೆ. ಈಶ್ವರರಾದ ರಾಜವೈವಸ್ವತನೇ ಮುಂತಾದವರು ನಿಮಿತ್ತಕಾರಣರಾಗಿರುವದರಿಂದ ಪರಮೇಶ್ವರನೂ ನಿಮಿತ್ತಕಾರಣವಾಗಿರಬೇಕು. ಕಾರ್ಯವು ತನ್ನ ಉಪಾದಾನಕಾರಣಕ್ಕೆ ಸದೃಶವಾಗಿರಬೇಕು. ಪ್ರಕೃತದಲ್ಲಿ ಕಾರ್ಯವಾದ ಜಗತ್ತು ಸಾವಯವ; ಅಚೇತನ, ಅಶುದ್ಧ; ಅದಕ್ಕೆ ನಿರವಯವವೂ ಚೇತನವೂ ಶುದ್ಧವೂ ಆಗಿರುವ ಬ್ರಹ್ಮವು ಉಪಾದಾನಕಾರಣವಾಗಲಾರದು. ಆದ್ದರಿಂದ ಪ್ರಧಾನವೇ ಮುಂತಾದವುಗಳಲ್ಲಿ ಒಂದು ಉಪಾದಾನಕಾರಣವೆಂದೂ ಬ್ರಹ್ಮವು ನಿಮಿತ್ತಕಾರಣವೆಂದೂ ಒಪ್ಪುವದು ಯುಕ್ತ.

ಸಿದ್ಧಾಂತ : ಬ್ರಹ್ಮವು ಉಪಾದಾನವೂ ಆಗಿದೆ. ಏಕೆಂದರೆ ಒಂದನ್ನು ಅರಿತರೆ ಎಲ್ಲವನ್ನೂ ಅರಿತಂತೆ ಆಗುವದೆಂಬ ಪ್ರತಿಜ್ಞೆಯೂ ಮಣ್ಣು, ಮಡಕೆ-

ಮುಂತಾದವುಗಳ ದೃಷ್ಟಾಂತವೂ ಶ್ರುತಿಯಲ್ಲಿದೆ. ಇದು ಉಪಾದಾನಕಾರಣಕ್ಕೇ ಹೊಂದುತ್ತದೆ. ಆದ್ದರಿಂದ ಬ್ರಹ್ಮವು ಉಪಾದಾನವು. ಆದರೆ ಜಗತ್ತನ್ನು ಸೃಷ್ಟಿಸುವಾಗ ಬ್ರಹ್ಮವು–ಮಣ್ಣು, ಚಿನ್ನ ಮುಂತಾದವುಗಳಂತೆ–ಮತ್ತೊಬ್ಬ ಅಧಿಷ್ಠಾತೃವನ್ನು ಬಯಸಿತೆಂದು ಶ್ರುತಿಯಲ್ಲಿಲ್ಲವಾದ್ದರಿಂದ ಅದು ನಿಮಿತ್ತವೂ ಆಗಿರಬೇಕು. ಬ್ರಹ್ಮವು ಯೋಚಿಸಿನೋಡಿ ಎಲ್ಲವೂ ಆಯಿತೆಂದು ಹೇಳಿರುವದರಿಂದಲೂ ಆದರಿಂದಲೇ ಜಗತ್ತಿನ ಸೃಷ್ಟಿಯೂ ಅದರಲ್ಲಿಯೇ ಪ್ರಲಯವೂ ಆಗುವದೆಂದಿರುವದರಿಂದಲೂ ಬ್ರಹ್ಮವು ತನ್ನನ್ನು ತಾನೇ ಮಾಡಿಕೊಂಡಿತು ಎಂದು ಹೇಳಿರುವದರಿಂದಲೂ ಅದು ಜಗತ್ತಿಗೆ ಯೋನಿ ಎಂದು ಹೇಳಿರುವದರಿಂದಲೂ ಬ್ರಹ್ಮವು ಜಗತ್ತಿಗೆ ಉಪಾದಾನವೂ ಆಗಿದೆ ಎಂದು ಒಪ್ಪಬೇಕು. ಪೂರ್ವಪಕ್ಷದಲ್ಲಿ ಹೇಳಿರುವ ಯುಕ್ತಿಗಳು ಶ್ರುತಿವಿರುದ್ಧವಾಗಿರುವದರಿಂದ ಒಪ್ಪತಕ್ಕವಲ್ಲ.

## ೮. ಸರ್ವವ್ಯಾಖ್ಯಾನಾಧಿಕರಣ

ಏತೇನ ಸರ್ವೇ ವ್ಯಾಖ್ಯಾತಾ ವ್ಯಾಖ್ಯಾತಾಃ ॥೨೮॥

**ವಿಷಯವೂ ಸಂಶಯವೂ :** ಜಗತ್ತಿಗೆ ಅಣುವೇ ಮುಂತಾದವು ಕಾರಣವೆಂಬುದು ಶ್ರುತಿಸಿದ್ಧವೆ, ಅಲ್ಲವೆ ?

**ಪೂರ್ವಪಕ್ಷ :** ಅವಕ್ಕೂ ಶ್ರುತಿಲಿಂಗಗಳಿರುವದರಿಂದ ಅವೂ ಕಾರಣವಾಗಬಹುದು.

**ಸಿದ್ಧಾಂತ :** ಅನೇಕ ವೈದಿಕಲಿಂಗಗಳು ಇರುವಂತೆ ತೋರುವ, ಸ್ಮೃತಿಕಾರರೂ ಕೆಲವಂಶಗಳಲ್ಲಿ ಒಪ್ಪಿರುವ ಪ್ರಧಾನಕಾರಣವಾದವೇ ಶ್ರುತ್ಯನುಸಾರಿಯಲ್ಲವೆಂದು ನಿರಾಕರಿಸಿದ್ದಾಗಿದೆ. ಹೀಗಿರುವಲ್ಲಿ ಯಾವ ಶಬ್ದಪ್ರಮಾಣವೂ ಇಲ್ಲದ, ವೇದವಿರುದ್ಧವೇ ಆಗಿರುವ, ಯಾವ ಸ್ಮೃತಿಕಾರರೂ ಅಂಗೀಕರಿಸದ, ಆ ಅಣ್ವಾದಿಕಾರಣವಾದಗಳು ಶ್ರುತಿಸಿದ್ಧವಲ್ಲವೆಂಬುದನ್ನು ಹೇಳತಕ್ಕದ್ದೇನಿದೆ ? ಅವುಗಳನ್ನು ಸಾಂಖ್ಯಖಂಡನೆಯಿಂದಲೇ ಖಂಡಿಸಿದಂತೆ ಆಗಿದೆ. ಆದ್ದರಿಂದ ಬ್ರಹ್ಮವೇ ಜಗತ್ಕಾರಣವು; ಅದರಲ್ಲಿಯೇ ಗತಿಸಾಮಾನ್ಯವಿದೆ–ಎಂಬುದು ನಿರಾತಂಕವಾಗಿದೆ.

# ಎರಡನೆಯ ಅಧ್ಯಾಯ

## ಒಂದನೆಯ ಪಾದ

ಒಂದನೆಯ ಅಧ್ಯಾಯದ ಕೊನೆಯ ಪಾದದಲ್ಲಿ ಸಾಂಖ್ಯಾದಿದರ್ಶನಗಳು ಅವೈದಿಕವೆಂಬುದನ್ನು ತೋರಿಸಿಕೊಟ್ಟಿದೆ. ಎರಡನೆಯ ಅಧ್ಯಾಯದ ಈ ಮೊದಲನೆಯ ಪಾದದಲ್ಲಿ ವೇದಾಂತದರ್ಶನವು ಸಾಂಖ್ಯಾದಿಸ್ಮೃತಿಗಳಿಗೂ ಅಪರ ನ್ಯಾಯಗಳಿಗೂ ವಿರುದ್ಧವಾಗಿದೆ ಎಂಬ ಆಕ್ಷೇಪವನ್ನು ಪರಿಹರಿಸಲಾಗುತ್ತದೆ.

### ೧. ಸ್ಮೃತ್ಯಧಿಕರಣ

ಸ್ಮೃತ್ಯನವಕಾಶದೋಷಪ್ರಸಙ್ಗ ಇತಿ ಚೇನ್ನಾನ್ಯಸ್ಮೃತ್ಯನವಕಾಶ ದೋಷಪ್ರಸಙ್ಗಾತ್ ||೧|| ಇತರೇಷಾಂ ಚಾನುಪಲಬ್ಧೇಃ ||೨||

**ಸಂಶಯವೂ ಪೂರ್ವಪಕ್ಷವೂ :** ಬ್ರಹ್ಮಕಾರಣವಾದವು ಸ್ಮೃತಿ ವಿರುದ್ಧವೆ, ಅಲ್ಲವೆ ? ಎಂಬ ಸಂಶಯವು ಬರಲಾಗಿ ಪೂರ್ವಪಕ್ಷವೇನೆಂದರೆ ಕಪಿಲಪ್ರಣೀತವಾದ ತಂತ್ರವೆಂಬ ಸ್ಮೃತಿಗೂ ಅದಕ್ಕನುಗುಣವಾಗಿರುವ ಸ್ಮೃತಿಗಳಿಗೂ ಈ ವಾದವು ವಿರುದ್ಧವಾಗಿರುತ್ತದೆ. ಮನ್ವಾದಿಸ್ಮೃತಿಗಳು ಈ ವಾದಕ್ಕೆ ಅನುಗುಣವಾಗಿರುವದು ನಿಜ; ಆದರೆ ಅವಕ್ಕೆ ಕರ್ಮವೂ ವಿಷಯವಾಗಿದೆ. ಆದ್ದರಿಂದ ಅವುಗಳಲ್ಲಿರುವ ಜಗತ್ಕಾರಣವಾದವನ್ನು ತಳ್ಳಿಹಾಕಿದರೂ ಕರ್ಮವಿಷಯದಲ್ಲಿ ಅವು ಪ್ರಮಾಣವಾಗುವದಕ್ಕೆ ಅವಕಾಶವಿದೆ. ಕಪಿಲಾದಿ ಸ್ಮೃತಿಗಳಿಗೆ ಮೋಕ್ಷಸಾಧನವನ್ನು ತಿಳಿಸುವದೊಂದೇ ಕೆಲಸವಾದ್ದರಿಂದ ಅವುಗಳನ್ನು ಅಪ್ರಮಾಣವಾಗಿ ಮಾಡದೆ ಬ್ರಹ್ಮವಾದವನ್ನು ಒಪ್ಪುವದಕ್ಕೆ ಆಗುವದೇ ಇಲ್ಲ. ಆದ್ದರಿಂದ ಆ ಸ್ಮೃತಿಗಳು ನಿರವಕಾಶವಾಗದೆ ಇರುವದಕ್ಕಾಗಿ ಪರಮರ್ಷಿಗಳಾದ ಕಪಿಲಾದಿಗಳು ಮಾಡಿರುವ ಶ್ರುತ್ಯರ್ಥವು ತರ್ಕಯುಕ್ತವೂ ಆಗಿರುವದರಿಂದ ಆ ಸ್ಮೃತಿಗಳಿಗೆ ಅನುಗುಣವಾಗಿಯೇ ಶ್ರುತಿಗಳಿಗೆ ಅರ್ಥವನ್ನು ಮಾಡಬೇಕು. ಬ್ರಹ್ಮವು ಜಗತ್ಕಾರಣವೆಂಬ ವಾದವನ್ನು ಬಿಡಬೇಕು.

**ಸಿದ್ಧಾಂತ :** ಬ್ರಹ್ಮವು ಜಗತ್ಕಾರಣವೆಂಬ ವಾದವು ಸ್ಮೃತಿವಿರುದ್ಧವಲ್ಲ. ಏಕೆಂದರೆ ಮಹಾಭಾರತ, ಪುರಾಣಗಳು, ಭಗವದ್ಗೀತೆ, ಆಪಸ್ತಂಬಾದಿ

ಸ್ಮೃತಿಗಳು– ಇವೆಲ್ಲವೂ ಈಶ್ವರನೇ ಜಗತ್ಕಾರಣನೆಂದು ಹೇಳುತ್ತಿವೆ. ಶ್ರುತಿಯಿಂದ ಸಿದ್ಧವಾಗಿರುವ ಸಿದ್ಧಾಂತವನ್ನು ಶ್ರುತಿವಿರುದ್ಧವಾದ ಸ್ಮೃತಿಗಳಿಂದ ತಳ್ಳಿಹಾಕುವದು ಸರಿಯಲ್ಲ. ಶ್ರುತಿಯಿಂದಲೇ ಧರ್ಮವೂ ಸರ್ವಜ್ಞತ್ವಾದಿಗಳ ಸಿದ್ಧಿಯೂ ಸಿಕ್ಕಬೇಕಾಗಿರುವದರಿಂದ ಶ್ರುತಿವಿರುದ್ಧವಾಗಿ ಹೇಳುವ ಯಾವನೂ ಪ್ರಮಾಣವಾಗಲಾರನು. ಆದ್ದರಿಂದ ಶ್ರುತಿಪ್ರಸಿದ್ಧಮಹಾತ್ಮರಾದ ಮನ್ವಾದಿಗಳ ಮತಕ್ಕೆ ವಿರುದ್ಧವಾಗಿ ಅನೇಕಾತ್ಮರನ್ನೂ ಸ್ವತಂತ್ರವಾದ ಪ್ರಧಾನವೆಂಬ ಜಗತ್ಕಾರಣವನ್ನೂ ಕಲ್ಪಿಸುವ ಕಾಪಿಲತಂತ್ರವು ವೇದವಿರುದ್ಧವೆಂಬ ಕಾರಣದಿಂದ ತಿರಸ್ಕರಿಸತಕ್ಕದ್ದು. ಅದರಲ್ಲಿ ಹೇಳಿರುವ ಮಹದಾದಿಗಳೂ ಶ್ರುತಿಸ್ಮೃತಿಗಳಲ್ಲಿ ಕಂಡುಬರುವದಿಲ್ಲ. ಆದ್ದರಿಂದ ಸಾಂಖ್ಯಸ್ಮೃತಿಯು ಪ್ರಮಾಣಾಭಾಸವಾಗಿದೆ. ಆದ್ದರಿಂದ ಬ್ರಹ್ಮಕಾರಣವಾದವು ಅದಕ್ಕೆ ವಿರುದ್ಧವಾಗಿದೆ ಎಂಬುದು ದೋಷವಲ್ಲ.

## ೨. ಯೋಗಪ್ರತ್ಯುಕ್ತ್ಯಧಿಕರಣ

### ಏತೇನ ಯೋಗಃ ಪ್ರತ್ಯುಕ್ತಃ ||೩||

**ಸಂಶಯವೂ ಪೂರ್ವಪಕ್ಷವೂ :** ಯೋಗಸ್ಮೃತಿಗೆ ವಿರುದ್ಧವಾಗಿರುವದರಿಂದಾದರೂ ಬ್ರಹ್ಮಕಾರಣವಾದವು ಸ್ಮೃತಿವಿರುದ್ಧವಾಗುವದೊ, ಇಲ್ಲವೊ–ಎಂಬ ಸಂಶಯಕ್ಕೆ ಪೂರ್ವಪಕ್ಷವೇನೆಂದರೆ : ಸಮ್ಯಗ್ದರ್ಶನಕ್ಕೆ ಯೋಗವು ಉಪಾಯವೆಂದು ವೇದದಲ್ಲಿ ಹೇಳಿರುವದರಿಂದಲೂ ಯೋಗಶಾಸ್ತ್ರದಲ್ಲಿಯೂ ಹಾಗೆಂದೇ ಹೇಳಿದೆಯಾದ್ದರಿಂದಲೂ ಅಷ್ಟಕಾದಿಸ್ಮೃತಿಗಳಂತೆ ಯೋಗಸ್ಮೃತಿಯೂ ಪ್ರಮಾಣವು. ಅದಕ್ಕೆ ವಿರುದ್ಧವಾಗಿರುವದರಿಂದ ಬ್ರಹ್ಮವಾದವು ಸರಿಯಲ್ಲ.

ಸಿದ್ಧಾಂತ : ಒಂದು ಭಾಗವು ವೇದಸಮ್ಮತವಾಗಿದ್ದರೂ ಜಗತ್ಕಾರಣವಾದವು ವೇದವಿರುದ್ಧವಾದ ಸಾಂಖ್ಯಕ್ಕೆ ಅನುಗುಣವಾಗಿರುವದರಿಂದ ಈ ಸ್ಮೃತಿಯೂ ಅಪ್ರಮಾಣವೇ.

ಬ್ರಹ್ಮವಾದದ ದೋಷವಲ್ಲ. ಸಾಂಖ್ಯಜ್ಞಾನವಾಗಲಿ ವೇದವಿರುದ್ಧವಾದ ಯೋಗವಾಗಲಿ ಮೋಕ್ಷಕ್ಕೆ ಕಾರಣವೆಂದು ಒಪ್ಪುವದಾಗುವದಿಲ್ಲ. ವೇದಕ್ಕೆ ಅನುಗುಣವಾದಷ್ಟುಮಟ್ಟಿಗೆ ಈ ಸ್ಮೃತಿಗಳನ್ನು ಪ್ರಮಾಣವೆನ್ನುವದಕ್ಕೆ ಅಡ್ಡಿಯಿಲ್ಲ

## ೨. ವಿಲಕ್ಷಣತ್ವಾಧಿಕರಣ

ನ ವಿಲಕ್ಷಣತ್ವಾದಸ್ಯ ತಥಾತ್ವಂ ಚ ಶಬ್ದಾತ್ ||೪|| ಅಭಿಮಾನ ವ್ಯಪದೇಶಸ್ತು ವಿಶೇಷಾನುಗತಿಭ್ಯಾಮ್ ||೫|| ದೃಶ್ಯತೇ ತು ||೬|| ಅಸದಿತಿ ಚೇನ್ನ ಪ್ರತಿಷೇಧಮಾತ್ರತ್ವಾತ್ ||೭|| ಅಪೀತೌ ತದ್ವತ್ ಪ್ರಸಙ್ಗಾದಸಮಞ್ಜಸಮ್ ||೮|| ನ ತು ದೃಷ್ಟಾನ್ತಭಾವಾತ್ ||೯|| ಸ್ವಪಕ್ಷದೋಷಾಚ್ಚ ||೧೦|| ತರ್ಕಾಪ್ರತಿಷ್ಠಾನಾದಪ್ಯನ್ಯಥಾನುಮೇಯಮಿತಿ ಚೇದೇವಮಪ್ಯವಿಮೋಕ್ಷಪ್ರಸಙ್ಗಃ ||೧೧||

ವಿಷಯವೂ ಪೂರ್ವಪಕ್ಷವೂ: ಬ್ರಹ್ಮಕಾರಣವಾದವು ಸಾಂಖ್ಯತರ್ಕವಿರುದ್ಧವೋ, ಅಲ್ಲವೋ ?– ಎಂಬ ಸಂಶಯಕ್ಕೆ ಪೂರ್ವಪಕ್ಷವೇನೆಂದರೆ ಬ್ರಹ್ಮವು ಜಗತ್ಕಾರಣವಾಗಲಾರದು. ಏಕೆಂದರೆ ಇದು ಜಗತ್ತಿಗಿಂತ ವಿಲಕ್ಷಣವಾಗಿ ಚೇತನವೂ ಶುದ್ಧವೂ ಆಗಿದೆ. ಲೋಕದಲ್ಲಿ ಕಾರ್ಯವು ಕಾರಣಧರ್ಮದಿಂದ ಅನ್ವಿತವಾಗಿರುತ್ತದೆ ; ಈ ಜಗತ್ತು ಅಚೇತನವೂ ಸುಖದುಃಖಮೋಹಗಳಿಂದ ಅನ್ವಿತವೂ ಆಗಿರುವದರಿಂದ ಇದಕ್ಕೆ ಅನುಗುಣವಾದ ಪ್ರಧಾನವೇ ಕಾರಣವಾಗಿರಬೇಕು. ಜಗತ್ತು ಬ್ರಹ್ಮವಿಲಕ್ಷಣವಾಗಿದೆ ಎಂದು ಶ್ರುತಿಯು ಹೇಳುತ್ತದೆ. ಅಚೇತನವಾದ ಭೂತಗಳೂ ಇಂದ್ರಿಯಗಳೂ ಚೇತನವೆಂಬಂತೆ ಶ್ರುತಿಯಲ್ಲಿ ಹೇಳಿರುವದುಂಟು ; ಆದರೆ ಅಲ್ಲಿ ಅಭಿಮಾನಿದೇವತೆಗಳನ್ನು ಹೇಳಿರುತ್ತದೆ. ಆದ್ದರಿಂದ ಬ್ರಹ್ಮಕಾರಣವಾದವು ತರ್ಕವಿರುದ್ಧ.

ಸಿದ್ಧಾಂತ : ಈ ಪೂರ್ವಪಕ್ಷವು ಸರಿಯಲ್ಲ. ಏಕೆಂದರೆ ಚೇತನರಾದ ಪುರುಷರಿಂದ ವಿಲಕ್ಷಣವಾದ ಕೇಶನಖಾದಿಗಳೂ ಅಚೇತನವಾದ ಗೋಮಯಾದಿಗಳಿಂದ ವೃಶ್ಚಿಕಾದಿಗಳೂ ಹುಟ್ಟುವದು ಕಂಡುಬರುತ್ತದೆ. ಹಾಗೆಯೇ ಬ್ರಹ್ಮದಿಂದ ವಿಲಕ್ಷಣವಾಗಿರುವ ಜಗತ್ತು ಉಂಟಾಗಬಹುದು. ಕಾರಣಧರ್ಮವು ಕಾರ್ಯದಲ್ಲಿರಬೇಕೆಂದು ಹೇಳುವದಾದರೆ ಆಕಾಶಾದಿಕಾರ್ಯಗಳಲ್ಲಿಯೂ ಸತ್ತಾರೂಪವಾದ ಬ್ರಹ್ಮಸ್ವಭಾವವು ಅನುಗತವಾಗಿ ಕಾಣುತ್ತಿರುತ್ತದೆ. ಎಲ್ಲಾ ಕಾರಣಧರ್ಮಗಳೂ ಅನುಗತವಾಗಿರಬೇಕೆಂದು ಹೇಳಿದರೆ ಕಾರ್ಯಕಾರಣಭಾವವೇ ಇಲ್ಲವಾಗುತ್ತದೆ. ಚೇತನದಿಂದ ಅನ್ವಿತವಾಗದೆ ಇರುವದು ಬ್ರಹ್ಮಪ್ರಕೃತಿಕವಲ್ಲ ಎಂಬ ತರ್ಕಕ್ಕೆ ಉಭಯಸಮ್ಮತ

ವಾದ ದೃಷ್ಟಾಂತವಿಲ್ಲ. ಈ ತರ್ಕವು ಆಗಮವಿರುದ್ಧವೂ ಆಗಿದೆ ; ಏಕೆಂದರೆ ಚೇತನವಾದ ಬ್ರಹ್ಮವೇ ಜಗತ್ಕಾರಣವೆಂದು ಶ್ರುತಿಗಳು ಹೇಳುತ್ತಿವೆ. ಶಬ್ದಾದಿಗಳಿಲ್ಲದ ಚೇತನವಾದ ಬ್ರಹ್ಮವು ಶಬ್ದಾದಿಗಳಿಂದೊಡಗೂಡಿದ ಅಚೇತನವಾದ ಜಗತ್ತಿಗೆ ಕಾರಣವೆಂದರೆ ಅಸತ್ಕಾರ್ಯವಾದವು ಪ್ರಸಕ್ತ ವಾಗುವದಿಲ್ಲ ; ಏಕೆಂದರೆ ಶಬ್ದಾದಿಗಳುಳ್ಳ ಜಗತ್ತೆಂಬುದು ಯಾವಾಗಲೂ ಶಬ್ದಾದಿಹೀನವಾದ ಬ್ರಹ್ಮರೂಪವಾಗಿಯೇ ಇರುತ್ತದೆ. ಪ್ರಲಯದಲ್ಲಿ ಕಾರ್ಯದ ಧರ್ಮಗಳು ಕಾರಣವಾದ ಬ್ರಹ್ಮಕ್ಕೆ ಅಂಟಿಯಾವೆಂಬ ಅಂಜಿಕೆ ಯೇನೂ ಇಲ್ಲ ; ಏಕೆಂದರೆ ಕಾರಣದಲ್ಲಿ ಲಯವಾಗುವ ಯಾವ ಕಾರ್ಯವೂ ತನ್ನ ಧರ್ಮವನ್ನು ಕಾರಣಕ್ಕೆ ಅಂಟಿಸುವದಿಲ್ಲ. ಸ್ಥಿತಿಯಲ್ಲಿ ಮಿಥ್ಯಾಜ್ಞಾನ ದಿಂದ ಆತ್ಮನಲ್ಲಿ ವಿಭಾಗವು ತೋರುವಂತೆ ಪ್ರಲಯದಲ್ಲಿಯೂ ಮಿಥ್ಯಾಜ್ಞಾನ ದಿಂದ ಅನುಮಿತವಾದ ವಿಭಾಗಶಕ್ತಿಯು ಇರಬಹುದಾಗಿದೆ ; ಆದರಿಂದ ಬ್ರಹ್ಮಕ್ಕೆ ಯಾವ ಹಾನಿಯೂ ಇಲ್ಲ. ಬ್ರಹ್ಮಕಾರಣವಾದದಲ್ಲಿ ಹೇಳುವ ದೋಷಗಳು ಎಲ್ಲವೂ ಸಾಂಖ್ಯಪಕ್ಷಕ್ಕೂ ಅಂಟುತ್ತವೆ ; ಆದ್ದರಿಂದ ಅವು ವೇದಾಂತದ ದೋಷಗಳಾಗುವದೂ ಇಲ್ಲ. ಶುಷ್ಕತರ್ಕವು ನಿಲುಗಡೆಗೆ ಬರದೆ ಇರುವದರಿಂದಲೂ ವೇದೋಕ್ತವಾದ ತರ್ಕವು ಬ್ರಹ್ಮಕಾರಣವಾದಕ್ಕೆ ಅನು ಗುಣವಾಗಿರುವದರಿಂದಲೂ ವೇದಪ್ರಮಾಣದಿಂದ ಸಿದ್ಧವಾಗುವ ಬ್ರಹ್ಮಕಾರಣ ವಾದವನ್ನು ಶುಷ್ಕತರ್ಕದಿಂದ ಎದುರಿಸುವದು ಸರಿಯೇ ಅಲ್ಲ.

## ೪. ಶಿಷ್ಟಾಪರಿಗ್ರಹಾಧಿಕರಣ

ಏತೇನ ಶಿಷ್ಟಾಪರಿಗ್ರಹಾ ಅಪಿ ವ್ಯಾಖ್ಯಾತಾಃ ॥ ೧೨ ॥

**ಸಂಶಯವೂ ಪೂರ್ವಪಕ್ಷವೂ :** ಪ್ರಧಾನಕಾರಣವಾದಿಗಳ ತರ್ಕಕ್ಕೆ ವಿರುದ್ಧವಾಗದೆ ಇದ್ದರೂ ಅಣ್ವಾದಿವಾದಿಗಳ ತರ್ಕಕ್ಕೆ ಬ್ರಹ್ಮಕಾರಣವಾದವು ವಿರುದ್ಧವೆನ್ನಬಹುದೊ, ಇಲ್ಲವೋ ? ಎಂಬ ಸಂಶಯವುಂಟಾಗಲಾಗಿ ಪೂರ್ವ ಪಕ್ಷವೇನೆಂದರೆ : ಗುರುತರತರ್ಕಸಂದೃಬ್ಧವಾಗಿರುವದರಿಂದಲೂ ಸರ್ವಜ್ಞ ರಾದ ಕಣಾದಾದಿಗಳಿಂದ ಪ್ರಣೀತವಾಗಿರುವದರಿಂದಲೂ ಕಣಾದಾದಿಗಳ ದರ್ಶನಕ್ಕೆ ವಿರುದ್ಧವಾಗಿರುವ ಬ್ರಹ್ಮವಾದವು ಸರಿಯಲ್ಲ.

**ಸಿದ್ಧಾಂತ :** ಹೀಗೆನ್ನಕೂಡದು. ಶಿಷ್ಟರು ಪರಿಗ್ರಹಿಸಿರುವ ಸಾಂಖ್ಯ ಸ್ಮೃತಿಯೇ ಅಪ್ರಮಾಣವಾಗಿರುವಾಗ ಯಾರೂ ಪರಿಗ್ರಹಿಸದ ಕಣಾದರ

ದರ್ಶನವು ಪ್ರಮಾಣವಾಗುವ ಸಂಭವವೇ ಇಲ್ಲ. ಇನ್ನು ಸಾಂಖ್ಯರ ತರ್ಕಕ್ಕೆ ಯಾವ ಪರಿಹಾರವನ್ನು ಹೇಳುವೆಯೋ ಅದೇ ಪರಿಹಾರವನ್ನೇ ಕಣಾದರ ತರ್ಕಕ್ಕೂ ಹೇಳಬಹುದಾದ್ದರಿಂದ ಈ ತರ್ಕವು ಬ್ರಹ್ಮವಾದಕ್ಕೆ ಯಾವ ಅಡ್ಡಿಯನ್ನೂ ತರಲಾರದು.

## ೫. ಭೋಕ್ತ್ರಾಪತ್ತ್ಯಧಿಕರಣ

ಭೋಕ್ತ್ರಾಪತ್ತೇರವಿಭಾಗಶ್ಚೇತ್ ಸ್ಯಾಲ್ಲೋಕವತ್ ||೧೩||

**ಪೂರ್ವಪಕ್ಷ :** ಬ್ರಹ್ಮಕಾರಣವಾದವು ತರ್ಕವಿರುದ್ಧ. ಏಕೆಂದರೆ ಲೋಕಪ್ರಸಿದ್ಧವಾದ ಭೋಕ್ತೃಭೋಗ್ಯವಿಭಾಗವನ್ನು ಅದು ಅಲ್ಲಗಳೆಯುತ್ತದೆ. ಭೋಕ್ತೃ, ಭೋಗ್ಯ—ಎರಡೂ ಬ್ರಹ್ಮಕ್ಕಿಂತ ಅನನ್ಯವೆಂದರೆ ಅವುಗಳಲ್ಲಿ ಒಂದು ಇನ್ನೊಂದಾಗಬೇಕಾಗುವದು ; ಇದು ಪ್ರಸಿದ್ಧವಾದ ವಿಭಾಗಕ್ಕೆ ವಿರುದ್ಧವು. ಆದ್ದರಿಂದ ತರ್ಕವಿರುದ್ಧವಾಗಿರುವ ಈ ಸಿದ್ಧಾಂತವು ಸರಿಯಲ್ಲ.

**ಸಿದ್ಧಾಂತ :** ಇದೇನೂ ದೋಷವಲ್ಲ. ಏಕೆಂದರೆ ಲೋಕದಲ್ಲಿ ಸಮುದ್ರದ ವಿಕಾರಗಳಾಗಿರುವ ನೊರೆ, ತೆರೆ, ಅಲೆ, ಗುಳ್ಳೆ—ಮುಂತಾದವುಗಳು ಒಂದಕ್ಕಿಂತಒಂದು ಬೇರೆಬೇರೆಯಾಗಿರುವದು ಕಂಡುಬಂದಿದೆ. ಸಮುದ್ರಕ್ಕಿಂತ ಅವು ಅನನ್ಯವೆಂಬ ಕಾರಣದಿಂದ ಅವು ಒಂದು ಮತ್ತೊಂದಾಗುವದಿಲ್ಲ. ಹೀಗೆಯೇ ಇಲ್ಲಿಯೂ ಆಗಬಹುದಾಗಿದೆ.

## ೬. ಆರಂಭಣಾಧಿಕರಣ

ತದನನ್ಯತ್ವಮಾರಂಭಣಶಬ್ದಾದಿಭ್ಯಃ ||೧೪|| ಭಾವೇ ಚೋಪಲಬ್ಧೇಃ ||೧೫|| ಸತ್ತ್ವಾಚ್ಚಾವರಸ್ಯ ||೧೬|| ಅಸದ್ವ್ಯಪದೇಶಾನ್ನೇತಿ ಚೇನ್ನ ಧರ್ಮಾನ್ತರೇಣ ವಾಕ್ಯಶೇಷಾತ್ ||೧೭|| ಯುಕ್ತೇಃ ಶಬ್ದಾನ್ತರಾಚ್ಚ ||೧೮|| ಪಟವಚ್ಚ ||೧೯|| ಯಥಾ ಚ ಪ್ರಾಣಾದಿ ||೨೦||

**ಪೂರ್ವಪಕ್ಷ :** ಬ್ರಹ್ಮಕಾರಣವಾದವು ತರ್ಕವಿರುದ್ಧ. ಏಕೆಂದರೆ ಕಾರ್ಯವಾದ ಜಗತ್ತು ಕಾರಣವಾದ ಬ್ರಹ್ಮಕ್ಕಿಂತ ಭಿನ್ನವೆಂದರೆ ಅದ್ವೈತಹಾನಿ ; ಬ್ರಹ್ಮವೊಂದನ್ನು ತಿಳಿದರೆ ಎಲ್ಲವನ್ನೂ ತಿಳಿದಂತಾಯಿತೆಂಬುದು

ಸಿದ್ಧವಾಗುವದಿಲ್ಲ. ಅಭಿನ್ನವೆಂದರೆ ಕಾರ್ಯವೇ ಇಲ್ಲವೆಂಬಂತೆ ಆಗುವದು. ಆಗ ಬ್ರಹ್ಮವು ಜಗತ್ಕಾರಣವೆಂಬ ವಾದವು ತಪ್ಪಾಗುವದು.

ಸಿದ್ಧಾಂತ : ಕಾರಣಕ್ಕಿಂತ ಕಾರ್ಯವು ಅನನ್ಯವು. ಬ್ರಹ್ಮಕ್ಕಿಂತ ಜಗತ್ತು ಬೇರೆಯಲ್ಲ ಎಂಬುದೇ ಸಿದ್ಧಾಂತವು. ಅನನ್ಯವೆಂದರೆ ಬೇರೆಯಾಗಿಲ್ಲ ವೆಂದೇ ಅರ್ಥ. ಕಾರ್ಯವೆಲ್ಲ ಬರಿಯ ಮಾತಿನಿಂದ ಆಗಿರುವದು, ಬರಿಯ ಹೆಸರು–ಎಂದು ಶ್ರುತಿಯು ಹೇಳುತ್ತದೆ ; ಬ್ರಹ್ಮವೊಂದೇ ಸತ್ಯವು ಎಂದೂ ಹೇಳುತ್ತದೆ. ಹೀಗಿದ್ದರೂ ಜಗತ್ಕಾರಣವು ಬ್ರಹ್ಮವೆಂಬ ವಾದಕ್ಕೆ ವಿರೋಧ ವೇನೂ ಇಲ್ಲ. ಏಕೆಂದರೆ ನಾಮರೂಪಾತ್ಮಕವಾದ ಜಗತ್ತು ಅವಿದ್ಯಾಕಲ್ಪಿತ ವಾಗಿದ್ದುಕೊಂಡು ಬ್ರಹ್ಮರೂಪವೆಂದಾಗಲಿ ಅದಕ್ಕಿಂತ ಭಿನ್ನವೆಂದಾಗಲಿ ಹೇಳುವದಕ್ಕೆ ಬರುವಹಾಗಿಲ್ಲ. ಭೇದವ್ಯವಹಾರವೆಲ್ಲ ಈ ಅವಿದ್ಯಾಕೃತನಾಮ ರೂಪಗಳಿಂದ ಆಗಿರುತ್ತದೆ. ಕಾರಣವಿದ್ದರೇ ಲೋಕದಲ್ಲಿ ಕಾರ್ಯವು ಕಂಡುಬರುವದರಿಂದಲೂ, ಉತ್ಪತ್ತಿಗಿಂತ ಪೂರ್ವದಲ್ಲಿ ಕಾರಣರೂಪದಿಂದಲೇ ಕಾರ್ಯವು ಇದ್ದಿತೆಂದು ಶ್ರುತಿಯು ಹೇಳುವದರಿಂದಲೂ ಅಸತ್ತಾಗಿತ್ತೆಂದು ಹೇಳುವ ಶ್ರುತಿಗಳು ಅವ್ಯಾಕೃತರೂಪವಾಗಿತ್ತೆಂಬ ಅಭಿಪ್ರಾಯದಿಂದ ಹಾಗೆ ಹೇಳುವದರಿಂದಲೂ ಅಸತ್ಕಾರ್ಯವಾದವು ಯುಕ್ತಿವಿರುದ್ಧವಾಗಿರುವದ ರಿಂದಲೂ ಜಗತ್ತು ಸೃಷ್ಟಿಗಿಂತ ಪೂರ್ವದಲ್ಲಿ ಸತ್ತೇ ಆಗಿತ್ತೆಂದು ಒತ್ತಿ ಹೇಳು ತ್ತಿರುವದರಿಂದಲೂ ಬಟ್ಟೆಯಂತೆಯೂ ಪ್ರಾಣಾದಿಗಳಂತೆಯೂ ಜಗತ್ತು ತನ್ನ ಕಾರಣವಾದ ಬ್ರಹ್ಮಕ್ಕಿಂತ ಬೇರೆಯಾಗಿರುವದಿಲ್ಲವೆಂಬುದು ಯುಕ್ತವಾದ್ದ ರಿಂದ ಕಾರ್ಯವು ಕಾರಣವಾದ ಬ್ರಹ್ಮಕ್ಕಿಂತ ಅನನ್ಯವೇ. ಆದ್ದರಿಂದ ಇಲ್ಲಿ ಯಾವ ತರ್ಕವಿರೋಧವೂ ಇಲ್ಲ.

## ೭. ಇತರವ್ಯಪದೇಶಾಧಿಕರಣ

ಇತರವ್ಯಪದೇಶಾದ್ಧಿತಾಕರಣಾದಿದೋಷಪ್ರಸಕ್ತಿಃ ||೨೧||

ಅಧಿಕಂ ತು ಭೇದನಿರ್ದೇಶಾತ್ ||೨೨||

ಅಶ್ಮಾದಿವಚ್ಚ ತದನುಪಪತ್ತಿಃ ||೨೩||

ಪೂರ್ವಪಕ್ಷ : ಬ್ರಹ್ಮಕಾರಣವಾದವು ತರ್ಕವಿರುದ್ಧ. ಏಕೆಂದರೆ ಶ್ರುತಿಯಲ್ಲಿ ಶಾರೀರನೇ ಬ್ರಹ್ಮವೆಂದು ಹೇಳಿರುವದರಿಂದಲೂ ಬ್ರಹ್ಮವೇ

ಶಾರೀರರೂಪದಿಂದ ಜಗತ್ತಿನಲ್ಲಿ ಪ್ರವೇಶಿಸಿರುತ್ತಾನೆಂದು ಹೇಳಿರುವದರಿಂದಲೂ ಜೀವನೇ ತನಗೆ ಅಹಿತವಾದ ಬಂಧವನ್ನು ಸೃಷ್ಟಿಸಿಕೊಂಡಿದಾನೆಂದಾಗುತ್ತದೆ. ಜೀವನೇ ಸ್ರಷ್ಟೃವಾದರೆ ತನಗೆ ಅಹಿತವಾದ ಸೃಷ್ಟಿಯನ್ನು ತಾನೇ ಸೃಜಿಸಿರುವನೆಂದು ಸ್ಮರಿಸಬೇಕು, ಅದನ್ನು ತಪ್ಪಿಸಿಕೊಳ್ಳುವದಕ್ಕೆ ಶಕ್ತನಾಗಿರಬೇಕು. ಆದರೆ ಹಾಗಿಲ್ಲ.

ಸಿದ್ಧಾಂತ : ಜಗತ್ಕಾರಣವು ಜೀವನೆಂಬುದು ಸಿದ್ಧಾಂತವಲ್ಲ ; ಜೀವನಿಗಿಂತ ವಿಲಕ್ಷಣವಾಗಿರುವ ಬ್ರಹ್ಮವೇ ಜಗತ್ಕಾರಣವು. ಬ್ರಹ್ಮವು ಸರ್ವಜ್ಞವೂ ಸರ್ವಶಕ್ತಿಯುತವೂ ನಿತ್ಯಶುದ್ಧಬುದ್ಧಮುಕ್ತಸ್ವರೂಪವುಳ್ಳದ್ದೂ ಆಗಿರುವದರಿಂದ ಅದರಲ್ಲಿ ಯಾವ ಹಿತಾಕರಣಾದಿದೋಷಗಳೂ ಇರುವದಿಲ್ಲ. ಜೀವಬ್ರಹ್ಮರುಗಳಿಗೆ ಅಭೇದವನ್ನೇ ಶ್ರುತಿಯಲ್ಲಿ ಹೇಳಿದೆಯಾದರೂ ಘಟಾಕಾಶವು ಉಪಾಧಿವಶದಿಂದ ಭಿನ್ನವಾಗಿರುವಂತೆ ಜೀವರು ಬ್ರಹ್ಮಕ್ಕಿಂತ ಭಿನ್ನರೂ ಆಗಿರುತ್ತಾರೆ. ಶ್ರುತಿಯಿಂದ ಅಭೇದವು ಗೊತ್ತಾದರೆ ಬ್ರಹ್ಮವು ಸ್ರಷ್ಟೃವೇ ಆಗಿರುವದಿಲ್ಲವಾದ್ದರಿಂದ ಸೃಷ್ಟಿಯಾಗಲಿ ಹಿತಾಕರಣಾದಿದೋಷಗಳಾಗಲಿ ಆಗ ಪ್ರಸಕ್ತವಾಗುವದೇ ಇಲ್ಲ. ಬ್ರಹ್ಮವು ಒಂದೇ ಆದರೂ ಅದರಲ್ಲಿ ಜೀವಪ್ರಾಜ್ಞರೆಂಬ ಭೇದವೂ ಕಾರ್ಯವೈಚಿತ್ರ್ಯವೂ ಇರಬಹುದಾಗಿದೆ. ಒಂದೇ ಕಲ್ಲಿನಲ್ಲಿ ವಜ್ರವೈಡೂರ್ಯಾದಿಗಳು; ಸೂರ್ಯಕಾಂತಾದಿಗಳು, ಸಾಧಾರಣವಾದ ಕಲ್ಲುಗಳು—ಎಂದು ಭೇದವಿರುವಂತೆಯೂ ಒಂದೇ ಪೃಥಿವಿಯಲ್ಲಿ ಹಾಕಿದ ಬೀಜಗಳಿಂದ ಬಗೆಬಗೆಯ ಎಲೆ, ಹೂ, ಹಣ್ಣು, ವಾಸನೆ, ಸವಿ— ಮುಂತಾದ ಭೇದವುಳ್ಳ ಗಿಡಮರಗಳು ಉಂಟಾಗುವಂತೆಯೂ ಈ ಭೇದವು ಇರಬಹುದೆಂದು ಊಹಿಸಬೇಕು. ಆದ್ದರಿಂದ ಶ್ರುತಿಬೋಧಿತವಾದ ಬ್ರಹ್ಮಕಾರಣವಾದದಲ್ಲಿ ತರ್ಕನಿಮಿತ್ತವಾದ ದೋಷಕ್ಕೆ ಅವಕಾಶವಿಲ್ಲ.

## ೮. ಉಪಸಂಹಾರದರ್ಶನಾಧಿಕರಣ

**ಉಪಸಂಹಾರದರ್ಶನಾನ್ನೇತಿ ಚೇನ್ನ ಕ್ಷೀರವದ್ಧಿ ||೨೪||**
**ದೇವಾದಿವದಪಿ ಲೋಕೇ ||೨೫||**

ಪೂರ್ವಪಕ್ಷ : ಬ್ರಹ್ಮಕಾರಣವಾದವು ತರ್ಕವಿರುದ್ಧ. ಏಕೆಂದರೆ ಕುಂಬಾರನೇ ಮುಂತಾದವರು ಸಾಮಗ್ರಿಗಳನ್ನಿಟ್ಟುಕೊಂಡೇ ಗಡಿಗೆಯೇ

ಮುಂತಾದ ಕಾರ್ಯಗಳನ್ನು ಮಾಡುತ್ತಾರೆ. ಈ ದೃಷ್ಟಾಂತದಿಂದ ಯಾವ ಸಹಾಯವೂ ಇಲ್ಲದೆ ಬ್ರಹ್ಮವೊಂದೇ ಜಗತ್ತನ್ನು ಸೃಜಿಸಲಾರನೆಂದು ಸಿದ್ಧ ವಾಗುತ್ತದೆ.

ಸಿದ್ಧಾಂತ : ಕಾರಣಕ್ಕೆ ಸಾಮಗ್ರಿಯಿದ್ದರೇ ಕಾರ್ಯವುಂಟಾಗುವ ದೆಂಬ ನಿಯಮವಿಲ್ಲ. ಏಕೆಂದರೆ ಹಾಲು, ನೀರು ಮುಂತಾದದ್ದು ಮತ್ತೇನನ್ನೂ ಬಯಸದೆ ಮೊಸರು, ಹಿಮ– ಆಗುವದು ಕಂಡಿದೆ. ಹಾಲಿಗೆ ಹೆಪ್ಪುಬೇಕಾಗಿ ರುವದು ನಿಜವಾದರೂ ಹೆಪ್ಪು ಅದನ್ನು ಮೊಸರಾಗುವಂತೆ ತ್ವರೆಗೊಳಿಸೀತೇ ಹೊರತು ಮೊಸರಾಗುವ ಯೋಗ್ಯತೆಯನ್ನೇನೂ ಅದಕ್ಕೆ ಕೊಡುವದಿಲ್ಲ. ಆದ್ದರಿಂದ ಪರಿಪೂರ್ಣಶಕ್ತಿಯಾಗಿರುವ ಬ್ರಹ್ಮವು ಸ್ವತಃ ಮತ್ತೇನನ್ನೂ ಬಯಸದೆ ಜಗತ್ತಾಗುವದು ತರ್ಕವಿರುದ್ಧವಲ್ಲ. ದೇವತೆಗಳು ಮುಂತಾದ ಚೇತನರು ಸಾಮಗ್ರಿಯನ್ನು ಬಯಸದೆ ತಾವೇ ಕಾರ್ಯವನ್ನುಂಟುಮಾಡು ವದು ಕಂಡಿರುತ್ತದೆ. ಆದ್ದರಿಂದ ಒಂದು ಕಾರಣಕ್ಕೆ ಸಾಮಗ್ರಿ ಬೇಕಾದರೆ ಮತ್ತೊಂದಕ್ಕೂ ಬೇಕೆಂದು ತರ್ಕಿಸುವದು ಯುಕ್ತವಲ್ಲ.

## ೯. ಕೃತ್ಸ್ನಪ್ರಸಕ್ತ್ಯಧಿಕರಣ

ಕೃತ್ಸ್ನಪ್ರಸಕ್ತಿರ್ನಿರವಯವತ್ವಶಬ್ದಕೋಪೋ ವಾ ॥೨೬॥
ಶ್ರುತೇಸ್ತು ಶಬ್ದಮೂಲತ್ವಾತ್ ॥೨೭॥ ಆತ್ಮನಿ ಚೈವಂ
ವಿಚಿತ್ರಾಶ್ಚ ಹಿ ॥೨೮॥ ಸ್ವಪಕ್ಷದೋಷಾಚ್ಚ ॥೨೯॥

ಪೂರ್ವಪಕ್ಷ. ಬ್ರಹ್ಮವು ಜಗತ್ಕಾರಣವೆಂದರೆ ಬ್ರಹ್ಮವೆಲ್ಲವೂ ಜಗ ತ್ತಾಗುವದೆನ್ನಬೇಕಾಗುತ್ತದೆ; ಇಲ್ಲದಿದ್ದರೆ ಅದು ಸಾವಯವವೆಂದೂ ಅದರ ಒಂದು ಭಾಗವು ಮಾತ್ರ ಜಗತ್ತಾಗಿ ಇನ್ನೊಂದು ಭಾಗವು ಹಾಗೇ ಉಳಿದು ಕೊಳ್ಳುವದೆಂದೂ ಒಪ್ಪಬೇಕಾಗುತ್ತದೆ. ಆದ್ದರಿಂದ ಈ ವಾದವು ತರ್ಕ ವಿರುದ್ಧವು.

ಸಿದ್ಧಾಂತ : ಬ್ರಹ್ಮವು ಜಗತ್ತಾಗುವದೆಂದೂ ವಿಕಾರವಾಗದೆಯೂ ಇರುವದೆಂದೂ ಶ್ರುತಿಯು ಹೇಳುವದರಿಂದ ಶಬ್ದಪ್ರಮಾಣವಾದ ಬ್ರಹ್ಮವನ್ನು ಹಾಗೆಂದೇ ಒಪ್ಪಬೇಕು. ವಸ್ತುವಿನಲ್ಲಿ ವಿಕಲ್ಪವಿರಲಾರದಾದ್ದರಿಂದಲೂ ವಿಕಾರವೂ ಆಗುವದು, ವಿಕಾರವಾಗದೆಯೂ ಇರುವದು–ಇವು ಒಂದಕ್ಕೊಂದು ವಿರುದ್ಧವಾಗಿರುವದರಿಂದಲೂ ಈ ಪಕ್ಷವು ಅಯುಕ್ತವು ಎನ್ನಕೂಡದು.

ಏಕೆಂದರೆ ಅವಿದ್ಯಾಕಲ್ಪಿತವಾದ ನಾಮರೂಪವೆಂಬ ರೂಪಭೇದದಿಂದ ಬ್ರಹ್ಮವು ಜಗದ್ರೂಪವಾಗಿ ಪರಿಣಮಿಸುತ್ತದೆ ಎನ್ನುತ್ತೇವೆ; ಪಾರಮಾರ್ಥಿಕವಾದ ತನ್ನ ರೂಪದಿಂದ ಸರ್ವವ್ಯವಹಾರಾತೀತವಾಗಿ ತಾನು ಇದ್ದಂತೆಯೇ ಇರುತ್ತದೆ ಎನ್ನುತ್ತೇವೆ. ಪರಿಣಾಮಶ್ರುತಿಯು ಆತ್ಮೈಕತ್ವಜ್ಞಾನವನ್ನುಂಟುಮಾಡಿ ಕೊಡುವದಕ್ಕಾಗಿ ಬಂದಿರುವದರಿಂದಲೂ ಈ ಪಕ್ಷದಲ್ಲಿ ದೋಷವಿಲ್ಲ. ಸ್ವಪ್ನದಲ್ಲಿ ಒಬ್ಬನೇ ಆತ್ಮನಲ್ಲಿ ಅನೇಕಾಕಾರವಾದ ಸೃಷ್ಟಿಯಾದರೂ ಆತ್ಮನು ಇದ್ದಂತೆ-ಯೇ ಇರುತ್ತಾನೆಂಬುದು ಕಂಡಿರುತ್ತದೆಯಾದ್ದರಿಂದಲೂ ಇದು ತರ್ಕವಿರುದ್ಧವಲ್ಲ. ಪ್ರಧಾನವಾದವೇ ಮುಂತಾದವುಗಳಲ್ಲಿಯೂ ಈ ಕೃತ್ಸ್ನಪ್ರಸಕ್ತಿ ಅಥವಾ ನಿರವಯವತ್ವಾಂಗೀಕಾರವಿರೋಧ– ಎಂಬ ದೋಷಗಳಿರುತ್ತವೆ. ಈ ಎಲ್ಲಾ ಕಾರಣದಿಂದ ಬ್ರಹ್ಮವು ಜಗತ್ಕಾರಣವೆಂಬ ವಾದವು ತರ್ಕವಿರುದ್ಧವಲ್ಲ.

## ೧೦. ಸರ್ವೋಪೇತಾಧಿಕರಣ

ಸರ್ವೋಪೇತಾ ಚ ತದ್ದರ್ಶನಾತ್ ॥ ೩೦ ॥
ವಿಕರಣತ್ವಾನ್ನೇತಿ ಚೇತ್ತದುಕ್ತಮ್ ॥ ೩೧ ॥

**ಪೂರ್ವಪಕ್ಷ :** ಒಂದೇ ಬ್ರಹ್ಮವು ವಿಚಿತ್ರವಾದ ವಿಕಾರಪ್ರಪಂಚವಾಗುವದೆಂಬುದು ತರ್ಕವಿರುದ್ಧ; ಹಾಗೆ ಆಗುವದೆಂಬುದಕ್ಕೆ ಪ್ರಮಾಣವೇನೂ ಇಲ್ಲ. ಯಾವ ಕರಣವೂ ಇಲ್ಲದೆ ಅದು ಸೃಜಿಸಲೂ ಆರದು.

**ಸಿದ್ಧಾಂತ :** ಬ್ರಹ್ಮದಲ್ಲಿ ವಿಚಿತ್ರಶಕ್ತಿಗಳು ಇರುತ್ತವೆ. ಹಾಗೆಂದು ಶ್ರುತಿಯಲ್ಲಿ ಹೇಳಿದೆ. ಶ್ರುತಿಪ್ರಮಾಣಿಕವಾದ ಬ್ರಹ್ಮದ ವಿಷಯದಲ್ಲಿ ಅದು ಮತ್ತೊಂದು ದೃಷ್ಟಕಾರಣದಂತೆ ಇರಬೇಕೆಂದು ತರ್ಕದಿಂದ ಕಲ್ಪಿಸುವದು ಸರಿಯಲ್ಲ. ಯಾವ ಕರಣವೂ ಇಲ್ಲದೆಯೇ ಬ್ರಹ್ಮವು ಎಲ್ಲಾ ಕರಣಗಳ ಶಕ್ತಿಯಿಂದಲೂ ಕೂಡಿರುವದೆಂದು ಶ್ರುತಿಯಲ್ಲಿ ಹೇಳಿಯೂ ಇರುತ್ತದೆ. ಆದ್ದರಿಂದ ಇಲ್ಲಿ ಯಾವ ತರ್ಕವಿರೋಧವೂ ಇಲ್ಲ.

## ೧೧. ಪ್ರಯೋಜನವತ್ತ್ವಾಧಿಕರಣ

ನ ಪ್ರಯೋಜನವತ್ತ್ವಾತ್ ೩೨
ಲೋಕವತ್ತು ಲೀಲಾಕೈವಲ್ಯಮ್ ೩೩

**ಪೂರ್ವಪಕ್ಷ :** ಬ್ರಹ್ಮಕಾರಣವಾದವು ತರ್ಕವಿರುದ್ಧ. ಏಕೆಂದರೆ ಬ್ರಹ್ಮಕ್ಕೆ ಜಗತ್ತಿನ ಸೃಷ್ಟಿಯಿಂದ ಯಾವ ಪ್ರಯೋಜನವೂ ಇಲ್ಲ ; ಯಾವದಾದರೊಂದು ಪ್ರಯೋಜನವನ್ನು ಕಲ್ಪಿಸಿದರೆ ನಿತ್ಯತೃಪ್ತನೆಂಬ ಶ್ರುತಿಗೆ ವಿರುದ್ಧವಾಗುತ್ತದೆ. ಪ್ರಯೋಜನವನ್ನು ಬಯಸದೆ ಬಹಳ ಆಯಾಸದ ಸೃಷ್ಟಿಕರ್ಮದಲ್ಲಿ ಹುಚ್ಚನಂತೆ ಪ್ರವರ್ತಿಸುತ್ತಾನೆಂದರೆ ಪರಮಾತ್ಮನು ಸರ್ವಜ್ಞನೆಂಬ ಶ್ರುತಿಗೆ ವಿರುದ್ಧವಾಗುತ್ತದೆ.

**ಸಿದ್ಧಾಂತ :** ರಾಜಾಮಾತ್ಯಾದಿಗಳು ಲೀಲಾರೂಪವಾದ ಪ್ರವೃತ್ತಿಗಳಲ್ಲಿ ತೊಡಗುವಂತೆಯೂ ಉಸಿರುಬಿಡುವದೇ ಮುಂತಾದ ಕರ್ಮಗಳು ಪ್ರಯೋಜನವನ್ನು ಬಯಸದೆ ಸ್ವಾಭಾವಿಕವಾಗಿ ನಡೆಯುವಂತೆಯೂ ಪರಮೇಶ್ವರನು ಸೃಷ್ಟಿಯಲ್ಲಿ ತೊಡಗಬಹುದು; ನಮ್ಮಂಥವರಿಗೆ ಬಹಳ ಆಯಾಸಕರವಾಗಿದ್ದರೂ ಪರಮೇಶ್ವರನಿಗೆ ಇದು ಲೀಲಾಮಾತ್ರವಾಗಿರುತ್ತದೆ. ಆಪ್ತಕಾಮನಾದ್ದರಿಂದ ಪರಮಾತ್ಮನಿಗೆ ಪ್ರಯೋಜನದ ಅಪೇಕ್ಷೆಯಿಲ್ಲ ; ಸರ್ವಜ್ಞನೆಂದು ಶ್ರುತಿಯು ಹೇಳುವದರಿಂದ ಅಪ್ರವೃತ್ತಿಯಾಗಲಿ ಉನ್ಮತ್ತಪ್ರವೃತ್ತಿಯಾಗಲಿ ಆಗುವದಿಲ್ಲ. ಸೃಷ್ಟಿಯು ಪರಮಾರ್ಥವಲ್ಲವಾದ್ದರಿಂದ ಅದು ಪ್ರಯೋಜನಾದಿಗಳನ್ನು ಬಯಸುವದೂ ಇಲ್ಲ. ಆದ್ದರಿಂದ ಯಾವ ತರ್ಕವಿರೋಧವೂ ಇಲ್ಲಿಲ್ಲ.

## ೧೨. ವೈಷಮ್ಯನೈರ್ಘೃಣ್ಯಾಧಿಕರಣ

**ವೈಷಮ್ಯನೈರ್ಘೃಣ್ಯೇ ನ ಸಾಪೇಕ್ಷತ್ವಾತ್ ತಥಾ ಹಿ ದರ್ಶಯತಿ ॥ ೩೪ ॥ ನ ಕರ್ಮಾವಿಭಾಗಾದಿತಿ ಚೇನ್ನಾನಾದಿತ್ವಾತ್ ॥ ೩೫ ॥ ಉಪಪದ್ಯತೇ ಚಾಪ್ಯುಪಲಭ್ಯತೇ ಚ ॥ ೩೬ ॥**

**ಪೂರ್ವಪಕ್ಷ :** ಈಶ್ವರನು ಜಗತ್ಕಾರಣನೆಂಬ ವಾದವು ತರ್ಕವಿರುದ್ಧ. ಏಕೆಂದರೆ ಜೀವರಿಗೆ ಸುಖದುಃಖತಾರತಮ್ಯವನ್ನು ಸೃಜಿಸಿರುವದರಿಂದ ಈಶ್ವರನಿಗೆ ವೈಷಮ್ಯವುಂಟೆಂದಾಗುತ್ತದೆ. ದುಃಖವನ್ನು ಜೀವರಿಗೆ ಕೊಡುವದರಿಂದಲೂ ಪ್ರಲಯದಲ್ಲಿ ಎಲ್ಲರನ್ನೂ ಸಂಹರಿಸುವದರಿಂದಲೂ ನೈರ್ಘೃಣ್ಯವುಂಟೆಂದಾಗುತ್ತದೆ.

ಸಿದ್ಧಾಂತ : ಈಶ್ವರನಿಗೆ ವೈಷಮ್ಯನೈರ್ಘೃಣ್ಯಗಳಿಲ್ಲ; ಏಕೆಂದರೆ ಜೀವರ ಕರ್ಮಗಳನ್ನು ಅಪೇಕ್ಷಿಸಿ ಅವಕ್ಕೆ ತಕ್ಕಂತೆ ಫಲವನ್ನು ಕೊಡುತ್ತಾನೆ. ಕರ್ಮಾನುಗುಣವಾಗಿಯೇ ಫಲವನ್ನು ಕೊಡುತ್ತಾನೆಂಬುದಕ್ಕೆ ಶ್ರುತಿಪ್ರಮಾಣ ವಿದೆ. ಸೃಷ್ಟಿಗೆ ಪೂರ್ವದಲ್ಲಿ ಕರ್ಮವಿಲ್ಲವಲ್ಲ!– ಎಂದು ಶಂಕಿಸಬಾರದು; ಏಕೆಂದರೆ ಸಂಸಾರವು ಅನಾದಿಯೆಂಬುದು ಶ್ರುತಿಯುಕ್ತಿಗಳಿಂದ ಸಿದ್ಧವಾಗುತ್ತದೆ. ಆದ್ದರಿಂದ ಹಿಂದಿನ ಕಲ್ಪದ ಕರ್ಮವೇ ಇದ್ದೇ ಇರುತ್ತದೆ. ಅದಕ್ಕೆ ತಕ್ಕಂತೆ ಫಲವನ್ನು ಕೊಡುವ ಈಶ್ವರನಿಗೆ ಯಾವ ವೈಷಮ್ಯನೈರ್ಘೃಣ್ಯಗಳೂ ಇರುವದಿಲ್ಲ. ಆದ್ದರಿಂದ ಹೀಗೂ ಕರ್ಮವಿರೋಧವಿಲ್ಲ.

## ೧೩. ಸರ್ವಧರ್ಮೋಪಪತ್ತ್ಯಧಿಕರಣ

ಸರ್ವಧರ್ಮೋಪಪತ್ತೇಶ್ಚ ॥ ೩೭ ॥

ಪೂರ್ವಪಕ್ಷ : ಬ್ರಹ್ಮದಲ್ಲಿ ಕಾರಣದ ಧರ್ಮಗಳಿರಲಾರವು. ಆದ್ದರಿಂದ ಅದು ಜಗತ್ಕಾರಣವೆಂಬುದು ತರ್ಕವಿರುದ್ಧ.

ಸಿದ್ಧಾಂತ : ಬ್ರಹ್ಮವು ಸರ್ವಜ್ಞ, ಸರ್ವಶಕ್ತಿಗಳುಳ್ಳದು, ಮಹಾಮಾಯೆಯುಳ್ಳದ್ದು. ಆದ್ದರಿಂದ ಅದರಲ್ಲಿ ಎಲ್ಲಾ ಕಾರಣಧರ್ಮಗಳೂ ಇರಬಹುದಾಗಿದೆ. ಆದ್ದರಿಂದ ಈ ಸಿದ್ಧಾಂತದಲ್ಲಿ ಯಾವ ವಿರೋಧವೂ ಇರುವದಿಲ್ಲ.

---

# ಎರಡನೆಯ ಪಾದ

ಈ ಪಾದದಲ್ಲಿ ಸಾಂಖ್ಯಾದಿದರ್ಶನಗಳ ಯುಕ್ತಿಯನ್ನು ಖಂಡಿಸಲಾಗುವದು.

## ೧. ರಚನಾನುಪಪತ್ತ್ಯಧಿಕರಣ

ರಚನಾನುಪಪತ್ತೇಶ್ಚ ನಾನುಮಾನಮ್ ॥೧॥ ಪ್ರವೃತ್ತೇಶ್ಚ ॥ ೨ ॥ ಪಯೋಽಮ್ಬುವಚ್ಚೇತ್ತತ್ರಾಪಿ ॥ ೩ ॥ ವ್ಯತಿರೇಕಾನವಸ್ಥಿತೇಶ್ಚಾನಪೇಕ್ಷತ್ವಾತ್ ॥ ೪ ॥ ಅನ್ಯತ್ರಾಭಾವಾಚ್ಚ ನ ತೃಣಾದಿವತ್ ॥ ೫ ॥ ಅಭ್ಯುಪಗಮೇಽಪ್ಯರ್ಥಾಭಾವಾತ್ ॥ ೬ ॥ ಪುರುಷಾಶ್ಮವದಿತಿ ಚೇತ್ತಥಾಽಪಿ ॥ ೭ ॥ ಅಂಗಿತ್ವಾನುಪಪತ್ತೇಶ್ಚ ॥ ೮ ॥ ಅನ್ಯಥಾನು

**ನಿಂತೌ ಚ ಜ್ಞಶಕ್ತಿವಿಯೋಗಾತ್ ||೯|| ವಿಪ್ರತಿಷೇಧಾಚ್ಚಾಸಮಂಜಸಮ್ ||೧೦||**

ಸಂಶಯ : ಸಾಂಖ್ಯರ ಪ್ರಧಾನಕಾರಣವಾದಕ್ಕೆ ವಿರುದ್ಧವಾದ್ದರಿಂದ ಚೇತನಕಾರಣವಾದವಾದ ಬ್ರಹ್ಮವಾದವನ್ನು ತಿರಸ್ಕರಿಸಬೇಕೆ, ಬೇಡವೆ?[1]

ಪೂರ್ವಪಕ್ಷ : ಸಾಂಖ್ಯರ ವಾದವು ಯುಕ್ತಿಯುಕ್ತವಾಗಿರುವದರಿಂದ ಅದಕ್ಕೆ ವಿರುದ್ಧವಾದ ಬ್ರಹ್ಮಕಾರಣವಾದವನ್ನು ತಳ್ಳಿಹಾಕಬೇಕು. ಹೇಗೆಂದರೆ ಬಾಹ್ಯಾಧ್ಯಾತ್ಮಿಕಭೇದಗಳೆಲ್ಲ ಸುಖದುಃಖಮೋಹಾತ್ಮಕವಾಗಿರುವದರಿಂದ ಅವಕ್ಕೆ ಸುಖದುಃಖಮೋಹಾತ್ಮಕವಾದ ಸಾಮಾನ್ಯವು ಕಾರಣವಾಗಿರಬೇಕೆಂಬುದು ನ್ಯಾಯವಾಗಿದೆ. ಆ ಸಾಮಾನ್ಯವೇ ತ್ರಿಗುಣಾತ್ಮಕಪ್ರಧಾನವು. ಈ ಪ್ರಧಾನವನ್ನು ಪರಿಣಾಮಾದಿಲಿಂಗಗಳಿಂದಲೂ ಅನುಮಾನಮಾಡಬಹುದು. ಬ್ರಹ್ಮಕಾರಣವಾದವು ಈ ವಾದಕ್ಕೆ ವಿರುದ್ಧವಾಗಿರುತ್ತದೆ.

ಸಿದ್ಧಾಂತ : ಸಾಂಖ್ಯರ ವಾದವು ಯುಕ್ತಿವಿರುದ್ಧ. ಏಕೆಂದರೆ ಚೇತನದಿಂದ ಅಧಿಷ್ಠಿತವಾಗುವ ಅಚೇತನವು ತಾನೇ ಪುರುಷಾರ್ಥಕ್ಕೆ ತಕ್ಕ ವಿಕಾರಗಳನ್ನು ವಿರಚಿಸುವದು ಕಂಡಿಲ್ಲ. ಸುಖಾದಿಗಳು ಬಾಹ್ಯಾಧ್ಯಾತ್ಮಿಕಭೇದಗಳಲ್ಲಿ ಅನುಗತವಾಗಿರುವದೂ ಇಲ್ಲ. ಏಕೆಂದರೆ ಸುಖಾದಿಗಳು ಆಂತರವಾಗಿವೆ. ಭೇದಗಳು ಪರಿಮಿತವಾಗಿರುವ ಸಂಸರ್ಗಪೂರ್ವಕವಾಗಿರಬೇಕೆಂಬುದೂ ಸರಿಯಲ್ಲ; ಏಕೆಂದರೆ ಸತ್ತ್ವಾದಿಗುಣಗಳೂ ಸಂಸರ್ಗಪೂರ್ವಕವಾಗಿರಬೇಕೆಂದಾಗುವದು. ಕಾರ್ಯಕಾರಣಭಾವವು ಚೇತನದಿಂದ ನಿರ್ಮಿತವಾದ ಪದಾರ್ಥಗಳಿಗೇ ಇದೆ. ಪ್ರಧಾನವು ಅಚೇತನವಾದ್ದರಿಂದ ಸಾಮ್ಯಾವಸ್ಥೆಯನ್ನು ಬಿಟ್ಟು ಸೃಷ್ಟಿಗೆ ಪ್ರವರ್ತಿಸಲಾರದು. ಕ್ಷೀರಾದಿದೃಷ್ಟಾಂತಗಳಲ್ಲಿಯೂ ಚೇತನಪೂರ್ವಕವಾಗಿರಬೇಕೆಂದೇ ಶ್ರುತ್ಯನುಸಾರವಾಗಿ ಅನುಮಾನಿಸಬೇಕು. ಚೇತನವನ್ನು ಬಯಸದ ಪ್ರಧಾನವು ತಾನೇ ಒಂದು ಕಾಲದಲ್ಲಿ ಪ್ರವರ್ತಿಸುವದು, ಇನ್ನೊಂದು ಕಾಲದಲ್ಲಿ ಸುಮ್ಮನಿರುವದು–ಎಂಬ ನಿಯಮವು ಅದಕ್ಕೆ ಸಲ್ಲದು. ತೃಣಾದಿದೃಷ್ಟಾಂತವೂ ಸರಿಯಲ್ಲ; ಏಕೆಂದರೆ ಅದೂ ನಿರ್ನಿಮಿತ್ತ

1. ಈ ಬಗೆಯ ಸಂಶಯವನ್ನು ಮುಂದಿನ ಅಧಿಕರಣಗಳಿಗೆಲ್ಲ ಕಲ್ಪಿಸಿಕೊಳ್ಳಬಹುದು;

ವಾಗಿ ಪರಿಣಮಿಸುವದಿಲ್ಲ. ಪ್ರಧಾನವು ಪರಿಣಮಿಸಿದರೂ ಅದಕ್ಕೆ ಯಾವ ಪ್ರಯೋಜನವೂ ಇರುವದಿಲ್ಲ. ಹೇಳವಕುರುಡರ ದೃಷ್ಟಾಂತವಾಗಲಿ ಅಯಸ್ಕಾಂತದೃಷ್ಟಾಂತವಾಗಲಿ ಪ್ರಧಾನಕ್ಕೆ ಹತ್ತುವದಿಲ್ಲ; ಏಕೆಂದರೆ ಪ್ರಧಾನಕ್ಕೆ ಪುರುಷನು ಪ್ರವರ್ತಕನಲ್ಲ. ಅಯಸ್ಕಾಂತಕ್ಕಿರುವಂತೆ ಅದಕ್ಕೆ ಸಂನಿಧಿಯ ಅಪೇಕ್ಷೆಯೂ ಇಲ್ಲ. ಸಾಮ್ಯಾವಸ್ಥೆಯಿಂದ ಗುಣಗಳ ಅಂಗಾಂಗಿಭಾವವನ್ನು ಒಪ್ಪುವದಕ್ಕೆ ಕಾರಣವಿಲ್ಲ; ಪ್ರಧಾನಕ್ಕೆ ಚೈತನ್ಯವೂ ಇಲ್ಲ. ಸಾಂಖ್ಯರ ವಾದದಲ್ಲಿ ಪರಸ್ಪರವಿರುದ್ಧವಾದ ಅಭ್ಯುಪಗಮಗಳೂ ಇವೆ. ಅದ್ದರಿಂದ ಬ್ರಹ್ಮವಾದಕ್ಕೆ ಅವು ಎದುರಾಗುವಂತಿಲ್ಲ.

## ೨. ಮಹದ್ದೀರ್ಘಾಧಿಕರಣ

ಮಹದ್ದೀರ್ಘವದ್ವಾ ಹ್ರಸ್ವಪರಿಮಂಡಲಾಭ್ಯಾಮ್ ॥೧೧॥

ಪೂರ್ವಪಕ್ಷ: ವೈಶೇಷಿಕರ ಪ್ರಕ್ರಿಯೆಗೆ ಬ್ರಹ್ಮವಾದವು ವಿರುದ್ಧವಾಗಿದೆ. ಏಕೆಂದರೆ ಕಾರಣದ್ರವ್ಯಸಮವಾಯಿಗಳಾದ ಗುಣಗಳಿಂದ ಕಾರ್ಯದಲ್ಲಿ ಸಮಾನಜಾತಿಯ ಗುಣಾಂತರವು ಆರಬ್ಧವಾಗಬೇಕು. ಈ ಯುಕ್ತಿಯು ಸರಿಯಾದರೆ ಕಾರಣವಾದ ಬ್ರಹ್ಮದ ಚೈತನ್ಯಗುಣವು ಕಾರ್ಯದಲ್ಲಿಯೂ ಸಮವೇತವಾಗಿರಬೇಕಾಗುವದು. ಆದರೆ ಹಾಗಿಲ್ಲ.

ಸಿದ್ಧಾಂತ : ಈ ವೈಶೇಷಿಕರ ಪ್ರಕ್ರಿಯೆಯು ಸರಿಯಲ್ಲ. ಏಕೆಂದರೆ ಪರಿಮಂಡಲಪರಿಮಾಣದ ಪರಮಾಣುಗಳಿಂದ ಅಣುವೂ ಹ್ರಸ್ವವೂ ಆದ ದ್ವ್ಯಣುಕವೂ ಹುಟ್ಟುವದೆಂದೂ ಅಣುವೂ ಹ್ರಸ್ವವೂ ಆದ ದ್ವ್ಯಣುಕಗಳಿಂದ ಮಹತ್ತೂ ದೀರ್ಘವೂ ಆದ ತ್ರ್ಯಣುಕವೂ ಹುಟ್ಟುವದೆಂದೂ ಅವರೇ ಒಪ್ಪಿರುತ್ತಾರೆ. ಸಂಯೋಗದಿಂದ ಅದಕ್ಕಿಂತ ವಿಲಕ್ಷಣವಾದ ದ್ರವ್ಯಾದಿಗಳು ಹುಟ್ಟುವವೆಂದೂ ಒಪ್ಪಿರುತ್ತಾರೆ. ಆದ್ದರಿಂದ ಬ್ರಹ್ಮವು ಚೇತನವಾಗಿದ್ದರೂ ಜಗತ್ತು ಅದಕ್ಕಿಂತ ವಿಲಕ್ಷಣವಾಗಿರಬಹುದೆಂದು ಅವರೇ ಒಪ್ಪಿದಂತೆ ಆಗಿರುತ್ತದೆ.

## ೩. ಪರಮಾಣುಜಗದಕಾರಣತ್ವಾಧಿಕರಣ

ಉಭಯಥಾಪಿ ಚ ನ ಕರ್ಮಾತಸ್ತದಭಾವಃ ॥೧೨॥ ಸಮವಾಯಾಭ್ಯುಪಗಮಾಚ್ಚ ಸಾಮ್ಯಾದನವಸ್ಥಿತೇಃ ॥೧೩॥ ನಿತ್ಯಮೇವ ಚ

**ಭಾವಾತ್ ||೧೪|| ರೂಪಾದಿಮತ್ತ್ವಾಚ್ಚ ವಿಪರ್ಯಯೋ ದರ್ಶನಾತ್ ||೧೫|| ಉಭಯಥಾ ಚ ದೋಷಾತ್ ||೧೬|| ಅಪರಿಗ್ರಹಾಚ್ಚಾತ್ಯನ್ತಮನಪೇಕ್ಷಾ ||೧೭||**

**ಪೂರ್ವಪಕ್ಷ :** ಬ್ರಹ್ಮಕಾರಣವಾದವು ಪರಮಾಣುಕಾರಣವಾದಕ್ಕೆ ವಿರುದ್ಧವಾಗಿದೆ. ಆದ್ದರಿಂದ ಇದು ಯುಕ್ತಿಯುಕ್ತವಲ್ಲ.

**ಸಿದ್ಧಾಂತ :** ಪರಮಾಣುಕಾರಣವಾದವು ಸರಿಯಲ್ಲ. ಏಕೆಂದರೆ ಪ್ರಲಯದಲ್ಲಿ ವಿಭಕ್ತವಾಗಿರುವ ಪರಮಾಣುಗಳ ಸಂಯೋಗವಾಗುವದಕ್ಕೆ ಕರ್ಮವು ಬೇಕು. ಆ ಕರ್ಮಕ್ಕೆ ನಿಮಿತ್ತವು ಯಾವದಾದರೊಂದನ್ನು ಒಪ್ಪದಿದ್ದರೆ ಕರ್ಮವೇ ಇಲ್ಲದೆ ದ್ವ್ಯಣುಕಾದಿಗಳ ಉತ್ಪತ್ತಿಯಿಲ್ಲವಾಗುವದು. ಆದರೆ ಪ್ರಯತ್ನ, ಅಭಿಘಾತ, ಅದೃಷ್ಟ– ಮುಂತಾದ ನಿಮಿತ್ತಗಳು ಆಗ ಯಾವವೂ ಇರುವದಿಲ್ಲ. ಈ ಅಣುಗಳ ಸಂಯೋಗವೂ ಹೊಂದುವದಿಲ್ಲ. ಆದ್ದರಿಂದ ಸೃಷ್ಟಿಯಾಗುವಂತಿಲ್ಲ. ಇದರಂತೆ ಪ್ರಲಯವಾಗುವದಕ್ಕೆ ಬೇಕಾದ ವಿಭಾಗಕ್ಕೂ ನಿಮಿತ್ತವಿರುವದಿಲ್ಲ. ಪರಮಾಣುಗಳಿಂದ ಹುಟ್ಟುವ ವಿಲಕ್ಷಣವಾದ ದ್ವ್ಯಣುಕವು ಅವುಗಳಲ್ಲಿ ಸಮವಾಯಸಂಬಂಧದಿಂದ ಇರುತ್ತದೆ ಎಂಬುದನ್ನು ಒಪ್ಪುವದಕ್ಕಾಗುವದಿಲ್ಲ ; ಏಕೆಂದರೆ ಸಂಯೋಗದಂತೆ ಸಮವಾಯಕ್ಕೂ ಸಂಬಂಧಾಂತರವು ಬೇಕಾಗುವದರಿಂದ ಅನವಸ್ಥಾದೋಷವು ಬರುವದು. ಪರಮಾಣುಗಳು ಪ್ರವೃತ್ತಿಸ್ವಭಾವದವಾದರೆ ನಿತ್ಯವೂ ಪ್ರವೃತ್ತವಾಗಬೇಕು ; ನಿವೃತ್ತಿಸ್ವಭಾವದವಾದರೆ ನಿತ್ಯವೂ ನಿವೃತ್ತವಾಗಬೇಕು. ಆದರೆ ಇವೆರಡೂ ಅನಿಷ್ಟವಾಗಿರುತ್ತವೆ. ಪರಮಾಣುಗಳಿಗೆ ರೂಪಾದಿಗುಣಗಳಿರುವದರಿಂದ ಅವು ಪರಮಾಣುಗಳೆಂದೂ ನಿತ್ಯವೆಂದೂ ತಿಳಿದಿರುವದಕ್ಕೆ ವಿಪರೀತವಾಗಿ ಸಕಾರಣವಾಗಿರುವವೆಂದೂ ಕಾರಣಾಪೇಕ್ಷೆಯಿಂದ ಸ್ಥೂಲವಾಗಿರುವವೆಂದೂ ಏರ್ಪಡುತ್ತದೆ. ಪರಮಾಣುಗಳಲ್ಲಿ ಗುಣಸಂಖ್ಯೆಯ ತಾರತಮ್ಯವನ್ನು ಒಪ್ಪಿದರೆ ಗುಣಗಳು ಹೆಚ್ಚಾಗಿರುವವು, ದಪ್ಪನಾಗಿರುವವೆಂದಾಗಿ ಪರಮಾಣುವಲ್ಲದೆಹೋಗುವವು ; ಒಪ್ಪದಿದ್ದರೆ ಒಂದೊಂದರಲ್ಲಿ ಒಂದೊಂದೇ ಗುಣವನ್ನು ಕಲ್ಪಿಸಬೇಕು ; ಅಥವಾ ಒಂದೊಂದರಲ್ಲಿಯೂ ಗಂಧಾದಿಯಾಗಿ ನಾಲ್ಕು ಗುಣಗಳನ್ನೂ ಕಲ್ಪಿಸಬೇಕಾಗುವದು. ಹೇಗಾದರೂ ದೋಷವೇ ಉಂಟಾಗುತ್ತದೆ. ಏಕೆಂದರೆ ಮೊದಲನೆಯ ಪಕ್ಷದಲ್ಲಿ ಕಾರ್ಯ

ವಾಗಿರುವ ಭೂತಗಳಲ್ಲಿ ಈಗ ತೋರುತ್ತಿರುವ ಕೆಲವು ಗುಣಗಳು- ತೋರದೆ ಇರಬೇಕಾಗುವದು; ಎರಡನೆಯ ಪಕ್ಷದಲ್ಲಿ ಈಗ ತೋರದೆ ಇರುವ ಗುಣಗಳೂ ತೋರಬೇಕಾಗುವದು ; ಪ್ರಧಾನಕಾರಣವಾದವು ಸತ್ಕಾರ್ಯವಾದವೇ ಮುಂತಾದ ಅಂಶಗಳಲ್ಲಿ ವೇದಾಂತಸಿದ್ಧಾಂತಕ್ಕೆ ಸ್ವಲ್ಪಮಟ್ಟಿಗಾದರೂ ಹತ್ತಿರವಾಗಿದೆಯಾದ್ದರಿಂದ ಅದನ್ನು ಶಿಷ್ಟರು ಸ್ವಲ್ಪಮಟ್ಟಿಗೆ ಅನುಸರಿಸಿರುತ್ತಾರೆ. ಆದರೆ ಈ ಪರಮಾಣುಕಾರಣವಾದವನ್ನು ಶಿಷ್ಟರು ಯಾರೂ ಪರಿಗ್ರಹಿಸಿರುವದಿಲ್ಲ. ಆದ್ದರಿಂದ ಸರ್ವಥಾ ಯುಕ್ತಿವಿರುದ್ಧವಾಗಿರುವ ಈ ವಾದಕ್ಕೆ ವಿರುದ್ಧವಾಗಿರುವದೇನೂ ಬ್ರಹ್ಮಕಾರಣವಾದದ ದೋಷವಲ್ಲ.

## ೪. ಸಮುದಾಯಾಧಿಕರಣ

ಸಮುದಾಯ ಉಭಯಹೇತುಕೇಽಪಿ ತದಪ್ರಾಪ್ತಿಃ ||೧೮|| ಇತರೇತರಪ್ರತ್ಯಯತ್ವಾದಿತಿ ಚೇನ್ನೋತ್ಪತ್ತಿಮಾತ್ರನಿಮಿತ್ತತ್ವಾತ್ ||೧೯|| ಉತ್ತರೋತ್ಪಾದೇ ಚ ಪೂರ್ವನಿರೋಧಾತ್ || ೨೦ || ಅಸತಿ ಪ್ರತಿಜ್ಞೋಪರೋಧೋ ಯೌಗಪದ್ಯಮನ್ಯಥಾ ||೨೧|| ಪ್ರತಿಸಂಖ್ಯಾಪ್ರತಿಸಂಖ್ಯಾನಿರೋಧಾಪ್ರಾಪ್ತಿರವಿಚ್ಛೇದಾತ್ ||೨೨|| ಉಭಯಥಾ ಚ ದೋಷಾತ್ ||೨೩|| ಆಕಾಶೇ ಚಾವಿಶೇಷಾತ್ ||೨೪|| ಅನುಸ್ಮೃತೇಶ್ಚ ||೨೫|| ನಾಸತೋಽದೃಷ್ಟತ್ವಾತ್ ||೨೬|| ಉದಾಸೀನಾನಾಮಪಿ ಚೈವಂ ಸಿದ್ಧಿಃ ||೨೭||

ಪೂರ್ವಪಕ್ಷ : ಸರ್ವಾಸ್ತಿತ್ವವಾದಿಗಳ ಮತಕ್ಕೆ ವಿರುದ್ಧವಾಗಿರುವದರಿಂದ ಬ್ರಹ್ಮವಾದವು ಸರಿಯಲ್ಲ.

ಸಿದ್ಧಾಂತ : ಈ ಮತವೂ ಯುಕ್ತಿವಿರುದ್ಧವಾಗಿರುತ್ತದೆ. ಏಕೆಂದರೆ ಅಣುಹೇತುಕವಾಗಿ ಭೂತಭೌತಿಕಸಮುದಾಯವೂ ಸ್ಕಂಧಹೇತುಕವಾದ ಆಧ್ಯಾತ್ಮಿಕಸಮುದಾಯವೂ ಅವರಿಗೆ ಸಮ್ಮತವಾಗಿರುತ್ತದೆ. ಆದರೆ ಸಮುದಾಯಗಳು ಅಚೇತನವಾಗಿರುವದರಿಂದಲೂ ಅವುಗಳನ್ನು ಒಟ್ಟುಗೂಡಿಸುವ ಚೇತನಜೀವವನ್ನಾಗಲಿ ಈಶ್ವರನನ್ನಾಗಲಿ ಅವರು ಒಪ್ಪಿರುವದಿಲ್ಲ. ಎಲ್ಲವೂ ಕ್ಷಣಿಕವೆಂದು ಒಪ್ಪಿರುವದರಿಂದ ಸಮುದಾಯಿಗಳಿಗೆ ವ್ಯಾಪಾರವಿಲ್ಲವಾಗಿ ಪ್ರವೃತ್ತಿಯು ಆಗುವಂತಿಲ್ಲ. ಅವಿದ್ಯಾದಿಗಳು ಒಂದಕ್ಕೊಂದು ಕಾರಣವಾಗಿರುವವು ಎಂದರೂ ಉತ್ಪತ್ತಿಮಾತ್ರಕ್ಕೆ ಕಾರಣವಾಗಿದ್ದಾವೇ ಹೊರತು ಸಮು

ದಾಯಕ್ಕೆ ಕಾರಣವಾಗಿರುವದಿಲ್ಲ; ಆದರೆ ಉತ್ತರಕ್ಷಣವು ಹುಟ್ಟುವಾಗ್ಗೆ ಪೂರ್ವಕ್ಷಣವು ನಾಶವಾಗಿರುವದೆಂದು ಈ ವಾದಿಗಳು ಒಪ್ಪಿರುವದರಿಂದ ಉತ್ಪತ್ತಿಮಾತ್ರಕ್ಕೂ ಅವು ಕಾರಣವಾಗಲಾರವು. ಕಾರಣವಿಲ್ಲದೆಯೇ ಕಾರ್ಯವುಂಟಾಗುವದೆಂದರೆ ಚತುರ್ವಿಧಹೇತುಗಳಿಂದ ಚಿತ್ತಚೈತ್ಯಗಳು ಉತ್ಪತ್ತಿಯಾಗುತ್ತವೆ ಎಂಬ ಈ ವಾದಿಗಳ ಪ್ರತಿಜ್ಞೆಗೆ ಭಂಗವನ್ನು ತರುವದು; ಅದು ಯುಕ್ತವೂ ಆಗುವದಿಲ್ಲ. ಪೂರ್ವಕ್ಷಣವು ಉತ್ತರಕ್ಷಣದ ಉತ್ಪತ್ತಿಯವರೆಗೂ ಇರುತ್ತದೆ ಎಂದರೆ ಕ್ಷಣಿಕತ್ವಾಭ್ಯುಪಗಮಕ್ಕೆ ವಿರೋಧವಾಗುವದು. ಪ್ರತಿಸಂಖ್ಯಾನಿರೋಧ, ಅಪ್ರತಿಸಂಖ್ಯಾನಿರೋಧ- ಇವುಗಳನ್ನು ಒಪ್ಪಿರುವದೂ ಸರಿಯಲ್ಲ. ಏಕೆಂದರೆ ಸಂತಾನವು ಯಾವಾಗಲೂ ಅವಿಚ್ಛಿನ್ನವಾಗಿರುತ್ತದೆ, ಸಂತಾನಿಗಳಾದ ಭಾವಗಳು ನಿರನ್ವಯವಾಗಿ ನಾಶವಾಗುವಹಾಗೂ ಇಲ್ಲ. ಪ್ರತಿಸಂಖ್ಯಾನಿರೋಧವಲ್ಲಿ ಸೇರಿರುವ ಅವಿದ್ಯಾದಿನಿರೋಧವೆಂಬುದು ಸಮ್ಯಗ್ಜ್ಞಾನದಿಂದ ಆಗುವದೆಂದರೆ ವಸ್ತುಗಳು ನಿರ್ಹೇತುಕವಾಗಿ ತಾವೇ ನಾಶವಾಗುವವೆಂಬ ವಾದಕ್ಕೆ ವಿರೋಧವಾಗುವದು; ತಾನೇ ಆಗುವದೆಂದರೆ ಮಾರ್ಗೋಪದೇಶವು ವ್ಯರ್ಥವಾಗುವದು. ಆಕಾಶವು ನಿರುಪಾಖ್ಯವೆಂಬುದೂ ಸರಿಯಲ್ಲ; ಏಕೆಂದರೆ ಶ್ರುತಿಯಿಂದಲೂ ಅನುಮಾನದಿಂದಲೂ ಅದು ವಸ್ತುವೆಂದು ಸಿದ್ಧವಾಗುತ್ತದೆ. ಅನುಸ್ಮೃತಿಯಿಂದಲೂ ಪ್ರತ್ಯಭಿಜ್ಞೆಯಿಂದಲೂ ಅದೇ ಎಂದು ಗೊತ್ತಾಗುವ ವಸ್ತುವು ಕ್ಷಣಿಕವೆಂಬ ಪ್ರತಿಜ್ಞೆಯೂ ಸರಿಯಲ್ಲ; ಅವನೇ ನಾನು ಎಂಬ ಪ್ರತ್ಯಭಿಜ್ಞಾನಿಶ್ಚಯವಿರುವದರಿಂದ ಜ್ಞಾತೃವು ಕ್ಷಣಿಕನೆಂಬುದಂತೂ ಹೊಂದುವದೇ ಇಲ್ಲ. ಅಸತ್ತಿನಿಂದ, ನಾಶವಾದ ಕಾರಣದಿಂದ, ಕಾರ್ಯವು ಉತ್ಪತ್ತಿಯಾಗುವದೆಂಬ ಇವರ ಮತವೂ ಪ್ರತ್ಯಕ್ಷವಿರುದ್ಧವಾಗಿರುವದರಿಂದ ಈ ಪಕ್ಷದಲ್ಲಿ ಕಾರ್ಯವು ಕಾರಣಸಾಮಗ್ರಿಯಿಲ್ಲದೆಯೇ ಸಿದ್ಧವಾಗಬೇಕಾಗುವದು. ಆದ್ದರಿಂದಲೂ ಈ ಮತವು ಅಯುಕ್ತವು.

## ೫. ಅಭಾವಾಧಿಕರಣ

ನಾಭಾವ ಉಪಲಬ್ಧೇಃ ||೨೮|| ವೈಧರ್ಮ್ಯಾಚ್ಚ ನ ಸ್ವಪ್ನಾದಿವತ್ ||೨೯|| ನ ಭಾವೋಽನುಪಲಬ್ಧೇಃ ||೩೦|| ಕ್ಷಣಿಕತ್ವಾಚ್ಚ ||೩೧|| ಸರ್ವಥಾನುಪಪತ್ತೇಶ್ಚ ||೩೨||

ಪೂರ್ವಪಕ್ಷ : ಬ್ರಹ್ಮವಾದವು ವಿಜ್ಞಾನವಾದಕ್ಕೆ ವಿರುದ್ಧವಾಗಿರುವದರಿಂದ ಸರಿಯಲ್ಲ.

ಸಿದ್ಧಾಂತ : ವಿಜ್ಞಾನವಾದವು ಯುಕ್ತಿವಿರುದ್ಧವಾಗಿರುವದರಿಂದ ಅದರ ವಿರೋಧವು ದೋಷವಲ್ಲ. ಏಕೆಂದರೆ ಬಾಹ್ಯಾರ್ಥವು ಅನುಭೂತವಾಗಿರುವದರಿಂದ ಇಲ್ಲವೆನ್ನುವದಕ್ಕಾಗುವದಿಲ್ಲ; ಆ ಅರ್ಥವು ಅನುಭವಕ್ಕಿಂತ ವ್ಯತಿರಿಕ್ತವಾಗಿಯೇ ತಿಳಿಯಬರುತ್ತದೆ. ಒಳಗಿನ ವಿಜ್ಞಾನವೇ ಹೊರಗಿರುವಂತೆ ತೋರುತ್ತದೆ ಎಂಬುದು ಸರಿಯಲ್ಲ; ಅನುಭವಕ್ಕೆ ಸರಿಯಾಗಿ ಹೊರಗೇ ಇದೆ ಎಂಬುದೇ ಯುಕ್ತ. ಜ್ಞಾನವೇ ವಿಷಯಸಾರೂಪ್ಯವನ್ನು ಪಡೆಯುತ್ತದೆ ಎಂದು ಈ ವಾದಿಗಳು ಹೇಳುವದರಿಂದಲೂ ವಿಷಯವಿಲ್ಲದಿದ್ದರೆ ತತ್ಸಾರೂಪ್ಯವುಂಟಾಗಲಾರದಾದ್ದರಿಂದಲೂ ಬಾಹ್ಯಾರ್ಥವು ಇದೆಯೆಂದು ಒಪ್ಪುವದೇ ಯುಕ್ತ. ಎರಡೂ ಜೊತೆಯಲ್ಲಿದ್ದರೂ ಪ್ರತ್ಯಯವಿಷಯಗಳಿಗೆ ಉಪಾಯೋಪೇಯಭಾವವಿರುವದರಿಂದ ಅವು ಬೇರೆಯೇ ಎಂದು ತಿಳಿಯುವದು ಯುಕ್ತ. ವಿಜ್ಞಾನವು ತಾನೇ ಅನುಭವಕ್ಕೆ ಬರುತ್ತದೆ, ಹೊರಗಿನ ಅರ್ಥವು ತಾನೊಂದೇ ಅನುಭೂತವಾಗುವದಿಲ್ಲ ಎಂಬುದು ಸರಿಯಲ್ಲ; ಏಕೆಂದರೆ ವಿಜ್ಞಾನವು ತನ್ನನ್ನು ತಾನು ಅರಿಯುತ್ತದೆಯೆಂಬುದು ವಿರುದ್ಧವಚನವು; ವಿಜ್ಞಾನವು ತದ್ವ್ಯತಿರಿಕ್ತಸಾಕ್ಷಿಗೆ ಜ್ಞೇಯವಾಗಿದೆ ಎಂಬುದು ಅನುಭವದಲ್ಲಿದೆ ವಿಜ್ಞಾನಕ್ಕೆ ಉತ್ಪತ್ತಿ, ನಾಶ, ಅನೇಕತ್ವ– ಮುಂತಾದವುಗಳನ್ನು ಒಪ್ಪಿರುವ ವಿಜ್ಞಾನವಾದಿಗಳು ಅದನ್ನೆಲ್ಲ ಅರಿಯುವ ಕೂಟಸ್ಥವಿಜ್ಞಾನರೂಪನಾದ ಆತ್ಮನನ್ನು ಒಪ್ಪಲೇಬೇಕು. ಸ್ವಪ್ನಮಾಯಾದಿಗಳಲ್ಲಿ ವಿಷಯವಿಲ್ಲದೆ ಪ್ರತ್ಯಯಗಳಿರುವವೆಂಬುದು ಜ್ಞಾನಾತಿರಿಕ್ತಬಾಹ್ಯಾರ್ಥಸದ್ಭಾವಕ್ಕೆ ವಿರುದ್ಧವಲ್ಲ; ಏಕೆಂದರೆ ಸ್ವಪ್ನಾದಿಗಳು ಬಾಧಿತವಾಗುತ್ತವೆ, ಸ್ಮೃತಿರೂಪವಾಗಿರುತ್ತವೆ. ಆದ್ದರಿಂದ ಎಚ್ಚರದಲ್ಲಿರುವ ಜ್ಞಾನಕ್ಕೆ ವಿಷಯವಾದ ಬಾಹ್ಯಾರ್ಥವು ಇದೆ ಎಂಬುದೇ ಯುಕ್ತ. ಬಾಹ್ಯಾರ್ಥಗಳೇ ಇಲ್ಲದ್ದರಿಂದ ವಾಸನೆಗಳೂ ಅಸಿದ್ಧವಾಗುತ್ತವೆ ; ಆದ್ದರಿಂದ ವಾಸನಾವೈಚಿತ್ರ್ಯದಿಂದಲೇ ಜ್ಞಾನವೈಚಿತ್ರ್ಯವು ಹೊಂದುತ್ತದೆ–ಎಂಬ ವಾದವು ಸರಿಯಲ್ಲ. ಏಕೆಂದರೆ ವಾಸನೆಗಳಿಗೆ ಆಶ್ರಯವಾದ ಸ್ಥಿರತತ್ತ್ವವು ಬೌದ್ಧಮತದಲ್ಲಿ ಯಾವದೂ ಸಿದ್ಧವಾಗುವದಿಲ್ಲ ; ಆಲಯವಿಜ್ಞಾನವೆಂಬುದು ಕ್ಷಣಿಕವಾಗಿರುವದರಿಂದ ಅದೂ ವಾಸನೆಗಳಿಗೆ

ಆಶ್ರಯವಾಗಲಾರದು. ಹೀಗೆ ಎಲ್ಲಾ ಬಗೆಯಿಂದಲೂ ಈ ಮತವು ಯುಕ್ತಿವಿರುದ್ಧವಾಗಿರುತ್ತದೆ.

## ೬. ಏಕಸ್ಮಿನ್ನಸಂಭವಾಣಕರಣ

ನೈಕಸ್ಮಿನ್ನಸಂಭವಾತ್ ||೩೩|| ಏವಂ ಚಾತ್ಮಾಽಕಾರ್ತ್ಸ್ನ್ಯಮ್ ನ ಚ ಪರ್ಯಾಯಾದಪ್ಯವಿರೋಧೋ ವಿಕಾರಾದಿಭ್ಯಃ ಅನ್ತ್ಯಾವಸ್ಥಿತೇಶ್ಚೋಭಯನಿತ್ಯತ್ವಾದವಿಶೇಷಃ ||೩೬||

ಪೂರ್ವಪಕ್ಷ : ಬ್ರಹ್ಮವಾದವು ಸ್ಯಾದ್ವಾದಕ್ಕೆ ವಿರುದ್ಧವಾಗಿದೆ.

ಸಿದ್ಧಾಂತ : ಈ ವಾದವು ಯುಕ್ತಿವಿರುದ್ಧ. ಸ್ಯಾದಸ್ತಿ. ಸ್ಯಾನ್ನಾಸ್ತಿ –ಎಂಬುದೇ ಸಿದ್ಧಾಂತವಾದರೆ ಈ ವಾದಿಗಳು ಒಪ್ಪಿರುವ ಸಿದ್ಧಾಂತವು ಒಂದು ಪಕ್ಷದಲ್ಲಿ ಇದೆ, ಇನ್ನೊಂದು ಪಕ್ಷದಲ್ಲಿಲ್ಲ–ಎಂದಾಗುವದು. ನಿರ್ಧಾರಣೆಮಾಡಿದವನು, ನಿರ್ಧಾರಣೆಯ ಫಲ, ಅಸ್ತಿಕಾಯಗಳು ಐದೇ ಎಂಬುದು, ಸಮ್ಯಗ್ದರ್ಶನ, ಸ್ವರ್ಗಾಪವರ್ಗಗಳು– ಮುಂತಾದವೆಲ್ಲ ಒಂದು ಪಕ್ಷದಲ್ಲಿ ಇಲ್ಲವೆಂದೂ ಒಪ್ಪಬೇಕಾಗುವದು. ಇವರು ಆತ್ಮನು ಶರೀರಪರಿಮಾಣದವನು ಎನ್ನುವದರಿಂದ ಮುಂದಿನ ಶರೀರವು ಈಗಿನದಕ್ಕಿಂತ ದೊಡ್ಡದಾದರೆ ಆತ್ಮನು ಅದಕ್ಕಿಂತ ಚಿಕ್ಕವನಾಗಿರಬೇಕಾಗುವದು, ಸಣ್ಣದಾದರೆ ಆತ್ಮನು ಅದರಲ್ಲಿ ಹಿಡಿಸಲಾರನೆಂದಾಗುವದು. ಪರಿಚ್ಛಿನ್ನನಾಗಿರುವದರಿಂದ ಆತ್ಮನಲ್ಲಿ ಅನಿತ್ಯತ್ವಾದಿದೋಷಗಳೂ ಬಂದೊದಗುವವು. ಆತ್ಮನಿಗೆ ಅವಯವಗಳು ಪರ್ಯಾಯದಿಂದ ಬಂದು ಸೇರಿಕೊಳ್ಳುವವು, ಅಥವಾ ಬಿಟ್ಟುಹೋಗುವವು ಎಂದರೆ ಆತ್ಮನಲ್ಲಿ ವಿಕಾರಾದಿದೋಷಗಳುಂಟಾಗುವವು. ಅನಿತ್ಯನಾದ ಜೀವನಿಗೆ ಬಂಧಮೋಕ್ಷಗಳನ್ನು ಹೇಳುವದಕ್ಕಿಲ್ಲವಾಗುವದು. ಮೋಕ್ಷಾವಸ್ಥೆಯಲ್ಲಿ ಜೀವಪರಿಮಾಣವು ಈಗಿನಂತೆ ಅನಿತ್ಯವೆಂದೋ ಅಥವಾ ಆ ಅವಸ್ಥೆಯಲ್ಲಿರುವಂತೆ ಈಗಲೂ ವ್ಯವಸ್ಥಿತಪರಿಮಾಣವೆಂದೋ ಒಪ್ಪಬೇಕಾಗುವದು ; ಆದರಿಂದ ಶರೀರಪರಿಮಾಣವಾದವು ಕೈಬಿಟ್ಟುಹೋಗುವದು. ಆದ್ದರಿಂದ ಈ ವಾದವು ಯುಕ್ತಿವಿರುದ್ಧವಾಗಿದೆ.

## ೭. ಪತ್ಯಧಿಕರಣ

ಪತ್ಯುರಸಾಮಞ್ಜಸ್ಯಾತ್ ||೩೭|| ಸಂಬಂಧಾನುಪಪತ್ತೇಶ್ಚ ||೩೮||

ಅಧಿಷ್ಠಾನಾನುಪಪತ್ತೇಶ್ಚ ||೩೯|| ಕರಣವಚ್ಚೇನ್ನ ಭೋಗಾದಿಭ್ಯಃ ||೪೦|| ಅನ್ತವತ್ತ್ವಮಸರ್ವಜ್ಞತಾ ವಾ ||೪೧||

ಪೂರ್ವಪಕ್ಷ: ಈಶ್ವರನಿಮಿತ್ತಕಾರಣವಾದಿಗಳ ಮತಕ್ಕೆ ಬ್ರಹ್ಮ ಕಾರಣವಾದವು ವಿರುದ್ಧವಾಗಿದೆ.

ಸಿದ್ಧಾಂತ : ನಿಮಿತ್ತಕಾರಣವಾದಿಗಳ ಮತವು ಅಯುಕ್ತವಾಗಿರುತ್ತದೆ. ಸಾಂಖ್ಯಯೋಗಗಳನ್ನು ಆಶ್ರಯಿಸಿರುವ ನಿಮಿತ್ತಕಾರಣವಾದಿಗಳ ಮತದಲ್ಲಿ ಪ್ರಧಾನಪುರುಷರುಗಳ ಅಧಿಷ್ಠಾತೃವು ಈಶ್ವರನೆಂದು ಒಪ್ಪಿದೆ. ಹೀನಮಧ್ಯಮೋತ್ತಮಪ್ರಾಣಿಗಳನ್ನು ಸೃಷ್ಟಿಸಿರುವ ಅವರ ಮತದ ಈಶ್ವರನಿಗೆ ರಾಗದ್ವೇಷಾದಿಗಳು ಪ್ರಸಕ್ತವಾಗುವವು; ಪ್ರಾಣಿಗಳ ಕರ್ಮದ ಅಪೇಕ್ಷೆಯಿಂದ ಸೃಷ್ಟಿಸುತ್ತಾನೆಂದರೆ ಕರ್ಮೇಶ್ವರರು ಪ್ರವರ್ತ್ಯಪ್ರವರ್ತಕರೆಂಬುದು ಅನ್ಯೋನ್ಯಾಶ್ರಯವಾಗುವದು. ಸಂಸಾರವು ಅನಾದಿಯಾಗಿರುವದರಿಂದ ದೋಷವಿಲ್ಲ ಎನ್ನುವದಕ್ಕಿಲ್ಲ; ಏಕೆಂದರೆ ಈ ಅನ್ಯೋನ್ಯಾಶ್ರಯದೋಷವು ಎಲ್ಲಾ ಕಾಲದಲ್ಲಿಯೂ ಇದ್ದೇ ಇರುವದರಿಂದ ಇದು ಅಂಧಪರಂಪರಾನ್ಯಾಯವಾಗಿರುತ್ತದೆ. ಈಶ್ವರನು ಸೃಷ್ಟಿಯಲ್ಲಿ ಪ್ರವರ್ತಿಸುವದರಿಂದಲೇ ರಾಗದ್ವೇಷಾದಿಯುಕ್ತನೆಂದಾಗುತ್ತದೆ. ಈಶ್ವರನು ಪುರುಷವಿಶೇಷನೆಂಬುದರಿಂದ ಉದಾಸೀನನಾದ ಪುರುಷನಿಗೆ ಪ್ರವೃತ್ತಿಯನ್ನು ಹೇಳುವದರಿಂದ ಈ ಮತವು ಅಸಮಂಜಸವು. ಪ್ರಧಾನಪುರುಷರನ್ನು ಆಳುವ ಈಶ್ವರನಿಗೂ ಅವಕ್ಕೂ ಯಾವ ಸಂಬಂಧವೂ ಹೊಂದುವಂತಿಲ್ಲ; ಸಂಬಂಧವಿಲ್ಲದೆ ಆಳುವಂತಿಲ್ಲ, ಅಪ್ರತ್ಯಕ್ಷವಾಗಿರುವ ಪ್ರಧಾನಕ್ಕೆ ಈಶ್ವರನು ಕುಂಬಾರನು ಮಣ್ಣಿಗೆ ಅಧಿಷ್ಠಾತೃವಾಗಿರುವಂತೆ, ಅಧಿಷ್ಠಾತೃವೆಂಬುದು ಯುಕ್ತವಾಗುವದಿಲ್ಲ. ಜೀವನು ಕರಣಗಳಿಗೆ ಅಧಿಷ್ಠಾತೃವಾಗಿರುವಂತೆ ಆಗಬಹುದು ಎನ್ನುವದಕ್ಕಿಲ್ಲ; ಏಕೆಂದರೆ ಜೀವನಿಗಿರುವಂತೆ ಭೋಗಾದಿಗಳು ಈಶ್ವರನಿಗಿಲ್ಲ, ಇದ್ದರೆ ಅವನು ಸಂಸಾರಿಯೇ ಆಗಿಬಿಡುತ್ತಾನೆ. ಅಧಿಷ್ಠಾತೃವಾದ ಅರಸನಿಗೆ ಶರೀರವಿರುವಂತೆ ಈಶ್ವರನಿಗೂ ಶರೀರವಿರಬೇಕು; ಇಲ್ಲದಿದ್ದರೆ ಅವನು ಪ್ರವರ್ತಕನಾಗಲಾರನು. ಶರೀರವಿದ್ದರೆ ಸಂಸಾರಿಯೇ ಆಗಿಬಿಡುತ್ತಾನೆ. ಈಶ್ವರನು ಅನಂತವಾದ ಪ್ರಧಾನವನ್ನೂ ಅನಂತವಾದ ಪುರುಷರನ್ನೂ ತನ್ನ ಜ್ಞಾನದಿಂದ ಪರಿಚ್ಛೇದ ಮಾಡುವನಾದರೆ ಪ್ರಧಾನಪುರುಷರು ಅಂತವುಳ್ಳವರೆಂದಾಗುವದು. ಇಲ್ಲ

ವಾದರೆ ಈಶ್ವರನು ಅಸರ್ವಜ್ಞನೆಂದಾಗುವದು. ಆದ್ದರಿಂದ ಇವರು ಕಲ್ಪಿಸಿರುವ ನಿಮಿತ್ತಕಾರಣವಾದವು ಅಯುಕ್ತವಾಗಿರುತ್ತದೆ. ಹೀಗೆಯೇ ಉಳಿದ ಕಾರಣವಾದಿಗಳ ಮತವನ್ನೂ ಖಂಡಿಸಬಹುದು.

## ೮. ಉತ್ಪತ್ತ್ಯಸಂಭವಾಧಿಕರಣ

ಉತ್ಪತ್ತ್ಯಸಂಭವಾತ್ ॥೪೨॥ ನ ಚ ಕರ್ತುಃ ಕರಣಮ್ ವಿಜ್ಞಾನಾದಿಭಾವೇ ವಾ ತದಪ್ರತಿಷೇಧಃ ॥೪೪॥ ವಿಪ್ರತಿಷೇಧಾಚ್ಚ

ಪೂರ್ವಪಕ್ಷ. ಜೀವೋತ್ಪತ್ತ್ಯಾದಿಗಳನ್ನು ಹೇಳುವ ಭಾಗವತಮತಕ್ಕೆ ಈ ವೇದಾಂತಮತವು ವಿರುದ್ಧವು. ಭಾಗವತಮತವು ವೇದೋಕ್ತವಾದ ಉಪಾದಾನಕಾರಣವನ್ನು ಒಪ್ಪಿದೆ.

ಸಿದ್ಧಾಂತ : ಭಾಗವತಮತವು ಕೆಲವು ವಿಷಯಗಳಲ್ಲಿ ವೇದಾಂತಕ್ಕೆ ಅನುಗುಣವೇ ಆಗಿದ್ದರೂ ಮತ್ತೆ ಕೆಲವು ವಿಷಯಗಳಲ್ಲಿ ಯುಕ್ತಿವಿರುದ್ಧವಾಗಿರುತ್ತದೆ, ವಾಸುದೇವನೆಂಬ ಪರಮಾತ್ಮನಿಂದ ಸಂಕರ್ಷಣನೆಂಬ ಜೀವನು ಉತ್ಪನ್ನನಾಗುವನೆಂಬುದು ಯುಕ್ತವಲ್ಲ. ಏಕೆಂದರೆ ಜೀವನು ಅನಿತ್ಯನು ಎಂದು ಮುಂತಾದ ದೋಷವು ಪ್ರಸಕ್ತವಾಗುತ್ತದೆ; ಕಾರಣನಾದ ವಾಸುದೇವನನ್ನು ಸೇರಿದರೆ ಲಯವಾಗುತ್ತಾನೆಂದೂ ಆಗುತ್ತದೆ. ಕರ್ತೃವಾಗಿರುವ ಸಂಕರ್ಷಣನಿಂದ ಪ್ರದ್ಯುಮ್ನನೆಂಬ ಕರಣರೂಪವಾದ ಮನಸ್ಸು ಹುಟ್ಟುವದೆಂಬುದೂ ಲೋಕಾನುಭವವಿರುದ್ಧವು. ಈ ವಿಷಯದಲ್ಲಿ ಶ್ರುತಿಯೂ ಇಲ್ಲ. ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ– ಇವೆಲ್ಲ ಭಗವಂತರೇ ; ಎಲ್ಲರೂ ಜ್ಞಾನಾದಿಗುಣಗಳಲ್ಲಿ ಸಮಾನರು– ಎನ್ನುವದಾದರೆ ಅನೇಕೇಶ್ವರವಾದವು ಬರುತ್ತದೆ. ಈ ನಾಲ್ಕೂ ಭಗವಂತನ ವ್ಯೂಹಗಳು ಎಂದರೆ ನಾಲ್ಕೇ ಎಂಬ ಸಂಖ್ಯಾಕ್ಲೃಪ್ತಿಗೆ ಕಾರಣವಿರುವದಿಲ್ಲ. ವಾಸುದೇವನಿಂದ ಸಂಕರ್ಷಣನು, ಸಂಕರ್ಷಣನಿಂದ ಪ್ರದ್ಯುಮ್ನನು, ಪ್ರದ್ಯುಮ್ನನಿಂದ ಅನಿರುದ್ಧನು– ಹೀಗೆ ಕಾರ್ಯಕಾರಣಭಾವದಿಂದ ಹುಟ್ಟುತ್ತಾರೆ ಎಂಬ ಅಭ್ಯುಪಗಮವನ್ನು ಬಿಡಬೇಕಾಗುತ್ತದೆ. ಜ್ಞಾನೈಶ್ವರ್ಯಾದಿಗಳು ಗುಣಗಳೆಂದೂ ವಾಸುದೇವಭಗವಂತನೇ ಎಂದೂ ಕಲ್ಪಿಸಿರುವ ವಿಪ್ರತಿಷೇಧವೂ ಈ ಮತದಲ್ಲಿದೆ ; ವೇದನಿಂದಾದಿವಿಪ್ರತಿಷೇಧವೂ ಇವೆ, ಆದ್ದರಿಂದ ಈ ಮತವೂ ಅಯುಕ್ತವು.

# ಮೂರನೆಯ ಪಾದ

ಈ ಪಾದದಲ್ಲಿ ಪಂಚಭೂತಜೀವರುಗಳ ವಿಷಯಕವಾದ ಶ್ರುತಿಗಳಲ್ಲಿ ಯಾವ ವಿರೋಧವೂ ಇಲ್ಲವೆಂಬುದನ್ನು ತಿಳಿಸಲಾಗುತ್ತದೆ.

## ೧. ವಿಯದಧಿಕರಣ

**ನ ವಿಯದಶ್ರುತೇಃ ॥೧॥ ಅಸ್ತಿ ತು ॥೨॥ ಗೌಣ್ಯಸಂಭವಾತ್ ॥೩॥ ಶಬ್ದಾಚ್ಚ ॥೪॥ ಸ್ಯಾಚ್ಚೈಕಸ್ಯ ಬ್ರಹ್ಮಶಬ್ದವತ್ ॥೫॥ ಪ್ರತಿಜ್ಞಾಹಾನಿರವ್ಯತಿರೇಕಾಚ್ಛಬ್ದೇಭ್ಯಃ ॥೬॥ ಯಾವದ್ವಿಕಾರಂ ತು ವಿಭಾಗೋ ಲೋಕವತ್ ॥೭॥**

ಸಂಶಯ : ಆಕಾಶಕ್ಕೆ ಉತ್ಪತ್ತಿಯುಂಟೊ, ಇಲ್ಲವೊ ?

ಪೂರ್ವಪಕ್ಷ : ಆಕಾಶಕ್ಕೆ ಉತ್ಪತ್ತಿಯನ್ನು ಶ್ರುತಿಯಲ್ಲಿ ಹೇಳಿಲ್ಲ, ಆದ್ದರಿಂದ ಆಕಾಶಕ್ಕೆ ಉತ್ಪತ್ತಿಯಿಲ್ಲ. ಆದ್ದರಿಂದ ಅದ್ವೈತಹಾನಿಯಾಯಿತು. ಅಥವಾ ಆಕಾಶಕ್ಕೆ ಉತ್ಪತ್ತಿಯನ್ನು ತೈತ್ತಿರೀಯದಲ್ಲಿ ಹೇಳಿದೆ. ಛಾಂದೋಗ್ಯದಲ್ಲಿ ಹೇಳಿಲ್ಲ. ಆದ್ದರಿಂದ ಶ್ರುತಿಗಳು ಪರಸ್ಪರವಿರುದ್ಧವಾಗಿವೆ.

ಸಿದ್ಧಾಂತ್ಯೇಕದೇಶೀಯ ಮತ : ಆಕಾಶಕ್ಕೆ ಉತ್ಪತ್ತಿಯಿದೆ ಎಂಬುದು ವೈಶೇಷಿಕರ ತರ್ಕಕ್ಕೆ ವಿರುದ್ಧ. ಆಕಾಶವು ಅಮೃತವೆಂದು ಶ್ರುತಿಯಲ್ಲಿ ಹೇಳಿರುವದರಿಂದ ಅದಕ್ಕೆ ಉತ್ಪತ್ತಿಯು ಹೊಂದುವದಿಲ್ಲ. ಆದ್ದರಿಂದ ಆಕಾಶದ ಉತ್ಪತ್ತಿಯು ಗೌಣವೇ. ಬ್ರಹ್ಮವು ಏಕವು, ಅದ್ವಿತೀಯವು, ಎಂಬ ಶ್ರುತಿಯ ಅರ್ಥವನ್ನು ಕಾರ್ಯಾಪೇಕ್ಷೆಯಿಂದ. ಒಂದು, ಮತ್ತೊಬ್ಬ ಅಧಿಷ್ಠಾತೃವಿಲ್ಲದ್ದರಿಂದ ಅದ್ವಿತೀಯ–ಎಂಬೂ ಮಾಡಿಕೊಳ್ಳಬೇಕು. ಬ್ರಹ್ಮವನ್ನು ಅರಿತರೆ ಎಲ್ಲವನ್ನೂ ಅರಿತಂತಾಗುವದೆಂಬ ಪ್ರತಿಜ್ಞೆಯು ಹಾಲನ್ನು ಅರಿತರೆ ಅದರಲ್ಲಿ ಬೆರೆತಿರುವ ಸ್ವಲ್ಪ ನೀರನ್ನೂ ಅರಿತಂತೆ ಎಂಬಂತೆ ಆಗಬಹುದು.

ಸಿದ್ಧಾಂತ : ಒಂದನ್ನು ಅರಿತರೆ ಎಲ್ಲವನ್ನೂ ಅರಿತದ್ದಾಗುವದೆಂಬ ಪ್ರತಿಜ್ಞೆಯು ಮುಖ್ಯಾರ್ಥದಲ್ಲಿ ಹೊಂದುವದಕ್ಕಾಗಿ ಆಕಾಶಕ್ಕೆ ಮುಖ್ಯೋತ್ಪತ್ತಿಯನ್ನೇ ಸ್ವೀಕರಿಸಬೇಕು. ತೈತ್ತಿರೀಯಶ್ರುತಿಗೆ ಛಾಂದೋಗ್ಯವು

ವಿರುದ್ಧವಲ್ಲ; ಏಕೆಂದರೆ ಛಾಂದೋಗ್ಯಶ್ರುತಿಯನ್ನು ಆಕಾಶವಾಯುಗಳ ಉತ್ಪತ್ತಿಯಾದ ಬಳಿಕ ತೇಜಸ್ಸಿನ ಸೃಷ್ಟಿಯಾಯಿತು ಎಂದು ನಯಿಸಬಹುದು. ಹಾಲುನೀರುಗಳ ಜ್ಞಾನದಂತೆ ಸರ್ವವಿಜ್ಞಾನವೆಂಬುದು ಯುಕ್ತವಲ್ಲ; ಏಕೆಂದರೆ ನಿರ್ದುಷ್ಟವಾದ ಶ್ರುತಿಯನ್ನು ಆಗ ಅಯಥಾರ್ಥವಾದಿ– ಎಂದು ಕಲ್ಪಿಸಬೇಕಾಗುತ್ತದೆ. ವಿಭಕ್ತವಾದದ್ದು ಕಾರ್ಯ ಎಂಬ ಯುಕ್ತಿಗೆ ವಿರುದ್ಧವಾಗಿರುವ ತಾರ್ಕಿಕಯುಕ್ತಿಯು ಆಭಾಸಮಾತ್ರವಾಗಿದೆ. ಆದ್ದರಿಂದ ಆಕಾಶವು ಬ್ರಹ್ಮಕಾರ್ಯವೇ. ಅದ್ವೈತಸಿದ್ಧಾಂತಕ್ಕೆ ಯಾವ ವಿರೋಧವೂ ಇಲ್ಲ.

## ೨. ಮಾತರಿಶ್ವಾಧಿಕರಣ

### ಏತೇನ ಮಾತರಿಶ್ವಾ ವ್ಯಾಖ್ಯಾತಃ ॥೮॥

**ಸಂಶಯ :** ವಾಯುವು ಉತ್ಪನ್ನವಾಗುತ್ತದೆಯೆ, ಇಲ್ಲವೆ ?

**ಪೂರ್ವಪಕ್ಷ :** ಆಕಾಶದಂತೆಯೇ ಇಲ್ಲಿಯೂ ಪೂರ್ವಪಕ್ಷಗಳು. ಛಾಂದೋಗ್ಯದಲ್ಲಿ ಹೇಳಿಲ್ಲವಾದ್ದರಿಂದ ಉತ್ಪತ್ತಿಯಿಲ್ಲ ಎಂಬುದು ಒಂದು ಪಕ್ಷ; ತೈತ್ತಿರೀಯದಲ್ಲಿ ಉತ್ಪತ್ತಿಯನ್ನು ಹೇಳಿರುವದರಿಂದ ಶ್ರುತಿಗಳೆರಡಕ್ಕೂ ವಿರೋಧವೆಂಬುದು ಮತ್ತೊಂದು ಪಕ್ಷ.

**ಸಿದ್ಧಾಂತ್ಯೇಕದೇಶಿಯ ಮತ :** 'ವಾಯುವಿಗೆ ಅಸ್ತಮಯವಿಲ್ಲ, ಅದು ಅಮೃತವು' ಎಂದು ಶ್ರುತಿಯಿದೆ. ಆದ್ದರಿಂದ ವಾಯುವಿಗೆ ಮುಖ್ಯೋತ್ಪತ್ತಿಯಿಲ್ಲ, ಶ್ರುತಿಯು ಗೌಣವೇ.

**ಸಿದ್ಧಾಂತ :** ಪ್ರತಿಜ್ಞೆಗೆ ವಿರೋಧವಿಲ್ಲದಿರುವದಕ್ಕಾಗಿಯೂ ವಿಭಕ್ತವಾದದ್ದು ಕಾರ್ಯವಾಗಿರಬೇಕೆಂಬ ಯುಕ್ತಿಗೆ ಹೊಂದುವದಕ್ಕಾಗಿಯೂ ಉತ್ಪತ್ತಿಯನ್ನು ಒಪ್ಪಬೇಕು.

ಈ ಅಧಿಕರಣದಲ್ಲಿ ಹಿಂದಿನ ಅಧಿಕರಣದ ಯುಕ್ತಿಗಳನ್ನೇ ಅತಿದೇಶಮಾಡಿದೆ. ಶ್ರುತಿಯಲ್ಲಿ ವಾಯುವಿಗೆ ಉತ್ಪತ್ತಿಯಿಲ್ಲವೋ ಎಂಬಂತೆ ಹೇಳಿರುವದರಿಂದ ವಾಯುವಿಗೆ ಉತ್ಪತ್ತಿಯಿಲ್ಲವೆಂಬ ಶಂಕೆ ಯಾರಿಗಾದರೂ ಉಂಟಾದೀತು ಎಂದು ಬೇರೊಂದು ಅಧಿಕರಣದಿಂದ ಶಂಕೆಯನ್ನು ಪರಿಹರಿಸಿದೆ.

## ೩. ಅಸಂಭವಾಧಿಕರಣ

### ಅಸಂಭವಸ್ತು ಸತೋಽನುಪಪತ್ತೇಃ ॥೯॥

ಸಂಶಯ : ಆಕಾಶಾದಿಗಳಂತೆ ಬ್ರಹ್ಮಕ್ಕೂ ಉತ್ಪತ್ತಿಯುಂಟೋ, ಇಲ್ಲವೋ ?

ಪೂರ್ವಪಕ್ಷ : ಕಾರ್ಯದಿಂದಲೇ ಕಾರ್ಯವು ಹುಟ್ಟುವದು ಕಂಡಿರುವದರಿಂದ ಆಕಾಶವುಕೂಡ ಕಾರ್ಯವಾದ ಬ್ರಹ್ಮದಿಂದ ಹುಟ್ಟಿರಬೇಕು.

ಸಿದ್ಧಾಂತ : ಬ್ರಹ್ಮವು ಸನ್ಮಾತ್ರವು. ಸನ್ಮಾತ್ರವು ತನ್ನಿಂದಲಾಗಲಿ ಸದ್ವಿಶೇಷದಿಂದಾಗಲಿ ಹುಟ್ಟಿದೆ ಎಂದು ಕಲ್ಪಿಸುವದಕ್ಕೆ ಆಗುವದಿಲ್ಲ. ಶ್ರುತಿಯಲ್ಲಿ ಬ್ರಹ್ಮಕ್ಕೆ ಕಾರಣವಿಲ್ಲವೆಂದು ಹೇಳಿದೆ. ಎಲ್ಲವೂ ಕಾರ್ಯವೇ ಎಂದರೆ ಅನವಸ್ಥಾದೋಷವು ಬರುವದರಿಂದ ಬ್ರಹ್ಮೋತ್ಪತ್ತಿತರ್ಕವು ಸರಿಯಲ್ಲ. ಆದ್ದರಿಂದ ಬ್ರಹ್ಮವು ಹುಟ್ಟುವದಿಲ್ಲ.

## ೪. ತೇಜೋಽಧಿಕರಣ

### ತೇಜೋಽತಸ್ತಥಾ ಹ್ಯಾಹ ||೧೦||

ಸಂಶಯ : ಛಾಂದೋಗ್ಯದಲ್ಲಿ ತೇಜಸ್ಸು ಎಂದರೆ ಅಗ್ನಿಯು ಸದ್ಬ್ರಹ್ಮದಿಂದ ಹುಟ್ಟಿತು ಎಂದು ಹೇಳಿದೆ ; ತೈತ್ತಿರೀಯದಲ್ಲಿ ವಾಯುವಿನಿಂದ ಹುಟ್ಟಿತು ಎಂದಿದೆ. ಅಗ್ನಿಗೆ ಯಾವದು ಕಾರಣವೆಂದು ನಿಶ್ಚಯಿಸಬೇಕು ?

ಪೂರ್ವಪಕ್ಷ : ಬ್ರಹ್ಮವೇ ಅಗ್ನಿಗೆ ಕಾರಣವು. ಏಕೆಂದರೆ 'ಸದೇವ' (ಸತ್ತೇ ಮೊದಲು ಇತ್ತು) ಎಂದು ಬ್ರಹ್ಮವನ್ನು ಹೇಳುವದಕ್ಕುಪಕ್ರಮಿಸಿ 'ಅದು ತೇಜಸ್ಸನ್ನು ಸೃಜಿಸಿತು' ಎಂದು ಹೇಳಿದೆ. ಒಂದನ್ನರಿತರೆ ಎಲ್ಲವನ್ನೂ ಅರಿತುಕೊಳ್ಳಬಹುದು– ಎಂಬ ಪ್ರತಿಜ್ಞೆಯು ಎಲ್ಲವೂ ಬ್ರಹ್ಮದಿಂದಲೇ ಆಗಿದ್ದರೆ ಹೊಂದುತ್ತದೆ. ಎಲ್ಲವೂ ಬ್ರಹ್ಮದಿಂದಲೇ ಆಯಿತೆಂದು ಮುಂಡಕದಲ್ಲಿದೆ, ತೈತ್ತಿರೀಯದಲ್ಲಿಯೂ 'ಅವನು ತಪಸ್ಸನ್ನು ಮಾಡಿ ಇದೆಲ್ಲವನ್ನೂ ಸೃಜಿಸಿದನು' ಎಂದು ಹೇಳಿದೆ. ಆದ್ದರಿಂದ 'ವಾಯೋರಗ್ನಿಃ' ಎಂಬುದು ವಾಯುವಿನ ಅನಂತರದಲ್ಲಿ ಅಗ್ನಿಯುಂಟಾಯಿತು– ಎಂದು ಕ್ರಮವನ್ನು ಹೇಳುತ್ತದೆ ಎಂದು ತಿಳಿಯಬೇಕು.

ಸಿದ್ಧಾಂತ : 'ವಾಯೋರಗ್ನಿಃ' ಎಂದಿರುವದರಿಂದ ವಾಯುವಿನಿಂದಲೇ ಅಗ್ನಿಯುಂಟಾಯಿತೆಂದು ತಿಳಿಯಬೇಕು. 'ಆತ್ಮನ ಆಕಾಶಃ ಸಂಭೂತಃ'

( ಆತ್ಮನಿಂದ ಆಕಾಶವುಂಟಾಯಿತು ) ಎಂದು ಅಪಾದಾನಪಂಚಮಿಯನ್ನು ಹೇಳಿದ ಪ್ರಕರಣದಲ್ಲಿಯೇ ಈ ಪ್ರಕೃತವಾಕ್ಯವಿದೆ ; 'ಪೃಥಿವಿಯಿಂದ ಗಿಡ ಮರಗಳು' ಎಂದು ಮುಂದಿನ ವಾಕ್ಯದಲ್ಲಿಯೂ ಅಪಾದಾನಪಂಚಮಿಯೇ ಇದೆ. ವಾಯುವಾದ ಬಳಿಕ ಅಗ್ನಿಯಾಯಿತು ಎಂದು ಉಪಪದಾರ್ಥವನ್ನು ಕಲ್ಪಿಸಬೇಕಾಗಿದೆ ; ಆದರೆ ಪಂಚಮಿ ಎಂಬ ಕಾರಕಾರ್ಥವು ಆಗಲೇ ಸಿದ್ಧವಾಗಿರುತ್ತದೆ. ಮಿಕ್ಕ ಶ್ರುತಿಗಳಲ್ಲಿ ಬ್ರಹ್ಮವೇ ಕಾರಣವೆಂದು ಹೇಳಿದ್ದರೂ ಪರಂಪರೆಯಿಂದ ಬ್ರಹ್ಮದಿಂದ ಉಂಟಾಯಿತು ಎಂದೂ ಅದಕ್ಕೆ ಅರ್ಥವನ್ನು ಮಾಡಬಹುದು. ಒಂದನ್ನು ಅರಿತರೆ ಎಲ್ಲವನ್ನೂ ಅರಿತಂತಾಗುವದೆಂಬುದು ಬ್ರಹ್ಮದಿಂದ ನೇರಾಗಿಯೇ ಹುಟ್ಟಬೇಕೆಂಬುವನ್ನೇನೂ ಬಯಸುವದಿಲ್ಲ ; ಬ್ರಹ್ಮದಿಂದ ಹುಟ್ಟಿದ್ದು ಎಂಬಿಷ್ಟರಿಂದಲೇ ಅದು ಚರಿತಾರ್ಥವಾಗುವದು ; ಆದ್ದರಿಂದ ವಾಯುವಿನಿಂದಲೇ ಅಗ್ನಿಯು ಹುಟ್ಟಿತೆಂದು ನಿಶ್ಚಯಿಸಬೇಕು.

## ೫. ಅಬಧಿಕರಣ

### ಆಪಃ ||೧೧||

ಸಿದ್ಧಾಂತ 'ಆ ತೇಜಸ್ಸು ಅಪ್ಪನ್ನು ಸೃಜಿಸಿತು' 'ಅಪ್ಪು ಅಗ್ನಿಯಿಂದಲೇ ಹುಟ್ಟಿತು' ಎಂದು ಶ್ರುತಿಯಿದೆ; ಆದ್ದರಿಂದ ಇಲ್ಲಿ ಸಂಶಯವೇ ಇಲ್ಲ. ಮುಂದಿನ ಅಧಿಕರಣಕ್ಕೆ ಸಂಬಂಧಿಸುವದಕ್ಕಾಗಿ ಇದನ್ನು ಬೇರೆ ಅಧಿಕರಣವಾಗಿ ಸೂತ್ರಕಾರರು ಮಾಡಿರುತ್ತಾರೆ.

## ೬. ಪೃಥಿವ್ಯಧಿಕಾರಾಧಿಕರಣ

### ಪೃಥಿವ್ಯಧಿಕಾರರೂಪಶಬ್ದಾನ್ತರೇಭ್ಯಃ ||೧೨||

ಸಂಶಯ : 'ಅಪ್ಪು ಅನ್ನವನ್ನು ಸೃಜಿಸಿತು' ಎಂದು ಛಾಂದೋಗ್ಯದಲ್ಲಿದೆ. ಇಲ್ಲಿ ಅನ್ನವೆಂದರೆ ಬತ್ತ, ಜವೆ–ಮುಂತಾದದ್ದೋ, ಉಣ್ಣುವ ಅನ್ನ ಮುಂತಾದದ್ದೋ ಅಥವಾ ಪೃಥಿವಿಯೋ ?

ಪೂರ್ವಪಕ್ಷ : ಬತ್ತವೇ ಮುಂತಾದದ್ದು, ಉಣ್ಣುವ ಅನ್ನವೇ ಮುಂತಾದದ್ದು ಇಲ್ಲಿ ಅನ್ನಶಬ್ದದಿಂದ ಉಕ್ತವಾಗಿದೆ. ಏಕೆಂದರೆ ಅನ್ನಶಬ್ದಕ್ಕೆ ಇದೇ ಪ್ರಸಿದ್ಧಾರ್ಥ. ವಾಕ್ಯಶೇಷದಲ್ಲಿಯೂ 'ಮಳೆಯಾದಲ್ಲಿ ಅನ್ನವು ಹೆಚ್ಚಾಗಿ ಆಗುತ್ತದೆ' ಎಂದು ಇದೆ.

ಸಿದ್ಧಾಂತ : ಇಲ್ಲಿ ಅನ್ನವೆಂದರೆ ಪೃಥಿವಿಯೇ. ಇಲ್ಲಿ ತೇಜಸ್ಸು, ಅಪ್ಪು-ಎಂದು ಭೂತಗಳ ಸೃಷ್ಟಿಯನ್ನು ಹೇಳಿದೆ ; ಆ ಪ್ರಕರಣದಲ್ಲಿ ಈ ವಾಕ್ಯವಿದೆ. ಅನ್ನಕ್ಕೆ ಕಪ್ಪುರೂಪವೆಂದು ಹೇಳಿರುವದೂ ಪೃಥಿವಿಗೆ ಹೊಂದುತ್ತದೆ ; ಏಕೆಂದರೆ ಪೃಥಿವಿಯು ಬಹುಮಟ್ಟಿಗೆ ಕಪ್ಪಾಗಿರುತ್ತದೆ. ಬೃಹದಾರಣ್ಯಕಶ್ರುತಿಯಲ್ಲಿ ಅಪ್ಪಿನಿಂದ ಪೃಥಿವಿಯುಂಟಾಯಿತೆಂದು ಹೇಳಿಯೂ ಇದೆ. ಈ ಕಾರಣಗಳಿಂದ ಪ್ರಸಿದ್ಧಾರ್ಥವನ್ನು ಬಿಟ್ಟು ಪೃಥಿವಿಯನ್ನೇ ತೆಗೆದುಕೊಳ್ಳಬೇಕು. ಅನ್ನವು ಪೃಥಿವಿಯಿಂದಲೇ ಆಗುವದರಿಂದ (ವಾಕ್ಯಶೇಷದಲ್ಲಿರುವ) ಅನ್ನಶಬ್ದವೂ ತನ್ಮೂಲಕವಾಗಿ ಪೃಥಿವಿಯೇ ಹುಟ್ಟುವದೆಂಬುವನ್ನು ಸೂಚಿಸುತ್ತದೆ.

## ೭. ತದಭಿಧ್ಯಾನಾಧಿಕರಣ

ತದಭಿಧ್ಯಾನಾದೇವ ತು ತಲ್ಲಿಙ್ಗಾತ್ ಸಃ ॥೧೩॥

ಸಂಶಯ : ಈ ಭೂತಗಳು ತಾವುತಾವೇ ತಮ್ಮತಮ್ಮ ಕಾರ್ಯಗಳನ್ನು ಸೃಜಿಸುತ್ತವೆಯೊ, ಅಥವಾ ಇವುಗಳ ರೂಪದಲ್ಲಿರುವ ಪರಮೇಶ್ವರನೇ ಸೃಜಿಸುತ್ತಾನೊ ?

ಪೂರ್ವಪಕ್ಷ : ಈ ಭೂತಗಳು ತಾವೇ ಸೃಜಿಸುತ್ತವೆ. ಏಕೆಂದರೆ ಹಾಗೆಂದು ಶ್ರುತಿಯು ಹೇಳುತ್ತದೆ. ಭೂತಗಳೂ ಚೇತನವೆಂದು ಶ್ರುತಿಯಿರುವದರಿಂದ ಭೂತಗಳೂ ಸೃಜಿಸಬಹುದಾಗಿದೆ.

ಸಿದ್ಧಾಂತ : ಆ ಪರಮೇಶ್ವರನೇ ಆಯಾ ರೂಪದಿಂದ ಇದ್ದುಕೊಂಡು ಆಯಾ ಕಾರ್ಯವನ್ನು ಸೃಜಿಸುತ್ತಾನೆ. ಏಕೆಂದರೆ ಅಧ್ಯಕ್ಷನಿಂದ ಕೂಡಿದ ಭೂತಗಳಿಗೇ ಪ್ರವೃತ್ತಿಯನ್ನು ಬೃಹದಾರಣ್ಯಕಶ್ರುತಿಯಲ್ಲಿ ( ೩-೭-೩ ) ಹೇಳಿದೆ; ಆ ಪರಮೇಶ್ವರನೇ ಸರ್ವಾತ್ಮಭಾವವನ್ನು ಪಡೆದುಕೊಂಡನೆಂದೂ ತೈತ್ತಿರೀಯದಲ್ಲಿ (೨-೬) ಇದೆ. ಅಪ್ತೇಜಸ್ಸುಗಳಿಗೆ ಶ್ರುತಿಯಲ್ಲಿ ಈಕ್ಷಣವನ್ನು ಹೇಳಿರುವದು ಅವು ಸ್ವತಃ ಚೇತನವೆಂದು ತಿಳಿಸುವದಕ್ಕಲ್ಲ. ಪರಮೇಶ್ವರಾವೇಶದಿಂದ ಅವು ಆಲೋಚನೆಮಾಡಿದವೆಂದು ತಿಳಿಸುವದಕ್ಕೆ.

## ೮. ವಿಪರ್ಯಯಾಧಿಕರಣ

ವಿಪರ್ಯಯೇಣ ತು ಕ್ರಮೋಽತ ಉಪಪದ್ಯತೇ ಚ ॥೧೪॥

**ಸಂಶಯ :** ಭೂತಗಳು ಲಯವಾಗುವದಕ್ಕೆ ನಿಯತಕ್ರಮವೇ ಇಲ್ಲವೊ, ಉತ್ಪತ್ತಿಕ್ರಮದಲ್ಲಿಯೇ ಅವು ಲಯವಾಗುವವೊ, ಅಥವಾ ಅದಕ್ಕೆ ವಿಪರೀತವಾದ ಕ್ರಮದಿಂದ ಲಯವಾಗುವವೊ ?

**ಪೂರ್ವಪಕ್ಷ :** ಲಯಕ್ಕೆ ಯಾವ ನಿಯಮವೂ ಇಲ್ಲ ; ಏಕೆಂದರೆ ಹೇಗಾದರೂ ಲಯವಾಗಬಹುದು; ಅಥವಾ ಉತ್ಪತ್ತಿಕ್ರಮವನ್ನು ಶ್ರುತಿಯಲ್ಲಿ ಹೇಳಿರುವದರಿಂದ ಅದೇ ಕ್ರಮವೇ ಪ್ರಲಯಕ್ಕೂ ಅನ್ವಯಿಸಬಹುದು.

**ಸಿದ್ಧಾಂತ :** ಉತ್ಪತ್ತಿಕ್ರಮಕ್ಕೆ ವಿಪರೀತವಾದ ಕ್ರಮದಲ್ಲಿಯೇ ಲಯವಾಗುತ್ತವೆ. ಇದು ಯುಕ್ತಿಗೆ ಹೊಂದುತ್ತದೆ; ಏಕೆಂಥರೆ ಲೋಕದಲ್ಲಿ ಸೋಪಾನವನ್ನು ಹತ್ತಿದವನು ವಿಪರೀತಕ್ರಮದಿಂದ ಇಳಿಯುತ್ತಾನೆ; ಕಾರ್ಯವು ತನ್ನ ಕಾರಣದಲ್ಲಿ ಲಯವಾಗುತ್ತದೆ, ಪೃಥಿವಿಯು ಅಪ್ಪಿನಲ್ಲಿ, ಅಪ್ಪು ತೇಜಸ್ಸಿನಲ್ಲಿ– ಈ ಕ್ರಮದಲ್ಲಿ ಲಯವಾಗುತ್ತದೆ ಎಂದು ಸ್ಮೃತಿಯಲ್ಲಿ ಹೇಳಿಯೂ ಇದೆ. ಉತ್ಪತ್ತಿಶ್ರುತಿಯ ಕ್ರಮವು ಪ್ರಲಯಕ್ಕೆ ಹೊಂದುವದಿಲ್ಲವಾದ್ದರಿಂದ ಅದನ್ನು ಇಲ್ಲಿ ತೆಗೆದುಕೊಳ್ಳುವದು ಸರಿಯಲ್ಲ.

## ೯. ಅಂತರಾವಿಜ್ಞಾನಾಧಿಕರಣ

**ಅಂತರಾ ವಿಜ್ಞಾನಮನಸೀ ಕ್ರಮೇಣ ತಲ್ಲಿಙ್ಗಾದಿತಿ ಚೇನ್ನಾವಿಶೇಷಾತ್ ॥೧೫॥**

**ಸಂಶಯ :** ಇಂದ್ರಿಯಗಳೊಡಗೂಡಿದ ಮನೋಬುದ್ಧಿಗಳು ಯಾವ ಕ್ರಮದಲ್ಲಿ ಉತ್ಪತ್ತಿಪ್ರಲಯಗಳನ್ನು ಅನುಭವಿಸುತ್ತವೆ ? ಅವುಗಳನ್ನು ಈ ಶಾಸ್ತ್ರದಲ್ಲಿ ನಿರ್ಣಯಿಸದೆ ಇರುವದರಿಂದ ಉತ್ಪತ್ತಿಪ್ರಲಯಗಳ ಕ್ರಮಕ್ಕೆ ಭಂಗವು ಬರುವದಿಲ್ಲವೆ ?

ಪೂರ್ವಪಕ್ಷ : ನಿರ್ಣಯಮಾಡದೆ ಇರುವದರಿಂದ ಕ್ರಮಕ್ಕೆ ಭಂಗ ಬರುತ್ತದೆ.

ಸಿದ್ಧಾಂತ : ಬರುವದಿಲ್ಲ. ಕರಣಗಳು ಭೌತಿಕವೆಂಬ ಪಕ್ಷವನ್ನು ಗ್ರಹಿಸಿದರೆ ಭೂತಗಳ ಉತ್ಪತ್ತಿಪ್ರಲಯಕ್ರಮವೇ ಅವಕ್ಕೂ ಆಗುತ್ತದೆ. ಅಭೌತಿಕವೆಂದು ಇಟ್ಟುಕೊಂಡರೂ ಭೂತೋತ್ಪತ್ತಿಪ್ರಲಯಗಳ ಕ್ರಮದಲ್ಲಿ

ಕರಣಗಳ ಕ್ರಮವನ್ನು ಗೊತ್ತುಪಡಿಸಿ ನಾವು ಹೇಳಿಲ್ಲವಾದ್ದರಿಂದ ಅವುಗಳ ಉತ್ಪತ್ತಿಪ್ರಲಯಕ್ರಮಕ್ಕೆ ವಿರೋಧವಿಲ್ಲ. ಶ್ರುತಿಯಲ್ಲಿ ಕೆಲವು ಕಡೆಗಳಲ್ಲಿ ಭೂತಕ್ರಮಕ್ಕಿಂತ ಬೇರೆಯಾಗಿಯೇ ಕರಣಗಳ ಉತ್ಪತ್ತಿಕ್ರಮವನ್ನು ಹೇಳಿಯೂ ಇದೆ. ಅದ್ದರಿಂದ ಭೂತಗಳ ಉತ್ಪತ್ತಿಕ್ರಮಕ್ಕೆ ಯಾವ ಭಂಗವೂ ಇಲ್ಲ.

## ೧೦. ಚರಾಚರವ್ಯಪಾಶ್ರಯಾಧಿಕರಣ

ಚರಾಚರವ್ಯಪಾಶ್ರಯಸ್ತು ಸ್ಯಾತ್ ತದ್ವ್ಯಪದೇಶೋ
ಭಾಕ್ತಸ್ತದ್ಭಾವಭಾವಿತ್ವಾತ್ ॥ ೧೬ ॥

ಸಂಶಯ : ಜೀವನಿಗೆ ಉತ್ಪತ್ತಿ ಮತ್ತು ಮರಣವು ಇದೆಯೆ, ಇಲ್ಲವೆ ?

ಪೂರ್ವಪಕ್ಷ : ದೇಹಾಶ್ರಯವಾದ ಉತ್ಪತ್ತಿಪ್ರಲಯಗಳು ಜೀವನಿಗೆ ಉಂಟು. ಏಕೆಂದರೆ 'ಹುಟ್ಟಿದನು', 'ಸತ್ತನು'–ಎಂಬ ಲೋಕಪ್ರಸಿದ್ಧಿ ಇದೆ. ಜಾತಕರ್ಮಾದಿಸಂಸ್ಕಾರವನ್ನು ಶಾಸ್ತ್ರದಲ್ಲಿ ವಿಧಿಸಿಯೂ ಇದೆ.

ಸಿದ್ಧಾಂತ : ಜೀವನಿಗೆ ಜನ್ಮಮರಣಗಳಿಲ್ಲ. ಏಕೆಂದರೆ ಶರೀರಾಂತರದಲ್ಲಿ ಈ ಶರೀರದಲ್ಲಿ ಮಾಡಿದ ಕರ್ಮಫಲವನ್ನು ಹೊಂದುವನೆಂಬುದು ಈ ಪಕ್ಷದಲ್ಲಿಯೇ ಹೊಂದುತ್ತದೆ. ಲೋಕಪ್ರಸಿದ್ಧಿಯು ಶರೀರೋಪಾಧಿಯಿಂದಾದ ಗೌಣವ್ಯಪದೇಶಕೃತವಾದದ್ದು.

## ೧೧. ಆತ್ಮಾಧಿಕರಣ

ನಾತ್ಮಾಶ್ರುತೇರ್ನಿತ್ಯತ್ವಾಚ್ಚ ತಾಭ್ಯಃ ॥ ೧೭ ॥

ಸಂಶಯ : ಜೀವನೂ ಆಕಾಶಾದಿಗಳಂತೆ ಬ್ರಹ್ಮದಿಂದ ಹುಟ್ಟುತ್ತಾನೊ, ಇಲ್ಲವೊ ?

ಪೂರ್ವಪಕ್ಷ : ಜೀವನೂ ಬ್ರಹ್ಮದಿಂದ ಹುಟ್ಟುತ್ತಾನೆನ್ನಬೇಕು. ಏಕೆಂದರೆ ಹಾಗಾದರೇ ಏಕವಿಜ್ಞಾನದಿಂದ ಸರ್ವವಿಜ್ಞಾನವಾಗುವದೆಂಬ ಶ್ರುತಿಯ ಪ್ರತಿಜ್ಞೆಯು ಹೊಂದುತ್ತದೆ. ಪರಮಾತ್ಮನೇ ಜೀವನೆಂಬುದು ಸರಿಯಲ್ಲ; ಏಕೆಂದರೆ ಇಬ್ಬರಿಗೂ ಲಕ್ಷಣಭೇದವಿದೆ. ವಿಭಕ್ತನಾಗಿರುವದರಿಂದ ಜೀವನು ಕಾರ್ಯವೆಂಬುದು ಯುಕ್ತಿಗೂ ಹೊಂದುತ್ತದೆ. ಕೆಲವು

ಶ್ರುತಿಗಳಲ್ಲಿ ಜೀವನ ಉತ್ಪತ್ತಿಯನ್ನು ಹೇಳದಿದ್ದರೂ ಜೀವನಿಗೆ ಕಿಡಿಗಳೇ ಮುಂತಾದ ದೃಷ್ಟಾಂತದಿಂದ ಉತ್ಪತ್ತಿಯನ್ನು ಹೇಳುವ ಶ್ರುತಿಗಳೂ ಇರುವದರಿಂದ ಜೀವನಿಗೆ ಉತ್ಪತ್ತಿಯುಂಟೆಂಬುದೇ ಯುಕ್ತ.

ಸಿದ್ಧಾಂತ : ಜೀವನು ಹುಟ್ಟುವದಿಲ್ಲ. ಏಕೆಂದರೆ ಅದಕ್ಕೆ ಶ್ರುತಿ ಇಲ್ಲ. ಎಲ್ಲಿಯೋ ಕೆಲವು ಕಡೆ ಉತ್ಪತ್ತಿಬೋಧಕಶ್ರುತಿಯಿದ್ದರೂ ಅದು ಜೀವನು ನಿತ್ಯನು, ಅಜನು-ಎಂಬ ಶ್ರುತಿಗಳಿಗೆ ವಿರುದ್ಧವಾಗಿದೆ. ಜೀವನಿಗೆ ಉಪಾಧಿಯ ಉತ್ಪತ್ತಿಪ್ರಲಯಗಳಿಂದಲೇ ಉತ್ಪತ್ತಿಪ್ರಲಯಗಳು ಎಂದು (ಬೃ. ೪ ೫-೧೩, ೧೪) ಶ್ರುತಿಯಲ್ಲಿದೆ. ಬ್ರಹ್ಮವೇ ಜೀವನಾಗಿರುವದರಿಂದಲೂ ಜೀವೇಶ್ವರಲಕ್ಷಣಭೇದವು ಉಪಾಧಿನಿಮಿತ್ತವಾಗಿರುವದರಿಂದಲೂ ಏಕವಿಜ್ಞಾನದಿಂದ ಸರ್ವವಿಜ್ಞಾನವೆಂಬ ಪ್ರತಿಜ್ಞೆಗೆ ವಿರೋಧವಿಲ್ಲ. ಅನುತ್ಪತ್ತಿಶ್ರುತಿಗೂ ವಿರೋಧವಿಲ್ಲ. ಹೀಗಾದರೇ ಜೀವನಿಗೆ ಬ್ರಹ್ಮತ್ವವನ್ನುಪದೇಶಿಸುವ ಶ್ರುತಿಯೂ ಹೊಂದುತ್ತದೆ.

## ೧೨. ಜ್ಞಾಧಿಕರಣ

### ಜ್ಞೋಽತ ಏವ ॥ ೧೮ ॥

**ಸಂಶಯ :** ಜೀವನ ಸ್ವಾಭಾವಿಕವೆ, ಆಗುಂತುಕವೆ ?

**ಪೂರ್ವಪಕ್ಷ :** ಆತ್ಮಮನಃಸಂಯೋಗದಿಂದ ಉಂಟಾಗುವದರಿಂದ ಚೈತನ್ಯವು ಆಗಂತುಕವು. ಜೀವನು ನಿತ್ಯಚೈತನ್ಯರೂಪನು ಎಂದರೆ ಸುಪ್ತಮೂರ್ಛಿತಾದಿಗಳಿಗೂ ಜ್ಞಾನವಿರಬೇಕಾದೀತು.

**ಸಿದ್ಧಾಂತ :** ಈ ಚೈತನ್ಯವು ಸ್ವಾಭಾವಿಕವೇ. ಜೀವನೆಂದರೆ ಬ್ರಹ್ಮವೇ. ಉಪಾಧಿಸಂಪರ್ಕದಿಂದ ಮಾತ್ರ ಬ್ರಹ್ಮವು ಜೀವನಾಗಿ ತೋರುತ್ತದೆ. ಬ್ರಹ್ಮವು ನಿತ್ಯಚೈತನ್ಯಸ್ವರೂಪವೆಂದು (ಬೃ. ೩-೯-೨೮, ೪-೫-೧೩ ; ತೈ. ೨-೧-೧) ಶ್ರುತಿಗಳಲ್ಲಿ ಹೇಳಿದೆ. ವಿಜ್ಞಾನಮಯಪ್ರಕರಣದ ಶ್ರುತಿಗಳೂ ಜೀವನು ಚೈತನ್ಯರೂಪನೆಂದೇ ಹೇಳಿವೆ. ಸುಪ್ತಾದಿಗಳಿಗೆ ಜ್ಞಾನವಿಲ್ಲವೆನ್ನುವದು ವಿಷಯವಿಲ್ಲದ್ದರಿಂದಲೇ ಹೊರತು ಚೈತನ್ಯವಿಲ್ಲದ್ದರಿಂದಲ್ಲ-ಎಂದು ಶ್ರುತಿಯು (ಬೃ. ೪-೩-೨೩) ಹೇಳುತ್ತಿದೆ. ಆದ್ದರಿಂದ ಜೀವನು ನಿತ್ಯಚೈತನ್ಯಸ್ವರೂಪನೇ.

# ಉತ್ಕ್ರಾಂತಿಗತ್ಯಧಿಕರಣ

ಉತ್ಕ್ರಾನ್ತಿಗತ್ಯಾಗತೀನಾಮ್ ॥೧೯॥ ಸ್ವಾತ್ಮನಾ ಚೋತ್ತರಯೋಃ ॥೨೦॥ ನಾಣುರತಚ್ಛ್ರುತೇರಿತಿ ಚೇನ್ನೇತರಾಧಿಕಾರಾತ್ ॥೨೧॥ ಸ್ವಶಬ್ದೋನ್ಮಾನಾಭ್ಯಾಂ ಚ ॥೨೨॥ ಅವಿರೋಧಶ್ಚನ್ದನವತ್ ॥೨೩॥ ಅವಸ್ಥಿತಿವೈಶೇಷ್ಯಾದಿತಿ ಚೇನ್ನಾಭ್ಯುಪಗಮಾದ್ ಹೃದಿ ಹಿ ॥೨೪॥ ಗುಣಾದ್ವಾ ಲೋಕವತ್ ॥೨೫॥ ವ್ಯತಿರೇಕೋ ಗನ್ಧವತ್ ॥೨೬॥ ತಥಾ ಚ ದರ್ಶಯತಿ ॥೨೭॥ ಪೃಥಗುಪದೇಶಾತ್ ॥೨೮॥ ತದ್ಗುಣಸಾರತ್ವಾತ್ತು ತದ್ವ್ಯಪದೇಶಃ ಪ್ರಾಜ್ಞವತ್ ॥೨೯॥ ಯಾವದಾತ್ಮಭಾವಿತ್ವಾಚ್ಚ ನ ದೋಷಸ್ತದ್ದರ್ಶನಾತ್ ॥೩೦॥ ಪುಂಸ್ತ್ವಾದಿವತ್ತ್ವಸ್ಯ ಸತೋಽಭಿವ್ಯಕ್ತಿಯೋಗಾತ್ ॥೩೧॥ ನಿತ್ಯೋಪಲಬ್ಧ್ಯನುಪಲಬ್ಧಿಪ್ರಸಙ್ಗೋಽನ್ಯತರನಿಯಮೋ ವಾನ್ಯಥಾ ॥೩೨॥

ಸಂಶಯ : ಜೀವನು ಅಣುಪರಿಮಾಣನೆ, ಮಧ್ಯಮಪರಿಮಾಣನೆ, ವಿಭುವೆ ?

ಪೂರ್ವಪಕ್ಷ : ಉತ್ಕ್ರಾಂತಿಗತ್ಯಾಗತಿಗಳನ್ನು ಶ್ರುತಿಯಲ್ಲಿ ಹೇಳಿದೆಯಾದ್ದರಿಂದ ಜೀವನು ಪರಿಚ್ಛಿನ್ನನೆಂದಾಗುತ್ತದೆ. ಮಧ್ಯಮಪರಿಮಾಣನೆಂಬುದನ್ನು ಆರ್ಹತಪರೀಕ್ಷೆಯಲ್ಲಿ ತಿರಸ್ಕರಿಸಿರುವದರಿಂದ ಜೀವನು ಅಣುವೇ ಎಂದಾಗುತ್ತದೆ. ಶ್ರುತಿಯಲ್ಲಿ ಆತ್ಮನು ಅನಂತಪರಿಮಾಣನೆಂದು ಹೇಳಿರುವದು ಪರಮಾತ್ಮನ ವಿಷಯ. ಆತ್ಮನು ಅಣುವೆಂದೇ ಹೇಳುವ ಶ್ರುತಿಗಳೂ ಇವೆ. ದೇಹದ ಒಂದು ಭಾಗದಲ್ಲಿರುವ ಚಂದನಬಿಂದುವು, ಶರೀರದಲ್ಲೆಲ್ಲ ಆನಂದವನ್ನುಂಟುಮಾಡುವಂತೆ ಅಣುವಾಗಿರುವ ಜೀವನಿಗೂ ಶರೀರದ ಎಲ್ಲಾ ಕಡೆಯಲ್ಲಿಯೂ ಆಗುವ ಅನುಭವದ ವೇದನೆಯಾಗಬಹುದು , ಏಕೆಂದರೆ ಆತ್ಮನು ಹೃದಯಪ್ರದೇಶದಲ್ಲಿ ಮಾತ್ರ ಇದ್ದಾನೆಂದು ಶ್ರುತಿ ಹೇಳುತ್ತಿದೆ. ಅಥವಾ ಇವನ ಚೈತನ್ಯಗುಣವು ಸಕಲದೇಹದಲ್ಲಿಯೂ ವ್ಯಾಪಿಸಿದೆ ಎನ್ನಬಹುದು. ಗಂಧಾದಿಗಳಂತೆ ಗುಣವು ಗುಣಿಯನ್ನು ಬಿಟ್ಟು ಬೇರೆ ದೇಶದಲ್ಲಿಯೂ ಇರಬಹುದು ; ಹಾಗೆ ಇದೆ ಎಂದು ಶ್ರುತಿಯೂ ಹೇಳುತ್ತದೆ. ಆದ್ದರಿಂದ ಜೀವನು ಅಣುವೇ.

ಸಿದ್ಧಾಂತ : ಜೀವನು ಬ್ರಹ್ಮವೇ ಎಂದು ಶ್ರುತಿಯಲ್ಲಿರುವದರಿಂದ ಅವನು ವಿಭುವೇ. ಅವನಿಗೆ ಆಯಾ ಪ್ರದೇಶದ ಅನುಭವವು ಅಲ್ಲಲ್ಲಿಯೇ ಆಗುವದರಿಂದಲೂ ಅವನು ವಿಭು. ಗುಣವು ಗುಣಿಯ ಪ್ರದೇಶದಲ್ಲಿಯೇ ಇರುವದರಿಂದ ಚೈತನ್ಯವು ಜೀವನ ಗುಣವೆಂಬುದು ಸರಿಯಲ್ಲ ; ಗಂಧವೂ ನಿಜವಾಗಿ ಗುಣಿಯನ್ನು ಆಶ್ರಯಿಸಿಯೇ ಇರುತ್ತದೆ. ಚೈತನ್ಯವೇ ಆತ್ಮನ ಸ್ವರೂಪವಾಗಿರುವದರಿಂದಲೂ ಅದು ಗುಣವಲ್ಲ. ಜೀವನು ಅಣು ಎಂದು ಮುಂತಾಗಿ ಶ್ರುತಿಯಲ್ಲಿ ಹೇಳಿರುವದು ಬುದ್ಧಿಗುಣಸಾರನಾಗಿರುವದರಿಂದ ; ಅಥವಾ ಅಣುವೆಂದರೆ ಅವನ ಸ್ವರೂಪವನ್ನು ತಿಳಿಯುವದು ಕಷ್ಟ ಎಂದು ಅಭಿಪ್ರಾಯ–ಎಂದೂ ಹೇಳಬಹುದು. ಗುಣಿಗುಣವ್ಯಪದೇಶವು ಶ್ರುತಿಯಲ್ಲಿರುವ ಬುದ್ಧಿಜೀವರ ಸಂಬಂಧವನ್ನು ಹೇಳುತ್ತದೆಯೆಂದೋ ಔಪಚಾರಿಕವೆಂದೋ ತಿಳಿಯಬೇಕು. ಹೃದಯದಲ್ಲಿರುವದು, ಉತ್ಕ್ರಾಂತಿ, ಗತಿ–ಮುಂತಾದವೆಲ್ಲವೂ ಬುದ್ಧ್ಯುಪಾಧಿಯಿಂದಲೇ ಸಂಸಾರವಿರುವವರೆಗೂ ಇರುತ್ತವೆ. ಆ ಉಪಾಧಿಸಂಬಂಧವು ಅಜ್ಞಾನಕೃತವಾಗಿರುವದರಿಂದ ಆತ್ಮಜ್ಞಾನವುಂಟಾಗುವವರೆಗೂ ಸುಷುಪ್ತ್ಯಾದಿಗಳಲ್ಲಿಯೂ ಅವ್ಯಕ್ತವಾಗಿರುತ್ತದೆ. ಬುದ್ಧಿ ಎಂಬ ಉಪಾಧಿಯನ್ನು ಒಪ್ಪದೆ ಇದ್ದರೆ ಆತ್ಮನು ಯಾವಾಗಲೂ ಅರಿಯಬೇಕು, ಅಥವಾ ಅರಿಯದೆ ಇರಬೇಕು ಎಂಬ ಅನಿಷ್ಟವು ಬಂದೊದಗುವದು. ಆದ್ದರಿಂದ ಬುದ್ಧಿ ಎಂಬ ಉಪಾಧಿಯಿದೆ, ಆ ಉಪಾಧಿಯ ಸಂಬಂಧದಿಂದ ಜೀವನನ್ನು ಅಣುವೆಂದು ಕರೆದಿದೆ–ಎಂಬುದೇ ಸರಿ.

## ೧೪. ಕರ್ತ್ರಧಿಕರಣ

**ಕರ್ತಾ ಶಾಸ್ತ್ರಾರ್ಥವತ್ತ್ವಾತ್ ॥೩೩॥ ವಿಹಾರೋಪದೇಶಾತ್ ॥೩೪॥ ಉಪಾದಾನಾತ್ ॥೩೫॥ ವ್ಯಪದೇಶಾಚ್ಚ ಕ್ರಿಯಾಯಾಂ ನ ಚೇನ್ನಿರ್ದೇಶವಿಪರ್ಯಯಃ ॥ ೩೬ ॥ ಉಪಲಬ್ಧಿವದನಿಯಮಃ ॥ ೩೭ ॥ ಶಕ್ತಿವಿಪರ್ಯಯಾತ್ ॥೩೮॥ ಸಮಾಧ್ಯಭಾವಾಚ್ಚ ॥೩೯॥**

ಸಂಶಯಃ ಜೀವನು ಕರ್ತೃವೊ, ಅಲ್ಲವೊ ?

ಪೂರ್ವಪಕ್ಷ : ಬುದ್ಧಿಯೇ ಕರ್ತೃವೆನ್ನಬಹುದು; ಆತ್ಮನು ಭೋಕ್ತೃಮಾತ್ರನಾಗಿರುತ್ತಾನೆ–ಎಂದು ಸಾಂಖ್ಯರ ಅಭಿಪ್ರಾಯವಿದೆ. ಅದೇ ಸಾಕಾಗಿದೆ. ಜೀವನಿಗೆ ಕರ್ತೃತ್ವವು ಬೇಕಿಲ್ಲ.

ಸಿದ್ಧಾಂತ : ಶಾಸ್ತ್ರದಲ್ಲಿ ಕರ್ಮವನ್ನು ವಿಧಿಸಿರುವದು ಸಾರ್ಥಕವಾಗು ವದಕ್ಕೆ ಜೀವನು ಕರ್ತೃವಾಗಿರಬೇಕು. ಕನಸಿನಲ್ಲಿ ಶ್ರುತಿಯು ಜೀವನಿಗೆ ವಿಹಾರವನ್ನು ಹೇಳಿರುವದರಿಂದಲೂ ನಿದ್ರೆಗೆ ಹೋಗುವಾಗ ಕರಣಗಳ ವಿಜ್ಞಾನವನ್ನು ಒಯ್ಯುತ್ತಾನೆಂದಿರುವದರಿಂದಲೂ ವಿಜ್ಞಾನವೆಂಬ ಜೀವನು ಯಜ್ಞಾದಿಗಳನ್ನು ಮಾಡುತ್ತಾನೆಂದು ಶ್ರುತಿಯಲ್ಲಿರುವದರಿಂದಲೂ ಜೀವನು ಕರ್ತೃವೇ. ಇಷ್ಟವನ್ನೂ ಅನಿಷ್ಟವನ್ನೂ ತನಗೆತಾನೇ ಮಾಡಿಕೊಳ್ಳಲಾರ ನಾದ್ದರಿಂದ ಜೀವನನ್ನು ಕರ್ತೃವೆನ್ನುವದು ಹೇಗೆ ? ಎಂದು ಆಕ್ಷೇಪಿಸ ಬಾರದು : ಇಷ್ಟವನ್ನೂ ಅನಿಷ್ಟವನ್ನೂ ಅರಿಯುವಂತೆಯೇ ಅವುಗಳನ್ನೂ ತನಗೆತಾನೇ ಮಾಡಿಕೊಳ್ಳಬಹುದು. ಬುದ್ಧಿಯೇ ಕರ್ತೃ ಎಂಬವರಿಗೆ ಕರಣಶಕ್ತಿಯನ್ನು ಬಿಟ್ಟು ಅದಕ್ಕೆ ಕರ್ತೃಶಕ್ತಿಯನ್ನೊಪ್ಪಬೇಕಾಗುವದು. ಜೀವನು ಕರ್ತೃವಲ್ಲದಿದ್ದರೆ ಶಾಸ್ತ್ರನಲ್ಲಿ ವಿಧಿಸಿರುವ ಆತ್ಮಧ್ಯಾನವೂ ಇಲ್ಲದೆ ಹೋಗುವದು. ಆದ್ದರಿಂದ ಜೀವನು ಕರ್ತೃವೇ.

## ೧೫. ತಕ್ಷಾಧಿಕರಣ

ಯಥಾ ಚ ತಕ್ಷೋಭಯಥಾ ॥೪೦॥

ಸಂಶಯ : ಜೀವನ ಕರ್ತೃತ್ವವು ಸ್ವಾಭಾವಿಕವೋ, ಉಪಾಧಿನಿಮಿತ್ತವೊ ?

ಪೂರ್ವಪಕ್ಷ : ಹಿಂದಿನ ಅಧಿಕರಣದಲ್ಲಿ ಹೇಳಿರುವ ಸಿದ್ಧಾಂತಯುಕ್ತಿಗಳಿಂದ ಕರ್ತೃತ್ವವು ಸ್ವಾಭಾವಿಕವೇ.

ಸಿದ್ಧಾಂತ . ಜೀವನ ಕರ್ತೃತ್ವವು ಸ್ವಾಭಾವಿಕವಲ್ಲ. ಏಕೆಂದರೆ ಅದು ಸ್ವಾಭಾವಿಕವಾದರೆ ಅದರಿಂದ ಬಿಡುಗಡೆಯಾಗಲಾರದು. ಆಗ ಮೋಕ್ಷೋಪದೇಶಶ್ರುತಿಯು ಅಪ್ರಮಾಣವಾಗುವದು. ಶ್ರುತಿಯಲ್ಲಿ (ಬೃ. ೪-೩-೭) ಜೀವನು ಅಂತಃಕರಣವೆಂಬ ಉಪಾಧಿಯ ನಿಮಿತ್ತದಿಂದ ಕರ್ತೃವಾಗಿರುವಂತೆ ಕಾಣುತ್ತಾನೆಂದು ಹೇಳಿದೆ. ಆದ್ದರಿಂದ ಹೇಗೆ ಬಡಗಿಯು ಸಾಧನಗಳನ್ನು ಉಪಯೋಗಿಸುವಾಗ ಕರ್ತೃವಾಗಿದ್ದು ಆಯಾಸಪಟ್ಟರೂ ಅವುಗಳಿಲ್ಲದಾಗ ಸ್ವರೂಪಸ್ಥಿತಿಯಲ್ಲಿದ್ದು ಸುಖಿಯಾಗಿರುವನೋ ಹಾಗೆಯೇ ಆತ್ಮನು ಜಾಗ್ರತ್ಸ್ವಪ್ನಗಳಲ್ಲಿ ಕರಣಗಳ ಸಂಬಂಧದಿಂದ ಕರ್ತೃವೆನಿಸಿದ್ದು

ಸುಷುಪ್ತ್ಯಾದಿಗಳಲ್ಲಿ ಅವುಗಳಿಲ್ಲದ್ದರಿಂದ ಸ್ವರೂಪದಲ್ಲಿದ್ದು ಆನಂದಿಯಾಗಿರುತ್ತಾನೆಂದು ನಿಶ್ಚಯಿಸಬೇಕು. ಮುಕ್ತ್ಯವಸ್ಥೆಯಲ್ಲಿ ಜ್ಞಾನದಿಂದ ಅವಿದ್ಯಾಕೃತವಾದ ಕರ್ತೃತ್ವದಿಂದ ಬಿಡುಗಡೆಹೊಂದಿ ಸ್ವರೂಪದಲ್ಲಿದ್ದುಕೊಂಡು ಸುಖಿಯಾಗಿರುತ್ತಾನೆ. ಆದ್ದರಿಂದ ಶಾಸ್ತ್ರೋಪದೇಶವೂ ಧ್ಯಾನೋಪದೇಶವೂ ಅವಿದ್ಯಾಕೃತವಾದ ಕರ್ತೃತ್ವವನ್ನು ಆಶ್ರಯಿಸಿರುತ್ತವೆ. ಸ್ವಪ್ನವಿಹಾರವು ಪಾರಮಾರ್ಥಿಕವಲ್ಲ; ಕರಣವಿಜ್ಞಾನವನ್ನು ತೆಗೆದುಕೊಂಡು ನಿದ್ರೆಗೆ ಹೋಗುತ್ತಾನೆಂಬುದು ಕರಣವ್ಯಾಪಾರಗಳನ್ನು ಬಿಡುವದು ಮಾತ್ರ, ವಿಜ್ಞಾನವೇ ಕರ್ತೃವೆಂದು ಶಾಸ್ತ್ರದಲ್ಲಿ ಅಧ್ಯಾರೋಪಮಾಡಿ ಆತ್ಮನು ಸ್ವತಃ ಕರ್ತೃವಲ್ಲವೆಂದು ಹೇಳಿಯೂ ಇದೆ. ಆದ್ದರಿಂದ ಕರ್ತೃತ್ವವು ಔಪಾಧಿಕವೇ, ಸ್ವಾಭಾವಿಕವಲ್ಲ.

## ೧೬. ಪರಾಯತ್ತಾಧಿಕರಣ

ಪರಾತ್ತು ತಚ್ಛ್ರುತೇಃ ॥೪೧॥

ಸಂಶಯ : ಜೀವನ ಕರ್ತೃತ್ವವು ನಿರಪೇಕ್ಷವೊ, ಈಶ್ವರಾಪೇಕ್ಷವೊ ?

ಪೂರ್ವಪಕ್ಷ : ಜೀವನು ಸ್ವಯಂಕರ್ತೃವಾಗಿರುವದರಿಂದಲೂ ಕೃಷ್ಯಾದಿಗಳಲ್ಲಿ ಈಶ್ವರನ ಅಪೇಕ್ಷೆಯು ಕಂಡುಬಂದಿರುವದಿಲ್ಲವಾದ್ದರಿಂದಲೂ ಈಶ್ವರನ ಅಪೇಕ್ಷೆಯು ಅವನಿಗೆ ಬೇಕಿರುವದಿಲ್ಲ, ಜೀವನ ಕರ್ತೃತ್ವವು ಈಶ್ವರಸಾಪೇಕ್ಷವಾದರೆ ಈಶ್ವರನಿಗೆ ವೈಷಮ್ಯನೈರ್ಘೃಣ್ಯಗಳೂ ಬಂದೊದಗುತ್ತವೆ. ಆದ್ದರಿಂದ ಜೀವನಿಗೆ ನಿರಪೇಕ್ಷಕರ್ತೃತ್ವವಿದೆ.

ಸಿದ್ಧಾಂತ : ಈಶ್ವರಾಪೇಕ್ಷವಾಗಿಯೇ ಜೀವನಿಗೆ ಕರ್ತೃತ್ವವಿರುತ್ತದೆ. ಏಕೆಂದರೆ ಹಾಗೆಂದು ಶ್ರುತಿಯಿದೆ. ಜೀವನ ಪ್ರಯತ್ನವನ್ನು ಅಪೇಕ್ಷಿಸಿಯೇ ಈಶ್ವರನು ಜೀವನಿಂದ ಮಾಡಿಸುತ್ತಾನಾದ್ದರಿಂದ ಅವನಿಗೆ ವೈಷಮ್ಯಾದಿಗಳುಂಟಾಗುವದಿಲ್ಲ. ಕರ್ತೃವಾದ ಜೀವನಿಗೇ ಈಶ್ವರನು ಕಾರಯಿತೃವಾಗಿರುತ್ತಾನೆ. ಶಾಸ್ತ್ರದಲ್ಲಿ ಕಾಣಬರುವ ವಿಧಿನಿಷೇಧಗಳಿಂದ ಹೀಗೆಂದು ಗೊತ್ತಾಗುತ್ತದೆ.

## ೧೭. ಅಂಶಾಧಿಕರಣ

ಅಂಶೋ ನಾನಾವ್ಯಪದೇಶಾದನ್ಯಥಾ ಚಾಪಿ ದಾಶಕಿತವಾದಿತ್ವಮಧೀಯತ ಏಕೇ ॥೪೩॥ ಮನ್ತ್ರವರ್ಣಾಚ್ಚ ॥೪೪॥ ಅಪಿ ಚ

ಸ್ಮರ್ಯತೇ ||೪೫|| ಪ್ರಕಾಶಾದಿವನ್ನೈವಂ ಪರಃ ||೪೬|| ಸ್ಮರನ್ತಿ ಚ ||೪೭|| ಅನುಜ್ಞಾಪರಿಹಾರೌ ದೇಹಸಂಬನ್ಧಾತ್ ಜ್ಯೋತಿರಾದಿವತ್ ||೪೮|| ಅಸನ್ತತೇಶ್ಚಾವ್ಯತಿಕರಃ ||೪೯|| ಆಭಾಸ ಏವ ಚ ||೫೦|| ಅದೃಷ್ಟಾನಿಯಮಾತ್ ||೫೧|| ಅಭಿಸನ್ಧ್ಯಾದಿಷ್ವಪಿ ಚೈವಮ್ ||೫೨|| ಪ್ರದೇಶಾದಿತಿ ಚೇನ್ನಾನ್ತರ್ಭಾವಾತ್ ||೫೩||

**ಸಂಶಯ :** ಜೀವೇಶ್ವರರಿಗೆ ಇರುವ ಸಂಬಂಧವು ಸ್ವಾಮಿಭೃತ್ಯಭಾವವೋ, ಬೆಂಕಿಕಿಡಿಗಳಿಗಿರುವಂತೆ ಅಂಶಾಂಶಿಭಾವವೊ ?

**ಪೂರ್ವಪಕ್ಷ :** ಇಂಥ ಸಂಬಂಧವೆಂಬ ನಿಯಮವಿಲ್ಲ. ಅಥವಾ ಈಶಿತ್ರೀಶಿತವ್ಯಭಾವವು ಸ್ವಾಮಿಭೃತ್ಯರಲ್ಲಿ ಪ್ರಸಿದ್ಧವಾಗಿರುವದರಿಂದ ಆ ಸಂಬಂಧವೇ ಎಂದು ಹೇಳಬಹುದು.

**ಸಿದ್ಧಾಂತ** ಜೀವನು ಪರಮೇಶ್ವರನ ಅಂಶದಂತೆ ಇರುತ್ತಾನೆ. ಏಕೆಂದರೆ ಶ್ರುತಿಯಲ್ಲಿ ಜೀವೇಶ್ವರರು ಬೇರೆ ಎಂಬ ನಿರ್ದೇಶವಿರುತ್ತದೆ. ಅಭೇದ ನಿರ್ದೇಶವೂ ಇದೆ. ಭೂತಗಳು ಈ ಪರಮೇಶ್ವರನ ಪಾದವೆಂದು ಶ್ರುತಿಯಲ್ಲಿಯೂ ಸ್ಮೃತಿಯಲ್ಲಿಯೂ ಹೇಳಿದೆ. ಜೀವನು ಈಶ್ವರನ ಅಂಶವಾದರೂ ಜೀವನ ದುಃಖವು ಈಶ್ವರನಿಗೆ ಇಲ್ಲ; ಏಕೆಂದರೆ ಜೀವನಿಗೆ ಮಿಥ್ಯಾಭಿಮಾನದಿಂದ ದುಃಖಿತ್ವವಿರುತ್ತದೆ, ಈಶ್ವರನಿಗೆ ಮಿಥ್ಯಾಭಿಮಾನವಿಲ್ಲ. ಪ್ರಕಾಶ, ಆಕಾಶ, ಸೂರ್ಯ—ಇವುಗಳಿಗೆ ಹೇಗೆ ಬೆರಳುಗಳು, ಘಟಾದಿಗಳು, ಜಲಾದಿಗಳು ಎಂಬ ಉಪಾಧಿಗಳಿಂದಾದಂತೆ ತೋರುವ ವಕ್ರತೆ, ಗಮನ, ಕಂಪನ—ಮುಂತಾದವು ನಿಜವಾಗಿಲ್ಲವೋ ಹಾಗೆಯೇ ಇದು. ಪರಮಾತ್ಮನಿಗೆ ಜೀವನ ದುಃಖವಿಲ್ಲವೆಂದು ವ್ಯಾಸಾದಿಗಳ ಸ್ಮೃತಿಯಲ್ಲಿದೆ. ಶಾಸ್ತ್ರದಲ್ಲಿರುವ ಅನುಜ್ಞಾಪರಿಹಾರಗಳು ಮಿಥ್ಯಾಜ್ಞಾನಕೃತವಾದ ದೇಹಸಂಬಂಧದಿಂದ ಜೀವರುಗಳಿಗೆ ಆಗುತ್ತವೆ. ಜೀವನು ಉಪಾಧ್ಯಧೀನನಾಗಿರುವದರಿಂದ ಕರ್ತೃಭೋಕ್ತೃವಾದ ಜೀವನಿಗೆ ಎಲ್ಲಾ ಶರೀರಗಳ ಸಂಬಂಧವಿಲ್ಲದ್ದರಿಂದಲೂ ಜೀವನು ಪರಮಾತ್ಮನ ಆಭಾಸಮಾತ್ರವಾಗಿರುವದರಿಂದಲೂ ಕರ್ಮಫಲಸಾಂಕರ್ಯವೂ ಆಗುವದಿಲ್ಲ. ಸಾಂಖ್ಯವೈಶೇಷಿಕಾದಿಗಳಿಗಾದರೆ ಅದೃಷ್ಟ, ಅಭಿಸಂಧ್ಯಾದಿಗಳು ಇವುಗಳು ಇಂಥ ಆತ್ಮನಿಗೇ ಎಂಬ ನಿಯಮವಿಲ್ಲದ್ದರಿಂದಲೂ ಆತ್ಮನಿಗೆ

ಪ್ರದೇಶವಿಶೇಷವನ್ನು ಕಲ್ಪಿಸುವದಕ್ಕೆ ಬರುವಂತಿಲ್ಲವಾದ್ದರಿಂದಲೂ ಸರ್ವರಿಗೂ ಸರ್ವರ ಕರ್ಮಗಳೂ ಫಲಗಳೂ ಆಗುವವೆಂಬ ದೋಷವುಂಟು. ಈ ರೀತಿಯಲ್ಲಿ ಆತ್ಮನು ಒಬ್ಬನೇ, ಜೀವರುಗಳು ಅವನ ಆಭಾಸರೂಪರಾದ ಅಂಶಗಳು ಎಂಬುದೇ ಸರಿ.

## ನಾಲ್ಕನೆಯ ಪಾದ

ಈ ಪಾದದಲ್ಲಿ ಮುಖ್ಯಪ್ರಾಣ, ಇಂದ್ರಿಯಗಳು–ಇವುಗಳ ವಿಷಯದ ಶ್ರುತಿಗಳಿಗೆ ಅವಿರೋಧವನ್ನು ಪ್ರತಿಪಾದಿಸಿರುತ್ತದೆ.

### ೧. ಪ್ರಾಣೋತ್ಪತ್ತ್ಯಧಿಕರಣ

ತಥಾ ಪ್ರಾಣಾಃ ||೧|| ಗೌಣ್ಯಸಂಭವಾತ್ ||೨|| ತತ್ ಪ್ರಾಕ್ ಶ್ರುತೇಶ್ಚ ||೩|| ತತ್ಪೂರ್ವಕತ್ವಾತ್ ವಾಚಃ ||೪||

**ಸಂಶಯ :** ಕೆಲವು ಶ್ರುತಿಗಳಲ್ಲಿ ಪ್ರಾಣಗಳಿಗೆ ಉತ್ಪತ್ತಿಯನ್ನು ಹೇಳಿಲ್ಲ. ಮತ್ತೆ ಕೆಲವು ಶ್ರುತಿಗಳಲ್ಲಿ ಹೇಳಿದೆ ; ಇನ್ನೂ ಕೆಲವು ಶ್ರುತಿಗಳಲ್ಲಿ ಸೃಷ್ಟಿಗೆ ಪೂರ್ವದಲ್ಲಿ ಪ್ರಾಣಗಳು ಇದ್ದವೆಂದೇ ಹೇಳಿದೆ. ಪ್ರಾಣಗಳು ಹುಟ್ಟುತ್ತವೆಯೆ, ಇಲ್ಲವೆ ?

**ಪೂರ್ವಪಕ್ಷ :** ಶ್ರುತಿಗಳು ಪರಸ್ಪರವಿರುದ್ಧವಾಗಿರುವದರಿಂದ ಇವೆರಡ ಒಂದನ್ನು ನಿರ್ಣಯಿಸುವದು ಆಗುವಂತಿಲ್ಲ. ಅಥವಾ ಉತ್ಪತ್ತಿಗೆ ಪೂರ್ವದಲ್ಲಿಯೂ ಇದ್ದವೆಂದೇ ಶ್ರುತಿಯಲ್ಲಿರುವದರಿಂದ ಉತ್ಪತ್ತಿಯನ್ನು ಹೇಳುವ ಶ್ರುತಿಗಳು ಗೌಣವೆನ್ನಬೇಕು.

**ಸಿದ್ಧಾಂತ** ಪ್ರಾಣೋತ್ಪತ್ತಿವಾಕ್ಯದಲ್ಲಿ ಉತ್ಪತ್ತಿಯುಳ್ಳ ಲೋಕಾದಿಗಳನ್ನೇ ಹೇಳಿದೆ. ಆಕಾಶಾದಿಗಳಂತೆ ಪ್ರಾಣಗಳಿಗೂ ಉತ್ಪತ್ತಿಯನ್ನು ಶ್ರುತಿಯಲ್ಲಿ ಹೇಳಿದೆ. ಆದ್ದರಿಂದ ಅವೂ ಬ್ರಹ್ಮದಿಂದ ಹುಟ್ಟುತ್ತವೆ ಎಂಬುದೇ ಸರಿ. ಉತ್ಪತ್ತಿಶ್ರುತಿಯನ್ನು ಗೌಣವೆಂದು ಹಿಡಿದರೆ ಏಕವಿಜ್ಞಾನದಿಂದ ಸರ್ವವಿಜ್ಞಾನವಾಗುವದೆಂಬ ಪ್ರತಿಜ್ಞೆಯ ಹಾನಿಯಾಗುವದು. ಪ್ರಾಣೋತ್ಪತ್ತಿವಾಕ್ಯದಲ್ಲಿರುವ 'ಜಾಯತೇ' (ಹುಟ್ಟುತ್ತದೆ) ಎಂಬ ಮಾತೇ ಆಕಾಶಾದಿ

ಗಳಿಗೂ ಹೊಂದಿಕೊಂಡುಬಂದಿರುವದರಿಂದ ಪ್ರಾಣೋತ್ಪತ್ತಿಯು ಮುಖ್ಯವೆಂಬುದೇ ನ್ಯಾಯವು. ವಾಕ್ಕು, ಪ್ರಾಣ, ಮನಸ್ಸು– ಇವು ತೇಜಆದಿಗಳಿಂದಾಗಿರುವವೆಂದು ಶ್ರುತಿಯಲ್ಲಿ ಹೇಳಿರುವದರಿಂದ ಆವು ತೇಜಆದಿಗಳ ವಿಕಾರಗಳೆಂಬುವು ಮುಖ್ಯವಾಗದೆ ಇದ್ದರೂ ಬ್ರಹ್ಮಕರ್ತೃಕನಾಮರೂಪವ್ಯಾಕರಣದ ಪ್ರಕರಣದಲ್ಲಿ ಹೇಳಿರುವದರಿಂದ ಅವೂ ಬ್ರಹ್ಮವಿಕಾರವೇ ಎಂದು ತಿಳಿಯುವದು ಯುಕ್ತ. ಪ್ರಾಣಗಳು ಉತ್ಪತ್ತಿಗಿಂತ ಪೂರ್ವದಲ್ಲಿದ್ದವೆಂಬ ಶ್ರುತಿಯು ಅವಾಂತರಪ್ರಲಯದ ವಿಷಯವಾಗಿರುತ್ತದೆ.

## ೨. ಸಪ್ತಗತ್ಯಧಿಕರಣ

**ಸಪ್ತಗತೇರ್ವಿಶೇಷಿತತ್ವಾಚ್ಚ ||೫||**
**ಹಸ್ತಾದಯಸ್ತು ಸ್ಥಿತೇಽತೋ ನೈವಮ್ ||೬||**

**ಸಂಶಯ :** ಶ್ರುತಿಯಲ್ಲಿ ಪ್ರಾಣಸಂಖ್ಯೆಯ ವಿಷಯದಲ್ಲಿ ಬಗೆಬಗೆಯ ವಚನಗಳಿವೆ. ಯಾವದನ್ನು ಪ್ರಮಾಣವಾಗಿ ಹಿಡಿಯಬೇಕು ?

**ಪೂರ್ವಪಕ್ಷ :** ಶ್ರುತಿಯಲ್ಲಿ ಪ್ರಾಣಗಳು ಏಳೆಂದೇ ಹೇಳಿದೆ. ಶೀರ್ಷಣ್ಯಪ್ರಾಣಗಳು ಏಳೇ ಎಂದು ವಿಶೇಷಣವನ್ನು ಕೊಟ್ಟಿದೆ ; ಸಂಖ್ಯೆಗಳು ಬಗೆಬಗೆಯಾಗಿರುವಲ್ಲಿ ಅಲ್ಪಸಂಖ್ಯೆಯಾದ ಏಳನ್ನೇ ಹಿಡಿಯುವದು ಯುಕ್ತ. ಆದ್ದರಿಂದ ಪ್ರಾಣಗಳು ಏಳೇ. ಅಥವಾ ಬೃಹದಾರಣ್ಯಕದಲ್ಲಿ ಗತಿಯನ್ನು ಹೇಳುವಾಗ ಏಳಕ್ಕೇ ಗತಿಯನ್ನು ಹೇಳಿದೆ ; ಆದ್ದರಿಂದ ಏಳೇ ಪ್ರಾಣಗಳು.

ಸಿದ್ಧಾಂತ : ಹಸ್ತವೇ ಮುಂತಾದ ಏಳಕ್ಕಿಂತೆ ಹೆಚ್ಚಿನ ಸಂಖ್ಯೆಯ ಪ್ರಾಣಗಳನ್ನು ಶ್ರುತಿಯಲ್ಲಿ ಹೇಳಿದೆ. ಅಧಿಕಸಂಖ್ಯೆಯಲ್ಲಿ ಕಡಿಮೆಯ ಸಂಖ್ಯೆ ಸೇರಿರುತ್ತದೆ. ಕಡಿಮೆಯ, ಸಂಖ್ಯೆಯಲ್ಲಿ ಹೆಚ್ಚಿನ ಸಂಖ್ಯೆ ಅಡಕವಾಗಲಾರದು. ಆದ್ದರಿಂದ ಕರ್ಮೇಂದ್ರಿಯ, ಜ್ಞಾನೇಂದ್ರಿಯ, ಮತ್ತು ಮನಸ್ಸು–ಎಂಬ ಹನ್ನೊಂದೇ ಪ್ರಾಣಗಳು ಎಂದು ನಿರ್ಣಯಿಸುವದು ಯುಕ್ತ. ಹನ್ನೊಂದಕ್ಕಿಂತ ಹೆಚ್ಚಿನ ಸಂಖ್ಯೆಯ ಶ್ರುತಿಗಳೂ ಇವೆ ; ಆದರೆ ಹನ್ನೊಂದಕ್ಕಿಂತ ಹೆಚ್ಚಿನ ಸಂಖ್ಯೆಯ ಕಾರ್ಯಜಾತಗಳಲ್ಲಿ ಕೆಲವುಕಡೆ ಹೆಚ್ಚಿಗೆ ಸಂಖ್ಯೆಯನ್ನು ಹೇಳಿರುವದು ಉಪಾಸನೆಗಾಗಿ, ಕೆಲವುಕಡೆ ಕಡಿಮೆ ಹೇಳಿರುವದು ಉಪಲಕ್ಷಣಕ್ಕಾಗಿ. ಏಳು ಪ್ರಾಣಗಳು ಎನ್ನುವವರು ನಿಜವಾಗಿ ನಾಲ್ಕೇ ಪ್ರಾಣ

ಗಳನ್ನು ಒಪ್ಪಿದಂತೆ ಆಗುತ್ತದೆಯಾದ್ದರಿಂದ ಶ್ರುತಿಗೆ ಏಳರಲ್ಲಿ ತಾತ್ಪರ್ಯ ವಿಲ್ಲವೆನ್ನಬೇಕು. ಬೃಹದಾರಣ್ಯಕದಲ್ಲಿ ಗತಿಯನ್ನು ಹೇಳುವಾಗಲೂ ಏಳೆಂಬ ಸಂಖ್ಯೆಯನ್ನು ಉಪಲಕ್ಷಣಕ್ಕಾಗಿಯೇ ಹೇಳಿದೆ ; ಆದ್ದರಿಂದಲೇ ಅಲ್ಲಿ 'ಎಲ್ಲಾ ಪ್ರಾಣಗಳೂ ಹಿಂದಿನಿಂದ ಉತ್ಕ್ರಾಂತವಾಗುತ್ತವೆ' ಎಂದಿದೆ. ಆದ್ದರಿಂದ ಅಲ್ಲಿಯೂ ಹನ್ನೊಂದು ಪ್ರಾಣಗಳನ್ನೇ ಗ್ರಹಿಸಬೇಕು.

## ೩. ಪ್ರಾಣಾಣುತ್ವಾಧಿಕರಣ

### ಅಣವಶ್ಚ ||೭||

**ಸಂಶಯಪೂರ್ವಪಕ್ಷಗಳು :** ಪ್ರಾಣಗಳು ಅಣುವೊ, ಮಧ್ಯಮಪರಿ ಮಾಣವೊ, ವಿಭುವೊ ? ಎಂಬುದು ಸಂಶಯ. ಪ್ರಾಣಗಳು ಅನಂತವೆಂಬ ಶ್ರುತಿಯಿರುವದರಿಂದ ಅವು ಸರ್ವಗತವೇ.

**ಸಿದ್ಧಾಂತ :** ಪ್ರಾಣಗಳು ಅಣುವೇ, ಎಂದರೆ ಸೂಕ್ಷ್ಮವಾಗಿಯೂ ಪರಿಚ್ಛಿನ್ನವಾಗಿಯೂ ಇರುತ್ತವೆ. ಅವು ಅಣುಪರಿಮಾಣವಲ್ಲ, ಏಕೆಂದರೆ ಶರೀರದಲ್ಲೆಲ್ಲ ಅವುಗಳ ಕಾರ್ಯವು ಕಾಣಬರುತ್ತದೆ. ಅವು ಸರ್ವಗತವೂ ಅಲ್ಲ ; ಏಕೆಂದರೆ ಪ್ರಾಣಗಳಿಗೆ ಉತ್ಕ್ರಾಂತಿ, ಗತಿ, ಆಗತಿ–ಇವುಗಳನ್ನು ಶ್ರುತಿಯಲ್ಲಿ ಹೇಳಿದೆ. ಜೀವನಿಗೆ ತದ್ಗುಣಸಾರತ್ವವು ಬರಬೇಕಾದರೆ ಅವು ಸೂಕ್ಷ್ಮವಾಗಿಯೂ ಪರಿಚ್ಛಿನ್ನವಾಗಿಯೂ ಇರತಕ್ಕದ್ದು ಆವಶ್ಯವಾಗಿರುತ್ತದೆ.

## ೪. ಪ್ರಾಣಶ್ರೈಷ್ಠ್ಯಾಧಿಕರಣ

### ಶ್ರೇಷ್ಠಶ್ಚ ||೮||

**ಸಂಶಯ :** ಮುಖ್ಯಪ್ರಾಣವು ಬ್ರಹ್ಮವಿಕಾರವೊ, ಅಲ್ಲವೊ ?

**ಪೂರ್ವಪಕ್ಷ :** ಶ್ರುತಿಯಲ್ಲಿ ಉತ್ಪತ್ತಿಗೆ ಪೂರ್ವದಲ್ಲಿ 'ಆನೀದ ವಾತಮ್' ಎಂದು ಪ್ರಾಣಕರ್ಮವಿತ್ತೆಂದು ಹೇಳಿದೆ. ಆದ್ದರಿಂದ ಪ್ರಾಣವು ಹುಟ್ಟುವದಿಲ್ಲ.

**ಸಿದ್ಧಾಂತ :** ಇಂದ್ರಿಯಮನಸ್ಸುಗಳಿಗಿಂತ ಬೇರೆಯಾಗಿ ಪ್ರಾಣಕ್ಕೂ ಉತ್ಪತ್ತಿಯನ್ನು ಹೇಳಿದೆ. ಶ್ರುತಿಯಲ್ಲಿರುವ 'ಆನೀತ್' ಎಂಬ ಮಾತು ಪ್ರಾಣವಿರುವದೆಂಬುದನ್ನು ಹೇಳುವದಿಲ್ಲ ; ಏಕೆಂದರೆ ಅಲ್ಲಿ ವಾತವಿರಲಿಲ್ಲ ಎಂದು ಹೇಳಿದೆ. ಆದ್ದರಿಂದ ಶ್ರೇಷ್ಠಪ್ರಾಣವೂ ಬ್ರಹ್ಮದಿಂದ ಹುಟ್ಟುತ್ತದೆ.

## ವಾಯುಕ್ರಿಯಾಧಿಕರಣ

**ನ ವಾಯುಕ್ರಿಯೇ ಪೃಥಗುಪದೇಶಾತ್ ||೯| ಚಕ್ಷುರಾದಿವತ್ತು ತತ್ಸಹಶಿಷ್ಟ್ಯಾದಿಭ್ಯಃ ||೧೦|| ಅಕರಣತ್ವಾಚ್ಚ ನ ದೋಷಸ್ತಥಾ ಹಿ ದರ್ಶಯತಿ ||೧೧|| ಪಞ್ಚವೃತ್ತಿರ್ಮನೋವದ್ ವ್ಯಪದಿಶ್ಯತೇ ||೧೨||**

**ಸಂಶಯ :** ಮುಖ್ಯಪ್ರಾಣವು ವಾಯುವೆ? ಕರಣಗಳ ವೃತ್ತಿಯೆ?

**ಪೂರ್ವಪಕ್ಷ :** ಇವೆರಡರಲ್ಲಿ ಯಾವದಾದರೊಂದು ಆಗಬಹುದು. ಮೊದಲನೆಯದಕ್ಕೆ ಶ್ರುತಿಯ ಬೆಂಬಲವಿದೆ.; ಎರಡನೆಯದಕ್ಕೆ ಸಾಂಖ್ಯ ಶಾಸ್ತ್ರದ ಆಧಾರವಿದೆ.

**ಸಿದ್ಧಾಂತ :** ಪ್ರಾಣವು ವಾಯುವೂ ಅಲ್ಲ; ಕರಣವೃತ್ತಿಯೂ ಅಲ್ಲ. ಏಕೆಂದರೆ ವಾಯುವಿಗಿಂತ ಭಿನ್ನವಾಗಿ ಶ್ರುತಿಯಲ್ಲಿ ಪ್ರಾಣವನ್ನು ಬೇರೆಯಾಗಿ ಹೇಳಿರುತ್ತದೆ. ಇದರಂತೆಯೇ ಕರಣಗಳನ್ನೂ ಹೇಳಿ ಅವುಗಳಿಗಿಂತ ಬೇರೆಯಾಗಿಯೇ ಪ್ರಾಣವನ್ನು ಹೇಳಿರುತ್ತದೆ. ಎಲ್ಲಾ ಕರಣಗಳಿಗೂ ಒಟ್ಟುಗೂಡಿ ಪ್ರಾಣವೆಂಬ ವೃತ್ತಿ ಎಂಬುದು ಯುಕ್ತಿಗೂ ಹೊಂದುವದಿಲ್ಲ; ಪ್ರಾಣವು ಶ್ರೇಷ್ಠವು, ಉಳಿದ ಪ್ರಾಣಗಳು ಅದಕ್ಕೆ ಅಧೀನ– ಎಂದು ಮುಂತಾಗಿ ಶ್ರುತಿಯಲ್ಲಿ ಹೇಳಿರುವದಕ್ಕೂ ವಿರುದ್ಧವಾಗುತ್ತದೆ. ಪ್ರಾಣವು ವಾಯುವಿನ ಆಧ್ಯಾತ್ಮರೂಪವಿಶೇಷವು. ಆದ್ದರಿಂದ ಪ್ರಾಣವೇ ವಾಯು ಎಂದು ಕೆಲವು ಶ್ರುತಿಗಳಲ್ಲಿ ಹೇಳಿದೆ. ಪ್ರಾಣವನ್ನು ಚಕ್ಷುರಾದಿಗಳಂತೆ ಜೀವನಿಗೆ ಉಪಕರಣವಾಗಿಯೇ ಹೇಳಿರುವದರಿಂದ ಅದಕ್ಕೆ ಜೀವನರತೆ ಸ್ವಾತಂತ್ರ್ಯವಿಲ್ಲ; ಅದು ಕರಣಾಂತರವಲ್ಲದ್ದರಿಂದ ಚಕ್ಷುರಾದಿಗಳಂತೆ ಅದಕ್ಕೆ ಮತ್ತೊಂದು ವಿಷಯವಿಲ್ಲ. ಶರೀರೇಂದ್ರಿಯಸಂಘಾತವು ಇದ್ದುಕೊಂಡಿರುವಂತೆ ನೋಡಿಕೊಳ್ಳುವದೆಂಬ ಅಸಾಧಾರಣವಾದ ಒಂದಾನೊಂದು ಕಾರ್ಯವಿರುವದರಿಂದ ಅದು ವ್ಯರ್ಥವೂ ಅಲ್ಲ. ಮನಸ್ಸಿನಂತೆ ಅದಕ್ಕೂ ಪಂಚವೃತ್ತಿಗಳಿರುವದರಿಂದ ಅದೂ ಜೀವನಿಗೆ ಒಂದು ಉಪಕರಣವಾಗಿರುತ್ತದೆ.

## ೬. ಶ್ರೇಷ್ಠಾಣುತ್ವಾಧಿಕರಣ

**ಅಣುಶ್ಚ ||೧೩||**

**ಸಂಶಯ :** ಪ್ರಾಣದ ಪರಿಮಾಣವು ಯಾವದು ? ಅದು ಅಣುವೊ, ಸರ್ವಗತವೊ ?

**ಪೂರ್ವಪಕ್ಷ :** ಇದು ಸರ್ವಗತವೇ, ಏಕೆಂದರೆ ಹಾಗೆಂದು ಶ್ರುತಿಯಲ್ಲಿದೆ.

**ಸಿದ್ಧಾಂತ :** ಇದೂ ಇತರ ಪ್ರಾಣಗಳಂತೆ ಅಣು, ಎಂದರೆ ಸೂಕ್ಷ್ಮವೂ ಪರಿಚ್ಛಿನ್ನವೂ ಆಗಿರುತ್ತದೆ. ಅದು ಪರಮಾಣುವಿನ ಪರಿಮಾಣದ್ದಲ್ಲ, ಏಕೆಂದರೆ ಇದು ವೃತ್ತಿಗಳಿಂದ ಶರೀರವನ್ನೆಲ್ಲ ವ್ಯಾಪಿಸಿಕೊಂಡಿರುತ್ತದೆ. ಭುವೂ ಅಲ್ಲ ; ಅದು ವಿಭುವೆಂದು ಶ್ರುತಿಯಲ್ಲಿರುವದು ಆಧಿದೈವಿಕರೂಪ ಎದ ಸಮಷ್ಟಿವ್ಯಷ್ಟಿರೂಪಪ್ರಾಣದ ವಿಷಯ.

## ೭. ಜ್ಯೋತಿರಾದ್ಯಧಿಕರಣ

**ಜ್ಯೋತಿರಾದ್ಯಧಿಷ್ಠಾನಂ ತು ತದಾಮನನಾತ್ ||೧೪|| ಪ್ರಾಣವತಾ ಶಬ್ದಾತ್ ||೧೫|| ತಸ್ಯ ಚ ನಿತ್ಯತ್ವಾತ್ ||೧೬||**

**ಸಂಶಯ :** ಪ್ರಾಣಗಳು ತಮ್ಮ ಶಕ್ತಿಯಿಂದಲೇ ತಮ್ಮತಮ್ಮ ಕಾರ್ಯವನ್ನು ಮಾಡುತ್ತವೆಯೊ, ದೇವತೆಗಳ ಹಿಡಿತದಲ್ಲಿದ್ದುಕೊಂಡು ಮಾಡುತ್ತವೆಯೊ ?

**ಪೂರ್ವಪಕ್ಷ :** ತಮ್ಮ ಶಕ್ತಿಯಿಂದ ತಾವೇ ಮಾಡುತ್ತವೆ. ಏಕೆಂದರೆ ದೇವತಾಧಿಷ್ಠಿತವಾಗಿ ಮಾಡುತ್ತವೆ–ಎಂದರೆ ಈ ಶರೀರದಲ್ಲಿ ಭೋಕ್ತೃತ್ವವು ದೇವತೆಗಳಿಗೇ ಬರಬೇಕಾಗುತ್ತದೆ.

**ಸಿದ್ಧಾಂತ :** ದೇವತಾಧಿಷ್ಠಿತವಾಗಿಯೇ ಕೆಲಸವನ್ನು ಮಾಡುತ್ತವೆ. ಏಕೆಂದರೆ 'ಅಗ್ನಿಯು ವಾಕ್ಕಾಗಿ ಮುಖವನ್ನು ಪ್ರವೇಶಿಸಿದನು' ಎಂದು ಮುಂತಾಗಿರುವ ಶ್ರುತಿಯು ಹೀಗೆಂದು ಹೇಳುತ್ತದೆ. ಶಕ್ತವಾಗಿರುವ ವಸ್ತುಗಳು ತಾವೇ ತಮ್ಮ ಕಾರ್ಯವನ್ನು ಮಾಡಬಹುದು ; ಮತ್ತೊಬ್ಬರಿಂದ ಅಧಿಷ್ಠಿತವಾಗಿಯೂ ಮಾಡಬಹುದು. ಹೀಗೆ ಎರಡೂ ಬರೆಯಾಗಿರುವದರಿಂದ ಶ್ರುತ್ಯನುಗುಣವಾಗಿ ದೇವತಾಧಿಷ್ಠಿತವಾದ ಪ್ರಾಣಗಳೇ ತಮ್ಮತಮ್ಮ

ಕೆಲಸವನ್ನು ಮಾಡುತ್ತವೆ ಎಂಬುದೇ ಯುಕ್ತ. ಪ್ರಾಣಗಳಿಗೆ ಜೀವನೊಡನೆ ಸಂಬಂಧವಿದೆ–ಎಂದು ಶ್ರುತಿ ಹೇಳಿರುವದರಿಂದಲೂ ಅನೇಕಕರಣಗಳ ಅಧಿಷ್ಠಾತೃಗಳಾಗಿರುವ ದೇವತೆಗಳೆಲ್ಲರೂ ಒಂದು ಶರೀರದಲ್ಲಿ ಭೋಕ್ತೃ ವಾಗಿರುವದು ಸಾಧ್ಯವಿಲ್ಲವಾದ್ದರಿಂದಲೂ ಜೀವನು ಧರ್ಮಾಧರ್ಮಗಳಿಂದ ಶರೀರದಲ್ಲಿ ನಿತ್ಯಭೋಕ್ತೃವಾಗಿರುವನೆಂಬುದೇ ಯುಕ್ತವಾಗಿರುವದರಿಂದಲೂ ದೇವತೆಗಳಿಗೆ ಈ ಶರೀರದಲ್ಲಿ ಭೋಕ್ತೃತ್ವಪ್ರಸಂಗವಿಲ್ಲ.

## ೮. ಇಂದ್ರಿಯಾದ್ಯಧಿಕರಣ

ತ ಇನ್ದ್ರಿಯಾಣಿ ತದ್ವ್ಯಪದೇಶಾದನ್ಯತ್ರ ಶ್ರೇಷ್ಠಾತ್ ॥೧೭॥
ಭೇದಶ್ರುತೇಃ ॥೧೮॥ ವೈಲಕ್ಷಣ್ಯಾಚ್ಚ ॥೧೯॥

**ಸಂಶಯ :** ಉಳಿದ ಪ್ರಾಣಗಳು ಮುಖ್ಯಪ್ರಾಣದ ವೃತ್ತಿಭೇದಗಳೇ, ಅಥವಾ ತತ್ತ್ವಾಂತರಗಳೆ ?

**ಪೂರ್ವಪಕ್ಷ :** ಇತರ ಪ್ರಾಣಗಳು ಮುಖ್ಯಪ್ರಾಣದ ವೃತ್ತಿಗಳೇ ; ಏಕೆಂದರೆ ಶ್ರುತಿಯಲ್ಲಿ ಹಾಗೆಂದು ಹೇಳಿದೆ. ಎಲ್ಲಕ್ಕೂ 'ಪ್ರಾಣಗಳು' ಎಂಬ ಹೆಸರೂ ಇದೆ. ಆದ್ದರಿಂದ ಪ್ರಾಣಾಪಾನಾದಿಗಳಂತೆ ಕರಣಗಳೂ ಮುಖ್ಯ ಪ್ರಾಣದ ವೃತ್ತಿಗಳೆಂದು ಹೇಳುವದು ಯುಕ್ತ.

**ಸಿದ್ಧಾಂತ :** ಅವು ತತ್ತ್ವಾಂತರಗಳೇ. ಏಕೆಂದರೆ ಅವಕ್ಕೆ 'ಇಂದ್ರಿಯ ಗಳು' ಎಂಬ ಬೇರೊಂದು ವ್ಯಪದೇಶವು ಶ್ರುತಿಯಲ್ಲಿದೆ. ಮನಸ್ಸನ್ನು ಇಂದ್ರಿಯ ವೆಂದು ಶ್ರುತಿಯಲ್ಲಿ ಕರೆಯದಿದ್ದರೂ ಸ್ಮೃತಿಯಲ್ಲಿ ಹಾಗೆಂದು ಕರೆದಿದೆ. ಪ್ರಾಣವನ್ನು ವಾಗಾದಿಗಳಿಗಿಂತ ಬೇರೆಯಾಗಿ ಶ್ರುತಿಯಲ್ಲಿ ಹೇಳಿಯೂ ಇದೆ. ವಾಗಾದಿಗಳಿಗೂ ಮುಖ್ಯಪ್ರಾಣಕ್ಕೂ ವೈಲಕ್ಷಣ್ಯವೂ ಇದೆ. ಹೇಗೆಂದರೆ ಪ್ರಾಣವೊಂದೇ ಸುಷುಪ್ತಿಯಲ್ಲಿ ಎಚ್ಚರವಾಗಿರುತ್ತದೆ ; ಅದಕ್ಕೊಂದಕ್ಕೇ ಶ್ರಮರೂಪಿಯಾದ ಮೃತ್ಯುವಿನ ವ್ಯಾಪ್ತಿಯಿಲ್ಲ ; ಅದರ ಇರವು, ಉತ್ಕ್ರಾಂತಿ –ಇವುಗಳಿಂದಲೇ ಶರೀರಧಾರಣವೂ ಶರೀರಪತನವೂ ಆಗುತ್ತದೆ.

## ೯. ಸಂಜ್ಞಾಮೂರ್ತಿಕ್ಲೃಪ್ತ್ಯಧಿಕರಣ

ಸಂಜ್ಞಾಮೂರ್ತಿಕ್ಲೃಪ್ತಿಸ್ತು ತ್ರಿವೃತ್ಕುರ್ವತ ಉಪದೇಶಾತ್ ॥೨೦॥

**ಮಾಂಸಾದಿಭೌಮಂ ಯಥಾಶಬ್ದಮಿತರಯೋಶ್ಚ ||೨೧|| ವೈಶೇಷ್ಯಾತ್ತು ತದ್ವಾದಸ್ತದ್ವಾದಃ ||೨೨||**

**ಸಂಶಯ :** ಛಾಂದೋಗ್ಯದಲ್ಲಿ ಹೇಳಿರುವ ನಾಮರೂಪವ್ಯಾಕರಣವು ಜೀವಕರ್ತೃಕವೊ, ಬ್ರಹ್ಮಕರ್ತೃವೊ ?

**ಪೂರ್ವಪಕ್ಷ :** ಇದು ಜೀವಕರ್ತೃಕವೇ. ಏಕೆಂದರೆ 'ಈ ಜೀವಾತ್ಮನ ರೂಪದಿಂದ ಪ್ರವೇಶಮಾಡಿ ನಾಮರೂಪಗಳನ್ನು ವ್ಯಾಕರಣಮಾಡುವೆನು'- ಎಂಬ ಶ್ರುತಿವಾಕ್ಯವಿದೆ. ಜೀವನಿಗೆ ಡಿತ್ಥಡವಿತ್ಥಾದಿನಾಮಗಳ ಮತ್ತು ಘಟಶರಾವಾದಿರೂಪಗಳ ವ್ಯಾಕರಣಕರ್ತೃತ್ವವು ಲೋಕದಲ್ಲಿ ಕಂಡೂ ಇದೆ.

**ಸಿದ್ಧಾಂತ :** ಈ ನಾಮರೂಪವ್ಯಾಕರಣವು ಬ್ರಹ್ಮದ್ದೇ. ಏಕೆಂದರೆ ತ್ರಿವೃತ್ಕರಣವನ್ನು ಮಾಡುವ ಪರಮೇಶ್ವರನಿಗೆ ಈ ವ್ಯಾಕರಣವನ್ನು ಹೇಳಿರುತ್ತದೆ. 'ಸೇಯಂ ದೇವತಾ'- ಆ ಈ ದೇವತೆಯು ಆಲೋಚನೆಮಾಡಿತು ಎಂದು ಉಪಕ್ರಮಿಸಿಯೇ ಈ ವ್ಯಾಕರ್ತೃತ್ವವನ್ನು ಹೇಳಿರುತ್ತದೆ. 'ಜೀವರೂಪದಿಂದ ಅನುಪ್ರವೇಶಮಾಡಿ' ಎಂದಿಷ್ಟೇ ಸಂಬಂಧವು ; ಜೀವನಿಂದ ವ್ಯಾಕರಣಮಾಡಿಸುವೆನು ಎಂದೇನೂ ಅಭಿಪ್ರಾಯವಿಲ್ಲ. ಹಾಗೆ ಸಂಬಂಧಮಾಡಿದರೆ 'ವ್ಯಾಕರಣಮಾಡುವೆನು' ಎಂಬ ಉತ್ತಮಪುರುಷಪ್ರಯೋಗವನ್ನು ಗೌಣಾರ್ಥದಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಜೀವನಿಗೆ ಗಿರಿನದೀಸಮುದ್ರಾದಿಗಳ ನಾಮರೂಪವ್ಯಾಕರಣವು ಅನುಭವದಲ್ಲಿ ಕಂಡುಬರುವದಿಲ್ಲ. ಅವನಿಗೆ ವ್ಯಾಕರ್ತೃತ್ವವು ಕಾಣುವ ಕಡೆಯಲ್ಲಿಯೂ ಅದು ಪರಮೇಶ್ವರನಿಗೆ ಅಧೀನವಾಗಿರುತ್ತದೆ. ತತ್ತ್ವದೃಷ್ಟಿಯಿಂದ ಅವನು ಪರಮಾತ್ಮನೇ ಆಗಿರುತ್ತಾನೆ. ಈ ವ್ಯಾಕರಣವು ತ್ರಿವೃತ್ಕರಣಪೂರ್ವಕವಾಗಿಯೇ ಇರುತ್ತದೆ. ಆಧ್ಯಾತ್ಮಿಕವಾದ ತ್ರಿವೃತ್ಕರಣವೂ ಆ ಪರಮೇಶ್ವರನಿಂದಲೇ ಆಗುತ್ತದೆ. ಭೂತಗಳು ತ್ರಿವೃತ್ಕೃತವಾಗಿದ್ದರೂ ಆಯಾ ಭೂತವು ಹೆಚ್ಚಿನ ಪ್ರಮಾಣದಲ್ಲಿ ಬೆರೆತಿರುವದರಿಂದ ಆಯಾ ಹೆಸರಿನಿಂದ ವ್ಯವಹೃತವಾಗಬಹುದಾಗಿದೆ. ಅಂತೂ ಹೀಗೆ ತ್ರಿವೃತ್ಕರಣಕರ್ತೃವಾದ ಪರಮೇಶ್ವರನಿಗೇ ನಾಮರೂಪವ್ಯಾಕರಣವನ್ನು ಹೇಳಿದೆ- ಎಂದು ಸಿದ್ಧವಾಯಿತು.

# ಮೂರನೆಯ ಅಧ್ಯಾಯ

## ಒಂದನೆಯ ಪಾದ

ಈ ಪಾದದಲ್ಲಿ ವೈರಾಗ್ಯೋತ್ಪತ್ತಿಗಾಗಿ ಜೀವರುಗಳ ಗತ್ಯಾಗತಿವಿಚಾರ ವನ್ನು ಮಾಡಿರುತ್ತದೆ.

### ೬. ತದಂತರಪ್ರತಿಪತ್ತ್ಯಧಿಕರಣ

ತದಂತರಪ್ರತಿಪತ್ತೌ ರಂಹತಿ ಸಂಪರಿಷ್ವಕ್ತಃ ಪ್ರಶ್ನನಿರೂಪಣಾ ಭ್ಯಾಮ್ ||೧|| ತ್ರ್ಯಾತ್ಮಕತ್ವಾತ್ತು ಭೂಯಸ್ತ್ವಾತ್ ||೨|| ಪ್ರಾಣ ಗತೇಶ್ಚ ||೩|| ಅಗ್ನ್ಯಾದಿಗತಿಶ್ರುತೇರಿತಿ ಚೇನ್ನ ಭಾಕ್ತತ್ವಾತ್ ||೪|| ಪ್ರಥಮೇಽಶ್ರವಣಾದಿತಿ ಚೇನ್ನ ತಾ ಏವ ಹ್ಯುಪಪತ್ತೇಃ ||೫|| ಅಶ್ರುತತ್ವಾದಿತಿ ಚೇನ್ನೇಷ್ಟಾದಿಕಾರಿಣಾಂ ಪ್ರತೀತೇಃ||೬|| ಭಾಕ್ತಂ ವಾಽನಾತ್ಮವಿತ್ತ್ವಾತ್ ತಥಾ ಹಿ ದರ್ಶಯತಿ ||೭||

ಸಂಶಯ : ಪಂಚಾಗ್ನಿವಿದ್ಯೆಯ ವಾಕ್ಯವು ವಿಷಯ. ಜೀವನು ಸಾಯುವಾಗ ಮುಂದಿನ ದೇಹಕ್ಕೆ ಬೀಜವಾಗಿರುವ ಭೂತಸೂಕ್ಷ್ಮಗಳನ್ನು ತೆಗೆದುಕೊಂಡೇ ಹೋಗುತ್ತಾನೊ, ಇಲ್ಲವೊ ?

ಪೂರ್ವಪಕ್ಷ : ಚಕ್ಷುರಾದಿಗಳನ್ನು ತೆಗೆದುಕೊಂಡುಹೋಗುತ್ತಾ ನೆಂದು ಶ್ರುತಿಯಲ್ಲಿರುವಂತೆ ಭೂತಮಾತ್ರೆಗಳನ್ನು ತೆಗೆದುಕೊಂಡುಹೋಗು-ತ್ತಾನೆಂದು ಹೇಳಿರುವದಿಲ್ಲ. ಭೂತಮಾತ್ರೆಗಳು ಎಲ್ಲಾ ಕಡೆಯಲ್ಲಿಯೂ ಸುಲಭವಾಗಿ ಸಿಕ್ಕುತ್ತವೆ. ಆದ್ದರಿಂದ ಭೂತಸೂಕ್ಷ್ಮಗಳನ್ನು ತೆಗೆದು ಕೊಳ್ಳದೆಯೇ ಹೋಗುತ್ತಾನೆ.

ಸಿದ್ಧಾಂತ : ಜೀವನು ದೇಹಾಂತರಕ್ಕೆ ಭೂತಮಾತ್ರೆಗಳನ್ನು ತೆಗೆದು ಕೊಂಡೇ ಹೋಗುತ್ತಾನೆ. ಏಕೆಂದರೆ ಇಲ್ಲಿ ಪ್ರಶ್ನೆಯಲ್ಲಿಯೂ ಉತ್ತರದಲ್ಲಿ ಯೂ ಅಪ್ಪು ಪುರುಷಶಬ್ದವಾಚ್ಯವಾಗಿರುವದು ಹೇಗೆಂಬುದನ್ನೇ ಕೇಳಿದೆ, ಹೇಳಿದೆ. ಇಲ್ಲಿ ಹೇಳಿರುವ ಅಪ್ಪು ಪಂಚೀಕೃತವಾಗಿರುವದರಿಂದಲೂ ಪ್ರಾಣ ಗಳ ಉತ್ಕ್ರಾಂತಿಯನ್ನು ಹೇಳುವ ಶ್ರುತಿಯು ಅವುಗಳಿಗೆ ಆಶ್ರಯವಾಗಿರುವ ಭೂತಗಳನ್ನು ಬಯಸುವದರಿಂದಲೂ ಭೂತಮಾತ್ರೆಗಳನ್ನು ತೆಗೆದುಕೊಂಡು

ಹೋಗುತ್ತಾನೆ. ಪ್ರಥಮಾಗ್ನಿಯಲ್ಲಿ ಹೇಳಿರುವ ಶ್ರದ್ಧೆಯೂ ಅಪ್ಪೇ ; ಆದ್ದರಿಂದ ವಿರೋಧವಿಲ್ಲ. ಇಲ್ಲಿ ಹೇಳಿರುವ ಇಷ್ಟಾದಿಕಾರಿಗಳೇ ಜೀವರು. ಅವರನ್ನು ದೇವತೆಗಳು ಭಕ್ಷಿಸುತ್ತಾರೆಂದು ಹೇಳಿರುವದು ಗೌಣಪ್ರಯೋಗ ; ದೇವತೆಗಳಿಗೆ ಉಪಭೋಗ್ಯರಾಗುತ್ತಾರೆ ಎಂದರ್ಥ. ಇಷ್ಟಾದಿಕಾರಿಗಳೂ ಅನಾತ್ಮವಿದರಾದ್ದರಿಂದ ಹೀಗೆ ಹೇಳಿರುವದು ಯುಕ್ತವಾಗಿದೆ. ಆದ್ದರಿಂದ ಜೀವರು ದೇಹಾಂತರಕ್ಕೆ ಭೂತಸೂಕ್ಷ್ಮಪರಿವೇಷ್ಟಿತರಾಗಿಯೇ ಹೊರಡುತ್ತಾರೆಂದು ಸಿದ್ಧವಾಯಿತು.

## ೨. ಕೃತಾತ್ಯಯಾಧಿಕರಣ

**ಕೃತಾತ್ಯಯೇ ಅನುಶಯವಾನ್ ದೃಷ್ಟಸ್ಮೃತಿಭ್ಯಾಂ ಯಥೇತಮನೇವಂ ಚ ||೮|| ಚರಣಾದಿತಿ ಚೇನ್ನೋಪಲಕ್ಷಣಾರ್ಥೇತಿ ಕಾರ್ಷ್ಣಾಜಿನಿಃ ||೯|| ಆನರ್ಥಕ್ಯಮಿತಿ ಚೇನ್ನ ತದಪೇಕ್ಷತ್ವಾತ್ ||೧೦|| ಸುಕೃತದುಷ್ಕೃತೇ ಏವ ತು ಬಾದರಿಃ ||೧೧||**

**ಸಂಶಯ** ಇಷ್ಟಾದಿಕಾರಿಗಳು ಧೂಮಾದಿಮಾರ್ಗದಿಂದ ಚಂದ್ರಮಂಡಲಕ್ಕೆ ಹೋಗಿ ಕರ್ಮವು ಕ್ಷಯವಾಗಲು ಮತ್ತೆ ಭೂಲೋಕಕ್ಕೆ ಇಳಿದು ಬರುತ್ತಾರೆಂದು (ಛಾಂ. ೫-೧೦-೫) ಶ್ರುತಿಯಲ್ಲಿದೆ. ಅಲ್ಲಿ ಕರ್ಮವೆಲ್ಲವನ್ನೂ ಉಪಭೋಗಿಸಿ ಇಳಿಯುತ್ತಾರೊ, ಅಥವಾ ಅನುಶಯವೆಂಬ ಕರ್ಮಶೇಷ ಸಹಿತವಾಗಿ ಇಳಿಯುತ್ತಾರೊ ?

**ಪೂರ್ವಪಕ್ಷ:** 'ಯಾವತ್ಸಂಪಾತಮುಷಿತ್ವಾ' (ಕರ್ಮಾಶಯವಿರುವವರೆಗೂ ಇದ್ದು) ಎಂದು ಶ್ರುತಿಯಲ್ಲಿರುವದರಿಂದಲೂ ಬೃಹದಾರಣ್ಯಕದಲ್ಲಿ ಮಾಡಿದ ಕರ್ಮವನ್ನೆಲ್ಲ ಮುಗಿಸಿ ಇಳಿಯುತ್ತಾರೆಂದು ಸ್ಪಷ್ಟವಾಗಿ ಹೇಳಿರುವದರಿಂದಲೂ ಸಾಯುವ ಕಾಲದಲ್ಲಿ ಅನಾರಬ್ಧಕರ್ಮಕ್ಕೆ ಅಭಿವ್ಯಂಜಕವಾಗಿರುವದರಿಂದಲೂ ಎಲ್ಲಾ ಕರ್ಮಗಳನ್ನೂ ಅನುಭವಿಸಿ ಇಳಿಯುತ್ತಾರೆಂದು ನಿಶ್ಚಯಿಸಬೇಕು.

ಸಿದ್ಧಾಂತ : ತಾವು ಮಾಡಿದ ಕರ್ಮವು ಸವೆಯಲಾಗಿ ಸಾನುಶಯರಾಗಿಯೇ ಇಳಿಯುತ್ತಾರೆ. ಏಕೆಂದರೆ ಶ್ರುತಿಯು ಪುಣ್ಯಪಾಪಕರ್ಮವನ್ನು ಮಾಡಿದವರಿಗೆ ಒಳ್ಳೆಯ ಕೆಟ್ಟ ಯೋನಿಗಳು ದೊರೆಯುವವೆಂದು ಹೇಳುತ್ತದೆ. ಸ್ಮೃತಿಯಲ್ಲಿಯೂ ಕರ್ಮಶೇಷವು ಉಳಿದಿರುವದೆಂದು ಹೇಳಿದೆ. ಚಂದ್ರ

ಮಂಡಲದಲ್ಲಿ ವಿರುದ್ಧಫಲವುಳ್ಳ ಎಲ್ಲಾ ಕರ್ಮಗಳ ಫಲವನ್ನೂ ಅನುಭವಿಸುವದೆಂಬುದು ಅಸಾಧ್ಯ. ಶ್ರುತ್ಯಂತರದಲ್ಲಿ ಹೇಳಿರುವ 'ಎಲ್ಲಾ ಕರ್ಮಗಳನ್ನೂ ಅನುಭವಿಸಿ' ಎಂಬ ವಾಕ್ಯಕ್ಕೆ ಅನುಭವಿಸಬೇಕಾಗಿದ್ದ ಕರ್ಮಫಲಗಳನ್ನು ಎಂದರ್ಥ. ಮರಣಕಾಲದಲ್ಲಿ ಎಲ್ಲಾ ಕರ್ಮಗಳೂ ಅಭಿವ್ಯಕ್ತವಾಗುವ ಹಾಗಿಲ್ಲ, ಏಕೆಂದರೆ ವಿರುದ್ಧಫಲಗಳುಳ್ಳ ಎಲ್ಲಾ ಕರ್ಮಗಳೂ ಒಂದೇ ಕಾಲದಲ್ಲಿ ಅಭಿವ್ಯಕ್ತಿಯಾಗುವುದಕ್ಕೆ ಅವಕಾಶವಿಲ್ಲದ್ದರಿಂದ ಪ್ರಬಲವಾದ ಕರ್ಮವು ಮಾತ್ರ ಅಭಿವ್ಯಕ್ತವಾಗುತ್ತದೆ ಎನ್ನಬೇಕಾಗಿದೆ. ಶ್ರುತಿಯಲ್ಲಿ ಹೇಳಿರುವ ಚರಣವೇ ಬೇರೆ, ಕರ್ಮವೇ ಬೇರೆ ಎಂಬುದು ಸರಿಯಲ್ಲ; ಅದು ಅನುಶಯಕ್ಕೆ ಉಪಲಕ್ಷಣವೆಂದೋ ವಾಚಕವೆಂದೋ ಅರ್ಥಮಾಡಬಹುದಾಗಿದೆ.

## ೩. ಅನಿಷ್ಟಾದಿಕಾರ್ಯಾಧಿಕರಣ

ಅನಿಷ್ಟಾದಿಕಾರಿಣಾಮಪಿ ಚ ಶ್ರುತಮ್ ||೧೨|| ಸಂಯಮನೇ ತ್ವನುಭೂಯೇತರೇಷಾಮಾರೋಹಾವರೋಹೌ ತದ್ಗತಿದರ್ಶನಾತ್ ||೧೩|| ಸ್ಮರನ್ತಿ ಚ ||೧೪|| ಅಪಿ ಚ ಸಪ್ತ ||೧೫ ತತ್ರಾಪಿ ಚ ತದ್ವ್ಯಾಪಾರಾದವಿರೋಧಃ ||೧೬|| ವಿದ್ಯಾಕರ್ಮಣೋರಿತಿ ತು ಪ್ರಕೃತತ್ವಾತ್ ||೧೭|| ನ ತೃತೀಯೇ ತಥೋಪಲಬ್ಧೇಃ ||೧೮|| ಸ್ಮರ್ಯತೇಽಪಿ ಚ ಲೋಕೇ ||೧೯ ದರ್ಶನಾಚ್ಚ |೨೦ ತೃತೀಯಶಬ್ದಾವರೋಧಃ ಸಂಶೋಕಜಸ್ಯ ||೨೧|

ಸಂಶಯ : ಇಷ್ಟಾದಿಗಳನ್ನು ಮಾಡದ ಪಾಪಿಗಳೂ ಚಂದ್ರಲೋಕಕ್ಕೆ ಹೋಗುವರೊ, ಇಲ್ಲವೊ ?

ಪೂರ್ವಪಕ್ಷ : ಅವರೂ ಚಂದ್ರಲೋಕಕ್ಕೆ ಹೋಗುತ್ತಾರೆ. ಏಕೆಂದರೆ ಕೌಷೀತಕ್ಯುಪನಿಷತ್ತಿನಲ್ಲಿ ಈ ಲೋಕವನ್ನು ಬಿಟ್ಟು ತೆರಳುವವರೆಲ್ಲರೂ ಚಂದ್ರಲೋಕಕ್ಕೇ ಹೋಗುತ್ತಾರೆಂದಿದೆ. ಚಂದ್ರಪ್ರಾಪ್ತಿಯಿಲ್ಲದೆ ಹೊಸದೇಹವೂ ಉಂಟಾಗಲಾರದು. ಏಕೆಂದರೆ ಐದು ಆಹುತಿಗಳಾಗಬೇಕೆಂದು ಶ್ರುತಿಯಲ್ಲಿ ನಿಯಮವಿದೆ ; ಚಂದ್ರಪ್ರಾಪ್ತಿಯಿಲ್ಲದೆ ಇದ್ದರೆ ಆಹುತಿಸಂಖ್ಯೆಯು ಕಡಿಮೆಯಾಗುತ್ತದೆ. ಇಷ್ಟಾದಿಕಾರಿಗಳಲ್ಲದವರಿಗೂ ಚಂದ್ರಪ್ರಾಪ್ತಿಯೆಂಬ ಸದ್ಗತಿಯಾಗುವದು ಯುಕ್ತವಲ್ಲವೆಂದು ಶಂಕಿಸುವಹಾಗಿಲ್ಲ; ಏಕೆಂದರೆ ಪಾಪಿಗಳಿಗೆ ಆ ಲೋಕದಲ್ಲಿ ಭೋಗವಾಗುವದಿಲ್ಲ.

ಸಿದ್ಧಾಂತ : ಇಷ್ಟಾದಿಕಾರಿಗಳಲ್ಲದವರು ಚಂದ್ರಲೋಕಕ್ಕೆ ಹೋಗುವದಿಲ್ಲ. ಏಕೆಂದರೆ ಅವರಿಗೆ ಅಲ್ಲಿ ಭೋಗವಾಗದೆ ಇರುವದರಿಂದ ಅವರು ಅಲ್ಲಿಗೆ ಹೋಗುವದು ವ್ಯರ್ಥ. ಅವರು ಯಮಲೋಕದಲ್ಲಿ ಯಾತನೆಗಳನ್ನು ಅನುಭವಿಸಿ ಈ ಲೋಕಕ್ಕೆ ಇಳಿಯುತ್ತಾರೆಂದು ಶ್ರುತಿ ಹೇಳುತ್ತದೆ; ಹಾಗೆಂದು ಸ್ಮೃತಿಯಿದೆ. ಯಮನ ಅಧೀನವಾಗಿರುವ ಚಿತ್ರಗುಪ್ತಾದಿಗಳ ಅಳ್ವಿಕೆಯಲ್ಲಿರುವ ನರಕಗಳನ್ನು ಪುರಾಣಗಳಲ್ಲಿ ವರ್ಣಿಸಿದೆ. ವಿದ್ಯಾಕರ್ಮಗಳ ಲೋಕಕ್ಕಿಂತ .ಬೇರೆಯಾದ ಮತ್ತೆಮತ್ತೆ ಹುಟ್ಟಿಸಾಯುವ ಕ್ಷುದ್ರಜಂತುಗಳ ಜನ್ಮವು ಪಾಪಿಗಳಿಗೆ ಆಗುವದೆಂದು (ಛಾಂ. ೫-೧೦-೮) ಈ ಶ್ರುತಿಯಲ್ಲಿರುವದರಿಂದಲೂ ಅದರಿಂದಲೇ ಸ್ವರ್ಗಲೋಕವು ತುಂಬದೆ ಇರುವದೆಂದೂ ಹೇಳಿರುವದರಿಂದಲೂ ಈ ಪಕ್ಷವೇ ಸರಿ. ಆಹುತಿಸಂಖ್ಯೆಯು ಮನುಷ್ಯಜನ್ಮವನ್ನು ಪಡೆಯುವವರಿಗಾಗಿ ಹೇಳಿದ್ದು ; ಆಹುತಿಸಂಖ್ಯೆಯ ನಿಯಮವಿಲ್ಲದೆ ಹುಟ್ಟಿದವರ ದೃಷ್ಟಾಂತಗೂ ಇತಿಹಾಸದಲ್ಲಿದೆ ; ಸ್ವೇಜದ, ಉದ್ಭಿಜ್ಜ-ಈ ಪ್ರಾಣಿಗಳು ಸ್ತ್ರೀಪುರುಷರ ಸಂಯೋಗವಿಲ್ಲದೆಯೇ ಹುಟ್ಟುವದು ಕಂಡೂಇದೆ. ಆದ್ದರಿಂದ ಪಾಪಿಗಳಿಗೆ ಚಂದ್ರಲೋಕಪ್ರಾಪ್ತಿಯಿಲ್ಲವೆಂಬುದೇ ಸರಿ.

## ೫. ಸಾಭಾವ್ಯಾಪತ್ತ್ಯಧಿಕರಣ

ಸಾಭಾವ್ಯಾಪತ್ತಿರುಪಪತ್ತೇಃ ||೨೨||

**ಸಂಶಯ :** ಚಂದ್ರಲೋಕದಿಂದ ಇಳಿಯುವ ಅನುಶಯಿಗಳು ಆಕಾಶಾದಿಗಳ ಸ್ವರೂಪವೇ ಆಗುವರೊ, ಅವುಗಳ ಸಾದೃಶ್ಯವನ್ನು ಮಾತ್ರ ಹೊಂದುವರೊ ?

**ಪೂರ್ವಪಕ್ಷ :** ಶ್ರುತಿಯಲ್ಲಿ ವಾಯುವಾಗುತ್ತಾನೆ, ಧೂಮವಾಗುತ್ತಾನೆ- ಎಂದು ಮುಂತಾಗಿ ಹೇಳಿರುವದರಿಂದ ಆಕಾಶಾದಿಸ್ವರೂಪವೇ ಆಗುತ್ತಾರೆಂಬುದು ಯುಕ್ತ. ಮುಖ್ಯಾರ್ಥವನ್ನು ಬಿಟ್ಟು ಲಕ್ಷಣಾರ್ಥವನ್ನು ತೆಗೆದುಕೊಳ್ಳುವದು ನ್ಯಾಯವಲ್ಲ.

**ಸಿದ್ಧಾಂತ :** ಆಕಾಶಾದಿಗಳ ಸಾದೃಶ್ಯವನ್ನೇ ಹೊಂದುತ್ತಾರೆ. ಏಕೆಂದರೆ ಒಂದು ಪದಾರ್ಥವು ಇನ್ನೊಂದರ ರೂಪವನ್ನು ಪಡೆಯುತ್ತದೆ ಎಂಬುದು ಮುಖ್ಯವೃತ್ತಿಯಿಂದ ಹೊಂದುವದಿಲ್ಲ. ಆಕಾಶಸ್ವರೂಪವನ್ನು

ಪಡೆದರೆ ವಾಯ್ವಾದಿಕ್ರಮದಿಂದ ಇಳಿಯುವರೆಂಬುದು ಹೊಂದುವದಿಲ್ಲ ; ಆಕಾಶದೊಡನೆ ನಿತ್ಯಸಂಬಂಧವಿರುವದರಿಂದ ಸಾದೃಶ್ಯವೇ ಸಂಬಂಧವೆಂದು ತಿಳಿಯಬೇಕಾಗುತ್ತದೆ. ಇಲ್ಲಿ ಮುಖ್ಯಾರ್ಥವು ಹೊಂದುವದಿಲ್ಲವಾದ್ದರಿಂದ ಲಕ್ಷಣಾರ್ಥವನ್ನು ತೆಗೆದುಕೊಳ್ಳುವದು ಅಯುಕ್ತವಲ್ಲ.

## ೫. ನಾತಿಚಿರಾಧಿಕರಣ

### ನಾತಿಚಿರೇಣ ವಿಶೇಷಾತ್ ||೨೩||

**ಸಂಶಯ :** ಆಕಾಶಾದಿಸಾದೃಶ್ಯವನ್ನು ಹೊಂದಿ ಬಹುಕಾಲವಿರುವರೊ, ಸ್ವಲ್ಪಸ್ವಲ್ಪ ಕಾಲವಿರುವರೊ ?

**ಪೂರ್ವಪಕ್ಷ :** ಯಾವ ನಿಯಮವೂ ಇಲ್ಲ ; ಏಕೆಂದರೆ ನಿಯಮವನ್ನು ಹೇಳುವ ಶಾಸ್ತ್ರವಚನವಿಲ್ಲ.

**ಸಿದ್ಧಾಂತ :** ವ್ರೀಹ್ಯಾದಿಭಾವವನ್ನು ಹೊಂದಿದಮೇಲೆ ಅಲ್ಲಿಂದ ಬಿಟ್ಟುಬರುವದು ಬಹಳ ಕಷ್ಟವೆಂದು ಹೇಳಿರುವದರಿಂದ ಅಲ್ಲಿ ದೀರ್ಘಕಾಲವಿರುತ್ತಾರೆಂದು ಶ್ರುತಿಯು ಹೇಳಿದಂತೆ ಆಗಿದೆ. ಆದ್ದರಿಂದ ಅದಕ್ಕೆ ಪೂರ್ವದಲ್ಲಿ ಸ್ವಲ್ಪಸ್ವಲ್ಪ ಕಾಲವೇ ಇದ್ದು ಇಳಿಯುತ್ತಾರೆಂದು ಸಿದ್ಧವಾಗುತ್ತದೆ.

## ೬. ಅನ್ಯಾಧಿಷ್ಠಿತಾಧಿಕರಣ

### ಅನ್ಯಾಧಿಷ್ಠಿತೇಷು ಪೂರ್ವವದಭಿಲಾಪಾತ್ ||೨೪|| ಅಶುದ್ಧಮಿತಿ ಚೇನ್ನ ಶಬ್ದಾತ್ ||೨೫|| ರೇತಃ ಸಿಗ್ಯೋಗೋಽಥ ||೨೬|| ಯೋನೇಃ ಶರೀರಮ್ ||೨೭||

**ಸಂಶಯ :** ವ್ರೀಹ್ಯಾದಿಭಾವವನ್ನು ಹೊಂದಿದವರು ಸ್ಥಾವರಜನ್ಮವನ್ನೇ ಪಡೆದು ಸ್ಥಾವರಸುಖದುಃಖಗಳನ್ನು ಅನುಭವಿಸುತ್ತಾರೊ, ಬೇರೆಯವರ ಶರೀರದಲ್ಲಿ ಸಂಬಂಧಮಾತ್ರವನ್ನು ಹೊಂದಿರುತ್ತಾರೊ ?

**ಪೂರ್ವಪಕ್ಷ :** 'ಇತಿ ಜಾಯಂತೇ' ಎಂದು ಶ್ರುತಿಯಲ್ಲಿರುವದರಿಂದ ಜನ್‌ಧಾತುವಿಗೆ ಮುಖ್ಯಾರ್ಥವನ್ನು ಇಟ್ಟುಕೊಳ್ಳುವದು ಯುಕ್ತವಾಗಿರುತ್ತದೆ. ಸ್ಥಾವರಜನ್ಮವೂ ಉಪಭೋಗಸ್ಥಾನವೆಂದು ಶ್ರುತಿಯಲ್ಲಿದೆ ; ಇಷ್ಟಾದಿಗಳಲ್ಲಿ ಪಶುಹಿಂಸಾದಿಗಳು ಇರುವದರಿಂದ ಅನಿಷ್ಟಫಲವೂ ಅವಕ್ಕೆ ಆಗಬಹು

ದಾಗಿದೆ. ಆದ್ದರಿಂದ ಶ್ವಯೋನಿಯೇ ಮುಂತಾದವುಗಳನ್ನು ಶ್ರುತಿಯಲ್ಲಿ ಹೇಳಿರುವಂತೆ ಇಲ್ಲಿಯೂ ಮುಖ್ಯಜನ್ಮವೆಂದು ಹೇಳಿದೆಯೆನ್ನುವದು ಯುಕ್ತ.

ಸಿದ್ಧಾಂತ : ಇಲ್ಲಿಯೂ ವ್ರೀಹ್ಯಾದಿಗಳ ಸಂಬಂಧಮಾತ್ರವನ್ನೇ ಒಪ್ಪಬೇಕು. ಏಕೆಂದರೆ ಶ್ರುತಿಯಲ್ಲಿ ಯಾವ ಕರ್ಮದ ವ್ಯಾಪಾರವೂ ಇಲ್ಲದೆ ಆಕಾಶಾದಿಭಾವವನ್ನು ಪಡೆಯುವರೆಂದು ಹೇಗೆ ಹಿಂದೆ ಹೇಳಿದೆಯೋ ಇಲ್ಲಿಯೂ ಹಾಗೆಯೇ ಹೇಳಿರುತ್ತದೆ. ಸುಖದುಃಖಗಳನ್ನೇ ಪಡೆಯುವರೆಂದು ವಿವಕ್ಷಿತವಾಗಿರುವಲ್ಲಿ ರಮಣೀಯಚರಣರು ಎಂದು ಮುಂತಾಗಿ ಕರ್ಮವ್ಯಾಪಾರವನ್ನು ಶ್ರುತಿ ಹೇಳುತ್ತದೆ. ವ್ರೀಹ್ಯಾದಿಶರೀರವನ್ನೇ ಅನುಶಯಿಗಳು ಪಡೆದುಕೊಂಡರೆ ಅವುಗಳನ್ನು ಕತ್ತರಿಸುವದು, ಕುಟ್ಟುವದು, ತಿನ್ನುವದು–ಮುಂತಾದ ಸಂದರ್ಭಗಳಲ್ಲಿ ಅವರು ಆ ಶರೀರಗಳನ್ನು ಬಿಟ್ಟು ಹೊರಟೇ ಹೋಗಬೇಕಾಗುವದು. ಮುಂದೆ ರೇತಃಸೇಕವನ್ನು ಮಾಡುವ ಪುರುಷನ ಸಾದೃಶ್ಯವನ್ನು ಹೊಂದುತ್ತಾರೆಂದು ಶ್ರುತಿ ಹೇಳುವದು ಯುಕ್ತವಾಗುವದಿಲ್ಲ. ಇಷ್ಟಾದಿಕರ್ಮವು ಅಶುದ್ಧವೆಂಬುದು ಸರಿಯಲ್ಲ. ಏಕೆಂದರೆ ಶಾಸ್ತ್ರವೇ ಅದನ್ನು ಧರ್ಮವೆನ್ನುತ್ತದೆ ; ಶಿಷ್ಟರೂ ಅದನ್ನು ಆಚರಣೆಯಲ್ಲಿಟ್ಟುಕೊಂಡಿರುತ್ತಾರೆ. ಮುಂದೆ ವ್ರೀಹ್ಯಾದಿಗಳನ್ನು ತಿಂದ ರೇತಃಸೇಚಕ ಪುರುಷನ ಸಂಬಂಧವನ್ನು ಪಡೆದು ಸ್ತ್ರೀಯೋನಿಯಲ್ಲಿ ಶರೀರವನ್ನು ಪಡೆಯುತ್ತಾರೆಂದು ಹೇಳಿರುವದೂ ಇದಕ್ಕೆ ಬಲವನ್ನು ಕೊಡುತ್ತದೆ. ಆದ್ದರಿಂದ ಇಷ್ಟಾದಿಕಾರಿಗಳಾದ ಅನುಶಯಿಗಳಿಗೆ ವ್ರೀಹ್ಯಾದಿಸಂಬಂಧವೇ ಹೊರತು ವ್ರೀಹ್ಯಾದಿಜನ್ಮಗಳಲ್ಲವೆಂದು ಸಿದ್ಧವಾಯಿತು.

## ಎರಡನೆಯ ಪಾದ

ಈ ಪಾದದಲ್ಲಿ ಮುಖ್ಯವಾಗಿ ಜೀವನ ಅವಸ್ಥಾಭೇದಗಳನ್ನೂ ಅವನ ಪರಮಾರ್ಥಸ್ವರೂಪವಾದ ಈಶ್ವರನ ತತ್ತ್ವವನ್ನೂ ತಿಳಿಸಲಾಗಿದೆ.

### ೧. ಸಂಧ್ಯಾಧಿಕರಣ

ಸನ್ಧ್ಯೇ ಸೃಷ್ಟಿರಾಹ ಹಿ||೧||ನಿರ್ಮಾತಾರಂ ಚೈಕೇ ಪುತ್ರಾದಯಶ್ಚ ||೨|| ಮಾಯಾಮಾತ್ರಂ ತು ಕಾರ್ತ್ಸ್ನ್ಯೇನಾನಭಿವ್ಯಕ್ತಸ್ವರೂಪತ್ವಾತ್ ||೩|| ಸೂಚಕಶ್ಚ ಹಿ ಶ್ರುತೇರಾಚಕ್ಷತೇ ಚ ತದ್ವಿದಃ

**॥೪॥ ಪರಾಭಿಧ್ಯಾನಾತ್ತು ತಿರೋಹಿತಂ ತತೋ ಹ್ಯಸ್ಯ ಬಂಧ ವಿಪರ್ಯಯೌ ॥೫॥ ದೇಹಯೋಗಾದ್ವಾ ಸೋಽಪಿ ॥೬॥**

**ಸಂಶಯ :** ಎಚ್ಚರದಷ್ಟೇ ಸ್ವಪ್ನವು ಸತ್ಯವೊ, ಅಥವಾ ಮಿಥ್ಯವೊ ?

**ಪೂರ್ವಪಕ್ಷ :** ಸ್ವಪ್ನಸೃಷ್ಟಿಯೂ ಸತ್ಯವೇ. ಏಕೆಂದರೆ ಶ್ರುತಿಯಲ್ಲಿ ಅಲ್ಲಿ ಸೃಷ್ಟಿಯಾಗುವದೆಂದು ಹೇಳಿದೆ ; ಪುತ್ರಾದಿಕಾಮಗಳನ್ನು ಈಶ್ವರನು ಸೃಷ್ಟಿಮಾಡುತ್ತಾನೆಂದಿದೆ ; ಸ್ವಪ್ನಜಾಗರಿತಗಳು ಸಮಾನವೆಂಬ ಶ್ರುತಿಯೂ ಇದೆ. ಏಕೆಂದರೆ ಸ್ವಪ್ನದಲ್ಲಿ ಅದೇ ಪದಾರ್ಥಗಳನ್ನೇ ನೋಡುತ್ತಾನೆಂದು ಅಲ್ಲಿ ಹೇಳಿದೆ.

**ಸಿದ್ಧಾಂತ** ಸ್ವಪ್ನಸೃಷ್ಟಿಯು ಮಾಯಾಮಾತ್ರವಾಗಿದೆ ; ಏಕೆಂದರೆ ಅಲ್ಲಿ ಉಚಿತವಾದ ದೇಶಕಾಲನಿಮಿತ್ತಗಳಿಲ್ಲ. ಸ್ವಪ್ನದಲ್ಲಿ ಕಾಣುವ ಸೃಷ್ಟಿಗಳು ಎಚ್ಚರದಲ್ಲಿ ಬಾಧಿತವಾಗುತ್ತವೆ. ಸ್ವಪ್ನದಲ್ಲಿಯೂ ಸುಲಭವಾಗಿ ಬಾಧಿತ ವಾಗುತ್ತಿರುತ್ತವೆ. ಸ್ವಪ್ನದಲ್ಲಿ ರಥಾದಿಗಳು ನಿಜವಾಗಿರುವದಿಲ್ಲವೆಂದೂ ಶ್ರುತಿ ಹೇಳುತ್ತಿದೆ. ಶ್ರುತಿಯು ಹೇಳುವ ಸ್ವಾಪ್ನಸೃಷ್ಟಿಯು ಗೌಣವು. ಸ್ವಪ್ನದ ಸೃಷ್ಟಿಯು ಜೀವನ ವಿಷಯವೇ, ಈಶ್ವರನಿರ್ಮಿತವೆಂಬಲ್ಲ. ಈಶ್ವರನ ವ್ಯವ ಹಾರವೇನೋ ಅಲ್ಲಿಯೂ ಇದ್ದೇ ಇರುತ್ತದೆ. ಸ್ವಪ್ನವು ಆಕಾಶಾದಿಗಳಂತೆ ಸತ್ಯವಲ್ಲವಾದರೂ ಮುಂದಾಗುವ ಒಳ್ಳೆಯ, ಕೆಟ್ಟ ಫಲಗಳ ಸೂಚಕವಾಗಿರ ಬಹುದು. ಬ್ರಹ್ಮಾತ್ಮತ್ವದರ್ಶನವಾಗುವವರೆಗೆ ಆಕಾಶಾದಿಗಳು ಇದ್ದಂತೆಯೇ ಇರುತ್ತವೆಯಾದ್ದರಿಂದ ಅವಕ್ಕೆ ಹೆಚ್ಚಿನ ಸತ್ಯತ್ವವಿದೆ. ಈಶ್ವರನಿಂದ ವಿಮುಖ ನಾಗಿರುವದರಿಂದ ಈಶ್ವರಾಭಿನ್ನನಾದ ಜೀವನಿಗೂ ಐಶ್ವರ್ಯವು ದೇಹಾಭಿ ಮಾನನಿಮಿತ್ತದಿಂದ ಮರೆಯಾಗಿರುತ್ತದೆ ; ಆದ್ದರಿಂದ ಅವನ ಸ್ವಪ್ನವು ಸತ್ಯವಾದ ಸಾಂಕಲ್ಪಿಕಸೃಷ್ಟಿ ಎನ್ನುವದಕ್ಕೆ ಬರುವದಿಲ್ಲ. ಸ್ವಪ್ನಜಾಗರಿತ ವಸ್ತುಗಳು ಸಮಾನವೆಂಬುದು ಜಾಗ್ರದ್ವಾಸನೆಯಿಂದ ಸ್ವಪ್ನವಾಗಿರುವದೆಂಬ ಕಾರಣದಿಂದ.

## ೨. ತದಭಾವಾಧಿಕರಣ

**ತದಭಾವೋ ನಾಡೀಷು ತಚ್ಛ್ರುತೇರಾತ್ಮನಿ ಚ ॥೭॥**
**ಅತಃ ಪ್ರಬೋಧೋಽಸ್ಮಾತ್ ॥೮॥**

**ಸಂಶಯ :** ಶ್ರುತಿಯಲ್ಲಿ ಸುಷುಪ್ತಿಸ್ಥಾನಗಳೆಂದು ಹೇಳಿರುವ ನಾಡಿಗಳು, ಪುರೀತತ್ತು, ಸದ್ಬ್ರಹ್ಮ- ಎಂಬ ಮೂರು ಪರಸ್ಪರನಿರಪೇಕ್ಷವಾದ ಸ್ಥಾನಗಳೊ, ಪರಸ್ಪರಾಪೇಕ್ಷೆಯಿಂದ ಒಂದೇ ಸ್ಥಾನವೊ ?

**ಪೂರ್ವಪಕ್ಷ :** ಇವುಗಳನ್ನು ಸಮಾನವಾಗಿಯೇ ಸುಷುಪ್ತಿಸ್ಥಾನಗಳೆಂದು ಸಪ್ತಮೀನಿರ್ದೇಶದಿಂದ ಹೇಳಿರುವದರಿಂದಲೂ ಸುಷುಪ್ತಿಯು ವಿಶೇಷವಿಜ್ಞಾನವಿಲ್ಲದ್ದೆಂಬ ಒಂದೇ ಸ್ವರೂಪವುಳ್ಳದ್ದಾದ್ದರಿಂದಲೂ ಇವು ಬೇರೆಬೇರೆಯಾಗಿಯೇ ಸುಷುಪ್ತಿಸ್ಥಾನಗಳು. ಆದ್ದರಿಂದ ಒಂದೊಂದುವೇಳೆ ಒಂದೊಂದು ಸ್ಥಾನದಲ್ಲಿ ಸುಷುಪ್ತಿಯಾಗುತ್ತದೆ.

ಸಿದ್ಧಾಂತ : ಎಲ್ಲವೂ ಸುಷುಪ್ತಿಸ್ಥಾನವೆಂದದ್ದರಿಂದ ವಿಕಲ್ಪವನ್ನು ಅನುಸರಿಸುವದು ಯುಕ್ತವಲ್ಲ. ಒಂದೇ ವಿಭಕ್ತಿಯಿದ್ದರೂ ನಾಡ್ಯಾದಿಗಳ ಸಮುಚ್ಚಯವಾಗಬಹುದು ; ಉಪ್ಪರಿಗೆಯಮೇಲೆ ಮಲಗಿದ್ದಾನೆ, ಮಂಚದ ಮೇಲೆ ಮಲಗಿದ್ದಾನೆ-ಮುಂತಾದ ಪ್ರಯೋಗಗಳಲ್ಲಿ ಹಾಗೆ ಕಂಡಿದೆ. ಶ್ರುತಿಯಲ್ಲಿ ಸಮುಚ್ಚಯವನ್ನು ಹೇಳಿಯೂ ಇದೆ. ನಾಡಿಗಳನ್ನು ಹೇಳಿರುವದು ಅವು ಬ್ರಹ್ಮಸಂಬದ್ಧವಾಗಿವೆಯೆಂದು ಹೊಗಳುವದಕ್ಕೆ ; ಪುರೀತತ್ತನ್ನು ಹೇಳಿರುವದೂ ಬ್ರಹ್ಮಸಂಬಂಧಕ್ಕಾಗಿಯೇ. ಹೀಗೆ ಮೂರೂ ಸುಷುಪ್ತಿಸ್ಥಾನಗಳಾದರೂ ನಾಡೀಪುರೀತತ್ತುಗಳು ದ್ವಾರಮಾತ್ರವಾಗಿವೆ ; ಬ್ರಹ್ಮವೊಂದೇ ಸುಷುಪ್ತಿಸ್ಥಾನವು. ಸುಷುಪ್ತಿಯಲ್ಲಿ ಯಾವ ಉಪಾಧಿಯೂ ಜೀವನಿಗಿರುವದಿಲ್ಲವಾದ್ದರಿಂದಲೂ ಉಪಾಧಿಯಿಲ್ಲದೆ ಬ್ರಹ್ಮಭಿನ್ನನಾದ ಜೀವದಿಗೆ ಆಧಾರವೆಂಬುದು ಹೊಂದುವದಿಲ್ಲವಾದರಿಂದಲೂ ಬ್ರಹ್ಮವು ಆಧಾರವೆಂದು ಹೇಳಿರುವದೂ ಬ್ರಹ್ಮತಾದಾತ್ಮ್ಯವನ್ನು ಹೊಂದಿ ಬ್ರಹ್ಮಸ್ವರೂಪದಿಂದಲೇ ಇರುವನೆಂಬ ಅಭಿಪ್ರಾಯದಿಂದ ಹೇಳಿರುವದರಿಂದಲೂ ಬ್ರಹ್ಮವೇ ಸುಷುಪ್ತಿಸ್ಥಾನವು. ಸುಷುಪ್ತಿಯಲ್ಲಿ ವಿಶೇಷವಿಜ್ಞಾನವಿಲ್ಲದಿರುವದಕ್ಕೆ ಏಕತ್ವವೇ ಕಾರಣ. ನಾಡ್ಯಾದಿಗಳು ಸುಪ್ತಿಸ್ಥಾನವೆಂಬುದು ವಿವಕ್ಷಿತವೂ ಅಲ್ಲ; ಏಕೆಂದರೆ ಅದನ್ನು ತಿಳಿದರೆ ಯಾವ ಫಲವೂ ಇಲ್ಲ. ಬ್ರಹ್ಮವೇ ಸುಪ್ತಿಸ್ಥಾನವೆಂದು ತಿಳಿದರೆ ಜೀವನಿಗೆ ಸ್ವಪ್ನಜಾಗರಿತವ್ಯವಹಾರವು ನಿಜವಾಗಿ ಇಲ್ಲವೆಂದೂ ಅವನು ಬ್ರಹ್ಮಸ್ವರೂಪನೇ ಎಂದೂ ತಿಳಿಯುವ ಉತ್ತಮಫಲವಿದೆ. ಆದ್ದರಿಂದ ಬ್ರಹ್ಮವೇ ಸುಷುಪ್ತಿಸ್ಥಾನವು ; ಆದ್ದರಿಂದಲೇ ಸುಷುಪ್ತಿಯಿಂದ ಎಚ್ಚರುವಾಗ ಬ್ರಹ್ಮದಿಂದಲೇ ಜೀವರು ಹೊರಕ್ಕೆ ಬರುತ್ತಾರೆಂದು ಹೇಳಿರುತ್ತದೆ.

## ೩. ಕರ್ಮಾನುಸ್ಮೃತಿಶಬ್ದವಿಧ್ಯಧಿಕರಣ

### ಸ ಏವ ತು ಕರ್ಮಾನುಸ್ಮೃತಿಶಬ್ದವಿಧಿಭ್ಯಃ ||೯||

**ಸಂಶಯ :** ಸುಷುಪ್ತಿಯಲ್ಲಿ ಸತ್ತಿನಲ್ಲಿ ಸೇರಿದ ಜೀವನೇ ಎಚ್ಚರದಲ್ಲಿ ಆ ಸದ್ಬ್ರಹ್ಮದಿಂದ ಏಳುತ್ತಾನೊ, ಅಥವಾ ಮತ್ತೊಬ್ಬ ಜೀವನೊ ?

**ಪೂರ್ವಪಕ್ಷ :** ಜಲರಾಶಿಯಲ್ಲಿ ಸೇರಿಕೊಂಡ ನೀರಿನ ತೊಟ್ಟೇ ಮತ್ತೆ ಏಳುತ್ತದೆ ಎಂದು ಹೇಳುವದಕ್ಕಾಗದಿರುವಂತೆ ಪರಮಾತ್ಮನೊಡನೆ ಏಕತ್ವವನ್ನು ಹೊಂದಿದ ಅದೇ ಜೀವನೇ ಎಚ್ಚರುತ್ತಾನೆಂದು ಹೇಳುವದಕ್ಕೆ ಬರುವದಿಲ್ಲ.

**ಸಿದ್ಧಾಂತ :** ಅದೇ ಜೀವನೇ ಎಚ್ಚರುತ್ತಾನೆ. ಏಕೆಂದರೆ (೧) ಕರ್ಮದಲ್ಲಿ ಉಳಿದದ್ದನ್ನು ಜೀವನು ಎಚ್ಚತ್ತ ಬಳಿಕ ಮಾಡುವದು ಕಂಡುಬರುತ್ತದೆ. (೨) ಹಿಂದಿನ ದಿನ ಅನುಭವಿಸಿದ್ದನ್ನು ಜೀವನು ನೆನಪಿಗೆ ತಂದುಕೊಳ್ಳುತ್ತಾನೆ. (೩) ಸ್ವಾಪಪ್ರಬೋಧಪ್ರಕರಣದಲ್ಲಿರುವ ಶ್ರುತಿವಾಕ್ಯಗಳು ಅದೇ ಜೀವನು ಎಚ್ಚರುತ್ತಾನೆಂಬುವಕ್ಕೆ ಬೆಂಬಲವನ್ನು ಕೊಡುತ್ತವೆ; (೪) ಕರ್ಮೋಪಾಸನಾವಿಧಿಗಳು ಸಾರ್ಥಕವಾಗಬೇಕಾದರೆ ನಿದ್ರಿಸಿದವನೇ ಮತ್ತೆ ಎಚ್ಚರುತ್ತಾನೆಂದು ಒಪ್ಪಬೇಕು. ಇಲ್ಲದಿದ್ದರೆ ನಿದ್ರಿಸಿದ ಮಾತ್ರದಿಂದ ಮುಕ್ತಿಯಾಗುವದೆಂದು ಹೇಳಿದಂತಾಗುವದು. ನೀರಿನಲ್ಲಿ ಸೇರಿಕೊಂಡ ನೀರಿನ ತೊಟ್ಟನ್ನು ವಿಂಗಡಿಸುವದಕ್ಕೆ ಸಾಧನವಿಲ್ಲದ್ದರಿಂದ ಅದೇ ತೊಟ್ಟನ್ನು ಎತ್ತಿ ತೆಗೆದುಕೊಳ್ಳುವದಕ್ಕೆ ಆಗದೆ ಇರಬಹುದು ; ಆದರೆ ಇಲ್ಲಿ ಕರ್ಮ, ಅವಿದ್ಯೆ– ಎಂಬ ವಿವೇಕಕಾರಣವಿರುವದರಿಂದ ಹಾಗಲ್ಲ. ಇದಲ್ಲದೆ ಸದ್ಬ್ರಹ್ಮವೇ ಉಪಾಧಿಯಿಂದ ಜೀವನೆನಿಸಿರುತ್ತದೆಯಾದ್ದರಿಂದ ಅದೇ ಉಪಾಧಿಯಿರುವವರೆಗೆ ಅದೇ ಜೀವನೆಂದು ವ್ಯವಹರಿಸುವದು ಯುಕ್ತವು.

## ೪. ಮುಗ್ಧೇಽರ್ಧಸಂಪತ್ತ್ಯಧಿಕರಣ

### ಮುಗ್ಧೇಽರ್ಧಸಂಪತ್ತಿಃ ಪರಿಶೇಷಾತ್ ||೧೦||

**ಸಂಶಯ :** ಮೂರ್ಛೆಯೆಂಬುದು ಜಾಗ್ರತ್ಸ್ವಪ್ನಸುಷುಪ್ತಿಮರಣಗಳೆಂಬ ಅವಸ್ಥೆಗಳಲ್ಲಿ ಒಂದೊ, ಬೇರೆಯೊ ?

**ಪೂರ್ವಪಕ್ಷ :** ಶ್ರುತಿಸ್ಮೃತಿಗಳಲ್ಲಿ ಇವಕ್ಕಿಂತ ಬೇರೆ ಯಾವ ಅವಸ್ಥೆಯನ್ನೂ ಹೇಳಿಲ್ಲ ; ಆದ್ದರಿಂದ ಇವುಗಳಲ್ಲಿಯೇ ಅದೂ ಒಂದು.

ಸಿದ್ಧಾಂತ : ಇಂದ್ರಿಯವ್ಯಾಪಾರವಿಲ್ಲದ್ದರಿಂದ ಇದು ಎಚ್ಚರವಲ್ಲ ; ಉಸಿರಾಡುವದೂ ಬಿಸಿಯೂ ಇರುವದರಿಂದಲೂ ಮತ್ತೆ ಎಚ್ಚರುವದರಿಂದಲೂ ಸಾವಲ್ಲ. ಬಹುಕಾಲ ಉಸಿರಾಡದೆ ನಡುಗುತ್ತಿರುವದರಿಂದಲೂ ಕಣ್ಣುಗಳನ್ನು ತೆರೆದುಕೊಂಡಿರುವದರಿಂದಲೂ ನಿದ್ರೆಯೂ ಅಲ್ಲ ಆದ್ದರಿಂದ ಇದು ಅರ್ಧಸಂಪತ್ತಿಯು, ಎಂದರೆ ಅರ್ಧಸುಷುಪ್ತಿಯಂತೆ ಇರುವ ಒಂದು ಅವಸ್ಥೆಯು. ಸುಷುಪ್ತಿಯಂತೆಯೇ ಸುಖಿತ್ವದುಃಖಿತ್ವಪ್ರತ್ಯಯಗಳು ಇಲ್ಲದ್ದರಿಂದ ಇಲ್ಲಿಯೂ ಪೂರ್ಣವಾಗಿಯೇ ಸತ್ಸಂಪತ್ತಿಯಾಗುವದಾದರೂ ಸುಷುಪ್ತಿಗಿಂತ ವಿಲಕ್ಷಣವಾಗಿರುವದರಿಂದ ಇದು ಬೇರೆಯ ಅವಸ್ಥೆಯೇ.

## ೫. ಉಭಯಲಿಂಗಾಧಿಕರಣ

ನ ಸ್ಥಾನತೋಽಪಿ ಪರಸ್ಯೋಭಯಲಿಂಗಂ ಸರ್ವತ್ರ ಹಿ ॥೧೧॥ ನ ಭೇದಾದಿತಿ ಚೇನ್ನ ಪ್ರತ್ಯೇಕಮತದ್ವಚನಾತ್ ॥೧೨॥ ಅಪಿ ಚೈವಮೇಕೇ ॥೧೩॥ ಅರೂಪವದೇವ ಹಿ ತತ್ಪ್ರಧಾನತ್ವಾತ್ ॥೧೪॥ ಪ್ರಕಾಶವಚ್ಚಾವೈಯರ್ಥ್ಯಾತ್ ॥೧೫॥ ಆಹ ಚ ತನ್ಮಾತ್ರಮ್ ॥೧೬॥ ದರ್ಶಯತಿ ಚಾಥೋ ಅಪಿ ಸ್ಮರ್ಯತೇ ।೧೭। ಅತ ಏವ ಚೋಪಮಾ ಸೂರ್ಯಕಾದಿವತ್ ।೧೮। ಅಂಬುವದಗ್ರಹಣಾತ್ತು ನ ತಥಾತ್ವಮ್ ।೧೯। ವೃದ್ಧಿಹ್ರಾಸಭಾಕ್ತ್ವಮಂತರ್ಭಾವಾದುಭಯಸಾಮಂಜಸ್ಯಾದೇವಮ್ ।೨೦। ದರ್ಶನಾಚ್ಚ ।೨೧।

**ಸಂಶಯ :** ಬ್ರಹ್ಮವಿಷಯದ ಶ್ರುತಿಗಳು ಬ್ರಹ್ಮವು ಸವಿಶೇಷವೆಂದೂ ನಿರ್ವಿಶೇಷವೆಂದೂ ಹೇಳುತ್ತಿರುವವು. ನಿಜವಾಗಿ ಬ್ರಹ್ಮಸ್ವರೂಪವು ಯಾವದೆಂದು ತಿಳಿಯಬೇಕು ?

**ಪೂರ್ವಪಕ್ಷ :** ಶ್ರುತಿಯು ಎರಡು ವಿಧವಾಗಿ ಬಣ್ಣಿಸಿರುವದರಿಂದ ಬ್ರ ಎರಡು ರೂಪವಾಗಿಯೂ ಇದೆಯೆಂದು ತಿಳಿಯಬೇಕು.

ಸಿದ್ಧಾಂತ : ಬ್ರಹ್ಮಕ್ಕೆ ಸ್ವತಃ ಎರಡು ರೂಪಗಳು ಇರುವಂತಿಲ್ಲ ; ಏಕೆಂದರೆ ಒಂದೇ ವಸ್ತುವಿಗೆ ವಿರುದ್ಧವಾದ ಸವಿಶೇಷತ್ವ, ನಿರ್ವಿಶೇಷತ್ವ-

ಎರಡೂ ಇವೆ ಎನ್ನುವದಕ್ಕಾಗುವದಿಲ್ಲ. ಪೃಥಿವಿಯೇ ಮುಂತಾದ ಉಪಾಧಿಯ ಸಂಬಂಧದಿಂದಲೂ ಬ್ರಹ್ಮಕ್ಕೆ ಸವಿಶೇಷತ್ವವುಂಟಾಗಲಾರದು ; ಏಕೆಂದರೆ ಸ್ವತಃ ನಿರ್ವಿಶೇಷವಾಗಿರುವ ವಸ್ತುವು ಉಪಾಧಿಯಿಂದ ಮತ್ತೊಂದು ರೂಪವನ್ನು ಪಡೆಯಲಾರದು. ಉಪಾಧಿಗಳು ಅವಿದ್ಯಾಕೃತವಾಗಿರುವದರಿಂದಲೂ ಬ್ರಹ್ಮವು ಸವಿಶೇಷವಾಗಲಾರದು. ಬ್ರಹ್ಮಸ್ವರೂಪವನ್ನು ಹೇಳುವ ಕಡೆಯಲ್ಲೆಲ್ಲ ಅದನ್ನು ನಿರ್ವಿಶೇಷವೆಂದೇ ಶ್ರುತಿಗಳು ವರ್ಣಿಸುವದರಿಂದ ಹಾಗೆಂದೇ ತಿಳಿಯುವದು ಯುಕ್ತ. ಬ್ರಹ್ಮಕ್ಕೆ ಬೇರೆಬೇರೆಯ ಆಕಾರಗಳನ್ನು ಶ್ರುತಿಯಲ್ಲಿ ಹೇಳಿರುವದು ನಿಜ ; ಆದರೆ ಉಪಾಧಿಭೇದದಿಂದ ಹಾಗೆ ಭಿನ್ನವಾಗಿದೆಯೆಂದೂ ನಿಜವಾಗಿ ಎಲ್ಲೆಲ್ಲಿಯೂ ಬ್ರಹ್ಮವು ಒಂದೇ ಎಂದೂ ಶ್ರುತಿಯು ಉಪದೇಶಿಸುತ್ತದೆ. ಭೇದವನ್ನು ನಿಂದಿಸಿ ಭೋಗ್ಯಭೋಕ್ತೃನಿಯಂತೃನಿಯಂತವ್ಯರೂಪವಾದ ಪ್ರಪಂಚವೆಲ್ಲವೂ ಒಂದೇ ಎಂದು ಅಲ್ಲಿ ಉಪದೇಶಿಸಿರುತ್ತದೆ. ಆದ್ದರಿಂದ ತಾತ್ಪರ್ಯದಿಂದ ಶ್ರುತಿಯು ಬ್ರಹ್ಮವನ್ನು ನಿರ್ವಿಶೇಷವೆಂದೇ ಹೇಳುವದರಿಂದ ಹಾಗೆಂದೇ ತಿಳಿಯಬೇಕು.

ಆಕಾರವನ್ನು ಹೇಳುವ ಶ್ರುತಿಗಳಿಗೆ ಗತಿಯೇನೆಂದರೆ : ಅವು ಉಪಾಸನಾರ್ಥವಾಗಿ ಹೇಳಿದವುಗಳಾಗಿವೆ. ಬ್ರಹ್ಮವನ್ನು ಪರಪ್ರತಿಷೇಧದಿಂದಲೇ ತಿಳಿಸಿರುವದರಿಂದಲೂ ಸೂರ್ಯಾದಿಪ್ರತಿಬಿಂಬಗಳಂತೆ ಭೇದವೆಂದು ಹೇಳಿರುವದರಿಂದಲೂ ಬ್ರಹ್ಮವೇ ದೇಹಾದಿಗಳಲ್ಲಿ ಪ್ರವಿಷ್ಟವಾಗಿರುವದೆಂದು ಹೇಳಿರುವದರಿಂದಲೂ ಬ್ರಹ್ಮವು ನಿರ್ವಿಶೇಷವೇ. ಉಪಾಸನೆಗಾಗಿ ಮಾತ್ರವೇ ಉಪಾಧಿನಿಮಿತ್ತವಾದ ವಿಶೇಷವನ್ನು ಹೇಳಿದೆ ಎಂಬುದೇ ಸಿದ್ಧಾಂತ.

## ೬. ಪ್ರಕೃತೈತಾವತ್ತ್ವಾಧಿಕರಣ

**ಪ್ರಕೃತೈತಾವತ್ತ್ವಂ ಹಿ ಪ್ರತಿಷೇಧತಿ ತತೋ ಬ್ರವೀತಿ ಚ ಭೂಯಃ ॥ ೨೨ ॥ ತದವ್ಯಕ್ತಮಾಹ ಹಿ ॥ ೨೩ ॥ ಅಪಿ ಚ ಸಂರಾಧನೇ ಪ್ರತ್ಯಕ್ಷಾನುಮಾನಾಭ್ಯಾಮ್॥೨೪॥ ಪ್ರಕಾಶಾದಿವಚ್ಚಾವೈಶೇಷ್ಯಂ ಪ್ರಕಾಶಶ್ಚ ಕರ್ಮಣ್ಯಭ್ಯಾಸಾತ್ ॥೨೫॥ ಅತೋಽನನ್ತೇನ ತಥಾ ಹಿ ಲಿಂಗಮ್ ॥ ೨೬ ॥ ಉಭಯವ್ಯಪದೇಶಾತ್ತ್ವಹಿಕುಂಡಲವತ್ ॥ ೨೭ ॥ ಪ್ರಕಾಶಾಶ್ರಯವದ್ವಾ ತೇಜಸ್ತ್ವಾತ್ ॥ ೨೮ ॥ ಪೂರ್ವವದ್ವಾ ೨೯ ಪ್ರತಿಷೇಧಾಚ್ಚ ॥ ೩೦**

**ಸಂಶಯ :** "ದ್ವೇ ವಾವ ಬ್ರಹ್ಮಣೋ ರೂಪೇ" (ಬೃ. ೨-೩-೧) ಎಂದು ಉಪಕ್ರಮವಾಗಿ "ಅಥಾತ ಆದೇಶೋ ನೇತಿ ನೇತಿ" (ಇನ್ನು ಆದ್ದರಿಂದ ಉಪದೇಶವು, ಹೀಗಲ್ಲ, ಹೀಗಲ್ಲ) ಎಂಬ ವಾಕ್ಯವು ಬಂದಿದೆ. ಇಲ್ಲಿ ಮೂರ್ತಾಮೂರ್ತಗಳೆಂಬ ರೂಪಗಳೆರಡನ್ನೂ ಅಲ್ಲಗಳೆದು ರೂಪಿಯಾದ ಬ್ರಹ್ಮವನ್ನುಳಿಸಿದೆಯೊ, ರೂಪರೂಪಿಗಳೆರಡನ್ನೂ ಅಲ್ಲಗಳೆದಿದೆಯೊ ?

**ಪೂರ್ವಪಕ್ಷ :** ನೇತಿ ನೇತಿ- ಎಂದು ಎರಡು ಸಲ ಪ್ರತಿಷೇಧಮಾಡಿರುವದರಿಂದ ಬ್ರಹ್ಮವನ್ನೂ ರೂಪಾದಿಗಳನ್ನೂ ಅಲ್ಲಗಳೆದಿದೆಯೆಂದೇ ತಿಳಿಯಬೇಕು. ಅಥವಾ ರೂಪವುಳ್ಳ ಬ್ರಹ್ಮವನ್ನೇ ಪ್ರತಿಷೇಧಿಸಿದೆ, ಎಂದಾದರೂ ಆಗಬಹುದು. ಏಕೆಂದರೆ ಅದು ವಾಕ್ಕು ಮನಸ್ಸುಗಳಿಗೆ ಗೋಚರವಲ್ಲ. ಆದ್ದರಿಂದ ಬ್ರಹ್ಮವೇ ಇಲ್ಲವೆಂದಾಗಲಿ ! ರೂಪಪ್ರಪಂಚವು ಮಾತ್ರ ಪ್ರತ್ಯಕ್ಷಾದಿ ಪ್ರಮಾಣಗೋಚರವಾಗಿರುವದರಿಂದ ಪ್ರತಿಷೇಧಮಾಡಲು ತಕ್ಕದ್ದಲ್ಲ.

**ಸಿದ್ಧಾಂತ :** ಎರಡನ್ನೂ ಅಲ್ಲಗಳೆದಿದೆ ಎನ್ನುವದು ಯುಕ್ತವಲ್ಲ. ಏಕೆಂದರೆ ಆಗ ಶೂನ್ಯವಾದವು ಪ್ರಸಕ್ತವಾಗುವದು ; ಯಾವದೊಂದನ್ನೂ ಉಳಿಸದೆ ಇದ್ದರೆ ಪ್ರತಿಷೇಧವೇ ಆಗುವಹಾಗಿಲ್ಲ. ಬ್ರಹ್ಮವನ್ನು ಪ್ರತಿಷೇಧ ಮಾಡುವಹಾಗಿಲ್ಲ ; ಏಕೆಂದರೆ "ಬ್ರಹ್ಮವು ಇದೆ ಎಂದೇ ತಿಳಿಯಬೇಕು, ಇಲ್ಲವೆಂದರೆ ತಾನೇ ಇಲ್ಲವಾಗುತ್ತಾನೆ"- ಎಂದು ಶ್ರುತಿಯು ಹೇಳುತ್ತದೆ. ಬ್ರಹ್ಮವು ವಾಙ್ಮನಸಾತೀತವಾಗಿದೆ ಎಂದಿರುವದು ಬ್ರಹ್ಮವು ಇಲ್ಲವೇ ಇಲ್ಲವೆನ್ನುವದಕ್ಕಲ್ಲ; ಬ್ರಹ್ಮವು ವಾಙ್ಮನಸ್ಸುಗಳಿಗೆ ಅಗೋಚರವಾದ ಆತ್ಮನೇ ಎನ್ನುವದಕ್ಕೆ. ಆದ್ದರಿಂದ ಪ್ರಕೃತವಾಗಿರುವ ಪ್ರಪಂಚವಿಷಯವಾದ ಬ್ರಹ್ಮದ ರೂಪವನ್ನು ಅಲ್ಲಗಳೆದು ಬ್ರಹ್ಮವನ್ನು ಉಳಿಸಿಕೊಂಡಿದೆ ; ಅಥವಾ ಮೊದಲನೆಯ ನಞ್ಶಬ್ದವು ಮೂರ್ತಾಮೂರ್ತರಾಶಿಗಳನ್ನೂ ಎರಡನೆಯದು ವಾಸನಾಪ್ರಪಂಚವನ್ನೂ ಅಲ್ಲಗಳೆಯುತ್ತದೆ. ಅಥವಾ ಯಾವಯಾವದನ್ನು ಉತ್ಪ್ರೇಕ್ಷಿಸಬಹುದೋ ಅದೆಲ್ಲವನ್ನೂ ನೇತಿ ನೇತಿ ಎಂದು ಅಲ್ಲಗಳೆದು ಬ್ರಹ್ಮವನ್ನು ಉಳಿಸಿಕೊಂಡಿದೆ. ಆದ್ದರಿಂದಲೇ ಇದಕ್ಕಿಂತ ಬೇರೊಂದು ಹೆಚ್ಚಿನದಲ್ಲ- ಎಂದು ಶ್ರುತಿಯಲ್ಲಿ ಮತ್ತೊಮ್ಮೆ ಹೇಳಿದೆ. ಬ್ರಹ್ಮವನ್ನು 'ಸತ್ಯಸ್ಯ ಸತ್ಯಮ್' ಎಂದೂ ವರ್ಣಿಸಿದೆ.

ಬ್ರಹ್ಮವು ಅವ್ಯಕ್ತವಾಗಿರುವದರಿಂದ ಅದು ಗ್ರಹಿಸುವದಕ್ಕೆ ಆಗುವದಿಲ್ಲ. ಆದರೂ ಧ್ಯಾನಕಾಲದಲ್ಲಿ ಯೋಗಿಗಳು ಅದನ್ನು ಕಾಣುತ್ತಾರೆ. ಅವಿದ್ಯಾಕೃತ

ವಾದ ಉಪಾಧಿಯಿಂದ ಈ ಧ್ಯಾತೃಧ್ಯೇಯವಿಭಾಗವಾಗಿರುತ್ತದೆ; ಆದ್ದರಿಂದಲೇ ಅವಿದ್ಯೆಯನ್ನು ವಿದ್ಯೆಯಿಂದ ಕಳೆದುಕೊಂಡು ನಿರ್ವಿಶೇಷವಾದ ಈ ಬ್ರಹ್ಮವನ್ನು ಸೇರಿ ಒಂದಾಗಬಹುದಾಗಿದೆ. ಇದರಲ್ಲಿ ಅಹಿಕುಂಡಲನ್ಯಾಯದಿಂದಲೂ ಪ್ರಕಾಶಾಶ್ರಯನ್ಯಾಯದಿಂದಲೂ ಭೇದಾಭೇದವನ್ನು ಕೆಲವರು ಹೇಳುವದು ಶ್ರುತಿಯುಕ್ತಿಗಳಿಗೆ ವಿರುದ್ಧವಾಗಿದೆ. ಆದ್ದರಿಂದ ನಿರ್ವಿಶೇಷವಾದ ಬ್ರಹ್ಮವೊಂದನ್ನು ಬಿಟ್ಟು ಮಿಕ್ಕದ್ದೆಲ್ಲವನ್ನೂ ಇಲ್ಲಿ ನಿರಾಕರಿಸಿದೆ– ಎಂಬುದೇ ಸಿದ್ಧಾಂತ.

## ೭. ಪರಾಧಿಕರಣ

ಪರಮತಃ ಸೇತೂನ್ಮಾನಸಂಬಂಧಭೇದವ್ಯಪದೇಶೇಭ್ಯಃ ।೩೧। ಸಾಮಾನ್ಯಾತ್ತು ।೩೨। ಬುದ್ಧ್ಯರ್ಥಃ ಪಾದವತ್ ।೩೩। ಸ್ಥಾನವಿಶೇಷಾತ್ ಪ್ರಕಾಶಾದಿವತ್ ।೩೪। ಉಪಪತ್ತೇಶ್ಚ ।೩೫। ತಥಾನ್ಯಪ್ರತಿಷೇಧಾತ್ ।೩೬। ಅನೇನ ಸರ್ವಗತತ್ವಮಾಯಾಮಶಬ್ದಾದಿಭ್ಯಃ ।೩೭।

ಸಂಶಯ : ಬ್ರಹ್ಮಕ್ಕಿಂತ ಹೆಚ್ಚಿನ ತತ್ತ್ವವು ಇದೆಯೊ ? ಏಕೆಂದರೆ ಕೆಲವು ಶ್ರುತಿಗಳು ಮೇಲುನೋಟಕ್ಕೆ ಬ್ರಹ್ಮಕ್ಕಿಂತಲೂ ಹೆಚ್ಚಿನ ತತ್ತ್ವವಿದೆಯೆಂಬುದನ್ನು ತಿಳಿಸುವಂತೆ ತೋರುತ್ತದೆ. ಆದ್ದರಿಂದ ಬ್ರಹ್ಮಕ್ಕಿಂತ ಮೀರಿದ ತತ್ತ್ವವು ಉಂಟೊ ?

ಪೂರ್ವಪಕ್ಷ : ಬ್ರಹ್ಮಕ್ಕಿಂತ ಹೆಚ್ಚಿನದಿರಬೇಕು. ಏಕೆಂದರೆ ಬ್ರಹ್ಮವನ್ನು ಸೇತುವೆಂದು ಶ್ರುತಿಯಲ್ಲಿ ಕರೆದಿದೆ. ಮತ್ತು ಅದಕ್ಕೆ ಅಳತೆಯನ್ನು ಹೇಳಿದೆ. ಮತ್ತೊಂದರೊಡನೆ ಸಂಬಂಧವನ್ನು ಹೇಳಿರುವದರಿಂದ ಭೇದವೂ ಇದೆಯೆಂತ ಗೊತ್ತಾಗುತ್ತದೆ. ಲೋಕದಲ್ಲಿ ಸೇತುವೆಂಬುದು ದಾಟುವ ಸಾಧನವೆಂತ ಕಂಡುಬರುತ್ತದೆ. ಅದನ್ನು ದಾಟಿ ಬಯಲನ್ನು ಸೇರುವಂತೆ ಬ್ರಹ್ಮವನ್ನು ದಾಟಿ ಬೇರೊಂದನ್ನು ಪಡೆಯುತ್ತಾರೆಂತ ಕಲ್ಪಿಸಬಹುದಾಗಿದೆ. ಅಳತೆಯಿಂದ ಕೂಡಿರುವ ವಸ್ತುವು ಮತ್ತೊಂದಕ್ಕಿಂತ ಬೇರೆಯೇ ಆಗಿರುತ್ತದೆ. ಹಾಗೆಯೇ ಬ್ರಹ್ಮವೂ ತನಗಿಂತ ಬೇರೊಂದು ವಸ್ತುವನ್ನು ಹೊಂದಿರಬಹುದು. ಮನುಷ್ಯನಿಗೆ ನಗರದೊಡನೆ ಸಂಬಂಧವಾಗುವಂತೆ ಬ್ರಹ್ಮದೊಡನೆ ಸಂಬಂಧವನ್ನು ಜೀವನಿಗೆ ಸುಷುಪ್ತಿಯಲ್ಲಿ ಹೇಳಿರುವದೂ ಬ್ರಹ್ಮಕ್ಕಿಂತ ಬೇರೆಯಾದ

ದ್ದಿದೆ-ಎಂದು ಕಲ್ಪಿಸುವದಕ್ಕೆ ಅವಕಾಶವನ್ನೀಯುತ್ತದೆ. ಭೇದವ್ಯಪದೇಶವೂ ಹೀಗೆಯೇ ಬ್ರಹ್ಮಕ್ಕಿಂತ ಹೆಚ್ಚಿನದುಂಟೆಂದು ತಿಳಿಸುತ್ತದೆ.

ಸಿದ್ಧಾಂತ : ಇದು ಸರಿಯಲ್ಲ. ಬ್ರಹ್ಮಕ್ಕಿಂತ ಬೇರೆಯಾದ ವಸ್ತುವು ಇರುವದಿಲ್ಲ. ಸೇತುವ್ಯಪದೇಶವು ದೃಷ್ಟಾಂತಕ್ಕಾಗಿ ಹೇಳಿದ್ದಾಗಿದೆ. ತರಣ ವೆಂದರೆ ಪ್ರಾಪ್ತಿ ಎಂಬರ್ಥವೂ ಇದೆ. ವ್ಯಾಕರಣವನ್ನು ತರಣಮಾಡಿದ್ದಾನೆ-ಎಂದಂತೆ ತಿಳಿಯಬೇಕು. ಇನ್ನು ಬ್ರಹ್ಮಕ್ಕೆ ಪರಿಚ್ಛೇದವನ್ನು ಹೇಳಿರುವದೂ ಉಪಾಸನೆಗಾಗಿಯೇ. ಪಾದವೆಂದರೆ ನಾಲ್ಕನೆಯ ಒಂದು ಭಾಗವೆಂತೆ ವ್ಯವ ಹಾರಕ್ಕಾಗಿ ಮಾತ್ರವೇ ಕಲ್ಪಿಸಿರುವಂತೆಯೇ ಇದು. ಸಂಬಂಧಭೇದಗಳ ವ್ಯಪ ದೇಶವೂ ಔಪಾಧಿಕವೇ. ಸೂರ್ಯಾದಿಗಳ ಬೆಳಕಿಗೆ ಉಪಾಧಿಸಂಬಂಧದಿಂದ ವಿಶೇಷವುಂಟಾಗುವಂತೆ ಅಥವಾ ಸೂಜಿ, ದಬ್ಬಳ-ಮುಂತಾದವುಗಳ ಬುಡದಲ್ಲಿ ಕಂಡುಬರುವ ಆಕಾಶವು ಉಪಾಧಿಗಳ ಅಪೇಕ್ಷೆಯಿಂದ ಚಿಕ್ಕದು, ದೊಡ್ಡದು-ಆಗಿರುವಂತೆಯೇ ಬ್ರಹ್ಮವೂ ಉಪಾಧಿಗಳ ಸಂಬಂಧದಿಂದ ಹಾಗೆ ವ್ಯವಹರಿಸ ಲ್ಪಡಬಹುದಾಗಿದೆ. ಸುಷುಪ್ತಿಯಲ್ಲಿಯೂ ಜೀವನಿಗೆ ಸ್ವರೂಪಸಂಬಂಧವನ್ನೇ ಶ್ರುತಿಯು ತಿಳಿಸುತ್ತಿರುವದರಿಂದ ನರನಗರನ್ಯಾಯವು ಇಲ್ಲಿ ಪ್ರಾಪ್ತವಾಗ ಲಾರದು. ಬ್ರಹ್ಮವ್ಯತಿರಿಕ್ತವಾದ ವಸ್ತುವಿಲ್ಲವೆಂದು ಅನೇಕ ಶ್ರುತಿಗಳು ತಾತ್ಪರ್ಯದಿಂದ ತಿಳಿಸುತ್ತಿವೆ. ಹೀಗೆ ಬ್ರಹ್ಮವು ಸರ್ವಗತವೆಂದು ಒಪ್ಪಿದರೆ ಮಾತ್ರವೇ ಆಯಾಮಾದಿಶಬ್ದಗಳನ್ನು ಬ್ರಹ್ಮದಲ್ಲಿ ಹೊಂದಿಸಬಹುದಾಗಿದೆ. ಹೃದಯದೊಳಗಿನ ಆಕಾಶಕ್ಕೂ ಹೊರಗಿನ ಆಕಾಶಕ್ಕೂ ಸಾಮ್ಯವನ್ನು ಹೇಳಿ ಆಕಾಶಕ್ಕಿಂತಲೂ ದೊಡ್ಡವನೆಂದೂ ಹೇಳಿರುವದರಿಂದ ಬ್ರಹ್ಮಕ್ಕಿಂತ ಹೆಚ್ಚಿನದು ಮತ್ತೊಂದು ಇಲ್ಲವೆಂಬುದು ಸಿದ್ಧವಾಯಿತು.

## ೮. ಫಲಾಧಿಕರಣ

**ಫಲಮತ ಉಪಪತ್ತೇಃ ।೩೮। ಶ್ರುತತ್ವಾಚ್ಚ ।೩೯। ಧರ್ಮಂ ಜೈಮಿನಿರತ ಏವ ।೪೦। ಪೂರ್ವಂ ತು ಬಾದರಾಯಣೋ ಹೇತು ವ್ಯಪದೇಶಾತ್ ।೪೧।**

ಸಂಶಯ : ಇಷ್ಟಾನಿಷ್ಟಮಿಶ್ರರೂಪವಾದ ಕರ್ಮಫಲವು ಕರ್ಮ ದಿಂದಲೇ ಆಗುವದೊ, ಈಶ್ವರನಿಂದಾಗುವದೊ ?

ಪೂರ್ವಪಕ್ಷ : ಕರ್ಮವೇ ಫಲವನ್ನು ಕೊಡುತ್ತದೆ. ಏಕೆಂದರೆ ಹಾಗೆಂದು ಶ್ರುತಿಯಿದೆ, ಅದು ಯುಕ್ತಿಯುಕ್ತವೂ ಆಗಿರುತ್ತದೆ. ಯಜೇತ ಎಂಬ ವಿಧಿಶ್ರುತಿಗೆ ವಿಷಯವಾಗಿರುವದರಿಂದ ಯಾಗದಿಂದ ಸ್ವರ್ಗಫಲವಾಗುವ ದೆಂದು ಒಪ್ಪಬೇಕು ; ಹಾಗಿಲ್ಲದಿದ್ದರೆ ಯಾಗಕ್ಕೆ ಅಧಿಕಾರಿಗಳೇ ಇಲ್ಲವಾಗಿ ಅದು ವ್ಯರ್ಥವಾಗುತ್ತದೆ. ಕರ್ಮವು ಕೂಡಲೆ ನಾಶವಾಗುವದಾದರೂ ಕರ್ಮದ ಉತ್ತರಾವಸ್ಥೆಯಾದ ಅಥವಾ ಫಲಕ್ಕೆ ಪೂರ್ವಾವಸ್ಥೆಯಾದ ಅಪೂರ್ವವೆಂಬ ಒಂದಾನೊಂದು ಸೂಕ್ಷ್ಮತತ್ತ್ವವನ್ನು ಅದು ಉಂಟುಮಾಡಿಯೇ ನಾಶವಾಗು ತ್ತದೆ ಎಂದು ಕಲ್ಪಿಸುತ್ತೇವೆ. ಈಶ್ವರನು ವಿಚಿತ್ರಕಾರಣನಲ್ಲದಿರುವದರಿಂದ ವಿಚಿತ್ರಕಾರ್ಯವನ್ನುಂಟುಮಾಡಲಾರನು; ಮಾಡಿದರೂ ವೈಷಮ್ಯನೈರ್ಘೃಣ್ಯ ಗಳು ಈಶ್ವರನಿಗೆ ಪ್ರಸಕ್ತವಾಗುತ್ತವೆ : ಜೀವರು ಕರ್ಮವನ್ನು ಮಾಡಿದರೂ ಕರ್ಮವು ಫಲಹೇತುವಲ್ಲದ್ದರಿಂದ ಕರ್ಮಾನುಷ್ಠಾನವು ವ್ಯರ್ಥವೆಂದಾಗುವದು. ಆದ್ದರಿಂದ ಕರ್ಮವೇ ಫಲಕ್ಕೆ ಹೇತು.

ಸಿದ್ಧಾಂತ : ಈಶ್ವರನೇ ಕಾರಣ. ಕರ್ಮವು ವಿನಾಶಿಯಾಗಿರುವದ ರಿಂದಲೂ ಅಪೂರ್ವಕ್ಕೆ ಪ್ರಮಾಣವಿಲ್ಲದ್ದರಿಂದಲೂ ಕರ್ಮಕಾರಣತ್ವವಾದವು ಸರಿಯಲ್ಲ ; ಈಶ್ವರನು ಫಲವನ್ನು ಕೊಡುತ್ತಾನೆಂಬ ಶ್ರುತಿಯೂ ಇದೆ. ಈಶ್ವರನು ಕರ್ಮಾಪೇಕ್ಷನಾಗಿಯೇ ಫಲವನ್ನು ಕೊಡುತ್ತಾನೆಂದು ಒಪ್ಪು ವದರಿಂದ ಅನುಷ್ಠಾನವು ವ್ಯರ್ಥವಲ್ಲ. ಶ್ರುತಿಯಲ್ಲಿ ಕರ್ಮಹೇತುತ್ವವೂ ಫಲಹೇತುತ್ವವೂ ಉಕ್ತವಾಗಿದೆ. ಕರ್ಮಾನುರೂಪವಾಗಿ ಫಲವನ್ನು ಅವನೇ ಸೃಜಿಸುತ್ತಾನಾದ್ದರಿಂದಲೂ ಅವನೇ ಫಲಹೇತು. ಜೀವಕೃತಪ್ರಯತ್ನಾ ಪೇಕ್ಷನಾಗಿರುವದರಿಂದ ಈಶ್ವರಕಾರಣವಾದದಲ್ಲಿ ಪೂರ್ವಪಕ್ಷಿಯು ಶಂಕಿಸಿದ ದೋಷಗಳು ಯಾವವೂ ಉಂಟಾಗುವದಿಲ್ಲ.

## ಮೂರನೆಯ ಪಾದ

ಈ ಪಾದದಲ್ಲಿ ಮುಖ್ಯವಾಗಿ ಸಗುಣಬ್ರಹ್ಮವಿಷಯವಾದ ಮತ್ತು ಪ್ರಾಣಾದಿವಿಷಯವಾದ ವಿದ್ಯೆಗಳ ಭೇದಾಭೇದದ ವಿಚಾರವನ್ನು ಮಾಡ ಲಾಗಿದೆ.

## ೧. ಸರ್ವವೇದಾಂತಪ್ರತ್ಯಯಾಧಿಕರಣ

**ಸರ್ವವೇದಾಂತಪ್ರತ್ಯಯಂ ಚೋದನಾದ್ಯವಿಶೇಷಾತ್ ॥ ೧ ॥ ಭೇದಾನ್ನೇತಿ ಚೇನ್ನೈಕಸ್ಯಾಮಪಿ ॥ ೨ ॥ ಸ್ವಾಧ್ಯಾಯಸ್ಯ ತಥಾತ್ವೇನ ಹಿ ಸಮಾಚಾರೇಽಧಿಕಾರಾಚ್ಚ ಸವವಚ್ಚ ತನ್ನಿಯಮಃ ॥ ೩ ॥ ದರ್ಶಯತಿ ಚ ॥ ೪ ॥**

**ಸಂಶಯ :** ಬೇರೆಬೇರೆಯ ವೇದಾಂತಾದಿಗಳಲ್ಲಿ ಹೇಳಿರುವ ಪಂಚಾಗ್ನಿವಿದ್ಯೆ, ವೈಶ್ವಾನರವಿದ್ಯೆ, ಶಾಂಡಿಲ್ಯವಿದ್ಯೆ— ಮುಂತಾದ ಉಪಾಸನೆಗಳು ಬೇರೆಬೇರೆಯೊ, ಅಥವಾ ಅದೇ ಒಂದೇ ವಿದ್ಯೆಯೊ ?

**ಪೂರ್ವಪಕ್ಷ :** ನಾಮರೂಪಾದಿಗಳು ಬೇರೆಬೇರೆಯಾಗಿರುವದರಿಂದ ಈ ವಿದ್ಯೆಗಳು ಬೇರೆಬೇರೆಯೇ. ಒಂದೊಂದು ಉಪನಿಷತ್ತಿನಲ್ಲಿ ಹೇಳಿರುವ ಗುಣಗಳು ಬೇರೆಬೇರೆಯಾಗಿರುವದರಿಂದಲೂ ಶಿರೋವ್ರತವೇ ಮುಂತಾದ ಧರ್ಮಗಳು ಬೇರೆಬೇರೆಯಾಗಿರುವದರಿಂದಲೂ ಈ ವಿದ್ಯೆಗಳು ಬೇರೆಬೇರೆಯೇ.

**ಸಿದ್ಧಾಂತ :** ನಾಮರೂಪಾದಿಗಳು ಭೇದಕ್ಕೆ ಹೇತುಗಳಲ್ಲವೆಂಬುದನ್ನು ಕರ್ಮಕಾಂಡದಲ್ಲಿಯೇ ತೋರಿಸಿಕೊಟ್ಟಿದೆ. ಚೋದನೆಯು ಒಂದೇ ರೂಪವಾಗಿರುವದರಿಂದಲೂ ಉಪಾಸನೆಯ ರೂಪವಾದ ಉಪಾಸ್ಯತತ್ತ್ವವು ಒಂದೇ ಆಗಿರುವದರಿಂದಲೂ ಪ್ರಾಣವಿದ್ಯೆ, ಶಾಂಡಿಲ್ಯವಿದ್ಯೆ— ಮುಂತಾದ ಸಮಾಖ್ಯೆಯು ಒಂದೇ ಆಗಿರುವದರಿಂದಲೂ ಈ ಉಪಾಸನೆಗಳು ಬೇರೆಬೇರೆಯಲ್ಲ. ಪಂಚಾಗ್ನಿವಿದ್ಯೆಯಲ್ಲಿರುವ ಸಂಖ್ಯಾದಿಗಳನ್ನು ಅವಿರೋಧವಾಗಿ ಹೊಂದಿಸಿಕೊಳ್ಳಬಹುದು. ಉಪಾಸನೆಗಾಗಿ ಹೇಳಿರುವವೆಂದಿಟ್ಟುಕೊಂಡರೆ ಗುಣೋಪಸಂಹಾರವನ್ನು ಮಾಡಿಕೊಂಡು ಉಪಾಸನೆಮಾಡಬೇಕಾಗಿರುವದರಿಂದ ವಿದ್ಯೈಕ್ಯಕ್ಕೆ ಯಾವ ವಿರೋಧವೂ ಇಲ್ಲ. ವೇದ್ಯಧರ್ಮಗಳು ಒಂದಿಷ್ಟು ಹೆಚ್ಚುಕಡಿಮೆಯಿದ್ದರೂ ಬಹುಮಟ್ಟಿನ ವೇದ್ಯರಾಶಿಯು ಅಭಿನ್ನವಾಗಿರುವದರಿಂದ ವಿದ್ಯೈಕ್ಯವೇ. ಶಿರೋವ್ರತವೇ ಮುಂತಾದವು ಅಧ್ಯಯನಧರ್ಮವೇ ಹೊರತು ವಿದ್ಯೆಯ ಧರ್ಮವಲ್ಲ. ವೇದ್ಯವು ಏಕವೆಂದು ಉಪದೇಶಮಾಡುವದರ ಮೂಲಕ ವಿದ್ಯೈಕತ್ವವನ್ನು ಶ್ರುತಿಯಲ್ಲಿಯೂ ತಿಳಿಸಿರುತ್ತದೆ. ಆದ್ದರಿಂದ ಇಂಥ ವಿದ್ಯೆಗಳು ಭಿನ್ನಭಿನ್ನವಲ್ಲ.

## ೨. ಉಪಸಂಹಾರಾಧಿಕರಣ

**ಉಪಸಂಹಾರೋಽರ್ಥಾಭೇದಾತ್ ವಿಧಿಶೇಷವತ್ ಸಮಾನೇ ಚ ||೫||**

ಈ ಸರ್ವೋಪಾಸನೆಗಳೂ ಹೀಗೆ ಒಂದೇ ವಿದ್ಯೆಯನ್ನು ಹೇಳುತ್ತಿರುವದರಿಂದ ಸಮಾನವಿದ್ಯೆಯಲ್ಲಿ ಹೇಳಿರುವ ಉಪಾಸನಾಗುಣಗಳನ್ನು ಉಪಸಂಹಾರಮಾಡಿಕೊಂಡು ಉಪಾಸನೆಮಾಡಬೇಕು. ಅಗ್ನಿಹೋತ್ರಾದಿಧರ್ಮಗಳನ್ನೆಲ್ಲ ಉಪಸಂಹಾರಮಾಡಿಕೊಂಡು ಅನುಷ್ಠಾನಮಾಡುವಂತೆಯೇ ಈ ಉಪಾಸನೆಗಳ ವಿಷಯವನ್ನೂ ಅರಿಯಬೇಕು.

## ೩. ಅನ್ಯಥಾತ್ವಾಧಿಕರಣ

**ಅನ್ಯಥಾತ್ವಂ ಶಬ್ದಾದಿತಿ ಚೇನ್ನಾವಿಶೇಷಾತ್ ||೬|| ನ ವಾ ಪ್ರಕರಣಭೇದಾತ್ ಪರೋವರೀಯಸ್ತ್ವಾದಿವತ್ || ೭ ಸಂಜ್ಞಾತಶ್ಚೇತ್ತದುಕ್ತಮಸ್ತಿ ತು ತದಪಿ ||೮||**

**ಸಂಶಯ :** ಬೃಹದಾರಣ್ಯಕದಲ್ಲಿ(೧-೩-೧)ಯೂ ಛಾಂದೋಗ್ಯದಲ್ಲಿಯೂ (೧-೨-೧) ಹೇಳಿರುವ ಪ್ರಾಣವಿದ್ಯೆಯು ಒಂದೊ, ಬೇರೆ ಬೇರೆಯೊ ?

**ಪೂರ್ವಪಕ್ಷ :** ಹಿಂದಿನ ಅಧಿಕರಣದ ನ್ಯಾಯದಿಂದ ಇವೆರಡೂ ಒಂದೇ ಎನ್ನುವದು ಯುಕ್ತ. ಇವೆರಡು ಕಡೆಗಳಲ್ಲಿಯೂ ದೇವಾಸುರಸಂಗ್ರಾಮ, ಅಸುರರನ್ನು ಮೀರಬೇಕೆಂದು ಉದ್ಗೀಥವನ್ನು ಪ್ರಾರಂಭಿಸಿರುವದು, ವಾಗಾದಿಗಳನ್ನು ನಿಂದಿಸಿ ಮುಖ್ಯಪ್ರಾಣವನ್ನು ಆಶ್ರಯಿಸಿರುವದು- ಮುಂತಾದ ಅನೇಕ ಸಮಾನಾಂಶಗಳಿವೆ. ಉದ್ಗೀಥವಿದ್ಯೆಯೆಂಬ ಹೆಸರೂ ಇವೆರಡಕ್ಕೂ ಸಮಾನವಾಗಿದೆ.

**ಸಿದ್ಧಾಂತ :** ಇವೆರಡಕ್ಕೂ ಪ್ರಕ್ರಮಭೇದವಿರುವದರಿಂದ ಇವು ಬೇರೆ ಬೇರೆಯ ವಿದ್ಯೆಗಳೇ. ಛಾಂದೋಗ್ಯದಲ್ಲಿ ಉದ್ಗೀಥಾವಯವವಾದ ಓಂಕಾರದ ಉಪಾಸನೆಯನ್ನು ಉಪಕ್ರಮಿಸಿ ಮುಂದೆಯೂ ಅದನ್ನೇ ಅನುವರ್ತಿಸಿಕೊಂಡಿರುವದರಿಂದ ಉದ್ಗೀಥಾವಯವವಾದ ಓಂಕಾರದಲ್ಲಿ ಪ್ರಾಣದೃಷ್ಟಿಯನ್ನು ಉಪದೇಶಿಸಿದೆ- ಎನ್ನಬೇಕು. ಬೃಹದಾರಣ್ಯಕದಲ್ಲಾದರೊ, ಉದ್ಗೀಥವೆಂದು ಪೂರ್ಣಭಕ್ತಿಯನ್ನೇ ಹೇಳಿದೆ; ಆ ಉದ್ಗೀಥದ ಕರ್ತೃವಾದ ಋತ್ವಿಜನನ್ನು ಪ್ರಾಣನೆಂದು ಹೇಳಿದೆ. ಹೇಗೆ ಛಾಂದೋಗ್ಯದಲ್ಲಿಯೇ ಪರೋವರೀಯಸ್ತ್ವಾದಿ

ಗುಣವಿಶಿಷ್ಟವಾದ ಉದ್ಗೀಥೋಪಾಸನೆಯು ಅಕ್ಷ್ಯಾದಿತ್ಯಗತಹಿರಣ್ಯಶ್ಮಶ್ರುತ್ವಾದಿಗುಣವಿಶಿಷ್ಟವಾದ ಉದ್ಗೀಥೋಪಾಸನೆಗಿಂತ ಭಿನ್ನವೋ ಹಾಗೆಯೇ ಇಲ್ಲಿಯೂ ಉಪಕ್ರಮಭೇದದಿಂದ ಉಪಾಸನಾಭೇದವೆಂದೇ ತಿಳಿಯಬೇಕು. ಉದ್ಗೀಥವಿದ್ಯೆ ಎಂಬ ಹೆಸರು ಒಂದೇ ಆಗಿದ್ದರೂ ಶ್ರುತ್ಯಕ್ಷರಕ್ಕೆ ಹೊಂದದಿರುವದರಿಂದ ಈ ಲೌಕಿಕಸಂಜ್ಞೆಯಿಂದ ವಿದ್ಯೈಕತ್ವವಾಗುವದಿಲ್ಲ.

## ೪. ವ್ಯಾಪ್ತ್ಯಧಿಕರಣ

ವ್ಯಾಪ್ತೇಶ್ಚ ಸಮಂಜಸಮ್ ॥ ೯ ॥

ವಿಷಯವೂ ಸಂಶಯವೂ : "ಓಮಿತ್ಯೇತದಕ್ಷರಮುದ್ಗೀಥಮುಪಾಸೀತ" (ಛಾಂ. ೧-೧-೧) ಎಂಬಲ್ಲಿ ಅಕ್ಷರೋದ್ಗೀಥಗಳಿಗೆ ಅಧ್ಯಾಸ, ಅಪವಾದ, ಏಕತ್ವ, ವಿಶೇಷಣ- ಈ ನಾಲ್ಕರಲ್ಲಿ ಯಾವ ಪಕ್ಷವು ಹೊಂದುತ್ತದೆ?

ಪೂರ್ವಪಕ್ಷ : ಈ ನಾಲ್ಕರಲ್ಲಿ ಇಂಥದ್ದೊಂದನ್ನು ಸ್ವೀಕರಿಸಬೇಕೆಂಬುದಕ್ಕೆ ಕಾರಣವಿಲ್ಲ. ಯಾವದಾದರೂ ಆಗಬಹುದು.

ಸಿದ್ಧಾಂತ : ಇಲ್ಲಿ ಅಧ್ಯಾಸವೆಂದರೆ ಓಂಕಾರದಲ್ಲಿ ಉದ್ಗೀಥಬುದ್ಧಿಯನ್ನು ಅಧ್ಯಾಸಮಾಡಬೇಕಾಗುವದರಿಂದ ಉದ್ಗೀಥಶಬ್ದವನ್ನು ಲಕ್ಷಣಾವೃತ್ತಿಯಿಂದ ಉಪಯೋಗಿಸಿದೆ- ಎಂದಾಗುವದು; ಅದಕ್ಕೆ ಫಲವನ್ನೂ ಕಲ್ಪಿಸಬೇಕಾಗುವದು. ಇದು ವಸ್ತುತತ್ತ್ವಪ್ರತಿಪಾದನಪರವಲ್ಲವಾದ್ದರಿಂದ ಮಿಥ್ಯಾಜ್ಞಾನನಿವೃತ್ತಿ ಎಂಬ ಫಲವನ್ನು ಕಲ್ಪಿಸುವದೂ ಆಗುವಹಾಗಿಲ್ಲ. ಅಪವಾದಪಕ್ಷದಲ್ಲಿಯೂ ಹೀಗೆಯೇ ಫಲವಿಲ್ಲ. ಏಕತ್ವಪಕ್ಷವೂ ಹೊಂದುವದಿಲ್ಲ; ಏಕೆಂದರೆ ಆಗ ಒಂದೇ ಶಬ್ದವು ಸಾಕಾಗಿರುವದರಿಂದ ಮತ್ತೊಂದು ವ್ಯರ್ಥವೆಂದಾಗುವದು. ಋಗ್ವೇದ ಅಥವಾ ಯಜುರ್ವೇದದ ಓಂಕಾರದಲ್ಲಿ ಉದ್ಗೀಥಶಬ್ದಪ್ರಸಿದ್ಧಿಯೂ ಇಲ್ಲ. ಆದ್ದರಿಂದ ವಿಶೇಷಣಪಕ್ಷವೇ ಇಲ್ಲಿ ನ್ಯಾಯ. ಓಂ ಎಂಬೀ ಉದ್ಗೀಥಾವಯವವಾದ ಅಕ್ಷರವನ್ನು ಉಪಾಸನೆಮಾಡಬೇಕು, ಇದರಿಂದ ಸರ್ವವ್ಯಾಪಿಯಾದ ಓಂಕಾರವನ್ನು ಬಿಟ್ಟು ಉದ್ಗೀಥಾವಯವವನ್ನೇ ತೆಗೆದುಕೊಳ್ಳಬೇಕು ಎಂದಂತೆ ಆಗುವದು.

## ೫. ಸರ್ವಾಭೇದಾಧಿಕರಣ

ಸರ್ವಾಭೇದಾದನ್ಯತ್ರೇಮೇ ೧೦

ವಿಷಯವೂ ಸಂಶಯವೂ : ಬೃಹದಾರಣ್ಯಕಛಾಂದೋಗ್ಯವಲ್ಲಿ ಶ್ರೈಷ್ಠ್ಯಗುಣಾನ್ವಿತಪ್ರಾಣದ ಉಪಾಸನೆಯನ್ನು ಹೇಳಿದೆ. ಕೌಷೀತಕಿ ಮುಂತಾದ ಶಾಖೆಗಳಲ್ಲಿಯೂ ಪ್ರಾಣಕ್ಕೆ ಶ್ರೈಷ್ಠ್ಯಗುಣಗಳನ್ನು ಹೇಳಿದೆ ; ಆದರೆ ಅಲ್ಲಿ ಬೃಹದಾರಣ್ಯಕಛಾಂದೋಗ್ಯಗಳಂತೆ ವಾಗಾದಿಗಳಿಗೆ ವಸಿಷ್ಠತ್ವಾದಿ ಗುಣಗಳನ್ನು ಹೇಳಿ ಪ್ರಾಣಕ್ಕೆ ಅವನ್ನು ತಿಳಿಸಿಲ್ಲ. ಅಲ್ಲಿಯೂ ಈ ವಸಿಷ್ಠತ್ವಾದಿಗಳನ್ನು ಸೇರಿಸಿಕೊಳ್ಳಬೇಕೊ, ಬಾರದೊ ?

ಪೂರ್ವಪಕ್ಷ : ಬಾರದು. ಏಕೆಂದರೆ ಅಲ್ಲಿ 'ಯಾವನು ಹೀಗೆಂದು ತಿಳಿಯುವನೋ' ಎಂದು ಹೀಗೆಂದು ಎಂಬ ಸಂನಿಹಿತವಿಷಯಕವಾದ ಶಬ್ದವನ್ನು ಪ್ರಯೋಗಿಸಿದೆ.

ಸಿದ್ಧಾಂತ : ಸೇರಿಸಿಕೊಳ್ಳಬೇಕು. ಏಕೆಂದರೆ ಪ್ರಾಣವಿಜ್ಞಾನವು ಈ ಎಲ್ಲಾ ಕಡೆಯಲ್ಲಿಯೂ ಒಂದೇ ಆಗಿರುತ್ತದೆ ; ಪ್ರಾಣಸಂವಾದಾದಿಗಳು ಒಂದೇ ಸಮನಾಗಿರುವವರಿಂದ ಒಂದೇ ವಿಜ್ಞಾನವೆಂದು ಗೊತ್ತಾಗುತ್ತದೆ. ಕೌಷೀತಕಿಶಾಖೆಯ ಏವಂಶಬ್ದವು ಬೃಹದಾರಣ್ಯಕದಲ್ಲಿರುವ ಗುಣಗಳನ್ನು ಹೇಳದಿದ್ದರೂ ಬೃಹದಾರಣ್ಯಕವಲ್ಲಿಯೇ ಇರುವ ಏವಂಶಬ್ದವು ಅದನ್ನು ಹೇಳುತ್ತದೆ. ಗುಣವುಳ್ಳ ಪ್ರಾಣವು ಅಭಿನ್ನವಾಗಿರುವವರಿಂದ ಒಂದು ಶಾಖೆಯಲ್ಲಿ ಹೇಳಿದ ಗುಣಗಳನ್ನು ಎಲ್ಲಾ ಕಡೆಯಲ್ಲಿಯೂ ಹೇಳಿದಂತೆಯೇ ಆಗಿರುತ್ತದೆ. ಆದ್ದರಿಂದ ಹೀಗೆ ಒಂದು ಪ್ರಧಾನವಸ್ತುವಿಗೆ ಸಂಬದ್ಧವಾಗಿ ಒಂದು ಕಡೆಯಲ್ಲಿ ಹೇಳಿರುವ ಧರ್ಮಗಳನ್ನು ಮತ್ತೊಂದು ಕಡೆಯಲ್ಲಿಯೂ ಉಪಸಂಹಾರಮಾಡಿಕೊಳ್ಳಬೇಕು.

## ೬. ಆನಂದಾದ್ಯಧಿಕರಣ

ಆನಂದಾದಯಃ ಪ್ರಧಾನಸ್ಯ ।೧೧। ಪ್ರಿಯಶಿರಸ್ತ್ವಾದ್ಯಪ್ರಾಪ್ತಿರುಪಚಯಾಪಚಯೌ ಹಿ ಭೇದೇ ।೧೨। ಇತರೇ ತ್ವರ್ಥಸಾಮಾನ್ಯಾತ್ ॥

ವಿಷಯವೂ ಸಂಶಯವೂ : ಬ್ರಹ್ಮಸ್ವರೂಪವನ್ನು ಹೇಳುವ ಶ್ರುತಿಗಳಲ್ಲಿ ಆನಂದರೂಪತ್ವ, ವಿಜ್ಞಾನಘನತ್ವ, ಸರ್ವಗತತ್ವ– ಎಂಬೀ ಜಾತಿಯ ಧರ್ಮಗಳು ಎಲ್ಲಿ ಎಷ್ಟನ್ನು ಹೇಳಿದೆಯೋ ಅಷ್ಟನ್ನೇ ತಿಳಿಯಬೇಕೊ, ಅಥವಾ ಎಲ್ಲವನ್ನೂ ಎಲ್ಲಾ ಕಡೆಯಲ್ಲಿಯೂ ತಿಳಿಯಬೇಕೊ ?

ಪೂರ್ವಪಕ್ಷ : ಆಯಾ ಶ್ರುತಿಯಲ್ಲಿ ಹೇಳಿದಷ್ಟನ್ನೇ ಅಲ್ಲಲ್ಲಿ ತೆಗೆದುಕೊಳ್ಳಬೇಕು.

ಸಿದ್ಧಾಂತ : ಎಲ್ಲಾ ಕಡೆಯಲ್ಲಿಯೂ ವಿಶೇಷ್ಯವಾದ ಬ್ರಹ್ಮವು ಒಂದೇ ಆಗಿರುವದರಿಂದ ಈ ಬ್ರಹ್ಮಧರ್ಮಗಳನ್ನು ಎಲ್ಲಾ ಕಡೆಯಲ್ಲಿಯೂ ಎಲ್ಲವನ್ನೂ ಗ್ರಹಿಸಬೇಕು. ಆದರೆ ಉಪಾಸನೆಗಾಗಿ ಹೇಳಿದ ಸತ್ಯಕಾಮತ್ವಾದಿಗಳನ್ನು ಮಾತ್ರ ಒಂದು ಕಡೆ ಹೇಳಿದ್ದನ್ನು ಮತ್ತೊಂದು ಕಡೆ ತಿಳಿಯಬಾರದು. ಏಕೆಂದರೆ ಭೇದವ್ಯವಹಾರವಿರುವಲ್ಲಿ ಸಗುಣಬ್ರಹ್ಮದಲ್ಲಿ ಮಾತ್ರ ಉಪಚಿತಾಪಚಿತಗುಣತ್ವವು ಹೊಂದುತ್ತದೆ, ನಿರ್ಗುಣಬ್ರಹ್ಮದಲ್ಲಿ ಹೊಂದುವದಿಲ್ಲ. ಆನಂದಾದಿಗಳು ಮಾತ್ರ ಪ್ರತಿಪಾದ್ಯಬ್ರಹ್ಮದ ಸ್ವರೂಪವನ್ನು ತಿಳಿಸುವದಕ್ಕೇ ಉಪಯುಕ್ತವಾಗಿರುವದರಿಂದಲೂ ಆ ಬ್ರಹ್ಮವು ಒಂದೇ ಆಗಿರುವದರಿಂದಲೂ ಅವನ್ನು ಎಲ್ಲಾ ಕಡೆಯಲ್ಲಿಯೂ ತೆಗೆದುಕೊಳ್ಳಬೇಕು.

## ೭. ಆಧ್ಯಾನಾಧಿಕರಣ

ಆಧ್ಯಾನಾಯ ಪ್ರಯೋಜನಾಭಾವಾತ್ ।೧೪। ಆತ್ಮಶಬ್ದಾಚ್ಚ ।೧೫।

ವಿಷಯವೂ ಸಂಶಯವೂ : ಕಠದಲ್ಲಿ 'ಇಂದ್ರಿಯಗಳಿಗಿಂತ ಅರ್ಥಗಳು ಹೆಚ್ಚು, ಅರ್ಥಗಳಿಗಿಂತ ಮನಸ್ಸು ಹೆಚ್ಚಿನದು ; ಮನಸ್ಸಿಗಿಂತ ಬುದ್ಧಿ ಹೆಚ್ಚು' ಎಂದು ಆರಂಭಿಸಿ 'ಪುರುಷನಿಗಿಂತ ಹೆಚ್ಚಿನದು ಯಾವದೂ ಇಲ್ಲ, ಅದೇ ಕೊನೆ, ಅದೇ ಪರಗತಿ' (ಕ. ೩-೧೧) ಎಂದು ಹೇಳಿದೆ. ಇಲ್ಲಿ ಅರ್ಥಾದಿಗಳನ್ನೆಲ್ಲ ಆಯಾ ಪದಾರ್ಥಗಳಿಗಿಂತ ಹೆಚ್ಚೆಂದು ತಿಳಿಯಬೇಕೆಂದು ಹೇಳಿದೆಯೆ, ಅಥವಾ ಪುರುಷನೇ ಎಲ್ಲಕ್ಕಿಂತಲೂ ಹೆಚ್ಚೆಂದು ಪ್ರತಿಪಾದಿಸಿದೆಯೆ ?

ಪೂರ್ವಪಕ್ಷ : ಇವೆಲ್ಲವೂ ಹೆಚ್ಚೆಂದೇ ಪ್ರತಿಪಾದಿಸಿದೆ ; ಏಕೆಂದರೆ ಶ್ರುತಿಯಲ್ಲಿ ಹಾಗೆಂದಿದೆ.

ಸಿದ್ಧಾಂತ : ಪುರುಷನನ್ನೇ ಎಲ್ಲಕ್ಕಿಂತಲೂ ಮಿಗಿಲೆಂದು ಪ್ರತಿಪಾದಿಸಿದೆ. ಮಿಕ್ಕವುಗಳ ಪರತ್ವವನ್ನು ಹೇಳುವದರಲ್ಲಿ ಪ್ರಯೋಜನವೇನೂ ಇಲ್ಲ. ಪುರುಷಪರತ್ವವನ್ನು ತಿಳಿದರೆ ಮೋಕ್ಷವೆಂಬ ಪ್ರಯೋಜನವಾಗುತ್ತದೆ ; ಹಾಗೆಂದು ಶ್ರುತಿಯೂ ಹೇಳುತ್ತಿದೆ. ಅದಕ್ಕಿಂತ ಹೆಚ್ಚಿನದಿಲ್ಲವೆಂದೂ ಅದೇ ಕೊನೆಯೆಂದೂ ಹೇಳಿರುವದರಿಂದ ಪುರುಷನ ವಿಷಯದಲ್ಲಿ ಆದರವನ್ನು ಶ್ರುತಿ

ತೋರಿಸಿರುತ್ತದೆ. ಇದರಿಂದ ಸಮ್ಯಗ್ದರ್ಶನವೆಂಬ ಫಲವಾಗುತ್ತದೆ. ಪುರುಷನಲ್ಲಿ ಆತ್ಮಶಬ್ದವನ್ನುಪಯೋಗಿಸಿರುವದರಿಂದಲೂ ಅದನ್ನು ತಿಳಿಯುವದು ಸಾಮಾನ್ಯರಿಗೆ ಕಷ್ಟವೆಂದು ಅದನ್ನು ತಿಳಿಯುವದಕ್ಕೆ ಅಧ್ಯಾತ್ಮಯೋಗವನ್ನು ವಿಧಿಸಿರುವದರಿಂದಲೂ 'ಆ ವಿಷ್ಣುವಿನ ಪರಮಪದವನ್ನು ಪಡೆಯುತ್ತಾನೆ' (ಕ. ೩–೬) ಎಂದು ಹೇಳಲು ಆ ಪರಮಪದವು ಯಾವದು ?– ಎಂಬ ಆಕಾಂಕ್ಷೆಯುಂಟಾಗಲಾಗಿ ಈ ಇಂದ್ರಿಯಾದಿಗಳನ್ನು ಹೇಳಿರುವದರಿಂದಲೂ ಪರಮಪದದ ಜ್ಞಾನಕ್ಕಾಗಿಯೇ ಈ ವಾಕ್ಯವು ಬಂದಿದೆ ಎಂದು ನಿಶ್ಚಯಿಸಬೇಕಾಗಿದೆ.

## ೮. ಆತ್ಮಗೃಹೀತ್ಯಧಿಕರಣ

**ಆತ್ಮಗೃಹೀತಿರಿತರವದುತ್ತರಾತ್ ॥ ೧೬ ॥ ಅನ್ವಯಾದಿತಿ ಚೇತ್ ಸ್ಯಾದವಧಾರಣಾತ್ ॥ ೧೭ ॥**

ಒಂದನೆಯ ವರ್ಣಕ

**ವಿಷಯವೂ ಸಂಶಯವೂ :** ಐತರೇಯದಲ್ಲಿ "ಇದು ಮೊದಲು ಆತ್ಮನೊಬ್ಬನೇ ಆಗಿತ್ತು, ಮತ್ತೆ ಯಾವದೊಂದೂ ಇರಲಿಲ್ಲ, ಅವನು ಲೋಕಗಳನ್ನು ಸೃಜಿಸುವೆನು ಎಂದು ಯೋಚಿಸಿಕೊಂಡನು" (ಐ. ೧–೧) ಎಂದು ಮುಂತಾಗಿರುವ ವಾಕ್ಯವಿದೆ. ಅಲ್ಲಿ ಪರಮಾತ್ಮನನ್ನೇ ಆತ್ಮಶಬ್ದದಿಂದ ಹೇಳಿದೆಯೆ, ಅಥವಾ ಮತ್ತೆ ಯಾವದನ್ನಾದರೂ ಹೇಳಿದೆಯೆ ?

**ಪೂರ್ವಪಕ್ಷ :** ಇಲ್ಲಿ ಲೋಕಸೃಷ್ಟಿಯನ್ನು ಹೇಳಿರುವದರಿಂದ ಇದು ಪ್ರಜಾಪತಿಯ ವಿಷಯವಾಗಿರಬೇಕು, ಆತ್ಮಶಬ್ದವನ್ನು ಪ್ರಜಾಪತಿಗೂ ಉಪಯೋಗಿಸುವದುಂಟು. ಒಬ್ಬನೇ ಇದ್ದನು– ಎಂಬುದು ಪ್ರಜಾಪತಿಯ ಕಾರ್ಯದ ಅಪೇಕ್ಷೆಯಿಂದ ಪ್ರಯೋಗಿಸಿದ್ದಾಗಿದೆ. 'ಅವರಿಗೆ ಗೋವನ್ನು ತಂದನು' ಮುಂತಾಗಿ ಸವಿಶೇಷಾತ್ಮರಿಗೆ ಒಪ್ಪುವ ವ್ಯಾಪಾರವಿಶೇಷವನ್ನು ಇಲ್ಲಿ ಹೇಳಿದೆ. ಆದ್ದರಿಂದ ಪರಮಾತ್ಮನಲ್ಲ.

**ಸಿದ್ಧಾಂತ :** ಇತರ ಸೃಷ್ಟಿಶ್ರುತಿಗಳಲ್ಲಿ ಹೇಗೆ ಆತ್ಮನೆಂದರೆ ಪರಮಾತ್ಮನನ್ನೇ ಗ್ರಹಿಸುವೆವೋ ಲೋಕದಲ್ಲಿ ಆತ್ಮಶಬ್ದವನ್ನು ಪ್ರಯೋಗಿಸಿದರೆ ಹೇಗೆ ಪ್ರತ್ಯಗಾತ್ಮನನ್ನೇ ತೆಗೆದುಕೊಳ್ಳುವೆವೋ ಹಾಗೆಯೇ ಇಲ್ಲಿ ಮುಖ್ಯನಾದ ಪರಮಾತ್ಮನನ್ನೇ ಸ್ವೀಕರಿಸುವದು ಯುಕ್ತ. 'ಪುರುಷವಿಧಃ' ಮುಂತಾದ ವಿಶೇಷಣ

ವಿರುವಲ್ಲಿ ಸವಿಶೇಷಾತ್ಮನನ್ನು ಸ್ವೀಕರಿಸುವದು ಸರಿ ; ಆದರೆ ಇಲ್ಲಿ ಪರಮಾತ್ಮ ಗ್ರಹಣಕ್ಕೆ ತಕ್ಕ ವಿಶೇಷಣವೇ ಮುಂದಿನ ವಾಕ್ಯಭಾಗದಲ್ಲಿ ಕಾಣಬರುತ್ತದೆ. ಸೃಷ್ಟಿಗಿಂತ ಪೂರ್ವದಲ್ಲಿ 'ಆತ್ಮನೊಬ್ಬನೇ ಇದ್ದನು' ಎಂಬ ಅವಧಾರಣವಿರುವದ ಿಂದ ಮುಖ್ಯಾತ್ಮನನ್ನೇ ತೆಗೆದುಕೊಳ್ಳುವದು ಯುಕ್ತ. ಲೋಕಸೃಷ್ಟಿವಚನ ವನ್ನು 'ಮಹಾಭೂತಗಳನ್ನು ಸೃಜಿಸಿದ ಬಳಿಕ' ಎಂದು ಹೊಂದಿಸಿಕೊಳ್ಳ ಬಹುದಾಗಿದೆ ; ಏಕೆಂದರೆ ಒಂದೇ ವಿಷಯದಲ್ಲಿ ಒಂದು ಶ್ರುತಿಯಲ್ಲಿರುವ ವಿಶೇಷ ವನ್ನು ಇನ್ನೊಂದು ಶ್ರುತಿಗೂ ಉಪಸಂಹಾರಮಾಡಿಕೊಳ್ಳಬೇಕು. ಗೋವನ್ನು ತಂದನು- ಮುಂತಾದದ್ದು ಅರ್ಥವಾದ ಮಾತ್ರ ; ಏಕೆಂದರೆ ಅದರ ಜ್ಞಾನ ದಿಂದ ಯಾವ ಪುರುಷಾರ್ಥವೂ ಇರುವದಿಲ್ಲ. ಬ್ರಹ್ಮಾತ್ಮತ್ವವೇ ಇಲ್ಲಿ ವಿವಕ್ಷಿತ ವಾಗಿರುತ್ತದೆ. ಲೋಕಲೋಕಪಾಲರ ಸೃಷ್ಟಿಯನ್ನು ಹೇಳಿ, ಕರಣಗಳನ್ನೂ ಕರಣಾಯತನಗಳನ್ನೂ ಹೇಳಿ ಸ್ರಷ್ಟೃವು ಈ ಶರೀರವನ್ನು ಹೊಕ್ಕನೆಂದು ಇಲ್ಲಿ ಹೇಳಿದೆ. ಕರಣವ್ಯಾಪಾರವಿವೇಚನಪೂರ್ವಕವಾಗಿ ಬ್ರಹ್ಮಾತ್ಮತ್ವವನ್ನೇ ಅವಧಾರಣಮಾಡಿದೆ. ಆದ್ದರಿಂದ ಇಲ್ಲಿ ಪರಮಾತ್ಮನನ್ನೇ ಗ್ರಹಿಸಬೇಕು.

ಎರಡನೆಯ ವರ್ಣಕ

**ವಿಷಯವೂ ಸಂಶಯವೂ :** ಬೃಹದಾರಣ್ಯಕದಲ್ಲಿ 'ಆತ್ಮನು ಯಾವನು ? ಪ್ರಾಣಗಳಲ್ಲಿ ವಿಜ್ಞಾನಮಯನಾಗಿ ಹೃದಯದಲ್ಲಿ ಅಂತರ್ಜ್ಯೋತಿಯಾಗಿರುವ ಈ ಪುರುಷನಿದಾನಲ್ಲ (ಅವನು)' (ಬೃ. ೪-೩-೭) ಎಂದು ಆತ್ಮಶಬ್ದದಿಂದ ಪ್ರಾರಂಬಿಸಿ ಸರ್ವಸಂಗರಹಿತನೆಂದು ಪ್ರತಿಪಾದಿಸುವ ಮೂಲಕ ಬ್ರಹ್ಮಾ ತ್ಮತ್ವವನ್ನೇ ಹೇಳಿರುತ್ತದೆ. ಆದ್ದರಿಂದ 'ಈ ಆತ್ಮನು ಅಜರನೂ ಅಮರನೂ ಅಮೃತನೂ ಅಭಯನೂ ಬ್ರಹ್ಮವೂ ಆಗಿರುತ್ತಾನೆ' ಎಂದು ಉಪಸಂಹಾರ ಮಾಡಿದೆ. ಛಾಂದೋಗ್ಯದಲ್ಲಾದರೋ 'ಸೋಮ್ಯನೆ, ಇದು ಮೊದಲು ಎರಡನೆಯದಿಲ್ಲದ ಸತ್ತೊಂದೇ ಆಗಿತ್ತು' (ಛಾಂ. ೬-೨-೧) ಎಂದು ಆತ್ಮಶಬ್ದ ವಿಲ್ಲದೆಯೇ ಉಪಕ್ರಮಿಸಿ 'ಅದೇ ಆತ್ಮನು, ಅದೇ ನೀನು' (ಛಾಂ. ೬-೮-೭) ಎಂದು ತಾದಾತ್ಮ್ಯವನ್ನು ಉಪದೇಶಿಸಿರುತ್ತದೆ. ಇಲ್ಲಿ ಸಂಶಯವೇನೆಂದರೆ : ಈ ಎರಡುಶ್ರುತಿಗಳಿಗೂ ಒಂದೇ ಅರ್ಥವೋ, ಅಥವಾ ಬೇರೆಬೇರೆ ಅರ್ಥವೋ ?

**ಪೂರ್ವಪಕ್ಷ :** ಇವುಗಳಿಗೆ ಸಮಾನಾರ್ಥವಿಲ್ಲ ; ಏಕೆಂದರೆ ಶ್ರುತಿಗಳು ಸಮಾನವಾಗಿರುವದಿಲ್ಲ. ಬೃಹದಾರಣ್ಯಕದಲ್ಲಿ ಉಪಕ್ರಮದಲ್ಲಿ ಆತ್ಮಶಬ್ದವಿದೆ ;

ಛಾಂದೋಗ್ಯದಲ್ಲಿಲ್ಲ. ಉಪಸಂಹಾರದಲ್ಲಿ ಆತ್ಮಶಬ್ದವಿದ್ದರೂ ಉಪಕ್ರಮಕ್ಕನು ಗುಣದಾಗಿ ಅದನ್ನು ತಾದಾತ್ಮ್ಯಸಂಪತ್ತಿ ಎಂದು ತಿಳಿಯಬೇಕು.

ಸಿದ್ಧಾಂತ : ಛಾಂದೋಗ್ಯದಲ್ಲಿಯೂ ಬೃಹದಾರಣ್ಯಕದಂತೆ ಆತ್ಮ ಗ್ರಹಣವನ್ನು ಮಾಡಬೇಕು. ಏಕೆಂದರೆ–ಮುಂದೆ ಆತ್ಮಶಬ್ದೋಪದೇಶವಿದೆ. ಉಪಕ್ರಮದಲ್ಲಿ ಆತ್ಮಶಬ್ದವಿಲ್ಲದಿದ್ದರೂ ಏಕವಿಜ್ಞಾನದಿಂದ ಸರ್ವವಿಜ್ಞಾನ ವನ್ನು ಅವಧಾರಣೆಮಾಡಿದ ಬಳಿಕ 'ಸತ್ತೇ ಆಗಿತ್ತು' ಎಂದಿರುವದರಿಂದ ಇಲ್ಲಿಯೂ ಆತ್ಮನೆಂದೇ ಗ್ರಹಿಸಬೇಕು. ಸೃಷ್ಟಿಗೆ ಪೂರ್ವದಲ್ಲಿ ಏಕತ್ವವನ್ನು ಅವಧಾರಣೆಮಾಡಿರುವದು, ಜೀವನನ್ನು ಆತ್ಮಶಬ್ದದಿಂದ ಪರಾಮರ್ಶಿಸಿರುವದು, ಸುಷುಪ್ತಿಯಲ್ಲಿ ಆತ್ಮಸ್ವಭಾವಸಂಪತ್ತಿಯನ್ನು ಹೇಳಿರುವದು, ಮತ್ತೆ ಮತ್ತೆ 'ತತ್ತ್ವಮಸಿ' (ಅದೇ ನೀನಾಗಿರುವೆ) ಎಂದು ಅವಧಾರಣೆಮಾಡಿರುವದು– ಇದೆಲ್ಲವೂ ಪರಮಾತ್ಮತಾದಾತ್ಮ್ಯವನ್ನೇ ಇಲ್ಲಿ ಉಪದೇಶಿಸಿದೆ ಎಂಬುದಕ್ಕೆ ಗಮಕವಾಗಿವೆ. ಉಪಕ್ರಮದಲ್ಲಿ 'ಸದೇವ' ಎಂದು ಸಾಮಾನ್ಯವಾಗಿ ಹೇಳಿ ವಿಶೇಷವಾದ ಆತ್ಮಶಬ್ದದಿಂದ ಉಪಸಂಹಾರಮಾಡಿರುವದರಿಂದ ಸಚ್ಛಬ್ದವೂ ಮುಖ್ಯಾತ್ಮನನ್ನೇ ಹೇಳಿರುವದರಿಂದಲೂ ಇಲ್ಲಿ ಆತ್ಮನನ್ನೇ ಗ್ರಹಿಸಬೇಕು. ಪಾಠವೈಷಮ್ಯವಿದ್ದರೂ 'ತೆಗೆದುಕೊಂಡು ಬಾ ಪಾತ್ರವನ್ನು', 'ಪಾತ್ರವನ್ನು ತೆಗೆದುಕೊಂಡು ಬಾ' ಮುಂತಾದ ವಾಕ್ಯಗಳಲ್ಲಿ ಅರ್ಥಭೇದವೇನೂ ಇರುವ ದಿಲ್ಲವಾದ್ದರಿಂದ ಶ್ರುತಿಗಳ ಉಪಕ್ರಮವೈಷಮ್ಯದಿಂದ ಅರ್ಥವೈಷಮ್ಯವು ಸಿದ್ಧ ವಾಗಲಾರದು.

## ೯. ಕಾರ್ಯಾಖ್ಯಾನಾಧಿಕರಣ

### ಕಾರ್ಯಾಖ್ಯಾನಾದಪೂರ್ವಮ್ ॥೧೮॥

**ವಿಷಯವೂ ಸಂಶಯವೂ :** ಪ್ರಾಣಸಂವಾದದಲ್ಲಿ ಶ್ವಾದಿಗಳವರೆಗೂ ಪ್ರಾಣನ ಅನ್ನವೆಂದು ಛಾಂದೋಗ್ಯಬೃಹದಾರಣ್ಯಕಗಳಲ್ಲಿ ಹೇಳಿದೆ. ಛಾಂದೋಗ್ಯದಲ್ಲಿ ಭೋಜನಕ್ಕೆ ಪೂರ್ವದಲ್ಲಿಯೂ ಉತ್ತರದಲ್ಲಿಯೂ ಆಚಮನ ವನ್ನು ವಿಧಿಸಿದೆ. ಬೃಹದಾರಣ್ಯಕದಲ್ಲಾದರೋ 'ಆಚಮನವನ್ನು ಮಾಡಿ, ಇದು ಪ್ರಾಣನ ಅನಗ್ನತೆ ಎಂದು ತಿಳಿಯುತ್ತಾರೆ' ಎಂದು ಹೇಳಿದೆ. ಇಲ್ಲಿ ಆಚಮನ, ಅನಗ್ನತಾಚಿಂತನ– ಇವೆರಡನ್ನೂ ವಿಧಿಸಿದೆಯೆ, ಅಥವಾ ಇವು ಗಳೆರಡರಲ್ಲಿ ಒಂದನ್ನೇ ವಿಧಿಸಿದೆಯೆ ?

**ಪೂರ್ವಪಕ್ಷ :** ಎರಡನ್ನೂ ವಿಧಿಸಿದೆ. ಅಪೂರ್ವವಾಗಿರುವದರಿಂದ ಎರಡೂ ವಿಧಿಗೆ ತಕ್ಕವು. ಅಥವಾ ಆಚಮನದಲ್ಲಿ ವಿಧಿವಿಭಕ್ತಿಯು ಸ್ಪಷ್ಟವಾಗಿರುವದರಿಂದ ಅದನ್ನು ವಿಧಿಸಿದೆ ; ಅದನ್ನು ಹೊಗಳುವದಕ್ಕೆ ಅನಗ್ನತೆಯನ್ನು ಹೇಳಿದೆ.

**ಸಿದ್ಧಾಂತ :** ಆಚಮನವು ಸ್ಮೃತಿವಿಹಿತವಾಗಿ ಪ್ರಾಪ್ತವಾಗಿದೆ ; ಶ್ರುತಿಯಲ್ಲಿ ಪ್ರಾಣವಿದ್ಯೆಯನ್ನೇ ವಿಧಿಸಿದೆ. ಆದ್ದರಿಂದಲೇ ಎರಡನ್ನೂ ವಿಧಿಸಿರುತ್ತದೆ ಎನ್ನುವದೂ ಸರಿಯಲ್ಲ; ಎರಡನ್ನೂ ವಿಧಿಸಿದರೆ ವಾಕ್ಯಭೇದವಾಗುವದೆಂಬ ದೋಷವೂ ಇರುತ್ತದೆ. ಆದ್ದರಿಂದ ಆಚಮನೀಯವಾದ ಜಲದಲ್ಲಿ ಅನಗ್ನತಾಚಿಂತನೆಯನ್ನು ಪ್ರಾಣವಿದ್ಯೆಗೆ ಸಂಬಂಧಪಟ್ಟಂತೆ ಉಪದೇಶಿಸಿರುತ್ತದೆ. ಆಚಮನವು ವಿಹಿತವಾಗಿರುವದಿಲ್ಲವಾದ್ದರಿಂದ ಅದನ್ನು ಹೊಗಳುವದಕ್ಕೆ ಅನಗ್ನತೆಯನ್ನು ಹೇಳಿದೆ ಎಂಬುದೂ ಸರಿಯಲ್ಲ. ಆಚಮನವೂ ಪ್ರಾಣನಿಗೆ ಪರಿಧಾನಕ್ಕಾಗಿ ಹೊಸದಾಗಿ ಹೇಳಿದ್ದಾದ್ದರಿಂದ ಕ್ರಿಯಾಂತರವಾಗುತ್ತದೆಯಾಗಿ ಒಂದೇ ಆಚಮನವನ್ನು ಎರಡಕ್ಕೂ ಉಪಯೋಗಿಸುವದೆಂಬ ದೋಷವೂ ಇಲ್ಲ. ಆದ್ದರಿಂದ ಇಲ್ಲಿ ಆಚಮನವನ್ನು ಹೊದಿಕೆಯೊಂದು ಸಂಕಲ್ಪಿಸುವದನ್ನೇ ವಿಧಿಸಿದೆ ಎಂಬುದು ಯುಕ್ತ.

## ೧೦. ಸಮಾನಾಧಿಕರಣ

### ಸಮಾನ ಏವಂ ಚಾಭೇದಾತ್ ||೧೯||

**ವಿಷಯವೂ ಸಂಶಯವೂ :** ಅಗ್ನಿರಹಸ್ಯದಲ್ಲಿರುವ ಶಾಂಡಿಲ್ಯವಿದ್ಯೆಯೂ ಬೃಹದಾರಣ್ಯಕದಲ್ಲಿರುವ 'ಮನೋಮಯೋಽಯಂ ಪುರುಷಃ' (ಬೃ. ೫-೬-೧) ಎಂಬುದೂ ಒಂದೇ ವಿದ್ಯೆಯೊ, ಬೇರೆಬೇರೆಯೊ ?

**ಪೂರ್ವಪಕ್ಷ :** ಈ ವಿದ್ಯೆಗಳು ಬೇರೆಬೇರೆ ; ಗುಣಗಳೂ ಆಯಾ ವಿದ್ಯೆಗೇ ಸೇರತಕ್ಕವು. ಏಕೆಂದರೆ ಒಂದೇ ವಿದ್ಯೆಯೆಂದರೆ ಒಂದೇ ಶಾಖೆಯಲ್ಲಿ ಅಧ್ಯೇತೃಗಳೂ ಉಪಾಸಕರೂ ಬೇರೆಬೇರೆಯಲ್ಲವಾಗಿ ಪುನರುಕ್ತಿಯೇ ಆಗುವದು. ಇಲ್ಲಿ ಒಂದು ಕಡೆಯಲ್ಲಿ ವಿದ್ಯೆಯನ್ನು ವಿಧಿಸಿ ಮತ್ತೊಂದು ಕಡೆಯಲ್ಲಿ ಗುಣವನ್ನು ಹೇಳಿದೆ-ಎನ್ನುವದಕ್ಕಿಲ್ಲ: ಏಕೆಂದರೆ ಮನೋಮಯತ್ವಾದಿಗುಣಗಳನ್ನು ಎರಡು ಕಡೆಯಲ್ಲಿಯೂ ಸಮಾನವಾಗಿಯೇ ಹೇಳಿದೆ.

ಸಿದ್ಧಾಂತ : ಒಂದೇ ಶಾಖೆಯಲ್ಲಿ ಇಲ್ಲಿಯೂ ವಿದ್ಯೈಕ್ಯವೇ. ಏಕೆಂದರೆ ಉಪಾಸ್ಯವು ಅದೇ ಆಗಿರುವದರಿಂದ ರೂಪಾಭೇದವಿರುವಲ್ಲಿ ವಿದ್ಯೆಗಳು ಬೇರೆ ಬೇರೆ ಎನ್ನುವದು ಯುಕ್ತವಾಗಲಾರದು. ಒಂದು ಕಡೆಯಲ್ಲಿ ವಿದ್ಯೆಯನ್ನು ವಿಧಿಸಿ ಮತ್ತೊಂದು ಕಡೆಯಲ್ಲಿ ಗುಣಗಳನ್ನು ವಿಧಿಸಿದೆ ಎನ್ನುವದೇ ಸರಿ ; ಸಮಾನವಾಗಿ ಎರಡೂ ಕಡೆಯಲ್ಲಿ ಕೆಲವು ಗುಣಗಳನ್ನು ಪಠಿಸಿರುವದು ಅದೇ ವಿದ್ಯೆ ಎಂದು ಗುರುತಿಸುವದಕ್ಕಾದ್ದರಿಂದ ಪುನರುಕ್ತಿದೋಷವೇನೂ ಇಲ್ಲ.

## ೧೧. ಸಂಬಂಧಾಧಿಕರಣ

ಸಂಬಂಧಾದೇವಮನ್ಯತ್ರಾಪಿ || ೨೦ || ನ ವಾ ವಿಶೇಷಾತ್ || ೨೧ || ದರ್ಶಯತಿ ಚ || ೨೨ ||

**ವಿಷಯವೂ ಸಂಶಯವೂ :** ಬೃಹದಾರಣ್ಯಕದಲ್ಲಿ 'ಸತ್ಯಂ ಬ್ರಹ್ಮ' (೫-೫-೧) ಎಂದು ಉಪಕ್ರಮಿಸಿ ಅಧ್ಯಾತ್ಮವಾಗಿಯೂ ಆಧಿದೈವತವಾಗಿಯೂ ಆಯತನಗಳನ್ನೂ ವ್ಯಾಹೃತಿಶರೀರತ್ವವನ್ನೂ ಹೇಳಿದೆ. 'ಅಹರಿತಿ', 'ಅಹಮಿತಿ' ಎಂದು ಎರಡು ಉಪನಿಷತ್ತುಗಳನ್ನು ಹೇಳಿದೆಯಷ್ಟೆ ; ಇವೆರಡನ್ನೂ ಎರಡು ಕಡೆಯಲ್ಲಿಯೂ ಉಪಸಂಹಾರಮಾಡಿಕೊಳ್ಳಬೇಕೆ, ಅಥವಾ ಅಲ್ಲಲ್ಲಿಗೆ ಆಯಾ ಉಪನಿಷತ್ತನ್ನೇ ಚಿಂತಿಸಿಕೊಳ್ಳಬೇಕೆ ?

**ಪೂರ್ವಪಕ್ಷ :** ಶಾಂಡಿಲ್ಯವಿದ್ಯೆಯು ನ್ಯಾಯದಿಂದ ಅದರಂತಿರುವ ಇಂಥ ಸ್ಥಲಗಳಲ್ಲೆಲ್ಲ ಗುಣೋಪಸಂಹಾರವೇ ನ್ಯಾಯ. ಇಲ್ಲಿಯೂ ಸತ್ಯವಿದ್ಯೆ ಎಂಬ ಒಂದೇ ವಿದ್ಯೆ ; ಉಪಕ್ರಮವೂ ಅಭಿನ್ನವಾಗಿದೆ. ಆದ್ದರಿಂದ ಎರಡು ಉಪನಿಷತ್ತುಗಳನ್ನೂ ಸೇರಿಸಿಕೊಂಡು ಉಪಾಸನೆಮಾಡಬೇಕು.

**ಸಿದ್ಧಾಂತ :** ಈ ಜಾತಿಯ ಗುಣಗಳನ್ನು ಬೇರೆಬೇರೆಯಾಗಿಯೇ ಚಿಂತನೆಮಾಡಬೇಕು. ಏಕೆಂದರೆ ಉಪಾಸನಾಸ್ಥಾನಗಳು ಬೇರೆಬೇರೆಯಾಗಿವೆ. ಆಯಾ ಸ್ಥಾನದ ಪುರುಷನಿಗೆ ಆಯಾ ಉಪನಿಷತ್ತನ್ನು ಹೇಳಿದೆ ಎಂಬುದು 'ತಸ್ಯ' (ಅವನಿಗೆ) ಎಂಬ ಸಂನಿಹಿತಪರಾಮರ್ಶಕವಾದ ಸರ್ವನಾಮದಿಂದ ಗೊತ್ತಾಗುತ್ತದೆ. ಉಪಾಸ್ಯನಾದ ಸತ್ಯಪುರುಷನು ಒಬ್ಬನೇ ಆದರೂ ಆಯಾ ಅವಸ್ಥೆಯಲ್ಲಿ ಆಯಾ ಉಪನಿಷತ್ತನ್ನು ಉಪದೇಶಿಸಿರುವದರಿಂದ ವ್ಯವಸ್ಥೆಯೇ ಯುಕ್ತ. ಛಾಂದೋಗ್ಯದಲ್ಲಿ ಉದ್ಗೀಥವಿದ್ಯೆಯಲ್ಲಿ "ಅವನ ರೂಪವೇ ಇವನ

ರೂಪವು" ಎಂದು ಅಕ್ಷ್ಯಾದಿತ್ಯಸ್ಥಾನಗಳಲ್ಲಿರುವ ಪುರುಷರಿಗೆ ರೂಪನಾಮಗಳು ಅವೇ– ಎಂದು ಶ್ರುತಿ ಹೇಳುವದರಿಂದ ಹೀಗೆ ಅತಿದೇಶಮಾಡದೆ ಇರುವ ಸ್ಥಲಗಳಲ್ಲಿ ಇಂಥ ಧರ್ಮಗಳು ಅಲ್ಲಲ್ಲಿಗೇ ವ್ಯವಸ್ಥಿತವಾಗಿರುವವೆಂದು ಹೇಳಿದಂತಾಗುತ್ತದೆ. ಆದ್ದರಿಂದ ಈ ಉಪನಿಷತ್ತುಗಳನ್ನು ಉಪಸಂಹಾರಮಾಡಕೂಡದು.

## ಸಂಭೃತ್ಯಧಿಕರಣ

ಸಂಭೃತಿದ್ಯುವ್ಯಾಪ್ತ್ಯಪಿ ಚಾತಃ ॥ ೨೩ ॥

**ವಿಷಯವೂ ಸಂಶಯವೂ :** ರಾಣಾಯನೀಯಶಾಖೆಯ ಖಿಲಭಾಗದಲ್ಲಿ ಬ್ರಹ್ಮಕ್ಕೆ ವೀರ್ಯಸಂಭೃತ್ಯಾದಿ ವಿಭೂತಿಗಳನ್ನು ಹೇಳಿದೆ. ಅವರ ಉಪನಿಷತ್ತಿನಲ್ಲಿ ಶಾಂಡಿಲ್ಯವಿದ್ಯೆಯೇ ಮುಂತಾದ ಬ್ರಹ್ಮವಿದ್ಯೆಗಳನ್ನು ಹೇಳಿದೆ. ಆ ವಿದ್ಯೆಗಳಲ್ಲಿ ಈ ವಿಭೂತಿಗಳನ್ನು ಉಪಸಂಹಾರಮಾಡಿಕೊಳ್ಳಬೇಕೆ? ಬಾರದೆ ?

**ಪೂರ್ವಪಕ್ಷ :** ಉಪಾಸ್ಯವಾದ ಬ್ರಹ್ಮವು ಒಂದೇ ಆದ್ದರಿಂದ ಉಪಸಂಹಾರಮಾಡಿಕೊಳ್ಳಬೇಕು.

**ಸಿದ್ಧಾಂತ ;** ಹಿಂದಿನ ಅಧಿಕರಣದಂತೆ ಇಲ್ಲಿಯೂ ಹೃದಯ, ಅಕ್ಷಿ–ಮುಂತಾದ ಆಯತನವಿಶೇಷಗಳನ್ನು ಹೇಳಿರುವದರಿಂದ ಅಲ್ಲಿ ಆಧಿದೈವಿಕವಾದ ಈ ವಿಭೂತಿಗಳನ್ನು ಉಪಸಂಹಾರಮಾಡಿಕೊಳ್ಳುವದಕ್ಕೆ ಅವಕಾಶವಿಲ್ಲ, ಸಂಭೃತ್ಯಾದಿಗಳೂ ಶಾಂಡಿಲ್ಯವಿದ್ಯೆಗಳಲ್ಲಿ ಹೇಳಿರುವ ಗುಣಗಳೂ ಭಿನ್ನಭಿನ್ನವಾಗಿಯೇ ಇರುವದರಿಂದ ಈ ಗುಣಗಳನ್ನು ಉಪಸಂಹಾರಮಾಡುವದಕ್ಕೆ ವಿದ್ಯೈಕತ್ವವನ್ನು ಸೂಚಿಸುವ ಸಮಾನಗುಣಗಳು ಪಠಿತವಾಗಿಲ್ಲವಾದ್ದರಿಂದಲೂ ಗುಣೋಪಸಂಹಾರಕ್ಕೆ ಕಾರಣವಿಲ್ಲ. ಬ್ರಹ್ಮವು ಒಂದೇ ಆದರೂ ಬೇರೆಬೇರೆ ವಿಭೂತಿಗಳಿಂದೊಡಗೂಡಿ ಬೇರೆಬೇರೆಯಾಗಿ ಉಪಾಸ್ಯವಾಗುತ್ತದೆಯಾದ್ದರಿಂದ ಬ್ರಹ್ಮೈಕ್ಯವೂ ಉಪಸಂಹಾರಕ್ಕೆ ಕಾರಣವಲ್ಲ.

## ೧೩. ಪುರುಷಾದ್ಯಧಿಕರಣ

ಪುರುಷವಿದ್ಯಾಯಾಮಿವ ಚೇತರೇಷಾಮನಾಮ್ನಾನಾತ್ ॥ ೨೪ ॥

ವಿಷಯವೂ ಸಂಶಯವೂ : ತಾಂಡಿಪೈಂಗಿಶಾಖೆಯವರ ರಹಸ್ಯ ಬ್ರಾಹ್ಮಣದಲ್ಲಿ ಪಠಿತವಾಗಿರುವ ಪುರುಷಯಜ್ಞ, ತೈತ್ತಿರೀಯಕದಲ್ಲಿ ಪಠಿತವಾಗಿರುವ ಪುರುಷಯಜ್ಞ– ಇವುಗಳಲ್ಲಿ ತೈತ್ತಿರೀಯದಲ್ಲಿರುವ ಯಜ್ಞಕ್ಕೆ ಮಿಕ್ಕ ಕಡೆಗಳಲ್ಲಿ ಹೇಳಿರುವ ಪುರುಷಯಜ್ಞಧರ್ಮಗಳನ್ನು ಉಪಸಂಹಾರ ಮಾಡಿಕೊಳ್ಳಬೇಕೊ, ಬಾರದೊ ?

ಪೂರ್ವಪಕ್ಷ : ಎರಡೂ ಪುರುಷಯಜ್ಞವಾಗಿರುವದರಿಂದ ಉಪಸಂಹಾರ ಮಾಡಿಕೊಳ್ಳಬೇಕು.

ಸಿದ್ಧಾಂತ : ಕೂಡದು. ಏಕೆಂದರೆ ತೈತ್ತಿರೀಯದಲ್ಲಿ ಮಿಕ್ಕಕಡೆಗಳಲ್ಲಿರುವಂತೆ ಪಾಠವಿಲ್ಲ. ಅಲ್ಲಿ ಪತ್ನಿ, ಯಜಮಾನ, ವೇದ, ವೇದಿ–ಮುಂತಾದವುಗಳನ್ನು ಅನುಕ್ರಮವಾಗಿ ಹೇಳಿದೆ. ಅಲ್ಲಿ ಹೇಳಿರುವ ಸವನಗಳೂ ಪ್ರಾತರ್ಮಧ್ಯಾಹ್ನಸಾಯಂಕಾಲರೂಪಗಳಾಗಿ ವಿಲಕ್ಷಣವಾಗಿಯೇ ಇವೆ. ಮರಣವೇ ಅವಭೃಥ–ಎಂದು ಮುಂತಾಗಿ ಹೇಳಿರುವ ಸ್ವಲ್ಪ ಸಾಮ್ಯವಿದ್ದರೂ ವೈಲಕ್ಷಣ್ಯವು ಬಹಳವಾಗಿರುವದರಿಂದ ಇವೆರಡೂ ಒಂದೇ ಎನ್ನುವದಕ್ಕೆ ಬರುವದಿಲ್ಲ. ತೈತ್ತಿರೀಯದಲ್ಲಿ ಪುರುಷನು ಯಜ್ಞವೆಂದಿಲ್ಲ ; ಪುರುಷನ ಯಜ್ಞವೆಂದಿದೆ. ಸಂನ್ಯಾಸಸಹಿತವಾದ ಆತ್ಮಜ್ಞಾನವನ್ನು ಮೊದಲು ಹೇಳಿ 'ಹೀಗೆಂದು ತಿಳಿದವನ ಯಜ್ಞಕ್ಕೆ....' ಎಂದಿರುವ ಈ ಶ್ರುತಿಯು ಹಿಂದೆ ಹೇಳಿದ್ದಕ್ಕೆ ಶೇಷವೆಂದು ನಿಶ್ಚಯವಾಗುತ್ತದೆ. ಆದ್ದರಿಂದ ಹಿಂದಿನ ಅನುವಾಕದಲ್ಲಿಯೂ ಈ ಅನುವಾಕದಲ್ಲಿಯೂ ಬ್ರಹ್ಮಮಹಿಮೆಯ ಪ್ರಾಪ್ತಿ– ಎಂಬ ಒಂದೇ ಫಲವನ್ನು ಹೇಳಿದೆ. ಆದರೆ ತಾಂಡಿಪೈಂಗಿಗಳಲ್ಲಿ ಪುರುಷಯಜ್ಞವು ಸ್ವತಂತ್ರವಾಗಿದೆ ; ಆಯುರಭಿವೃದ್ಧಿಯೇ ಅದಕ್ಕೆ ಫಲವು. ಆದ್ದರಿಂದ ತೈತ್ತಿರೀಯಕದಲ್ಲಿ ಈ ಪುರುಷವಿದ್ಯೆಗಳ ಧರ್ಮಗಳ ಉಪಸಂಹಾರವಿಲ್ಲ.

## ೧೪. ವೇಧಾದ್ಯಧಿಕರಣ

### ವೇಧಾದ್ಯರ್ಥಭೇದಾತ್ ॥ ೨೫ ॥

ವಿಷಯವೂ ಸಂಶಯವೂ : ಆಥರ್ವಣಿಕರ ಉಪನಿಷತ್ತಿಗೆ ಆರಂಭದಲ್ಲಿ 'ಸರ್ವಂ ಪ್ರವಿಧ್ಯ' ಎಂದು ಮುಂತಾಗಿರುವ ಮಂತ್ರಪಾಠವಿದೆ. ಹೀಗೆಯೇ ತಾಂಡಿಗಳ, ಶಾಟ್ಯಾಯನಿಗಳ, ಕಠತೈತ್ತಿರೀಯಶಾಖೆಯವರ, ಉಪನಿಷತ್ತಿನ

ಆರಂಭದಲ್ಲಿ ಬೇರೆಬೇರೆಯ ಮಂತ್ರಗಳಿವೆ. ವಾಜಸನೇಯಿಶಾಖೆಯವರ ಉಪನಿಷದಾರಂಭದಲ್ಲಿ ಪ್ರವರ್ಗ್ಯಕರ್ಮವಿಚಾರವೂ ಕೌಷೀತಕಿಯವರ ಉಪನಿಷತ್ತಿನ ಆರಂಭದಲ್ಲಿ ಅಗ್ನಿಷ್ಟೋಮವಿಚಾರವೂ ಇದೆ. ಈ ಮಂತ್ರಗಳೂ ಕರ್ಮಗಳೂ ವಿದ್ಯೆಗಳಲ್ಲಿ ಉಪಸಂಹಾರವಾಗತಕ್ಕವೆ, ಅಲ್ಲವೆ ?

ಪೂರ್ವಪಕ್ಷ : ವಿದ್ಯಾಪ್ರಧಾನವಾಗಿರುವ ಉಪನಿಷತ್ತುಗಳ ಆರಂಭದಲ್ಲಿರುವದರಿಂದ ಸಂನಿಧಿಸಾಮರ್ಥ್ಯದಿಂದ ಇವನ್ನು ಉಪಸಂಹಾರಮಾಡುವದೇ ಸರಿ ಎಂದು ತೋರುತ್ತದೆ. ಮಂತ್ರಗಳಿಗೆ ವಿದ್ಯಾವಿಷಯದಲ್ಲಿ ಹೇಗೋ ಸಾಮರ್ಥ್ಯವನ್ನು ಕಲ್ಪಿಸಿಕೊಳ್ಳಬೇಕು. ಕರ್ಮಗಳು ಬೇರೆಯಾಗಿ ವಿನಿಯೋಗವಾಗಿದ್ದರೂ ವಾಜಪೇಯವು ಬೃಹಸ್ಪತಿಸವದಲ್ಲಿ ವಿನಿಯೋಗವಾಗುವಂತೆ ವಿದ್ಯೆಗಳಲ್ಲಿಯೂ ವಿನಿಯೋಗವಾಗಬಹುದು.

ಸಿದ್ಧಾಂತ : ಇವುಗಳಿಗೆ ವಿದ್ಯೆಗಳಲ್ಲಿ ಉಪಸಂಹಾರವಿಲ್ಲ. ಏಕೆಂದರೆ ಇವುಗಳಲ್ಲಿ ಹೇಳಿರುವ ಹೃದಯವೇಧವೇ ಮುಂತಾದವುಗಳಿಗೆ ವಿದ್ಯೆಗಳೊಡನೆ ಸಂಗತವಾಗುವ ಸಾಮರ್ಥ್ಯವಿಲ್ಲ. ಇವು ಬೇರೆ ಅರ್ಥಗಳಲ್ಲಿ ಪಠಿತವಾಗಿರುತ್ತವೆಯಾಗಿ ಸಂನಿಧಿಮಾತ್ರದಿಂದ ವಿದ್ಯೆಗೆ ಸಂಬಂಧಪಟ್ಟಿಲ್ಲ. ಹೀಗೆಯೇ ಪ್ರವರ್ಗ್ಯಾದಿಕರ್ಮಗಳಿಗೂ ವಿದ್ಯೆಗಳಿಗೂ ಯಾವ ಸಂಬಂಧವೂ ಇಲ್ಲ. ಬೃಹಸ್ಪತಿಸವಕ್ಕೆ ವಿನಿಯೋಗಾಂತರವನ್ನು ಸ್ಪಷ್ಟವಾಗಿ ಶ್ರುತಿಯಲ್ಲಿ ಹೇಳಿರುವದರಿಂದ ಆಗಬಹುದು. ಸಂನಿಧಿಯೇ ದುರ್ಬಲವಾಗಿರುವದರಿಂದ ಬೇರೊಂದರಲ್ಲಿ ವಿನಿಯುಕ್ತವಾಗಿರುವದನ್ನು ಅದರ ಬಲದಿಂದ ವಿದ್ಯೆಯಲ್ಲಿ ವಿನಿಯೋಗಿಸುವದು ಆಗಲಾರದು. ಆದ್ದರಿಂದ ಸಂನಿಧಿಪಾಠವು ಆರಣ್ಯಾನುವಚನವೇ ಮುಂತಾದ ಧರ್ಮಸಾಮಾನ್ಯದಿಂದ ಎಂದು ಕಲ್ಪಿಸಿಕೊಳ್ಳಬೇಕು.

## ೧೫. ಹಾನ್ಯಧಿಕರಣ

### ಒಂದನೆಯ ವರ್ಣಕ

**ಹಾನೌ ತೂಪಾಯನಶಬ್ದಶೇಷತ್ವಾತ್ ಕುಶಾಚ್ಛಂದಸ್ತುತ್ಯುಪಗಾನವತ್ ತದುಕ್ತಮ್ ॥ ೨೬ ॥**

ವಿಷಯವೂ ಸಂಶಯವೂ : ಕೆಲವು ಶ್ರುತಿಗಳಲ್ಲಿ ಸುಕೃತದುಷ್ಕೃತಗಳ ಹಾನವನ್ನು ಹೇಳಿದೆ, ಮತ್ತೆ ಕೆಲವು ಕಡೆಗಳಲ್ಲಿ ಅವನ್ನೇ ಪ್ರಿಯರೂ ಅಪ್ರಿಯರೂ ಹಂಚಿಕೊಳ್ಳುತ್ತಾರೆಂದು ಹೇಳಿದೆ. ಇನ್ನು ಕೆಲವು ಕಡೆಗಳಲ್ಲಿ

ಎರಡನ್ನೂ ಹೇಳಿದೆ. ಎಲ್ಲಿ ಬರಿಯ ಹಾನವನ್ನು ಹೇಳಿದೆಯೋ ಅಲ್ಲಿ ಸ್ವೀಕಾರವನ್ನು ಉಪಸಂಹಾರಮಾಡಿಕೊಳ್ಳಬೇಕೆ, ಬಾರದೆ ?

ಪೂರ್ವಪಕ್ಷ : ಶ್ರುತಿಯಲ್ಲಿಲ್ಲದ್ದರಿಂದ ಸೇರಿಸಿಕೊಳ್ಳಬಾರದು. ಬೇರೊಂದು ಶಾಖೆಯಲ್ಲಿ ಹೇಳಿರುವ ಉಪಾಯನವು ವಿದ್ಯಾವಂತರ ವಿಷಯವಾದ್ದರಿಂದಲೂ ಸುಕೃತದುಷ್ಕೃತಗಳನ್ನು ಬಿಡುವವನು ತಾನು, ತೆಗೆದುಕೊಳ್ಳುವವರು ಮತ್ತೊಬ್ಬರು ; ಇವೆರಡರಲ್ಲಿ ಒಂದಾದರೆ ಇನ್ನೊಂದಾಗಬೇಕೆಂಬ ಆವಶ್ಯಕತೆಯೇನೂ ಇಲ್ಲ. ಆದ್ದರಿಂದ ಹಾನವನ್ನು ಹೇಳಿರುವಲ್ಲಿ ಉಪಾಯನವನ್ನು ಸೇರಿಸಿಕೊಳ್ಳುವಹಾಗಿಲ್ಲ.

ಸಿದ್ಧಾಂತ : ಹಾನಶಬ್ದಕ್ಕೆ ಶೇಷವಾಗಿ ಉಪಾಯನಶಬ್ದವನ್ನು ಕೌಷೀತಕ್ಯುಪನಿಷತ್ತಿನಲ್ಲಿ ಹೇಳಿದೆ. ಆದ್ದರಿಂದ ಮಿಕ್ಕಕಡೆಗಳಲ್ಲಿ ಬರಿಯ ಹಾನಶಬ್ದವಿದ್ದರೂ ಉಪಾಯನವೂ ಸೇರಿಕೊಂಡು ಬರುತ್ತದೆ. ಇಲ್ಲಿ ಯಾವ ಅನುಷ್ಠೇಯವನ್ನೂ ಹೇಳಿಲ್ಲ ; ವಿದ್ಯೆಯನ್ನು ಹೊಗಳುವದಕ್ಕಾಗಿಯೇ ಸುಕೃತದುಷ್ಕೃತಗಳ ಹಾನೋಪಾಯನಗಳನ್ನು ಹೇಳಿದೆ. ಆದ್ದರಿಂದ ಸ್ತುತಿಪ್ರಕರ್ಷಕ್ಕಾಗಿ ಬರಿಯ ಹಾನವಿರುವಲ್ಲಿ ಉಪಾಯನವನ್ನು ಸೇರಿಸಿಕೊಳ್ಳುವದು ಯುಕ್ತ ; ಏಕೆಂದರೆ ಒಂದು ಅರ್ಥವಾದಕ್ಕೆ ಮತ್ತೊಂದರ ಅಪೇಕ್ಷೆಯಿರುವದು ಶ್ರುತಿಪ್ರಸಿದ್ಧವಾಗಿದೆ. ಒಂದು ಶ್ರುತಿಯಲ್ಲಿರುವ ವಿಶೇಷವನ್ನು ಶ್ರುತ್ಯಂತರದಲ್ಲಿ ಸೇರಿಸಿಕೊಳ್ಳಕೂಡದೆಂದು ಹೇಳಿದರೆ ಎಲ್ಲೆಲ್ಲಿಯೂ ವಿಕಲ್ಪವೇ ಪ್ರಸಕ್ತವಾಗುತ್ತದೆ.

### ಎರಡನೆಯ ವರ್ಣಕ

ವಿಷಯವೂ ಸಂಶಯವೂ : 'ಅಶ್ವ ಇವ ರೋಮಾಣಿ ವಿಧೂಯ' ಮುಂತಾದ ಶ್ರುತಿಗಳಲ್ಲಿ ವಿಧೂನಶಬ್ದದಿಂದ ಸುಕೃತದುಷ್ಕೃತಗಳ ಹಾನವನ್ನು ಹೇಳಿದೆಯೆ, ಇಲ್ಲವೆ ?

ಪೂರ್ವಪಕ್ಷ : 'ಧೂಞ್ ಕಂಪನೇ' ಎಂಬ ಧಾತುವಿನ ಅರ್ಥದಲ್ಲಿ ಅಲುಗಾಡುವದೆಂಬರ್ಥವಿದೆ. 'ದೋಧೂಯನ್ತೇ ಧ್ವಜಾಗ್ರಾಣಿ' ಎಂಬಲ್ಲಿ ಗಾಳಿಯಿಂದ ಧ್ವಜಾಗ್ರಗಳು ಅಲುಗಾಡುತ್ತಿವೆ ಎಂಬರ್ಥದಲ್ಲಿ ಪ್ರಯೋಗವಿದೆ. ಆದ್ದರಿಂದ ಅಲುಗಾಡಿಸುವದೇ ವಿಧೂನನಶಬ್ದಾರ್ಥವು ; ಕೆಲವು ಕಾಲ ಫಲಕ್ಕೆ ಅಡ್ಡಿಮಾಡುವದೇ ಇಲ್ಲಿ ಚಾಲನವು.

ಸಿದ್ಧಾಂತ : ವಿಧೂನನಶಬ್ದಕ್ಕೆ ಹಾನವೆಂದೇ ಅರ್ಥ. ಏಕೆಂದರೆ ಒಬ್ಬನು ಬಿಡದೆ ಮತ್ತೊಬ್ಬರು ಸುಕೃತದುಷ್ಕೃತಗಳನ್ನು ತೆಗೆದುಕೊಳ್ಳುವದಾಗುವದಿಲ್ಲ. ಆದರೆ ತೆಗೆದುಕೊಳ್ಳುತ್ತಾರೆಂದು ಇಲ್ಲಿ ಹೇಳಿದೆ. ಒಬ್ಬರ ಸುಕೃತದುಷ್ಕೃತಗಳನ್ನು ಮತ್ತೊಬ್ಬರು ಮುಖ್ಯಾರ್ಥದಲ್ಲಿ ತೆಗೆದುಕೊಳ್ಳಲಾರರಾದರೂ ಶ್ರುತಿಯಲ್ಲಿ ಹಾಗೆಂದಿರುವದರಿಂದ ವಿಧೂನನವು ಹಾನವೆಂದೇ ನಿಶ್ಚಯವಾಗುತ್ತದೆ. ಒಂದು ಕಡೆಯಲ್ಲಿ ಮಾತ್ರ ಈ ಉಪಾಯನಶ್ರುತಿಯಿದ್ದರೂ ಎಲ್ಲಾ ಕಡೆಯಲ್ಲಿಯೂ ಹೀಗೆಂದು ನಿಶ್ಚಯಿಸುವದಕ್ಕೆ ಇದು ಸಾಕಾಗುತ್ತದೆ. ಇವಲ್ಲದೆ ಸುಕೃತದುಷ್ಕೃತಗಳು ದ್ರವ್ಯವಲ್ಲವಾದ್ದರಿಂದ ಅವನ್ನು ಅಲುಗಾಡಿಸುವದು ಆಗುವಂತಿಲ್ಲ. ಧಾತುಗಳಿಗೆ ಅನೇಕಾರ್ಥವಿರುವದೆಂದು ಒಪ್ಪಿರುವದರಿಂದ ಅಲುಗಾಡಿಸುವದು ಎಂಬರ್ಥವನ್ನು ವ್ಯಾಕರಣದಲ್ಲಿ ಹೇಳಿರುವದಕ್ಕೆ ಇದೇನೂ ವಿರುದ್ಧವಲ್ಲ.

## ೧೬. ಸಾಂಪರಾಯಾಧಿಕರಣ

**ಸಾಂಪರಾಯೇ ತರ್ತವ್ಯಾಭಾವಾತ್ತಥಾ ಹ್ಯನ್ಯೇ ||೨೭|| ಛನ್ದತ ಉಭಯಾವಿರೋಧಾತ್ ||೨೮||**

ವಿಷಯವೂ ಸಂಶಯವೂ : ಕೌಷೀತಕ್ಯುಪನಿಷತ್ತಿನಲ್ಲಿರುವ ಪರ್ಯಂಕವಿದ್ಯೆಯಲ್ಲಿ ನಡುದಾರಿಯಲ್ಲಿ ಸುಕೃತದುಷ್ಕೃತಗಳ ತ್ಯಾಗವನ್ನು ಹೇಳಿದೆ. ಅದನ್ನು ನಡುವೆಯೇ ಬಿಡುವದೆಂದು ತಿಳಿಯಬೇಕೊ, ದೇಹವನ್ನು ಬಿಡುವಾಗಲೇ ಎಂದು ತಿಳಿಯಬೇಕೊ ?

ಪೂರ್ವಪಕ್ಷ : ಪ್ರಮಾಣವಾದ ಶ್ರುತಿಯಲ್ಲಿರುವಂತೆ ತಿಳಿಯುವದೇ ಯುಕ್ತ.

ಸಿದ್ಧಾಂತ : ದೇಹವನ್ನು ಬಿಡುವಾಗಲೇ ಸುಕೃತದುಷ್ಕೃತವಿಯೋಗವಾಗುವದೆಂದು ತಿಳಿಯಬೇಕು. ಏಕೆಂದರೆ ಉಪಾಸಕನು ನಡುವೆ ಪಡೆದುಕೊಳ್ಳತಕ್ಕದ್ದೇನೂ ಇರುವದಿಲ್ಲ. ವಿದ್ಯೆಗೆ ವಿರೋಧವಾಗಿರುವದರಿಂದಲೇ ಅವುಗಳು ಕ್ಷಯವಾಗಬೇಕಷ್ಟೆ ; ಆದ್ದರಿಂದ ವಿದ್ಯೆಯು ಫಲಾಭಿಮುಖವಾದ ಕೂಡಲೆ ಅವು ತೊಲಗುವವೆಂಬುದು ಯುಕ್ತ. ಹೀಗೆಂದೇ ಬೇರೆಯ ಶಾಖೆಯವರು ಪಠಿಸಿಯೂ ಇರುತ್ತಾರೆ. ನಡುಹಾದಿಯಲ್ಲಿಯೇ ಇವುಗಳ ತ್ಯಾಗ

ವನ್ನು ಅಂಗೀಕರಿಸುವದಾದರೆ ದೇಹತ್ಯಾಗವಾದ ಬಳಿಕ ಯಮನಿಯಮ ವಿದ್ಯಾಭ್ಯಾಸಗಳನ್ನು ಮಾಡುವದಕ್ಕೆ ಆಗುವಂತಿರುವದಿಲ್ಲವಾದ್ದರಿಂದ ಆ ಸಾಧನಗಳಿಂದ ಇವುಗಳನ್ನು ತ್ಯಜಿಸುವದು ಆಗಲೇ ಆರದು. ಆದ್ದರಿಂದ ಮೊದಲೇ ಇವುಗಳ ತ್ಯಾಗವಾಗುವದೆಂದೇ ಶ್ರುತಿಯುಕ್ತಿಗಳಿಗೆ ಹೊಂದುಗಡೆ ಯಾಗುವಂತೆ ಅಂಗೀಕರಿಸಬೇಕು.

## ೧೭. ಗತೇರರ್ಥವತ್ತ್ವಾಧಿಕರಣ

ಗತೇರರ್ಥವತ್ತ್ವಮುಭಯಥಾನ್ಯಥಾ ಹಿ ವಿರೋಧಃ ||೨೯|| ಉಪ ಪನ್ನಸ್ತಲ್ಲಕ್ಷಣಾರ್ಥೋಪಲಬ್ಧೇರ್ಲೋಕವತ್ ||೩೦||

ವಿಷಯವೂ ಸಂಶಯವೂ : ಪುಣ್ಯಪಾಪಗಳ ಹಾನವನ್ನು ಹೇಳು ವಲ್ಲಿ ಕೆಲವುಕಡೆಗಳಲ್ಲಿ ದೇವಯಾನಮಾರ್ಗವನ್ನು ಶ್ರುತಿಯಲ್ಲಿ ಹೇಳಿದೆ, ಕೆಲವುಕಡೆಗಳಲ್ಲಿ ಇಲ್ಲ. ಇದನ್ನು ಎಲ್ಲಾ ಕಡೆಯಲ್ಲಿಯೂ ಸೇರಿಸಿಕೊಳ್ಳ ಬೇಕೊ, ಬಾರದೊ ?

ಪೂರ್ವಪಕ್ಷ : ಹಾನಕ್ಕೆ ಉಪಾಯನವನ್ನು ಎಲ್ಲೆಲ್ಲಿಯೂ ಸೇರಿಸಿ ಕೊಂಡಂತೆ ಇಲ್ಲಿಯೂ ದೇವಯಾನವನ್ನು ಎಲ್ಲಾ ಕಡೆಗಳಲ್ಲಿಯೂ ಸೇರಿಸಿ ಕೊಳ್ಳಬೇಕು.

ಸಿದ್ಧಾಂತ : ಹೊಂದುವ ಕಡೆ ಇವನ್ನು ಸೇರಿಸಿಕೊಳ್ಳಬೇಕು ; ಮಿಕ್ಕ ಕಡೆ ಸೇರಿಸಿಕೊಳ್ಳಬಾರದು. ಏಕೆಂದರೆ 'ಪುಣ್ಯಪಾಪಗಳನ್ನು ಕೊಡವಿಕೊಂಡು ನಿರಂಜನನಾಗಿ ಪರಮಸಾಮ್ಯವನ್ನು ಹೊಂದುತ್ತಾನೆ' (ಮುಂ. ೩-೧-೩) ಇಂಥ ಶ್ರುತಿಯಿರುವಲ್ಲಿ ದೇಶಾಂತರಕ್ಕೆ ಹೋಗುವ ಗತಿಯು ಹೊಂದುವದೇ ಇಲ್ಲ. ಸುಗುಣೋಪಾಸನೆಗಳನ್ನು ಹೇಳಿರುವಲ್ಲಿ ಈ ಗತಿಯು ಹೊಂದುತ್ತದೆ. ಆದ್ದರಿಂದ ಎಲ್ಲಾ ಕಡೆಯಲ್ಲಿಯೂ ದೇವಯಾನವನ್ನು ಸೇರಿಸಿಕೊಳ್ಳಬಾರದು.

## ೧೮. ಅನಿಯಮಾಧಿಕರಣ

ಅನಿಯಮಃ ಸರ್ವಾಸಾಮವಿರೋಧಃ ಶಬ್ದಾನುಮಾನಾಭ್ಯಾಮ್ ||

ವಿಷಯವೂ ಸಂಶಯವೂ : ಸುಗುಣವಿದ್ಯೆಗಳಲ್ಲಿಯೂ ಕೆಲವು ಕಡೆ ಗಳಲ್ಲಿ ಗತಿಯನ್ನು ಹೇಳಿದೆ; ಕೆಲವು ಕಡೆಗಳಲ್ಲಿ ಹೇಳಿಲ್ಲ. ಅಲ್ಲಿ ಎಲ್ಲಾ ಕಡೆ ಯಲ್ಲಿಯೂ ಈ ಗತಿಯನ್ನು ಸೇರಿಸಿಕೊಳ್ಳಬೇಕೊ, ಬಾರದೊ ?

ಪೂರ್ವಪಕ್ಷ : ಎಲ್ಲಿ ಶ್ರುತಿಯಿದೆಯೋ ಅಲ್ಲಿಗೇ ಗತಿಯನ್ನು ಇಟ್ಟು ಕೊಳ್ಳಬೇಕು. ಒಂದೇ ಗತಿಯನ್ನು ಉಪಕೋಸಲವಿದ್ಯೆ, ಪಂಚಾಗ್ನಿವಿದ್ಯೆ- ಇವುಗಳೆರಡರಲ್ಲಿಯೂ ಹೇಳಿದೆ; ಗತಿಯನ್ನು ಎಲ್ಲಾ ಕಡೆಯಲ್ಲಿಯೂ ಸೇರಿಸಿ ಕೊಳ್ಳಬೇಕಾಗಿದ್ದರೆ ಈ ಪುನರುಕ್ತಿಗೆ ಕಾರಣವಿಲ್ಲ.

ಸಿದ್ಧಾಂತ : ಸಗುಣವಿದ್ಯೆಗಳಿಗೆಲ್ಲ ಈ ದೇವಯಾನಗತಿಯನ್ನು ಸೇರಿಸಿ ಕೊಳ್ಳಬೇಕು. ಏಕೆಂದರೆ ಶ್ರುತಿಸ್ಮೃತಿಗಳಲ್ಲಿ ಹಾಗೆಂದಿದೆ. ಛಾಂದೋಗ್ಯದಲ್ಲಿ ಪಂಚಾಗ್ನಿವಿದ್ಯೆಯಲ್ಲಿ ದೇವಯಾನಮಾರ್ಗವನ್ನು ಹೇಳಿರುವವಲ್ಲದೆ ಬೇರೆ ಉಪಾಸನೆಗಳಲ್ಲಿ ನಿರತರಾದವರಿಗೂ ಈ ಗತಿಯನ್ನು ಹೇಳಿರುತ್ತದೆ. ಬೃಹ ದಾರಣ್ಯಕದಲ್ಲಿಯೂ ಸತ್ಯರೂಪವಾದ ಬ್ರಹ್ಮವನ್ನು ಉಪಾಸನೆಮಾಡು ವವರಿಗೆ ಈ ಗತಿಯಾಗುವದೆಂದು ಹೇಳಿದೆ. ಈ ಪಿತೃಯಾಣ ದೇವಯಾನ ಗಳಿಲ್ಲದವರಿಗೆ ಅಧೋಗತಿಯನ್ನು ಶ್ರುತಿಯು ಹೇಳುವದರಿಂದ ಉಪಾಸಕರಿಗೆ ವಿದ್ಯಾಬಲದಿಂದ ದೇವಯಾನಪ್ರಾಪ್ತಿಯೇ ಆಗುವದೆಂದು ಸೂಚಿಸಿರುತ್ತದೆ. ಗೀತೆಯಲ್ಲಿಯೂ ಉಪಾಸಕರಿಗೆ ದೇವಯಾನವನ್ನು ಹೇಳಿದೆ. ಪಂಚಾಗ್ನಿವಿದ್ಯೆ ಯಲ್ಲಿಯೂ ಉಪಕೋಸಲವಿದ್ಯೆಯಲ್ಲಿಯೂ ದೇವಯಾನವನ್ನು ಹೇಳಿರು ವದು ಆ ಎರಡು ಕಡೆಯಲ್ಲಿಯೂ ಅನುಚಿಂತನೆಮಾಡಬೇಕೆಂಬುದಕ್ಕೆ. ಆದ್ದ ರಿಂದ ಶ್ರುತಿಯಲ್ಲಿ ಹೇಳಿರುವಷ್ಟಕ್ಕೇ ಈ ಮಾರ್ಗವನ್ನು ನಿಯತವೆಂದು ಭಾವಿಸಬಾರದು.

## ೧೯. ಯಾವದಧಿಕಾರಾಧಿಕರಣ

**ಯಾವದಧಿಕಾರಮವಸ್ಥಿತಿರಾಧಿಕಾರಿಕಾಣಾಮ್ ||೩೨||**

ವಿಷಯವೂ ಸಂಶಯವೂ : ಜ್ಞಾನಿಗೆ ಈ ದೇಹವು ಬಿದ್ದುಹೋದ ಬಳಿಕ ದೇಹಾಂತರವು ಉತ್ಪನ್ನವಾಗುವದೊ, ಇಲ್ಲವೊ ' ಬ್ರಹ್ಮಜ್ಞಾನಿಗಳೂ ಕೆಲವರು ದೇಹಾಂತರವನ್ನು ಸ್ವೀಕರಿಸಿದರೆಂದು ಶ್ರುತಿಸ್ಮೃತಿಗಳಲ್ಲಿ ಕಂಡು ಬರುವದರಿಂದ ಈ ಸಂಶಯವುಂಟಾಗುತ್ತದೆ.

ಪೂರ್ವಪಕ್ಷ : ಉಕ್ತ ದೃಷ್ಟಾಂತಗಳಿಂದ ಬ್ರಹ್ಮಜ್ಞಾನಿಗಳಿಗೂ ಮೋಕ್ಷವು ಆಗದೆ ಇರಬಹುದು, ಅಥವಾ ಮೋಕ್ಷಕ್ಕೆ ಜ್ಞಾನವು ಕಾರಣವಲ್ಲದೆ ಹೋಗಬಹುದು.

ಸಿದ್ಧಾಂತ : ದೃಷ್ಟಾಂತಗಳಲ್ಲಿ ಹೇಳಿರುವ ಪುರುಷರು ಅಧಿಕಾರಿಕ ಪುರುಷರು. ಪರಮೇಶ್ವರನಿಯುಕ್ತವಾದ ಅಧಿಕಾರವನ್ನು ನಿರ್ವಹಿಸಿದ ಬಳಿಕ, ಈಗಿನ ಬ್ರಹ್ಮಜ್ಞಾನಿಗಳು ಆರಬ್ಧಭೋಗಾಂತದಲ್ಲಿ ಕೈವಲ್ಯವನ್ನು ಅನುಭವಿಸುವಂತೆ, ಅವರೂ ಮೋಕ್ಷವನ್ನು ಪಡೆದುಕೊಳ್ಳುತ್ತಾರೆ. ಒಂದು ಸಲ ಪ್ರಾರಂಭವಾಗಿರುವ ಕರ್ಮಾಶಯವೇ ಅವರಿಗೆ ದೇಹಾಂತರಗಳನ್ನು ಕೊಡುತ್ತದೆ. ಅವಿದ್ಯಾದಿಗಳು ಜ್ಞಾನದಿಂದ ಸುಟ್ಟುಹೋದಬಳಿಕ ಕರ್ಮದಲ್ಲಿ ಒಂದು ಭಾಗವು ಉಳಿದುಕೊಳ್ಳುವದೆಂದು ಕಲ್ಪಿಸುವದು ಯುಕ್ತಿವಿರುದ್ಧ. ಕೆಲವರು ಋಷಿಗಳು ಐಶ್ವರ್ಯವೇ ಮುಂತಾದವುಗಳನ್ನು ಕೊಡುವ ಬೇರೆಯ ಉಪಾಸನಗಳಲ್ಲಿ ನಿರತರಾಗಿದ್ದು ಆ ಐಶ್ವರ್ಯವು ಕ್ಷಯವಾಗಲು ವಿರಕ್ತರಾಗಿ ಪರಮಾತ್ಮಜ್ಞಾನದಿಂದ ಮುಕ್ತರಾದರು— ಎಂದೂ ಕಲ್ಪಿಸಬಹುದು. "ತತ್ತ್ವಮಸಿ" ಎಂಬ ಜ್ಞಾನದ ಫಲವು ಪ್ರತ್ಯಕ್ಷವಾಗಿರುವದರಿಂದ ಜ್ಞಾನದಿಂದ ಮುಕ್ತರಾಗುವರೋ, ಇಲ್ಲವೋ— ಎಂಬ ಶಂಕೆಗೂ ಕಾರಣವಿಲ್ಲ.

## ೨೦. ಅಕ್ಷರಾಧಿಕರಣ

**ಅಕ್ಷರಧಿಯಾಂ ತ್ವವರೋಧಃ ಸಾಮಾನ್ಯತದ್ಭಾವಾಭ್ಯಾಮೌಪಸದವತ್ ತದುಕ್ತಮ್ ॥ ೩೩ ॥**

ವಿಷಯವೂ ಸಂಶಯವೂ : ಪರಬ್ರಹ್ಮದ ವಿಷಯಕ್ಕೆ ಬೃಹದಾರಣ್ಯಕ (೩-೮-೮)ದಲ್ಲಿರುವ 'ಅಸ್ಥೂಲಮನಣು' ಮುಂತಾದ ಧರ್ಮಗಳನ್ನೂ ಮುಂಡಕದಲ್ಲಿರುವ "ಯತ್ತದದ್ರೇಶ್ಯಮಗ್ರಾಹ್ಯಮ್" ಮುಂತಾದ ಧರ್ಮಗಳನ್ನೂ ಹೀಗೆಯೇ ಮಿಕ್ಕ ಶ್ರುತಿಗಳಲ್ಲಿರುವ ವಿಶೇಷನಿಷೇಧರೂಪವಿಶೇಷಣಗಳನ್ನೂ ಎಲ್ಲಾ ಕಡೆಯಲ್ಲಿಯೂ ಸೇರಿಸಿಕೊಳ್ಳಬೇಕೆ, ಬಾರದೆ ?

ಪೂರ್ವಪಕ್ಷ. ಬೇರೆಬೇರೆಯ ಶ್ರುತಿಗಳಲ್ಲಿ ಬೇರೆಬೇರೆಯ ಧರ್ಮಗಳನ್ನು ಹೇಳಿರುವದರಿಂದ ಅಲ್ಲಲ್ಲಿ ಅಷ್ಟಷ್ಟೇ ವಿಶೇಷಣಗಳನ್ನು ತಿಳಿಯಬೇಕು.

ಸಿದ್ಧಾಂತ : ವಿಶೇಷನಿರಾಕರಣರೂಪವಾದ ಬ್ರಹ್ಮಪ್ರತಿಪಾದನೆಯು ಎಲ್ಲಾ ಕಡೆಯಲ್ಲಿಯೂ ಒಂದೇ ಆಗಿದೆ. ಪ್ರತಿಪಾದ್ಯಬ್ರಹ್ಮವೂ ಒಂದೇ ಆಗಿದೆ. ಸಾಮವೇದದಲ್ಲಿ ಹೇಳಿರುವ ಪುರೋಡಾಶಪ್ರದಾನಮಂತ್ರಗಳನ್ನು ಅಧ್ವರ್ಯುಗಳು ಉಪಯೋಗಿಸುವರು ; ಏಕೆಂದರೆ ಪುರೋಡಾಶಪ್ರದಾನವು

ಅಧ್ವರ್ಯುಕರ್ತೃಕವಾಗಿದೆ ; ಪ್ರಧಾನಕ್ಕೆ ಅಂಗಗಳು ಅಧೀನವಾಗಿವೆ. ಇದರಂತೆ ಇಲ್ಲಿಯೂ ಅಕ್ಷರವೆಂಬ ಪರಬ್ರಹ್ಮದ ವಿಶೇಷಣಗಳು ಎಲ್ಲಿದ್ದರೂ ಅಕ್ಷರಕ್ಕೆ ಸೇರಿಸಿಕೊಳ್ಳಬೇಕು.

## ೨೧. ಇಯದಧಿಕರಣ

### ಇಯದಾಮನನಾತ್ ॥ ೩೪ ॥

**ವಿಷಯವೂ ಸಂಶಯವೂ :** 'ದ್ವಾ ಸುಪರ್ಣಾ' ಎಂಬ ಮಂತ್ರವು ಮುಂಡಕಶ್ವೇತಾಶ್ವತರಗಳಲ್ಲಿದೆ ; 'ಋತಂ ಪಿಬನ್ತೌ' ಎಂದು ಕಠದಲ್ಲಿದೆ. ಇವೆರಡರಲ್ಲಿಯೂ ಒಂದೇ ವಿದ್ಯೆಯನ್ನು ಹೇಳಿದೆಯೆ, ಬೇರೆಬೇರೆಯ ವಿದ್ಯೆಗಳನ್ನು ಹೇಳಿದೆಯೆ ?

**ಪೂರ್ವಪಕ್ಷ :** ಬೇರೆಬೇರೆಯ ವಿದ್ಯೆಗಳಿವು. 'ದ್ವಾ ಸುಪರ್ಣಾ' ಎಂಬಲ್ಲಿ ಒಬ್ಬನು ಭೋಕ್ತೃ, 'ಋತಂ ಪಿಬನ್ತೌ' ಎಂಬಲ್ಲಿ ಇಬ್ಬರೂ ಭೋಕ್ತೃಗಳು. ಆದ್ದರಿಂದ ವೇದ್ಯರೂಪವು ಬೇರೆಬೇರೆಯಾಗಿರುವದರಿಂದ ವಿದ್ಯೆಗಳೂ ಬೇರೆಬೇರೆ.

**ಸಿದ್ಧಾಂತ :** ವಿದ್ಯೆಯು ಒಂದೇ. ಏಕೆಂದರೆ ಇವೆರಡು ಕಡೆಗಳಲ್ಲಿಯೂ ಜೀವದ್ವಿತೀಯನಾದ ಈಶ್ವರನನ್ನು ಪ್ರತಿಪಾದಿಸಿದೆ. ಇದು ಪರಮಾತ್ಮ ಪ್ರಕರಣವು. ಇದಲ್ಲದೆ ಪರಮಾತ್ಮನೊಡನೆ ತಾದಾತ್ಮ್ಯವನ್ನು ಹೇಳುವದಕ್ಕೆ ಜೀವನನ್ನು ತೆಗೆದುಕೊಂಡಿದೆ. ಪರಮಾತ್ಮವಿದ್ಯೆಯಲ್ಲಿ ಭೇದಾಭೇದಚಿಂತೆಯಿಲ್ಲ. ಆದ್ದರಿಂದ ಈ ಮೂರು ಕಡೆಗಳಲ್ಲಿಯೂ ಬ್ರಹ್ಮಧರ್ಮಗಳನ್ನು ಉಪಸಂಹಾರಮಾಡಿಕೊಂಡು ತಿಳಿಯಬೇಕು.

## ೨೨. ಅಂತರತ್ವಾಧಿಕರಣ

### ಅಂತರಾ ಭೂತಗ್ರಾಮವತ್ ಸ್ವಾತ್ಮನಃ ॥ ೩೫ ॥

**ವಿಷಯವೂ ಸಂಶಯವೂ :** ಬೃಹದಾರಣ್ಯಕದಲ್ಲಿ ಉಷಸ್ತಕಹೋಲ ಪ್ರಶ್ನೆಗಳಲ್ಲಿ 'ಯತ್ಸಾಕ್ಷಾದಪರೋಕ್ಷಾದ್ಬ್ರಹ್ಮ' ಎಂದು ಹೇಳಿರುವದು ಒಂದೇ ವಿದ್ಯೆಯೊ, ಬೇರೆಬೇರೆಯೊ ?

**ಪೂರ್ವಪಕ್ಷ :** ಎರಡು ಸಲ ಹೇಳಿರುವದರಿಂದ ಬೇರೆಬೇರೆ. ಅಭ್ಯಾಸದಿಂದ ಕರ್ಮಭೇದವಾಗುವಂತೆ ಅಭ್ಯಾಸದಿಂದ ವಿದ್ಯಾಭೇದವೆಂದೊಪ್ಪಬೇಕು.

ಸಿದ್ಧಾಂತ : ಸರ್ವಾಂತರನಾದ ಆತ್ಮನನ್ನೇ ಎರಡೂ ಕಡೆಯಲ್ಲಿಯೂ ಇಬ್ಬರು ಆತ್ಮರು ಒಂದೇ ದೇಹದಲ್ಲಿರುವಂತಿಲ್ಲ. ಸರ್ವಭೂತಗಳಲ್ಲಿಯೂ ಒಬ್ಬನೇ ಸರ್ವಾಂತರಾತ್ಮನಿರುವನೆಂದು ಶ್ರುತಿಯೂ ಇದೆ. ತಾಂಡಿಗಳ ಉಪನಿಷತ್ತಿನಲ್ಲಿ 'ತತ್ತ್ವಮಸಿ' ಎಂದು ಒಂಬತ್ತು ಸಲ ಹೇಳಿದ್ದರೂ ಆಶಂಕಾಂತರನಿರಾಕರಣಕ್ಕಾಗಿ ಒಬ್ಬನನ್ನೇ ಹೇಳಿದೆ ಎಂದು ನಿರ್ಣಯಿಸುವಂತೆ ಇಲ್ಲಿಯೂ ಮೊದಲನೆಯ ಬ್ರಾಹ್ಮಣದಲ್ಲಿ ಆತ್ಮನ ಅಸ್ತಿತ್ವವನ್ನೂ ಎರಡನೆಯ ಬ್ರಾಹ್ಮಣದಲ್ಲಿ ಅವನಿಗೇ ಅಶನಾಯಾದ್ಯತೀತತ್ವವನ್ನೂ ಹೇಳಿದೆ ಎಂದು ನಿರ್ಣಯಿಸಬಹುದು. ಆದ್ದರಿಂದ ಒಂದೇ ವಿದ್ಯೆ.

## ೨೩. ವ್ಯತಿಹಾರಾಧಿಕರಣ

### ವ್ಯತಿಹಾರೋ ವಿಶಿಂಷಂತಿ ಹೀತರವತ್ || ೩೭ ||

ವಿಷಯವೂ ಸಂಶಯವೂ : ಐತರೇಯಿಗಳೂ ಜಾಬಾಲರೂ ಜೀವನು ಈಶ್ವರರೂಪನೆಂದೂ ಈಶ್ವರನೇ ಜೀವನೆಂದೂ ಪಠಿಸಿದ್ದಾರೆ. ಇಲ್ಲಿ ಎರಡೂ ರೂಪವಾದ ಮತಿಯನ್ನು ಮಾಡಬೇಕೆ, ಒಂದೇ ರೂಪವಾಗಿ ಮಾಡಿದರೆ ಸಾಕೆ ?

ಪೂರ್ವಪಕ್ಷ : ಒಂದೇ ರೂಪವಾಗಿ ಚಿಂತಿಸಬೇಕು. ಏಕೆಂದರೆ ಇಲ್ಲಿ ಏಕತ್ವವೊಂದನ್ನೇ ಹೇಳಿದೆ. ಮತ್ತೇನಾದರೂ ವಿಶೇಷವನ್ನು ಹೇಳಿದೆ ಎನ್ನುವದಾದರೆ, ಆಗ ದೋಷವುಂಟಾಗುವದು. ಹೇಗೆಂದರೆ: ಸಂಸಾರಿಯನ್ನು ಈಶ್ವರನೆಂದು ಚಿಂತಿಸಿದರೆ ಉತ್ಕರ್ಷವಾಗುವದು, ಈಶ್ವರನನ್ನು ಜೀವನೆಂದು ಚಿಂತಿಸಿದರೆ ನಿಕರ್ಷವಾಗುವದು. ಆದ್ದರಿಂದ ಒಂದೇ ಮತಿಯನ್ನು ಮಾಡಬೇಕು. ಎರಡು ಬಗೆಯಲ್ಲಿ ಪಠಿಸಿರುವದು ಏಕತ್ವದ ದೃಢೀಕಾರಕ್ಕೆ.

ಸಿದ್ಧಾಂತ : ಸರ್ವಾತ್ಮತ್ವವೇ ಮುಂತಾದ ಗುಣಗಳಂತೆ ಇಲ್ಲಿ ಎರಡು ಬಗೆಯಿಂದಲೂ ಚಿಂತನೆಮಾಡಬೇಕೆಂದೇ ಹೇಳಿದೆ. ಹಾಗಿಲ್ಲದಿದ್ದರೆ ಎರಡು ಬಗೆಯ ಪಾಠವು ವ್ಯರ್ಥವಾಗುವದು. ಈ ಪ್ರಕಾರದಿಂದ ಏಕತ್ವವನ್ನೇ ಚಿಂತನೆಮಾಡಿದಂತೆ ಆಗುತ್ತದೆ ; ಶ್ರುತಿಗೆ ಅನುಸಾರವಾಗಿ ಎರಡು ಬಗೆಯಿಂದಲೂ ಚಿಂತಿಸಬೇಕು, ಅದರ ಫಲವಾಗಿ ಏಕತ್ವದೃಢೀಕಾರವು ತಾನೇ ಸಿದ್ಧಿಸುತ್ತದೆ.

## ೨೪. ಸತ್ಯಾದ್ಯಧಿಕರಣ

ಸೈವ ಹಿ ಸತ್ಯಾದಯಃ ॥ ೩೮ ॥

**ವಿಷಯವೂ ಸಂಶಯವೂ :** ಬೃಹದಾರಣ್ಯಕದಲ್ಲಿ ಸತ್ಯವಿದ್ಯೆಯನ್ನು ವಿಧಿಸಿದ ಬಳಿಕ 'ತದ್ಯತ್ತತ್ಸತ್ಯಮ್' ಎಂದು ಹೇಳಿರುವುದು ಬೇರೆ ವಿದ್ಯೆಯನ್ನು ಹೇಳುವದೊ, ಒಂದೇ ವಿದ್ಯೆಯನ್ನು ಹೇಳುವದೊ ?

**ಪೂರ್ವಪಕ್ಷ :** ಇವು ಎರಡು ವಿದ್ಯೆಗಳು. ಏಕೆಂದರೆ ಬೇರೆಬೇರೆ ಫಲಗಳನ್ನು ಹೇಳಿದೆ. 'ತದ್ಯತ್ತತ್ಸತ್ಯಮ್' ಎಂದು ಪ್ರಕೃತಾಕರ್ಷಣಮಾಡಿರುವದು ಉಪಾಸ್ಯವು ಒಂದೇ ಎಂಬ ಕಾರಣದಿಂದ.

**ಸಿದ್ಧಾಂತ :** ಒಂದೇ ಸತ್ಯವಿದ್ಯೆಯಿದು. ಏಕೆಂದರೆ ಪ್ರಕೃತಾಕರ್ಷಣವಿದೆ. ವಿದ್ಯೆಗಳು ಬೇರೆಬೇರೆ ಎಂಬುದಕ್ಕೆ ಇಲ್ಲಿ ಕಾರಣಾಂತರವು ಯಾವದೂ ಇಲ್ಲವಾದ್ದರಿಂದ ಹಿಂದಿನ ವಿದ್ಯೆಗೆ ಸೇರುವಂತೆಯೇ ಪ್ರಕೃತಾಕರ್ಷಣವನ್ನು ಮಾಡಿದೆ– ಎಂದು ನಿರ್ಣಯಿಸುವದು ಯುಕ್ತ. ಅಹಂತಿ ಅಹನಿತಿ– ಎಂದು ಅಂಗಾಂತರವನ್ನು ಹೇಳಿರುವದನ್ನು ಹೊಗಳುವದಕ್ಕಾಗಿ ಫಲಭೇದವನ್ನು ಹೇಳಿದೆ. ಅರ್ಥವಾದದಿಂದಲೇ ಫಲವನ್ನು ಕಲ್ಪಿಸಬೇಕಾಗಿರುವದರಿಂದಲೂ ಇದು ಒಂದೇ ವಿದ್ಯೆಯಾಗಿರುವದರಿಂದಲೂ ಬಹುಫಲಗಳನ್ನು ಆ ವಿದ್ಯೆಗೇ ಸೇರಿಸಿಕೊಳ್ಳುವದು ಯುಕ್ತ. ಆದ್ದರಿಂದ ಇದೊಂದೇ ಸತ್ಯವಿದ್ಯೆ.

## ೨೫. ಕಾಮಾದ್ಯಧಿಕರಣ

ಕಾಮಾದೀತರತ್ರ ತತ್ರ ಚಾಯತನಾದಿಭ್ಯಃ ॥ ೩೯ ॥

**ವಿಷಯವೂ ಸಂಶಯವೂ :** ಛಾಂದೋಗ್ಯದಲ್ಲಿ "ಏಷ ಆತ್ಮಾಪಹತಪಾಪ್ಮಾ" (ಛಾಂ. ೮–೧–೫) ಎಂದು ಮುಂತಾಗಿ ಹೇಳಿರುವದೂ ಬೃಹದಾರಣ್ಯಕದಲ್ಲಿ "ಸ ವಾ ಏಷ ಮಹಾನಜ ಆತ್ಮಾ" (ಬೃ. ೪–೪–೨೨) ಎಂದು ಮುಂತಾಗಿ ಹೇಳಿರುವದೂ ಒಂದೇ ವಿದ್ಯೆಯೆ, ಅಥವಾ ಬೇರೆ ಬೇರೆಯೆ ?

**ಪೂರ್ವಪಕ್ಷ :** ಬೇರೆಬೇರೆ ; ಏಕೆಂದರೆ ಶ್ರುತಿಗಳಲ್ಲಿ ಬೇರೆಬೇರೆ ಹೇಳಿದೆ.

**ಸಿದ್ಧಾಂತ :** ಹೃದಯವೆಂಬ ಆಯತನವು ಸಮಾನವಾಗಿದೆ, ವೇದ್ಯನಾದ ಈಶ್ವರನೂ ಸಮಾನನಾಗಿರುತ್ತಾನೆ, ಅವನಿಗೆ ಹೇಳಿರುವ ಸೇತುತ್ವಾದಿ

ಧರ್ಮಗಳೂ ಸಮಾನವಾಗಿವೆ. ಆದರೆ ಇಲ್ಲಿ ಛಾಂದೋಗ್ಯದಲ್ಲಿ ಸಗುಣವಿದ್ಯೆಯನ್ನು ಹೇಳಿದೆ, ಬೃಹದಾರಣ್ಯಕದಲ್ಲಿ ನಿರ್ಗುಣವಿದ್ಯೆಯನ್ನೇ ಹೇಳಿದೆ. ಗುಣವುಳ್ಳ ಬ್ರಹ್ಮವು ಒಂದೇ ಆಗಿರುವದರಿಂದ ಅದರ ವಿಭೂತಿಗಳನ್ನು ತಿಳಿಸುವದಕ್ಕಾಗಿ ಇಲ್ಲಿ ಗು ಣೋ ಪ ಸಂ ಹಾ ರ ವ ನ್ನು ಹೇಳಿದೆಯೇ ಹೊರತು ಉಪಾಸನೆಗಲ್ಲ.

## ೨೬. ಆದರಾಧಿಕರಣ

**ಆದರಾದಲೋಪಃ ॥ ೪೦ ಉಪಸ್ಥಿತೇಽತಸ್ತದ್ವಚನಾತ್ ೪೧**

ವಿಷಯವೂ ಸಂಶಯವೂ : ವೈಶ್ವಾನರವಿದ್ಯೆಯಲ್ಲಿ ಹೇಳಿರುವ ಪ್ರಾಣಾಗ್ನಿಹೋತ್ರವು ಭೋಜನಲೋಪವಾದರೆ ತಾನೂ ಇಲ್ಲವಾಗುವದೊ, ಅಥವಾ ಉಳಿದುಕೊಂಡಿರುವದೊ ?

ಪೂರ್ವಪಕ್ಷ : ಅದನ್ನು ಆಗಲೂ ಮಾಡಬೇಕು. ಏಕೆಂದರೆ ಶ್ರುತಿಯಲ್ಲಿ ಅತಿಥಿಭೋಜನವನ್ನು ಮೊದಲು ಮಾಡಿಸಬಾರದೆಂದು ನಿಂದಿಸಿ ಪ್ರಾಣಾಗ್ನಿಹೋತ್ರವನ್ನು ಮಾಡುವ ಯಜಮಾನನಿಗೇ ಮೊದಲು ಭೋಜನವಾಗಬೇಕೆಂದು ಹೇಳಿ ಅದರಲ್ಲಿ ಆದರವನ್ನು ತೋರಿಸುತ್ತದೆ. ಆದ್ದರಿಂದ ಭೋಜನಲೋಪವಾದರೂ ದ್ರವ್ಯಾಂತರದಿಂದ ಅಗ್ನಿಹೋತ್ರವನ್ನು ಮಾಡಬೇಕು.

ಸಿದ್ಧಾಂತ : ಭೋಜನದ್ರವ್ಯದಿಂದಲೇ ಮಾಡಬೇಕು ಎಂದು ಹೇಳಿರುವದರಿಂದ ಭೋಜನಲೋಪವಾದರೆ ಅದಕ್ಕೂ ಲೋಪವೇ. ಇದರಲ್ಲಿ ಪ್ರಾಕೃತಾಗ್ನಿಹೋತ್ರದ ಧರ್ಮಗಳೇನೂ ಇಲ್ಲ. ಭೋಜನಕಾಲವನ್ನೇ ಇದಕ್ಕೆ ಹೇಳಿರುವದರಿಂದ– ಅಗ್ನಿಹೋತ್ರದ ಕಾಲವೂ ಇದಕ್ಕಿಲ್ಲ. ಆದರಶ್ರುತಿಯು ಭೋಜನಪಕ್ಷದಲ್ಲಿ ಪ್ರಾಥಮ್ಯವನ್ನು ಹೇಳುವದಕ್ಕೆ ಬಂದಿದೆಯೇ ಹೊರತು ಈ ಅಗ್ನಿಹೋತ್ರವು ನಿತ್ಯವೆಂದು ತಿಳಿಸುವದಕ್ಕೆ ಬಂದಿಲ್ಲ.

## ೨೭. ತನ್ನಿರ್ಧಾರಣಾಧಿಕರಣ

**ತನ್ನಿರ್ಧಾರಣಾನಿಯಮಸ್ತದ್ದೃಷ್ಟೇಃ ಪೃಥಕ್ ಹಿ ಅಪ್ರತಿಬನ್ಧಃ ಫಲಮ್ ॥ ೪೨ ॥**

ವಿಷಯವೂ ಸಂಶಯವೂ : ಕರ್ಮಾಂಗವನ್ನವಲಂಬಿಸಿದ ಉದ್ಗೀಥವೇ ಮುಂತಾದವುಗಳ ಉಪಾಸನೆಗಳಿವೆಯಷ್ಟೆ. ಅವು ನಿತ್ಯವೊ, ಅನಿತ್ಯವೊ ?

**ಪೂರ್ವಪಕ್ಷ :** ನಿತ್ಯವೇ. ಏಕೆಂದರೆ ಅನಾರಭ್ಯಾಧೀತವಾಗಿದ್ದರೂ ಇವು ಉದ್ಗೀಥಾದಿದ್ವಾರದಿಂದ ಕ್ರತುಸಂಬದ್ಧವಾಗಿರುವದರಿಂದ ಮಿಕ್ಕ ಅಂಗಗಳಂತೆ ಇವೂ ಕ್ರತುಪ್ರಯೋಗವಚನಕ್ಕೇ ಸಂಬಂಧಿಸಿರುತ್ತವೆ. ಇವಕ್ಕೆ ಫಲವನ್ನು ಹೇಳಿರುವದು ಅರ್ಥವಾದಮಾತ್ರ. ಆದ್ದರಿಂದ 'ಪರ್ಣಮಯೀ ಜುಹೂರ್ಭವತಿ' ಮುಂತಾದವುಗಳಂತೆ ಇವನ್ನು ನಿತ್ಯವೆಂದು ಎಣಿಸಬೇಕು.

**ಸಿದ್ಧಾಂತ :** ಇವು ಕರ್ಮಗಳಿಗೆ ನಿತ್ಯವಾಗಿ ಸಂಬದ್ಧವಾಗಿರುವದಿಲ್ಲ. ಇವುಗಳು ಅನಿಯತವೆಂಬುದನ್ನು "ತೇನೋಭೌ ಕುರುತಃ ಯಶ್ಚೈತದೇವಂ ವೇದ ಯಶ್ಚ ನ ವೇದ" ಎಂಬುದೇ ಮುಂತಾದ ಶ್ರುತಿಯು ತಿಳಿಸುತ್ತದೆ. ಈ ಬಗೆಯ ಉಪಾಸನೆಗೆ ಬೇರೆ ಫಲವನ್ನು ಹೇಳಿದೆ. ಪರ್ಣಮಯೀತ್ವಾದಿಗಳು ಕ್ರಿಯಾರೂಪವಲ್ಲದ್ದರಿಂದಲೂ ಅವಕ್ಕೆ ಸ್ವತಂತ್ರಫಲವನ್ನೂ ಕಲ್ಪಿಸುವದು ಆಗುವಂತಿಲ್ಲವಾದ್ದರಿಂದಲೂ ಅವುಗಳಿಗೆ ಕ್ರತುಪ್ರವೇಶವು ಯುಕ್ತವು. ಆದರೆ ಉಪಾಸನೆಗಳು ಕ್ರಿಯಾತ್ಮಕವಾಗಿರುವದರಿಂದಲೂ ಅವನ್ನು ಬೇರೆಯಾಗಿ ವಿಧಿಸಬಹುದಾಗಿದೆ ; ಅವಕ್ಕೆ ಫಲವೂ ಬೇರೆಯಾಗಿರಬಹುದಾಗಿದೆ. ಆದ್ದರಿಂದ ಕ್ರತ್ವಾಶ್ರಯವಾದ ಗೋದೋಹನಾದಿಗಳಂತೆ ಇವೂ ಅನಿತ್ಯವೇ. ಆದ್ದರಿಂದಲೇ ಇವನ್ನು ಕಲ್ಪಸೂತ್ರಗಳಲ್ಲಿ ಸೇರಿಸಿಲ್ಲ.

## ೨೮. ಪ್ರದಾನಾಧಿಕರಣ

### ಪ್ರದಾನವದೇವ ತದುಕ್ತಮ್ || ೪೨ ||

**ವಿಷಯವೂ ಸಂಶಯವೂ :** ಬೃಹದಾರಣ್ಯಕದಲ್ಲಿ "ವದಿಷ್ಯಾಮ್ಯೇವಾಹಮಿತಿ ವಾಗ್ದಧ್ರೇ" ಎಂದು ಪ್ರಾರಂಭಿಸಿ ಅಧ್ಯಾತ್ಮವಾಗಿ ಪ್ರಾಣವನ್ನೂ ಅಧಿದೈವವಾಗಿ ವಾಯುವನ್ನೂ ಶ್ರೇಷ್ಠನೆಂದು ಗೊತ್ತುಪಡಿಸಿದೆ. ಹೀಗೆಯೇ ಛಾಂದೋಗ್ಯದಲ್ಲಿ ಪ್ರಾಣವಾಯುಗಳನ್ನು ಸಂವರ್ಗಗಳೆಂದು ನಿರ್ಧರಿಸಿದೆ. ಈ ವಾಯುಪ್ರಾಣಗಳು ಬೇರೆಬೇರೆಯೆ, ಒಂದೆ ?

**ಪೂರ್ವಪಕ್ಷ :** ಒಂದೇ. ಏಕೆಂದರೆ ಇವು ಒಂದೇ ತತ್ತ್ವವೆಂದು ಶ್ರುತಿಯಲ್ಲಿ ಹೇಳಿದೆ.

**ಸಿದ್ಧಾಂತ :** ಇವುಗಳನ್ನು ಬೇರೆಬೇರೆಯೆಂದೇ ಉಪಾಸನೆಮಾಡಬೇಕು. ಏಕೆಂದರೆ ಇವನ್ನು ಬೇರೆಬೇರೆಯಾಗಿ ಉಪಾಸನೆಮಾಡಬೇಕೆಂದು ಉಪದೇಶಿ

ಸಿದೆ. ತತ್ತ್ವತಃ ಭೇದವಿಲ್ಲದಿದ್ದರೂ ಅವಸ್ಥಾಭೇದವಿರುವದರಿಂದ ಉಪದೇಶ ಭೇದವಶದಿಂದ ಬೇರೆಬೇರೆಯಾಗಿ ಚಿಂತಿಸುವದೇ ಯುಕ್ತ. ತ್ರಿಪುರೋಡಾಶೇಷ್ಟಿಯಲ್ಲಿ ಇಂದ್ರ ರಾಜ, ಇಂದ್ರ ಅಧಿರಾಜ, ಇಂದ್ರ ಸ್ವರಾಜ- ಎಂದು ಬೇರೆಬೇರೆ ದೇವತೆಗಳೆಂದು ಪ್ರದಾನಪೃಥಕ್ತ್ವವನ್ನು ಹೇಳಿರುವಂತೆ ಇಲ್ಲಿಯೂ ಬೇರೆಬೇರೆ ಎಂದೇ ಚಿಂತಿಸಬೇಕೆಂದು ನಿಶ್ಚಯಿಸಬೇಕು.

## ೨೯. ಲಿಂಗಭೂಯಸ್ತ್ವಾಧಿಕರಣ

ಲಿಂಗಭೂಯಸ್ತ್ವಾತ್ತದ್ಧಿ ಬಲೀಯಸ್ತದಪಿ ||೪೪|| ಪೂರ್ವವಿಕಲ್ಪಃ ಪ್ರಕರಣಾತ್ ಸ್ಯಾತ್ ಕ್ರಿಯಾ ಮಾನಸವತ್ ||೪೫|| ಅತಿದೇಶಾಚ್ಚ ||೪೬|| ವಿದ್ಯೈವ ತು ನಿರ್ಧಾರಣಾತ್ ||೪೭|| ದರ್ಶನಾಚ್ಚ ||೪೮|| ಶ್ರುತ್ಯಾದಿಬಲೀಯಸ್ತ್ವಾಚ್ಚ ನ ಬಾಧಃ || ೪೯ || ಅನುಬನ್ಧಾದಿಭ್ಯಃ ಪ್ರಜ್ಞಾನ್ತರಪೃಥಕ್ತ್ವವತ್ ದೃಷ್ಟಶ್ಚ ತದುಕ್ತಮ್ || ೫೦ || ನ ಸಾಮಾನ್ಯಾದಪ್ಯುಪಲಬ್ಧೇರ್ಮೃತ್ಯುವನ್ನ ಹಿ ಲೋಕಾಪತ್ತಿಃ ||೫೧|| ಪರೇಣ ಚ ಶಬ್ದಸ್ಯ ತಾದ್ವಿಧ್ಯಂ ಭೂಯಸ್ತ್ವಾತ್ತ್ವನುಬನ್ಧಃ ||

ವಿಷಯವೂ ಸಂಶಯವೂ : ಅಗ್ನಿರಹಸ್ಯದಲ್ಲಿ ಹೇಳಿರುವ ಮನಶ್ಚಿದಾದಿಗಳು ಕ್ರಿಯಾನುಪ್ರವೇಶಿಗಳೆಂದು ತಿಳಿಯಬೇಕೊ, ಅಥವಾ ಸ್ವತಂತ್ರವಾಗಿ ವಿದ್ಯಾತ್ಮಕಗಳೆಂದು ತಿಳಿಯಬೇಕೊ ?

ಪೂರ್ವಪಕ್ಷ : ಕ್ರಿಯಾಪ್ರಕರಣದಲ್ಲಿರುವದರಿಂದ ಇವು ಕ್ರಿಯಾನುಪ್ರವೇಶಿಗಳು.

ಸಿದ್ಧಾಂತ : ಇವು ವಿದ್ಯಾತ್ಮಕಗಳೆನ್ನುವದಕ್ಕೆ ಇಲ್ಲಿ ಅನೇಕ ಲಿಂಗಗಳಿವೆ. ಇವು ಸಾಂಪಾದಿಕಾಗ್ನಿಪ್ರಶಂಸಾರೂಪವಾಗಿರುವದರಿಂದಲೂ ಇಲ್ಲಿ ಸಾಂಪಾದಿಕಾಗ್ನಿಗಳನ್ನು ಹಿಂದೆ ಹೇಳಿರುವ ಕ್ರಿಯಾನುಪ್ರವೇಶಿಯಾದ ಅಗ್ನಿಯಿಂದ ಅತಿದೇಶಮಾಡಿರುವದರಿಂದಲೂ ಇದು ಯುಕ್ತವಲ್ಲವೆನ್ನಬಾರದು ; ಏಕೆಂದರೆ ಇವು ವಿದ್ಯಾತ್ಮಕವೇ ಎಂದು ಶ್ರುತಿಯು ಸ್ಪಷ್ಟವಾಗಿ ಹೇಳಿದೆ. ಶ್ರುತ್ಯಾದಿಗಳು ಪ್ರಕರಣಕ್ಕಿಂತ ಪ್ರಬಲವೆಂದು ಹಿಂದಿನ ಕಾಂಡದಲ್ಲಿಯೇ ಹೇಳಿದೆ. ಇವುಗಳು ವಿದ್ಯಾಚಿತಗಳೆಂದೇ ಶ್ರುತಿಯಲ್ಲಿದೆ ; ಈ ಜ್ಞಾನಿಗೆ ಸತತವಾಗಿ ಸರ್ವಭೂತಗಳೂ ಈ ಅಗ್ನಿಚಯನವನ್ನು ಮಾಡುವವು- ಎಂದು

ಇವುಗಳ ಸಾತತ್ಯವನ್ನೂ ಹೇಳಿದೆ. ಇದೆಲ್ಲ ಅರ್ಥವಾದವೆಂದು ಹೇಳುವದು ಯುಕ್ತವಲ್ಲ; ಏಕೆಂದರೆ ಇಲ್ಲಿ ಮತ್ತೊಂದು ವಿಸ್ಪಷ್ಟವಾದ ವಿಧಿಯಿಲ್ಲ. ಮನ ಆದಿವ್ಯಾಪಾರಗಳಲ್ಲಿ ಕರ್ಮದ ಅವಯವಗಳನ್ನು ಸಂಪಾದನೆಮಾಡಿರುತ್ತದೆ. ನಿಜವಾಗಿ ಕರ್ಮಾಂಗವಾಗಿದ್ದರೆ ಹೀಗೆ ಸಂಪಾದನೆಮಾಡತಕ್ಕದ್ದೇನೂ ಇರ ಲಿಲ್ಲ. ಹೀಗೆ ಕ್ರಿಯಾವಯವಗಳ ಅನುಬಂಧವೇ ಮುಂತಾದ ಕಾರಣಗಳಿಂದ ಮನಶ್ಚಿದಾದಿಗಳು ಸ್ವತಂತ್ರವೆಂದೇ ಕಾಣುತ್ತದೆ. ಉಪಾಸನಾಂತರಗಳಲ್ಲಿ ಆಯಾ ಅನುಬಂಧವಿರುವದರಿಂದ ಹೇಗೆ ಕರ್ಮಕ್ಕೆ ಸಂಬಂಧವಿಲ್ಲವೋ ಹಾಗೆ ಯೇ ಇಲ್ಲಿಯೂ ತಿಳಿಯಬೇಕು. ಮಾನಸಗ್ರಹದಂತೆ ಇವೂ ಕ್ರಿಯೆಗೆ ಸಂಬಂಧಪಟ್ಟಿರುವವೆಂದು ಹೇಳುವದು ಈ ಶ್ರುತ್ಯಾದಿಗಳಿಗೆ ವಿರುದ್ಧವಾಗಿರು ತ್ತದೆ. ಹಿಂದುಮುಂದಿನ ಬ್ರಾಹ್ಮಣಗಳಲ್ಲಿ ವಿದ್ಯಾವಿಷಯವೇ ಇರುವದರಿಂದ ಇಲ್ಲಿಯೂ ಹಾಗೆಯೇ ಎಂದು ಗೊತ್ತುಪಡಿಸುವದು ಯುಕ್ತವಾಗಿದೆ. ಅಗ್ನಿಯ ಅವಯವಗಳು ಅನೇಕವನ್ನು ಇಲ್ಲಿ ಸಂಪಾದನೆಮಾಡಬೇಕೆಂಬ ಕಾರಣದಿಂದ ಮಾತ್ರವೇ ಇವಕ್ಕೆ ಅಗ್ನಿಯ ಸಂಬಂಧವೇ ಹೊರತು ಕರ್ಮಾಂಗವೆಂಬ ಕಾರಣದಿಂದಲ್ಲ.

## ೩೦. ಐಕಾತ್ಮ್ಯಾಧಿಕರಣ

ಏಕ ಆತ್ಮನಃ ಶರೀರೇ ಭಾವಾತ್ || ೫೩ || ವ್ಯತಿರೇಕಸ್ತದ್ಭಾವ-ಭಾವಿತ್ವಾನ್ನ ತೂಪಲಬ್ಧಿವತ್ || ೫೪ ||

**ವಿಷಯವೂ ಸಂಶಯವೂ :** ದೇಹವ್ಯತಿರಿಕ್ತನಾದ ಆತ್ಮನೊಬ್ಬನು ಇದಾನೆಯೆ, ಇಲ್ಲವೆ ?

**ಪೂರ್ವಪಕ್ಷ :** ಶರೀರಾಕಾರರೂಪವಾಗಿ ಪರಿಣತವಾದ ಭೂತಗಳಿಂದ ಮದಶಕ್ತಿಯಂತೆ ಚೈತನ್ಯವುಂಟಾಗಬಹುದು. ಚೈತನ್ಯವಿಶಿಷ್ಟವಾದ ಶರೀರವೇ ಪುರುಷನು. ಏಕೆಂದರೆ ಶರೀರವಿದ್ದರೇ ಚೈತನ್ಯವಿರುತ್ತದೆ. ಪ್ರಾಣಚೇಷ್ಟೆಯೇ ಮುಂತಾದ ಆತ್ಮಧರ್ಮಗಳೂ ಹಾಗೆಯೇ ದೇಹದಲ್ಲಿಯೇ ಕಾಣುತ್ತವೆ.

**ಸಿದ್ಧಾಂತ :** ದೇಹಕ್ಕಿಂತ ವ್ಯತಿರಿಕ್ತನಾದ ಆತ್ಮನಿದಾನೆ. ದೇಹವಿದ್ದರೂ ಆತ್ಮಧರ್ಮಗಳು ಅದರಲ್ಲಿ ಕಾಣಿಸುವದಿಲ್ಲ; ಏಕೆಂದರೆ ಸತ್ತ ಶರೀರದಲ್ಲಿ ಅವು

ಇರುವದಿಲ್ಲ. ಶರೀರವು ಪಾತವಾದ ಬಳಿಕ ಅವು ಇಲ್ಲವೆಂದು ನಿರ್ಣಯಿಸು ವದಕ್ಕೆ ಕಾರಣವಿಲ್ಲ; ದೇಹಾಂತರದಲ್ಲಿ ಅವು ಇರಬಹುದೆಂಬ ಸಂಶಯವೇ ಪೂರ್ವಪಕ್ಷದ ನಿರಾಕರಣೆಗೆ ಸಾಕಾಗಿದೆ. ಚೈತನ್ಯವು ವಿಷಯಿ, ಭೂತ, ಭೌತಿಕಗಳು ವಿಷಯ; ಆದ್ದರಿಂದ ಅದು ಅವುಗಳ ಧರ್ಮವಾಗಲಾರದು. ಚೈತನ್ಯಸ್ವರೂಪನೇ ಆತ್ಮನೆಂಬುದು ನಮ್ಮ ಮತ. ದೇಹವಿದ್ದರೇ ಚೈತನ್ಯವು ಕಾಣುವದೆಂಬುದು ಪ್ರದೀಪಾದಿಗಳಂತೆ ಅದು ಉಪಕರಣವಾಗಿರುವದರಿಂದ. ದೇಹವು ನಿಶ್ಚೇಷ್ಟವಾಗಿರುವ ಸ್ವಪ್ನದಲ್ಲಿಯೂ ಅರಿವು ಕಾಣುತ್ತದೆ. ಆದ್ದ ರಿಂದ ದೇಹವ್ಯತಿರಿಕ್ತನಾದ ಆತ್ಮನುಂಟೆಂಬ ವಾದದಲ್ಲಿ ದೋಷವಿಲ್ಲ.

## ೩೧. ಅಂಗಾವಬದ್ಧಾಧಿಕರಣ

**ಅಂಗಾವಬದ್ಧಾಸ್ತು ನ ಶಾಖಾಸು ಹಿ ಪ್ರತಿವೇದಮ್ ॥ ೫೫ ॥**
**ಮನ್ತ್ರಾದಿವದ್ವಾಽವಿರೋಧಃ ॥ ೫೬ ॥**

ವಿಷಯವೂ ಸಂಶಯವೂ: ಅಂಗಾವಬದ್ಧವಾದ ಉದ್ಗೀಥಾದ್ಯುಪಾಸನೆಗಳು ಆಯಾ ಶಾಖೆಗಳಿಗೆ ಇಟ್ಟುಕೊಳ್ಳತಕ್ಕವೋ, ಎಲ್ಲಾ ಶಾಖೆಗಳಿಗೂ ಹೊಂದುವವೋ ?

ಪೂರ್ವಪಕ್ಷ: ಸಾಮಾನ್ಯವಾಗಿ ವಿಹಿತವಾಗಿರುವ ಉದ್ಗೀಥಾದಿಗಳ ಆಕಾಂಕ್ಷೆಯು ಆಯಾ ಶಾಖೆಯ ವಿಶೇಷವನ್ನು ತೆಗೆದುಕೊಂಡರೇ ಪೂರ್ತಿಯಾಗುತ್ತದೆ. ಶಾಖಾಂತರವಿಹಿತವಾದ ವಿಶೇಷವನ್ನು ತೆಗೆದುಕೊಳ್ಳುವದಕ್ಕೆ ಕಾರಣವಿಲ್ಲ. ಆದ್ದರಿಂದ ಆಯಾ ಶಾಖೆಗೇ ಇವನ್ನು ಇಟ್ಟುಕೊಳ್ಳತಕ್ಕದ್ದು ಯುಕ್ತ.

ಸಿದ್ಧಾಂತ: ಸಾಮಾನ್ಯಶ್ರುತಿಯನ್ನು ಸ್ವಶಾಖೆಯ ವಿಶೇಷಕ್ಕೆ ನಿಲ್ಲಿಸುವದು ಯುಕ್ತವಲ್ಲ. ಶ್ರುತಿಯು ಸಂನಿಧಿಗಿಂತ ಪ್ರಬಲವಾದ್ದರಿಂದ ಸಂನಿಧಿಯಿಂದ ಆಯಾ ಶಾಖೆಯ ಉದ್ಗೀಥಾದಿಗಳೆಂದು ಗೊತ್ತುಪಡಿಸುವದು ಸರಿಯಲ್ಲ. ಮಂತ್ರಗಳು, ಕರ್ಮಗಳು, ಗುಣಗಳು– ಇವನ್ನು ಒಂದು ಶಾಖೆಯಲ್ಲಿ ಹೇಳಿದ್ದರೂ ಶಾಖಾಂತರದಲ್ಲಿ ತೆಗೆದುಕೊಂಡಿರುವದು ಶ್ರುತಿಯಲ್ಲಿ ಕಂಡು ಬಂದಿರುವಂತೆ ಇಲ್ಲಿಯೂ ಆಗಬಹುದು. ಆಶ್ರಯವಾದ ಕರ್ಮಾಂಗಗಳು ಹೇಗೆ ಎಲ್ಲೆಲ್ಲಿಯೂ ಅನುವೃತ್ತವಾಗಿರುವವೋ ಹಾಗೆಯೇ ಅವುಗಳನ್ನು

ಆಶ್ರಯಿಸಿಕೊಂಡಿರುವ ಉಪಾಸನೆಗಳೂ ಅನುವೃತ್ತವಾಗಿರಬಹುದು. ಆದ್ದರಿಂದ ಈ ಉಪಾಸನೆಗಳು ಎಲ್ಲಾ ಶಾಖೆಗಳಿಗೂ ಅನ್ವಯಿಸುವವು.

## ೩೨. ಭೂಮಜ್ಯಾಯಸ್ತ್ವಾಧಿಕರಣ

**ಭೂಮ್ನಃ ಕ್ರತುವಜ್ಜ್ಯಾಯಸ್ತ್ವಂ ತಥಾ ಹಿ ದರ್ಶಯತಿ ॥ ೫೭ ॥**

**ವಿಷಯವೂ ಸಂಶಯವೂ :** "ಪ್ರಾಚೀನಶಾಲ ಔಪಮನ್ಯವಃ" (ಛಾಂ. ೫-೧೧-೧) ಎಂದು ಮುಂತಾಗಿರುವ ಆಖ್ಯಾಯಿಕೆಯಲ್ಲಿ ಕಾಣುವ ವೈಶ್ವಾನರೋಪಾಸನೆಯು ವ್ಯಸ್ತವಾಗಿಯೂ ಸಮಸ್ತವಾಗಿಯೂ ಪಠಿತವಾಗಿದೆ. ಇವೆರಡೂ ವಿವಕ್ಷಿತವೆ, ಅಥವಾ ಇವುಗಳಲ್ಲೊಂದೇ ವಿವಕ್ಷಿತವೆ?

**ಪೂರ್ವಪಕ್ಷ :** 'ಉಪಾಸ್ಸೇ' ಎಂದು ಪ್ರತಿಯೊಂದು ವ್ಯಸ್ತೋಪಾಸನೆಯಲ್ಲಿಯೂ ಕ್ರಿಯಾಪದವನ್ನು ಶ್ರುತಿಯಲ್ಲಿ ಹೇಳಿರುವದರಿಂದಲೂ ಬೇರೆ ಬೇರೆಯ ಫಲವನ್ನು ಹೇಳಿರುವದರಿಂದಲೂ ವ್ಯಸ್ತೋಪಾಸನೆಗಳು, ಸಮಸ್ತೋಪಾಸನೆ- ಈ ಎರಡೂ ವಿವಕ್ಷಿತ.

**ಸಿದ್ಧಾಂತ :** ಸಮಸ್ತೋಪಾಸನೆಯೇ ಇಲ್ಲಿ ವಿವಕ್ಷಿತ. ಏಕೆಂದರೆ ವ್ಯಸ್ತೋಪಾಸನೆಗಳು ಇದಕ್ಕೆ ಅಂಗವಾಗಿರುತ್ತವೆ. ಇವೆಲ್ಲ ಸೇರಿ ಏಕವಾಕ್ಯತೆಯಾಗಿರುತ್ತದೆ. ಇಲ್ಲಿ ವ್ಯಸ್ತೋಪಾಸನೆಗಳನ್ನು ನಿಂದಿಸಿರುತ್ತದೆ. ಸಮಸ್ತೋಪಾಸನೆಗೇ ಫಲವನ್ನು ಹೇಳಿದೆ. ಪ್ರತಿಯೊಂದು ವ್ಯಸ್ತೋಪಾಸನೆಗೂ ಕ್ರಿಯಾಪದವನ್ನು ಹೇಳಿರುವದು ಅವರವರ ಅಭಿಪ್ರಾಯವನ್ನು ಅನುವಾದ ಮಾಡಿಕೊಳ್ಳುವದಕ್ಕೇ ಹೊರತು ವ್ಯಸ್ತೋಪಾಸನೆಗಳನ್ನು ವಿಧಿಸುವದಕ್ಕಲ್ಲ. ಅವುಗಳ ಫಲಗಳನ್ನು ಸಮಸ್ತೋಪಾಸನೆಗೇ ಸೇರಿಸಿಕೊಳ್ಳಬೇಕು.

## ೩೩. ಶಬ್ದಾದಿಭೇದಾಧಿಕರಣ

**ನಾನಾ ಶಬ್ದಾದಿಭೇದಾತ್ ॥ ೫೮ ॥**

**ವಿಷಯವೂ ಸಂಶಯವೂ :** ಬೇರೆಬೇರೆಯ ಶ್ರುತಿಗಳಲ್ಲಿ ಹೇಳಿರುವ ಉಪಾಸನೆಗಳನ್ನು ವೈಶ್ವಾನರವಿದ್ಯೆಯಂತೆ ಒಟ್ಟುಗೂಡಿಸಿ ಉಪಾಸನೆಮಾಡಬೇಕೆ, ಬೇರೆಬೇರೆಯಾಗಿ ಮಾಡಬೇಕೆ?

ಪೂರ್ವಪಕ್ಷ : ವೇದವು ಒಂದೇ ಆಗಿರುವದರಿಂದ ವಿದ್ಯೆಯೂ ಒಂದೇ. ಶ್ರುತಿನಾನಾತ್ವವನ್ನು ಗುಣಾಂತರವಿಧಾನಪರವೆಂದು ತಿಳಿಯಬಹುದು.

ಸಿದ್ಧಾಂತ : ವೇದವು ಒಂದೇ ಆದರೂ ಇವು ಬೇರೆಬೇರೆಯೇ. ಏಕೆಂದರೆ ಶಬ್ದಗುಣಾದಿಗಳು ಭಿನ್ನಭಿನ್ನವಾಗಿವೆ. ವೇದ, ಉಪಾಸೀತ– ಮುಂತಾದ ಶಬ್ದಭೇದದಲ್ಲಿ ಅರ್ಥವು ಮನೋವೃತ್ತಿ ಎಂಬುದೇ ಆಗಿರುತ್ತದೆ ಯಾದರೂ ಆಯಾ ಗುಣವಿಶಿಷ್ಟವಾಗಿರುವ ವೇದ್ಯವು ಬೇರೆಯಾಗಿರುವದ ರಿಂದ ವಿದ್ಯೆಗಳೂ ಬೇರೆಬೇರೆಯಾಗಿರುತ್ತವೆ. ಬೇರೆಬೇರೆಯ ಗುಣಗಳಿಂದ ವಿಶಿಷ್ಟವಾಗಿ ಬ್ರಹ್ಮವು ಬೇರೆಬೇರೆಯಾಗಿ ಉಪಾಸ್ಯವಾಗಿರುತ್ತದೆ. ಇವು ಗಳಲ್ಲಿ ಒಂದು ವಿದ್ಯಾವಿಧಿ, ಮಿಕ್ಕವು ಗುಣವಿಧಿಗಳು– ಎಂದು ಗೊತ್ತುಪಡಿ ಸುವದಕ್ಕೆ ಪ್ರಮಾಣವೇನೂ ಇಲ್ಲ. ಸತ್ಯಕಾಮಾದಿಗಳನ್ನು ಮತ್ತೆಮತ್ತೆ ಹೇಳಿರುವದಕ್ಕೆ ಏಕವಿದ್ಯಾಪಕ್ಷದಲ್ಲಿ ಕಾರಣವಿರುವದಿಲ್ಲ. ಬೇರೆಬೇರೆಯ ಫಲ ಗಳನ್ನು ಹೇಳಿರುವದರಿಂದ ಇವಕ್ಕೆ ಏಕವಾಕ್ಯತೆಯೂ ಇಲ್ಲ. ವೈಶ್ವಾನರ ವಿದ್ಯೆಯಂತೆ ಸಮಸ್ತವಿದ್ಯಾಚೋದನೆಯೂ ಇಲ್ಲಿಲ್ಲ. ಆದ್ದರಿಂದ ಇವು ಬೇರೆ ಬೇರೆಯೇ.

## ೩೮. ವಿಕಲ್ಪಾಧಿಕರಣ

ವಿಕಲ್ಪೋಽವಿಶಿಷ್ಟಫಲತ್ವಾತ್ || ೫೯ ||

**ವಿಷಯವೂ ಸಂಶಯವೂ** : ಉಪಾಸನೆಗಳನ್ನು ತನ್ನ ಇಚ್ಛೆಯಂತೆ ಒಂದೊಂದಾಗಿ ಅಥವಾ ಎರಡುಮೂರನ್ನು ಕೂಡಿಸಿಕೊಂಡು ಅನುಷ್ಠಾನ ಮಾಡಬಹುದೊ, ಅಥವಾ ಒಂದೊಂದನ್ನೇ ಅನುಷ್ಠಾನಮಾಡಬೇಕೊ ?

ಪೂರ್ವಪಕ್ಷ : ಅಗ್ನಿಹೋತ್ರಾದಿಗಳಂತೆ ಇವು ನಿತ್ಯವಲ್ಲವಾದ್ದರಿಂದ ಸಮುಚ್ಚಯನಿಯಮವಿಲ್ಲ, ಒಂದು ವಿದ್ಯೆಗೆ ಅಧಿಕಾರಿಯಾದವನು ಇನ್ನೊಂದು ವಿದ್ಯೆಗೆ ಅಧಿಕಾರಿಯಲ್ಲವೆಂದು ಹೇಳಿಲ್ಲವಾದ್ದರಿಂದ ವಿಕಲ್ಪನಿಯಮವೂ ಇಲ್ಲ: ಆದ್ದರಿಂದ ತನ್ನ ಇಚ್ಛೆಯಂತೆ ಅನುಷ್ಠಾನಮಾಡಬಹುದು.

ಸಿದ್ಧಾಂತ : ಇವಕ್ಕೆಲ್ಲ ಸಾಕ್ಷಾತ್ಕಾರವು ಒಂದೇ ಫಲ. ಒಂದು ಉಪಾಸನೆಯಿಂದ ಸಾಕ್ಷಾತ್ಕಾರಮಾಡಿಕೊಂಡವನಿಗೆ ಮಿಕ್ಕವು ವ್ಯರ್ಥ. ಇದಲ್ಲದೆ ಸಾಕ್ಷಾತ್ಕಾರಕ್ಕೆ ಸಮುಚ್ಚಯವು ವಿಘಾತವಾಗಿರುತ್ತದೆ. ಏಕೆಂದರೆ

ಅದರಿಂದ ಚಿತ್ತವಿಕ್ಷೇಪವಾಗುತ್ತದೆ. ಆದ್ದರಿಂದ ಸಾಕ್ಷಾತ್ಕಾರಮೂಲಕವಾಗಿ ಫಲಪ್ರಾಪ್ತಿಯಾಗುವವರೆಗೂ ಒಂದೇ ವಿದ್ಯೆಯನ್ನು ಅನುಷ್ಠಾನಮಾಡಬೇಕು.

## ೩೫. ಕಾಮ್ಯಾಧಿಕರಣ

**ಕಾಮ್ಯಾಸ್ತು ಯಥಾಕಾಮಂ ಸಮುಚ್ಚೀಯೇರನ್ ನ ವಾ ಪೂರ್ವ-ಹೇತ್ವಭಾವಾತ್ ॥ ೬೦ ॥**

**ಸಂಶಯ :** ಅಹಂಗ್ರಹೋಪಾಸನೆಗಳೂ ಅಲ್ಲದೆ, ಕರ್ಮಾಂಗಾವಬದ್ಧಗಳೂ ಅಲ್ಲದೆ ಇರುವ ಉಪಾಸನೆಗಳಲ್ಲಿ ಯಾವದಾದರೊಂದನ್ನೇ ನಿಯಮದಿಂದ ಮಾಡಬೇಕೊ, ಅಥವಾ ಇಷ್ಟಬಂದಂತ ಎರಡುಮೂರನ್ನೂ ಮಾಡಬಹುದೊ ?

**ಪೂರ್ವಪಕ್ಷ :** ಇವೂ ಅಹಂಗ್ರಹೋಪಾಸನೆಗಳಂತೆ ಉಪಾಸನೆಯೇ. ಆದ್ದರಿಂದ ಯಾವದಾದರೊಂದನ್ನೇ ನಿಯಮದಿಂದ ಮಾಡಬೇಕು.

**ಸಿದ್ಧಾಂತ :** ಈ ಉಪಾಸನೆಗಳಿಗೆ ಬೇರೆಬೇರೆಯು ಫಲಗಳಿರುತ್ತವೆ. ಇವುಗಳಿಗೆ ಸಾಕ್ಷಾತ್ಕಾರದ ಆವಶ್ಯಕತೆಯೂ ಇಲ್ಲ. ಆದ್ದರಿಂದ ತನ್ನ ಕಾಮವಿದ್ದಂತೆ ಬೇಕಾದಷ್ಟನ್ನು ಸಮುಚ್ಚಯಮಾಡಿಕೊಂಡು ಉಪಾಸನೆಮಾಡಬಹುದು, ಅಥವಾ ಒಂದೊಂದನ್ನೇ ಬೇಕಾದರೂ ಮಾಡಬಹುದು.

## ೩೬. ಯಥಾಶ್ರಯಭಾವಾಧಿಕರಣ

**ಅಂಗೇಷು ಯಥಾಶ್ರಯಭಾವಃ ॥೬೧॥ ಶಿಷ್ಟೇಶ್ಚ ॥೬೨॥ ಸಮಾ-ಹಾರಾತ್ ॥೬೩॥ ಗುಣಸಾಧಾರಣ್ಯಶ್ರುತೇಶ್ಚ ॥೬೪॥ ನ ವಾ ತತ್ಸಹ-ಭಾವಾಶ್ರುತೇಃ ॥೬೫॥ ದರ್ಶನಾಚ್ಚ ॥೬೬॥**

**ವಿಷಯವೂ ಸಂಶಯವೂ :** ಅಂಗಾಶ್ರಯೋಪಾಸನೆಗಳನ್ನು ಸಮುಚ್ಚಯಮಾಡಬಹುದೊ, ಬಾರದೊ ?

**ಪೂರ್ವಪಕ್ಷ :** ಆಶ್ರಯವಾಗಿರುವ ಅಂಗಗಳಂತೆಯೇ ಇವನ್ನು ಒಟ್ಟುಗೂಡಿಸಬೇಕು. ಇವೆರಡಕ್ಕೂ ಉಪದೇಶಕೃತವಾದ ಭೇದವೇನೂ ಇಲ್ಲ. ಪ್ರಣವೋದ್ಗೀಥೈಕತ್ವವನ್ನು ಅರಿತ ಉಪಾಸಕನು ತನ್ನ ಕರ್ಮದಲ್ಲಾದ ವೈಗುಣ್ಯವನ್ನು ಹೌತ್ರಕರ್ಮದಿಂದ ಸರಿಪಡಿಸಿಕೊಳ್ಳಬಲ್ಲನು ಎಂದು (ಛಾಂ. ೧-೫-೫) ಶ್ರುತಿಯಲ್ಲಿರುವದು ಒಂದು ವೇದಾಂತದಲ್ಲಿ ವಿಹಿತವಾದ ಉಪಾಸನೆಗೆ ಮತ್ತೊಂದು ವೇದಾಂತದಲ್ಲಿ ಹೇಳಿರುವ ಪದಾರ್ಥದ ಸಂಬಂಧವು

ಉಂಟೆಂದು ತಿಳಿಸುತ್ತದೆ. ಇದರಿಂದ ಪ್ರತ್ಯಯೋಪಸಂಹಾರವು ಸೂಚಿತವಾಗಿದೆ. ವಿದ್ಯಾಶ್ರಯವಾಗಿರುವ ಓಂಕಾರವನ್ನು ವೇದತ್ರಯಕ್ಕೆ ಸಾಧಾರಣವೆಂದು ಶ್ರುತಿಯು ಹೇಳುತ್ತದೆ (ಛಾಂ. ೧-೧-೯). ಆದ್ದರಿಂದ ಆಶ್ರಿತೋಪಾಸನೆಯೂ ವೇದತ್ರಯಸಾಧಾರಣವೆಂದಾಗುವದು.

ಸಿದ್ಧಾಂತ : ಉಪಾಸನೆಗಳನ್ನು ಒಟ್ಟಿಗೆ ಮಾಡಬೇಕೆಂದು ಶ್ರುತಿಯಿಲ್ಲ; ಅಂಗಗಳಿಗೆ ಸಹಭಾವವನ್ನು ಶ್ರುತಿಯಲ್ಲಿ ಹೇಳಿದೆ. ಈ ಉಪಾಸನೆಗಳು ಗೋದೋಹನಾದಿಗಳಂತೆ ಪುರುಷಾರ್ಥವಾಗಿವೆ-ಎಂಬುದನ್ನು ಆಗಲೇ (೩-೩-೪೨) ಹೇಳಿದ್ದಾಗಿದೆ. ಈ ಪುರುಷಾರ್ಥವಾಗಿರುವದೆಂಬುದೇ ಇವುಗಳಲ್ಲಿ ಅಂಗಗಳಿಗಿಂತ ಬೇರೆಯಾಗಿರುವ ವಿಶೇಷವು. ಆಶ್ರಯವಾದ ಅಂಗಗಳನ್ನು ಉಪಸಂಹಾರಮಾಡಿದರೆ ಆಶ್ರಿತೋಪಾಸನೆಗಳನ್ನೂ ಉಪಸಂಹಾರಮಾಡಿಕೊಳ್ಳಬೇಕೆಂಬುದಕ್ಕೆ ಕಾರಣವಿಲ್ಲ. ಆಶ್ರಯವಿಲ್ಲದಿದ್ದರೆ ಇವು ಇರುವದಿಲ್ಲವೆಂಬುದು ನಿಜ; ಆದರೆ ಆಶ್ರಯಗಳ ಸಹಭಾವದಿಂದ ಇವುಗಳೂ ಒಟ್ಟಿಗೆ ಇರಬೇಕೆಂಬುದು ಸರಿಯಲ್ಲ. ಏಕೆಂದರೆ ಹಾಗೆಂದು ಶ್ರುತಿಯಿಲ್ಲ. ಆದ್ದರಿಂದ ಈ ಉಪಾಸನೆಗಳನ್ನು ಇಚ್ಛೆಯಂತೆ ಅನುಷ್ಠಾನಮಾಡಬಹುದು. 'ಸರ್ವವಿದನಾದ ಬ್ರಹ್ಮನು ಯಜಮಾನನನ್ನೂ ಋತ್ವಿಜರನ್ನೂ ರಕ್ಷಿಸುತ್ತಾನೆ' ಎಂಬ (ಛಾಂ. ೪-೧೭-೧೦) ಶ್ರುತಿಯು ಇವಕ್ಕೆ ನಿಯತವಾದ ಸಹಭಾವವಿಲ್ಲವೆಂಬುದನ್ನು ಸೂಚಿಸುತ್ತದೆ. ಏಕೆಂದರೆ ಸಹಭಾವವಿದ್ದರೆ ಎಲ್ಲರೂ ಸರ್ವವಿದರೇ ಆಗಿರುತ್ತಿದ್ದರು, ಬ್ರಹ್ಮನೇ ಸರ್ವವಿದನೆಂಬುದಕ್ಕೆ ಕಾರಣವಿರಲಿಲ್ಲ. ಆದ್ದರಿಂದ ಈ ಉಪಾಸನೆಗಳನ್ನು ಇಚ್ಛೆಯಂತೆ ಸಮುಚ್ಚಯಮಾಡಿಕೊಂಡು ಅಥವಾ ವಿಕಲ್ಪದಿಂದ ಒಂದೊಂದನ್ನೇ ಅನುಷ್ಠಾನಮಾಡಬಹುದು.

# ನಾಲ್ಕನೆಯ ಪಾದ

ಈ ಪಾದದಲ್ಲಿ ವಿದ್ಯಾಸಾಧನಗಳ ವಿಚಾರವನ್ನು ಮಾಡಿರುತ್ತದೆ.

## ೧. ಪುರುಷಾರ್ಥಾಧಿಕರಣ

**ಪುರುಷಾರ್ಥೋಽತಃ ಶಬ್ದಾದಿತಿ ಬಾದರಾಯಣಃ ||೧|| ಶೇಷತ್ವಾತ್ ಪುರುಷಾರ್ಥವಾದೋ ಯಥಾನ್ಯೇಷ್ವಿತಿ ಜೈಮಿನಿಃ ||೨|| ಆಚಾರ**

ದರ್ಶನಾತ್ ॥೩॥ ತಚ್ಛ್ರುತೇಃ ॥೪॥ ಸಮನ್ವಾರಂಭಣಾತ್ ತದ್ವತೋ ವಿಧಾನಾತ್ ॥೬॥ ನಿಯಮಾಚ್ಚ ॥೭॥ ಅಧಿಕೋಪದೇಶಾತ್ತು ಬಾದರಾಯಣಸ್ಯೈವಂ ತದ್ದರ್ಶನಾತ್ ॥೮॥ ತುಲ್ಯಂ ತು ದರ್ಶನಮ್ ॥೯॥ ಅಸಾರ್ವತ್ರಿಕೀ ॥೧೦॥ ವಿಭಾಗಃ ಶತವತ್ ॥೧೧॥ ಅಧ್ಯಯನಮಾತ್ರವತಃ॥೧೨॥ ನಾವಿಶೇಷಾತ್॥೧೩॥ ಸ್ತುತಯೇಽನುಮತಿರ್ವಾ ॥೧೪॥ ಕಾಮಕಾರೇಣ ಚೈಕೇ ॥೧೫॥ ಉಪಮರ್ದಂ ಚ ॥೧೬॥ ಊರ್ಧ್ವರೇತಸ್ಸು ಚ ಶಬ್ದೇ ಹಿ ॥೧೭॥

**ಸಂಶಯ :** ಔಪನಿಷದಾತ್ಮನ ಜ್ಞಾನವು ಅಧಿಕಾರದ್ವಾರದಿಂದ ಕರ್ಮದಲ್ಲಿ ಸೇರತಕ್ಕದ್ದೋ, ಸ್ವತಂತ್ರವಾಗಿಯೇ ಪುರುಷಾರ್ಥಸಾಧನವೋ ?

**ಪೂರ್ವಪಕ್ಷ :** ಆತ್ಮನು ಕರ್ತೃವಾಗಿರುವದರಿಂದ ಕರ್ಮಶೇಷನು. ಆದ್ದರಿಂದ ದ್ರವ್ಯಸಂಸ್ಕಾರಕರ್ಮಗಳಲ್ಲಿ ಹೇಗೆ ಫಲಶ್ರುತಿಯು ಅರ್ಥವಾದವೋ ಹಾಗೆಯೇ ಆತ್ಮಜ್ಞಾನಕ್ಕೆ ಫಲವನ್ನು ಹೇಳುವ ವಾಕ್ಯಗಳೂ ಅರ್ಥವಾದವೇ. ಲೌಕಿಕಕರ್ಮಗಳಲ್ಲಿ ಆತ್ಮಜ್ಞಾನವಿಲ್ಲದೆ ಪ್ರವೃತ್ತಿಯುಂಟಾಗಬಹುದು; ಆದರೆ ವೈದಿಕಕರ್ಮಗಳಲ್ಲಿ ಪ್ರವೃತ್ತಿಯಾಗುವದಕ್ಕೆ ಈ ಜ್ಞಾನವು ಅವಶ್ಯವಾಗಿ ಬೇಕು. ಜ್ಞಾನಿಗಳೂ ಕರ್ಮದಲ್ಲಿ ತೊಡಗಿದ್ದರೆಂದು ಶ್ರುತಿಗಳಲ್ಲಿ ಕಂಡು ಬರುತ್ತದೆ; ವಿದ್ಯೆಯಿಂದ ಮಾಡಿದ್ದೇ ವೀರ್ಯವತ್ತರವಾಗುವದೆಂಬ ಶ್ರುತಿಯಿದೆ. ವಿದ್ಯಾಕರ್ಮಗಳೆರಡೂ ಸೇರಿ ಫಲವನ್ನು ಕೊಡುವದೆಂದು ವಚನವಿದೆ ಸಮಸ್ತವೇದಾರ್ಥವನ್ನೂ ತಿಳಿದುಕೊಂಡವನಿಗೇ ಕರ್ಮಾಧಿಕಾರವನ್ನು ವೇದದಲ್ಲಿ ಹೇಳಿದೆ. ಬದುಕಿರುವವರೆಗೂ ಕರ್ಮವನ್ನೇ ಮಾಡಬೇಕೆಂದೂ ವಿಧಿಸಿದೆ. ಆದ್ದರಿಂದ ಆತ್ಮಜ್ಞಾನವು ಕ್ರತ್ವರ್ಥ.

ಸಿದ್ಧಾಂತ ಇದು ಸ್ವತಂತ್ರವಾಗಿ ಪುರುಷಾರ್ಥವೇ. ಏಕೆಂದರೆ ಶ್ರುತಿಯು ಫಲವನ್ನು ಹೇಳುತ್ತದೆ. ಈ ಆತ್ಮನು ಕರ್ಮಶೇಷನಲ್ಲ; ಏಕೆಂದರೆ ಸಂಸಾರಿಧರ್ಮವಿಲ್ಲದ ಆತ್ಮಸ್ವರೂಪವನ್ನೇ ಶ್ರುತಿಯಲ್ಲಿ ಉಪದೇಶಿಸಿದೆ. ಸಂಸಾರಿಸ್ವರೂಪವನ್ನು ಬೋಧಿಸಿರುವಂತೆ ಕಾಣುವಲ್ಲಿಯೂ ವಾಕ್ಯಶೇಷದಲ್ಲಿ ಜೀವನ ಬ್ರಹ್ಮಸ್ವರೂಪವನ್ನೇ ಹೇಳಿದೆ. ಜ್ಞಾನಿಗಳು ಕರ್ಮವನ್ನು ಬಿಟ್ಟರೆಂದೂ ಶ್ರುತಿಯಲ್ಲಿ ಹೇಳಿದೆ; ವಿದ್ಯೆಯಿಂದಕೂಡಿ ಕರ್ಮವನ್ನು ಮಾಡಬೇಕೆಂಬುದು ಪ್ರಕೃತವಾದ ಉದ್ಗೀಥವಿದ್ಯೆಯ ವಿಷಯ. ಔಪನಿಷದಾತ್ಮ

ಜ್ಞಾನವು ಕರ್ಮಾಧಿಕಾರಕ್ಕೆ ಬೇಕಿರುವದಿಲ್ಲವಾದ್ದರಿಂದ ಕರ್ಮಜ್ಞಾನವುಳ್ಳವನಿಗೇ ಕರ್ಮದಲ್ಲಿ ಅಧಿಕಾರವೆಂದು ತಿಳಿಯಬೇಕು. ಕರ್ಮವನ್ನು ಮಾಡುತ್ತಲೇ ಇರಬೇಕೆಂಬುದು ಜ್ಞಾನಿಯ ವಿಷಯವಲ್ಲ; ಅದು ಜ್ಞಾನವನ್ನು ಹೊಗಳುವವಕ್ಕೆಂದೂ ಹೇಳಬಹುದು. ಜ್ಞಾನಿಗೆ ಪ್ರಜಾದಿಗಳು ಬೇಕಿಲ್ಲವೆಂಬ ಪರಾಮರ್ಶವೂ ಶ್ರುತಿಯಲ್ಲಿದೆ. ಕ್ರಿಯಾಕಾರಕಫಲವಿಭಾಗವನ್ನೇ ಜ್ಞಾನವು ನಾಶಗೊಳಿಸುವದೆಂದೂ ಇದೆ. ಗೃಹಸ್ಥರಲ್ಲದ ಊರ್ಧ್ವರೇತಸ್ಕರಲ್ಲಿಯೂ ಜ್ಞಾನವನ್ನು ಉಪದೇಶಿಸಿದೆ; ಅವರಿಗೆ ಕರ್ಮವಿಲ್ಲವೇ ಇಲ್ಲ. ಆದ್ದರಿಂದ ಈ ಆತ್ಮಜ್ಞಾನವು ಸ್ವತಂತ್ರವೇ.

## ೨. ಪರಾಮರ್ಶಾಧಿಕರಣ

**ಪರಾಮರ್ಶಂ ಜೈಮಿನಿರಚೋದನಾ ಚಾಪವದತಿ ಹಿ ॥೧೮॥ ಅನುಷ್ಠೇಯಂ ಬಾದರಾಯಣಃ ಸಾಮ್ಯಶ್ರುತೇಃ ॥೧೯॥ ವಿಧಿರ್ವಾ ಧಾರಣವತ್ ॥೨೦॥**

ಪೂರ್ವಪಕ್ಷ : 'ತ್ರಯೋ ಧರ್ಮಸ್ಕಂಧಾಃ' ಮುಂತಾದ ಶ್ರುತಿಗಳು ಊರ್ಧ್ವರೇತಸ್ಕರ ಆಶ್ರಮವನ್ನು ವಿಧಿಸಿಲ್ಲ, ಪರಾಮರ್ಶಿಸಿವೆ, ಏಕೆಂದರೆ ಅಲ್ಲಿ ವಿಧಿಶಬ್ದವಿಲ್ಲ. ಆ ಆಶ್ರಮಗಳು ಸ್ಮೃತ್ಯಾಚಾರಮಾತ್ರಸಿದ್ಧವಾಗಿವೆ. ಶ್ರುತಿವಿರುದ್ಧವಾಗಿರುವದರಿಂದ ಅವನ್ನು ಅನುಷ್ಠಾನಮಾಡತಕ್ಕದ್ದಲ್ಲ; ಗಾರ್ಹಸ್ಥ್ಯಕ್ಕಾದರೆ ಅಗ್ನಿಹೋತ್ರಾದಿಗಳ ವಿಧಾನವಿದೆ. ಶ್ರುತಿಯಲ್ಲಿ ಅಗ್ನ್ಯುದ್ವಾಸನಮಾಡಿದವನಿಗೆ ವೀರಹತ್ಯಾದೋಷವನ್ನು ಹೇಳಿದೆ; ಬ್ರಹ್ಮಚರ್ಯವನ್ನು ಮುಗಿಸಿ ಬೇಗನೆ ಮದುವೆಯಾಗಬೇಕು, ಅಪುತ್ರನಿಗೆ ಲೋಕವಿಲ್ಲ– ಎಂದೂ ಹೇಳಿದೆ; ತಪಃಶ್ರದ್ಧೆಗಳನ್ನು ಹೇಳಿರುವದು ದೇವಯಾನವನ್ನು ಹೇಳುವದಕ್ಕೆಂದು ತಿಳಿಯಬಹುದು; ಪ್ರವ್ರಜ್ಯಾಶಾಸ್ತ್ರವು 'ಲೋಕಮಿಚ್ಛಂತಃ' ಎಂದು ಲೋಕವನ್ನು ಹೊಗಳುವದಕ್ಕೆ. ಆದ್ದರಿಂದ ಮಿಕ್ಕ ಆಶ್ರಮಗಳು ಅನುಷ್ಠೇಯವಲ್ಲ.

ಸಿದ್ಧಾಂತ : ಆ ಆಶ್ರಮಗಳನ್ನು ಅನುಷ್ಠಾನಮಾಡತಕ್ಕದ್ದು. ಧರ್ಮಸ್ಕಂಧಶ್ರುತಿಯಲ್ಲಿ ಅಪೂರ್ವವಿಷಯವಿರುವದರಿಂದ ಅದು ವಿಧಿಯೆಂದು ಗಣಿಸಬೇಕು; ವಿಧಿವಿಭಕ್ತಿಯಿಲ್ಲದಿದ್ದರೂ ಅಪೂರ್ವವಿಷಯವಿದ್ದರೆ ವಿಧಿಯನ್ನು ಕಲ್ಪಿಸುತ್ತದೆ. ಇದು ಪರಾಮರ್ಶಮಾತ್ರವೆಂದು ಒಪ್ಪಿದರೂ ಬ್ರಹ್ಮಸಂಸ್ಥ

ನನ್ನು ಹೊಗಳುವದಕ್ಕೇ ಪರಾಮರ್ಶಿಸುತ್ತದೆ. ಇಲ್ಲಿ ಬ್ರಹ್ಮಸಂಸ್ಥನೆಂದರೆ ಪರಿವ್ರಾಜಕನೇ; ಏಕೆಂದರೆ ಮಿಕ್ಕವರನ್ನು ಆಯಾ ಕರ್ಮಗಳಿಂದ ವಿಶ್ಲೇಷಿಸಿ ತಿಳಿಸಿರುತ್ತದೆ. ಬ್ರಹ್ಮಸಂಸ್ಥನೆಂದರೆ ಬ್ರಹ್ಮನಿಷ್ಠನು ಎಂದರ್ಥ; ಅದು ಮಿಕ್ಕ ಮೂರು ಆಶ್ರಮದವರಿಗೂ ಹೊಂದುವದಿಲ್ಲ. ಏಕೆಂದರೆ ಅವರಿಗೆ ಅವರವರ ಕರ್ಮವಿದೆ, ಪರಿವ್ರಾಜಕನಿಗೆ ಈ ನಿಷ್ಠೆಯೇ ಕರ್ಮವು. ಜಾಬಾಲ ಶ್ರುತಿಯಲ್ಲಿ ಪಾರಿವ್ರಾಜ್ಯವನ್ನು ಪ್ರತ್ಯಕ್ಷವಾಗಿಯೇ ವಿಧಿಸಿದೆ. ಆದ್ದರಿಂದ ಊರ್ಧ್ವರೇತಸ್ಕರ ಆಶ್ರಮಗಳು ಅನುಷ್ಠೇಯಗಳಾಗಿವೆ. ಅವರಿಗೆ ಜ್ಞಾನ ದಿಂದಲೇ ಮೋಕ್ಷವಾಗುವದು.

## ೩. ಸ್ತುತಿಮಾತ್ರಾಧಿಕರಣ

ಸ್ತುತಿಮಾತ್ರಮುಪಾದಾನಾದಿತಿ ಚೇನ್ನಾಪೂರ್ವತ್ವಾತ್ ||೨೧||
ಭಾವಶಬ್ದಾಚ್ಚ ||೨೨||

**ಸಂಶಯ :** ಉದ್ಗೀಥವು ರಸತಮವು, ಈ ಪೃಥಿವಿಯೇ ಋಕ್ಕು, ಅಗ್ನಿಯೇ ಸಾಮವು ;– ಎಂದು ಮುಂತಾಗಿರುವ ವಾಕ್ಯಗಳಲ್ಲಿರುವದೇನು ಸ್ತುತಿಯೊ, ಅಥವಾ ಉಪಾಸನಾವಿಧಿಯೊ ?

**:ಪೂರ್ವಪಕ್ಷ :** ಇದು ಸ್ತುತಿಯೇ. ಏಕೆಂದರೆ ಕರ್ಮಾಂಗವನ್ನು ತೆಗೆದುಕೊಂಡು ಹೇಳಿದೆ.

**ಸಿದ್ಧಾಂತ** ಇಲ್ಲಿ ಕರ್ಮಾಂಗಗಳನ್ನು ವಿಧಿಸಿಲ್ಲ; ಅವುಗಳಿಗೆ ಇದು ಸ್ತುತಿಯೆಂದರೂ ಪ್ರದೇಶಾಂತರದಲ್ಲಿ ವಿಧಿಸಿರುವ ಆ ಅಂಗಗಳಿಗೆ ಶೇಷ ವಾಗಲಾರದಾಗಿ ವ್ಯರ್ಥವೇ ಆಗುವದು. ಇವು ಅಪೂರ್ವವಾಗಿರುವದರಿಂದ ವಿಧಿಗಳೇ. ಇಲ್ಲಿ 'ಉಪಾಸೀತ', 'ವಿದ್ಯಾತ್'–ಮೊದಲಾಗಿ ವಿಧಿಶಬ್ದಗಳಿವೆ; ಪ್ರತಿಯೊಂದು ಪ್ರಕರಣದಲ್ಲಿಯೂ ಫಲಶ್ರವಣವಿದೆ. ಆದ್ದರಿಂದಲೂ ಶ್ರುತಿಗಳು ಉಪಾಸನೆಯನ್ನು ವಿಧಿಸುವಪಕ್ಕೇ ಬಂದಿವೆ.

## ೪. ಪಾರಿಪ್ಲವಾಧಿಕರಣ

ಪಾರಿಪ್ಲವಾರ್ಥಾ ಇತಿ ಚೇನ್ನ ವಿಶೇಷಿತತ್ವಾತ್ ||೨೩|| ತಥಾ ಚೈಕವಾಕ್ಯತೋಪಬನ್ಧಾತ್ ||೨೪||

ಸಂಶಯ : ಉಪನಿಷತ್ತುಗಳಲ್ಲಿರುವ ಆಖ್ಯಾನಗಳು ಪಾರಿಪ್ಲವಕ್ಕಾಗಿ ಬಂದಿವೆಯೆ, ವಿದ್ಯಾಶೇಷವಾಗಿವೆಯೆ ?

ಪೂರ್ವಪಕ್ಷ : ಇವೂ ಆಖ್ಯಾನವೇ ಆಗಿರುವದರಿಂದಲೂ ಆಖ್ಯಾನಗಳನ್ನು ಪಾರಿಪ್ಲವದಲ್ಲಿ ಹೇಳಬೇಕೆಂದು ವಿಧಿಸಿರುವದರಿಂದಲೂ ಇವು ವಿದ್ಯೆಗಾಗಿ ಬಂದಿಲ್ಲ. ಆದ್ದರಿಂದ ವೇದಾಂತವಿಹಿತವಾದ ವಿದ್ಯೆಯೂ ವೇದಾಂತಗಳಲ್ಲಿ ಪ್ರಧಾನವಿಷಯವಲ್ಲ.

ಸಿದ್ಧಾಂತ : ಯಜ್ಞದಲ್ಲಿ 'ಮನುರ್ವೈವಸ್ವತೋ ರಾಜಾ' ಮುಂತಾದ ಕಥೆಗಳನ್ನೇ ಹೇಳಬೇಕೆಂದು ವಿಶೇಷವಾದ ಆಖ್ಯಾನಗಳನ್ನು ವಿಧಿಸಿದೆ. ಆದ್ದರಿಂದ ಇವನ್ನು ಅಲ್ಲಿ ಹೇಳತಕ್ಕದ್ದಲ್ಲ. ಆಯಾ ವಿದ್ಯೆಗಳಿಗೆ ಅನುಗುಣವಾಗಿ ಇವುಗಳಿಗೆ ಏಕವಾಕ್ಯತೆಯೂ ಆಗುತ್ತದೆ. ಆದ್ದರಿಂದ ಹೇಗೆ ಕರ್ಮಶ್ರುತಿಗಳಲ್ಲಿರುವ ಅರ್ಥವಾದಗಳು ಆಯಾ ಸಂನಿಹಿತವಿಧಿಯನ್ನು ಹೊಗಳುತ್ತವೆಯೋ ಹಾಗೆಯೇ ಆಯಾ ವಿದ್ಯೆಯ ತಿಳಿವಳಿಕೆಗೆ ಇವು ಅನುಕೂಲವಾಗಿ ಹೇಳಿದವುಗಳಾಗಿವೆ.

## ೫. ಅಗ್ನೀಂಧನಾದ್ಯಧಿಕರಣ

ಅತ ಏವ ಚಾಗ್ನೀಂಧನಾದ್ಯನಪೇಕ್ಷಾ || ೨೫ ||

ಸಿದ್ಧಾಂತ : ವಿದ್ಯೆಯು ಸ್ವತಂತ್ರವಾಗಿಯೇ ಪುರುಷಾರ್ಥಕ್ಕೆ ಕಾರಣವಾಗಿರುವದರಿಂದ ವಿದ್ಯೆಗೆ ತನ್ನ ಫಲವನ್ನು ಕೊಡುವದಕ್ಕೆ ಆಶ್ರಮಕರ್ಮಗಳ ಸಹಾಯವು ಬೇಕಿಲ್ಲ.

## ೬. ಸರ್ವಾಪೇಕ್ಷಾಧಿಕರಣ

**ಸರ್ವಾಪೇಕ್ಷಾ ಚ ಯಜ್ಞಾದಿಶ್ರುತೇರಶ್ವವತ್ || ೨೬ || ಶಮದಮಾದ್ಯುಪೇತಃ ಸ್ಯಾತ್ ತಥಾಪಿ ತು ತದ್ವಿಧೇಸ್ತದಙ್ಗತಯಾ ತೇಷಾಮವಶ್ಯಾನುಷ್ಠೇಯತ್ವಾತ್ || ೨೭ ||**

ಸಂಶಯ : ಕರ್ಮಗಳು ಜ್ಞಾನಕ್ಕೆ ಸರ್ವಥಾ ಬೇಡವೊ, ಅಥವಾ ಸ್ವಲ್ಪಮಟ್ಟಿಗೆ ಬೇಕೊ ?

**ಪೂರ್ವಪಕ್ಷ :** ವಿದ್ಯೆಯು ಸ್ವತಂತ್ರವಾಗಿರುವದರಿಂದ ಕರ್ಮಗಳು ಅದಕ್ಕೆ ಬೇಡವೇ ಬೇಡ.

**ಸಿದ್ಧಾಂತ :** ವಿದ್ಯೆಯು ಹುಟ್ಟಿದ ಬಳಿಕ ಫಲವನ್ನು ಕೊಡುವಾಗ ಅದಕ್ಕೆ ಕರ್ಮಗಳು ಬೇಡ ; ಆದರೆ ಅದು ಹುಟ್ಟುವದಕ್ಕೆ ಬೇಕು. ಏಕೆಂದರೆ 'ಯಜ್ಞದಿಂದಲೂ ದಾನದಿಂದಲೂ ಅನಾಶಕವಾದ ತಕಿಸ್ಸಿನಿಂದಲೂ ಆತ್ಮನನ್ನು ತಿಳಿಯಲಿಚ್ಛಿಸುತ್ತಾರೆ' ಎಂದು ಶ್ರುತಿಯಿದೆ. ವಿದ್ಯೆಗೆ ಕರ್ಮಗಳು ಸಾಧನವೆಂಬುದನ್ನು ಸೂಚಿಸುವ ಅನೇಕ ಶ್ರುತಿಗಳಿವೆ. ಕುದುರೆಯನ್ನು ನೇಗಿಲಿಗೆ ಹೂಡದಿದ್ದರೂ ರಥಕ್ಕೆ ಕಟ್ಟುವಂತೆ ಆಶ್ರಮಕರ್ಮಗಳು ವಿದ್ಯಾಫಲಕ್ಕೆ ಉಪಯೋಗವಿಲ್ಲದಿದ್ದರೂ ವಿದ್ಯೋತ್ಪತ್ತಿಗೆ ಉಪಯೋಗವಾಗುತ್ತವೆ. ಶಮದಮಾದಿಗಳನ್ನಂತೂ ಪ್ರತ್ಯಕ್ಷವಾಗಿ ವಿಧಿಸಿರುವದರಿಂದ ವಿದ್ಯೆಗೆ ಅವು ಬೇಕೇಬೇಕು. ಯಜ್ಞಾದಿಗಳನ್ನು 'ವಿವಿದಿಷನ್ತಿ' ಎಂದು ವಿವಿದಿಷೆಗೆ ಸಾಧನವಾಗಿ ಉಪಯೋಗಿಸಿರುವದರಿಂದ ಅವೂ ವಿದ್ಯೆಗಾಗಿ ವಿಧಿಸಲ್ಪಟ್ಟಿರುತ್ತವೆ, ಅಷ್ಟೆ.

## ೭. ಸರ್ವಾನ್ನಾನುಮತ್ಯಧಿಕರಣ

ಸರ್ವಾನ್ನಾನುಮತಿಶ್ಚ ಪ್ರಾಣಾತ್ಯಯೇ ತದ್ದರ್ಶನಾತ್ ॥೨೮॥ ಅಬಾಧಾಚ್ಚ ॥೨೯॥ ಅಪಿ ಚ ಸ್ಮರ್ಯತೇ ॥೩೦॥ ಶಬ್ದಶ್ಚಾತೋಽ ಕಾಮಕಾರೇ ॥೩೧॥

**ಸಂಶಯ :** ಪ್ರಾಣಸಂವಾದದಲ್ಲಿ ಪ್ರಾಣನನ್ನು ಅರಿತವನಿಗೆ ಎಲ್ಲವೂ ಅನ್ನವಾಗಬಹುದೆಂದಿದೆ. ಅದೇನು ವಿದ್ಯಾಂಗವಾಗಿ ವಿಹಿತವಾಗಿದೆಯೊ, ಸ್ತುತಿಯೊ ?

**ಪೂರ್ವಪಕ್ಷ :** ಪ್ರವೃತ್ತಿವಿಶೇಷಕರವಾಗುವದರಿಂದ ಇದನ್ನು ವಿಧಿಯೆಂದೇ ಎಣಿಸಬೇಕು. ಹಿಂಸಾದಿಪ್ರತಿಷೇಧವನ್ನು ಯಜ್ಞಪಶುಹಿಂಸೆಯೇ ಮುಂತಾದ ವಿಧಿಯು ಬಾಧಿಸುವಂತೆ ಇದು ಭಕ್ಷ್ಯಾಭಕ್ಷ್ಯವಿಭಾಗಶಾಸ್ತ್ರವನ್ನು ಬಾಧಿಸುತ್ತದೆ.

**ಸಿದ್ಧಾಂತ :** ಇದು ವಿಧಿಯಲ್ಲ. ಏಕೆಂದರೆ ಇಲ್ಲಿ ವಿಧಿಶಬ್ದವಿಲ್ಲ ; ನಾಯಿಯವರೆಗಿನ ಅನ್ನವನ್ನು ಇಲ್ಲಿ ಹೇಳಿದೆ. ಅವೆಲ್ಲವನ್ನೂ ಮನುಷ್ಯನು

ಉಪಯೋಗಿಸುವದಾಗುವದಿಲ್ಲ. ಇವೆಲ್ಲವೂ ಪ್ರಾಣನ ಅನ್ನವೆಂದು ಚಿಂತನೆ ಮಾಡುವವಕ್ಕಾಗುತ್ತದೆ. ಆದ್ದರಿಂದ ಇದು ಸ್ತುತಿಯೇ. ಯಾವ ಅನ್ನವನ್ನಾದರೂ ತಿನ್ನಬಹುದೆಂಬುದು ಪ್ರಾಣವು ಹೋಗುವಂಥ ಸಂಕಟವು ಪ್ರಾಪ್ತವಾದಾಗ ಮಾತ್ರ; ಇದಕ್ಕೆ ಶ್ರೌತಲಿಂಗವೂ ಇದೆ. ಆಹಾರಶುದ್ಧಿಯಿಂದ ಸತ್ತ್ವಶುದ್ಧಿಯಾಗುವದೆಂಬ ಶ್ರುತಿಯೂ ಅನನ್ನವಚನವನ್ನು ಉಪದೇಶಿಸಿರುವ ಶ್ರುತಿಸ್ಮೃತಿಗಳೂ ಈ ಪಕ್ಷದಲ್ಲಿ ಹೊಂದುಗಡೆಯಾಗುತ್ತವೆ. ಆದ್ದರಿಂದ ಇಂಥ ವಾಕ್ಯಗಳು ಅರ್ಥವಾದಗಳೇ.

## ೮. ಆಶ್ರಮಕರ್ಮಾಧಿಕರಣ

**ವಿಹಿತತ್ವಾಚ್ಚಾಶ್ರಮಕರ್ಮಾಪಿ ||೩೨|| ಸಹಕಾರಿತ್ವೇನ ಚ ||೩೩|| ಸರ್ವಥಾಪಿ ತ ಏವೋಭಯಲಿಂಗಾತ್ ||೩೪|| ಅನಭಿಭವಂ ಚ ದರ್ಶಯತಿ ||೩೫||**

**ಸಂಶಯ :** ಅಮುಮುಕ್ಷುವಾದವನು ಯಜ್ಞಾದಿಗಳನ್ನು ಮಾಡಬೇಕೊ, ಬಾರದೊ ?

**ಪೂರ್ವಪಕ್ಷ :** ಇವುಗಳನ್ನು ವಿದ್ಯಾಸಾಧನವಾಗಿ ವಿಧಿಸಿರುವದರಿಂದ ಫಲಾಂತರವನ್ನು ಬಯಸುವವನು ಇವನ್ನು ಮಾಡಕೂಡದು ; ಅಥವಾ ಇವನ್ನು ಮಾಡಬೇಕೆಂದಾದರೆ ಇವು ವಿದ್ಯಾಸಾಧನಗಳೇ ಅಲ್ಲ.

**ಸಿದ್ಧಾಂತ :** ಎರಡು ಬಗೆಯಲ್ಲಿಯೂ ಶ್ರುತಿಯಲ್ಲಿ ವಿಧಿಸಿರುವದರಿಂದ ಮುಮುಕ್ಷುಗಳೂ ಅಮುಮುಕ್ಷುಗಳೂ ಇಬ್ಬರೂ ಮಾಡಬೇಕು. ಇವು ವಿದ್ಯೆಗೆ ಸಹಕಾರಿ ಎಂದು ವಿಧಿಸಿರುವದರಿಂದ ವಿದ್ಯೋತ್ಪತ್ತಿಗಾಗಿಯೂ ಅನುಷ್ಠಾನ ಮಾಡಬೇಕು. 'ಯಾವಜ್ಜೀವಮಗ್ನಿಹೋತ್ರಂ ಜುಹೋತಿ' ಎಂಬ ವಿಧಿಯಿಂದ ಅಮುಮುಕ್ಷುವೂ ಮಾಡಬೇಕು. ಇವೆರಡೂ ಬೇರೆಬೇರೆಯಾದ ವಿಧಿಗಳೆಂದೇ ಭಾವಿಸಬೇಕು. ಕರ್ಮಗಳು ಮಾತ್ರ ಅವೇ. ಶ್ರುತಿಯಲ್ಲಿ ಬ್ರಹ್ಮಚರ್ಯಾದಿ ಸಾಧನಸಂಪನ್ನನಾದವನಿಗೆ ರಾಗಾದಿಕ್ಲೇಶಗಳ ಹೊಡೆತವಿಲ್ಲವೆಂದು ಶ್ರುತಿಯಲ್ಲಿ ಹೇಳಿರುವದೂ ಇವು ವಿದ್ಯಾಸಹಕಾರಿಗಳೆಂಬುದಕ್ಕೆ ಲಿಂಗವಾಗಿದೆ.

## ೯. ವಿಧುರಾಧಿಕರಣ

**ಅಂತರಾ ಚಾಪಿ ತು ತದ್ದೃಷ್ಟೇಃ ||೩೬|| ಅಪಿ ಚ ಸ್ಮರ್ಯತೇ ||೩೭||**

ವಿಶೇಷಾನುಗ್ರಹಶ್ಚ ||೩೮|| ಅತಸ್ತ್ವಿತರಜ್ಜ್ಯಾಯೋ ಲಿಂಗಾಚ್ಚ ||

ಸಂಶಯ : ಆಶ್ರಮಪ್ರಾಪ್ತಿಯಿಲ್ಲದ ವಿಧುರಾದಿಗಳಿಗೆ ವಿದ್ಯೆಯಲ್ಲಿ ಅಧಿಕಾರವುಂಟೊ, ಇಲ್ಲವೊ ?

ಪೂರ್ವಪಕ್ಷ : ಆಶ್ರಮಕರ್ಮಗಳು ವಿದ್ಯಾಹೇತುವೆಂದು ನಿಶ್ಚಿತವಾಗಿರುವದರಿಂದಲೂ ಆಶ್ರಮಕರ್ಮವಿಲ್ಲದ್ದರಿಂದಲೂ ಇವರಿಗೆ ಅಧಿಕಾರವಿಲ್ಲ

ಸಿದ್ಧಾಂತ ಇವರಿಗೂ ಉಂಟು, ಏಕೆಂದರೆ ರೈಕ್ವ, ವಾಚಕ್ನವಿ–ಮುಂತಾದವರೂ ಬ್ರಹ್ಮಜ್ಞಾನಿಗಳೆಂದು ಶ್ರುತಿಯಲ್ಲಿ ಹೇಳಿದೆ. ಸಂವರ್ತನೇಮುಂತಾದವರು ನಗ್ನಚರ್ಯಾದಿಗಳನ್ನು ಆಚರಿಸಿದರೂ ಮಹಾಯೋಗಿಗಳಾಗಿದ್ದರೆಂದು ಇತಿಹಾಸದಲ್ಲಿದೆ. ಇವರಿಗೂ ವ್ರತ, ಉಪವಾಸ, ಈಶ್ವರಾರಾಧನೆ–ಮುಂತಾದವುಗಳಿಂದಲೂ ವಿದ್ಯೆಯುಂಟಾಗಬಹುದಾಗಿದೆ. ಆದರೆ ಆಶ್ರಮಕರ್ಮದಲ್ಲಿರುವದು ಅಂತರಾಲವರ್ತಿತ್ವಕ್ಕಿಂತ ಉತ್ತಮವಾಗಿದೆ ಎನ್ನುವದು ಸ್ಪಷ್ಟವೇ ; ಏಕೆಂದರೆ ಆದಕ್ಕೆ ಶ್ರುತಿಸ್ಮೃತಿಗಳ ಬೆಂಬಲವಿದೆ.

## ೧೦. ತದ್ಭೂತಾಧಿಕರಣ

ತದ್ಭೂತಸ್ಯ ತು ನಾತದ್ಭಾವೋ ಜೈಮಿನೇರಪಿ ನಿಯಮಾತದ್ರೂಪಾಭಾವೇಭ್ಯಃ ||೪೦||

ಸಂಶಯ ಊರ್ಧ್ವರೇತಸ್ಕರ ಆಶ್ರಮವನ್ನು ಹೊಂದಿದವರಿಗೆ ಅವುಗಳನ್ನು ಬಿಟ್ಟು ಹಿಂದಕ್ಕೆ ಬರಬಹುದೆ ?

ಪೂರ್ವಪಕ್ಷ : ಪೂರ್ವಾಶ್ರಮದ ಕರ್ಮಗಳನ್ನು ಮಾಡುವ ಇಚ್ಛೆಯಿಂದಲೋ, ರಾಗದ್ವೇಷಾದಿಗಳಿಂದಲೋ, ಹಿಂದಕ್ಕೆ ಬರಲೂಬಹುದು.

ಸಿದ್ಧಾಂತ ಹಿಂದಕ್ಕೆ ಬರಬಾರದು. ಏಕೆಂದರೆ ಹಿಂತಿರುಗಬಾರದೆಂದು ಹೇಳುವ ಶ್ರುತಿಗಳಿವೆ. ಮೇಲಿನ ಆಶ್ರಮಕ್ಕೆ ಹೋಗಬೇಕೆಂಬ ವಚನಗಳಿರುವಂತೆ ಹಿಂದಕ್ಕೆ ಬರುವದಕ್ಕೆ ಯಾವ ವಚನಗಳೂ ಇಲ್ಲ. ಹಿಂದಿನ ಕರ್ಮವನ್ನು ಚೆನ್ನಾಗಿ ಮಾಡಬೇಕೆಂಬ ಇಚ್ಛೆಯಾದರೂ ವಿಧಿಯಿಲ್ಲದ್ದರಿಂದ ಹಿಂತಿರುಗುವದಕ್ಕೆ ಬರುವದಿಲ್ಲ. ನಿಯಮಶಾಸ್ತ್ರವು ಪ್ರಬಲವಾದ್ದರಿಂದ ರಾಗಾದಿಗಳಿಂದಲೂ ಹಿಂದಕ್ಕೆ ಬರುವಂತಿಲ್ಲ.

## ೧೧. ಅಧಿಕಾರಾಧಿಕರಣ

**ನ ಚಾಧಿಕಾರಿಕಮಪಿ ಪತನಾನುಮಾನಾತ್ ತದಯೋಗಾತ್ ||೪೧||**
**ಉಪಪೂರ್ವಮಪಿ ತ್ವೇಕೇ ಭಾವಮಶನವತ್ತದುಕ್ತಮ್ ||೪೨||**

**ಸಂಶಯ :** ನೈಷ್ಠಿಕಬ್ರಹ್ಮಚಾರಿಯು ಅವಕೀರ್ಣಿಯಾದರೆ ಅವನಿಗೆ ಸಾಮಾನ್ಯಬ್ರಹ್ಮಚಾರಿಗೆ ಹೇಳಿರುವ ಪ್ರಾಯಶ್ಚಿತ್ತವುಂಟೆ, ಇಲ್ಲವೆ ?

**ಪೂರ್ವಪಕ್ಷ :** 'ಅವನು ಆತ್ಮಘಾತುಕನು, ಅವನಿಗೆ ಯಾವ ಪ್ರಾಯಶ್ಚಿತ್ತವನ್ನೂ ಕಾಣೆನು' ಎಂಬ ಸ್ಮೃತಿವಾಕ್ಯವಿದೆ ; ಆದ್ದರಿಂದ ಅವನಿಗೆ ಉಪಕುರ್ವಾಣನಾದ ಬ್ರಹ್ಮಚಾರಿಗೆ ಇರುವಂತೆ ಬ್ರಹ್ಮಚರ್ಯವನ್ನು ತಪ್ಪಿದ್ದಕ್ಕೆ ಪ್ರಾಯಶ್ಚಿತ್ತವೇ ಇಲ್ಲ.

ಸಿದ್ಧಾಂತ : ಪ್ರಾಯಶ್ಚಿತ್ತವುಂಟು. ಏಕೆಂದರೆ ಇದು ಉಪಪಾತಕವೇ ಹೊರತು ಮಹಾಪಾತಕವಲ್ಲ. ಬ್ರಹ್ಮಚಾರಿಗೆ ಇತರ ನಿಮಿತ್ತಗಳಿಂದ ವ್ರತಲೋಪವಾದರೆ ಹೇಗೆ ಪ್ರಾಯಶ್ಚಿತ್ತವುಂಟೋ ಹಾಗೆಯೇ ಇದು. ಪ್ರಾಯಶ್ಚಿತ್ತಾಭಾವವನ್ನು ಹೇಳುವವರಿಗೆ ಯಾವ ಪ್ರಮಾಣವೂ ಇಲ್ಲ. ಹೀಗೆಯೇ ಭಿಕ್ಷುವಾನಪ್ರಸ್ಥರಿಗೂ ಪ್ರಾಯಶ್ಚಿತ್ತವುಂಟು.

## ೧೨. ಬಹಿರಧಿಕರಣ

ಬಹಿಸ್ತೂಭಯಥಾಪಿ ಸ್ಮೃತೇರಾಚಾರಾಚ್ಚ

ಸಿದ್ಧಾಂತ : ಊರ್ಧ್ವರೇತರಾದವರು ಹಿಂದಕ್ಕೆ ಜಾರಿದರೆ– ಅದು ಉಪಪಾತಕವೆಂಬ ಪಕ್ಷದಲ್ಲಿಯೂ ಮಹಾಪಾತಕವೆಂಬ ಪಕ್ಷದಲ್ಲಿಯೂ– ಶಿಷ್ಟರು ಅವನನ್ನು ಹೊರಗಿಡಬೇಕು. ಇದಕ್ಕೆ ಸ್ಮೃತಿಯಿದೆ, ಆಚಾರವೂ ಇದೆ.

## ೧೩. ಸ್ವಾಮ್ಯಧಿಕರಣ

**ಸ್ವಾಮಿನಃ ಫಲಶ್ರುತೇರಿತ್ಯಾತ್ರೇಯಃ ||೪೪|| ಆರ್ತ್ವಿಜ್ಯಮಿತ್ಯೌಡುಲೋಮಿಃ ತಸ್ಮೈ ಹಿ ಪರಿಕ್ರೀಯತೇ ||೪೫|| ಶ್ರುತೇಶ್ಚ ||೪೬||**

**ಸಂಶಯ :** ಅಂಗೋಪಾಸನೆಗಳನ್ನು ಯಜಮಾನನು ಮಾಡಬೇಕೆ, ಋತ್ವಿಜರು ಮಾಡಬೇಕೆ ?

**ಪೂರ್ವಪಕ್ಷ :** ಫಲಶ್ರುತಿಯನ್ನು ಹೇಳಿರುವದರಿಂದಲೂ ಫಲವು ಕರ್ತೃಗಾಮಿಯಾದ್ದರಿಂದಲೂ ಯಜಮಾನನೇ ಮಾಡಬೇಕು. ಕೆಲವು ಕಡೆ ಋತ್ವಿಜರಿಗೇ ಫಲವನ್ನು ಹೇಳಿದೆ; ಅಂಥ ಸಂದರ್ಭದಲ್ಲಿ ಋತ್ವಿಜರೇ ಆ ಕರ್ಮವನ್ನು ಮಾಡತಕ್ಕದ್ದು.

**ಸಿದ್ಧಾಂತ :** ಯಜಮಾನನು ಋತ್ವಿಜರನ್ನು ಆ ಕರ್ಮಕ್ಕಾಗಿಯೇ ದಕ್ಷಿಣೆಯನ್ನು ಕೊಟ್ಟು ಗೊತ್ತುಮಾಡಿಕೊಂಡಿರುತ್ತಾನಾದ್ದರಿಂದ ಅವರವರು ಮಾಡುವ ಕರ್ಮಕ್ಕೆ ಸಂಬಂಧಪಟ್ಟ ಉಪಾಸನೆಗಳನ್ನು ಅವರೇ ಮಾಡಬೇಕು. ಋತ್ವಿಜರು ಯಜಮಾನನಿಗಾಗಿ ಕರ್ಮವನ್ನು ಮಾಡುವರಾದ್ದರಿಂದ ಅವರಿಗೆ ಸಾಮಾನ್ಯವಾಗಿ ಆ ಫಲವು ಆಗುವದಿಲ್ಲ. ಋತ್ವಿಜರು ಮಾಡುವ ಉಪಾಸನೆಯ ಫಲವು ಯಜಮಾನನಿಗೂ ಬರುವದೆಂದು ತಿಳಿಸುವ ಶ್ರುತಿಯೂ ಇದೆ. ಆದ್ದರಿಂದ ಈ ಉಪಾಸನೆಗಳನ್ನು ಆಯಾ ಋತ್ವಿಜರೇ ಮಾಡಬೇಕು.

## ೧೪. ಸಹಕಾರ್ಯಂತರವಿಧ್ಯಧಿಕರಣ

**ಸಹಕಾರ್ಯನ್ತರವಿಧಿಃ ಪಕ್ಷೇಣ ತೃತೀಯಂ ತದ್ವತೋ ವಿಧ್ಯಾದಿವತ್ ‖ ४೭ ‖ ಕೃತ್ಸ್ನಭಾವಾತ್ತು ಗೃಹಿಣೋಪಸಂಹಾರಃ ‖ ४೮ ‖ ಮೌನವದಿತರೇಷಾಮಪ್ಯುಪದೇಶಾತ್ ‖ ४೯ ‖**

**ವಿಷಯವೂ ಸಂಶಯವೂ :** 'ತಸ್ಮಾದ್ಬ್ರಾಹ್ಮಣಃ ಪಾಣ್ಡಿತ್ಯಂ ನಿರ್ವಿದ್ಯ....' (ಬೃ. ೩–೫–೧) ಎಂಬ ವಾಕ್ಯದಲ್ಲಿ 'ಅಥ ಮುನಿಃ' ಎಂದಿರುವದು ವಿಧಿಯೊ, ಅಲ್ಲವೊ ?

**ಪೂರ್ವಪಕ್ಷ :** ವಿಧಿಯಲ್ಲ. ಏಕೆಂದರೆ 'ಬಾಲ್ಯೇನ ತಿಷ್ಠಾಸೇತ್' (ಬಾಲ್ಯದಲ್ಲಿ ನಿಲ್ಲಬೇಕು) ಎಂಬಲ್ಲಿಗೆ ವಿಧಿಯು ಮುಗಿಯಿತು. 'ಮುನಿಃ' ಎಂಬಲ್ಲಿ ವಿಧಾಯಕವಿಭಕ್ತಿಯಿಲ್ಲ. ಮುನಿ, ಪಂಡಿತ– ಇವೆರಡಕ್ಕೂ ಜ್ಞಾನಿಯೆಂದೇ ಅರ್ಥ ; ಆದ್ದರಿಂದ 'ಪಾಂಡಿತ್ಯವನ್ನು ಮುಗಿಸಿ' ಎಂಬ ವಾಕ್ಯದಿಂದಲೇ ಮೌನವು ಪ್ರಾಪ್ತವಾಗಿದೆ ; ಮುಂದಿನ ವಾಕ್ಯದಲ್ಲಿ 'ಅಥ ಬ್ರಾಹ್ಮಣಃ' (ಇನ್ನು ಬ್ರಾಹ್ಮಣನು) ಎಂಬಲ್ಲಿ ಬ್ರಾಹ್ಮಣತ್ವವನ್ನು ವಿಧಿಸಿಲ್ಲವಷ್ಟೆ ; ಏಕೆಂದರೆ ಅದು ಮೊದಲೇ ಪ್ರಾಪ್ತವಾಗಿರುತ್ತದೆ. ಆದ್ದರಿಂದ ಬ್ರಾಹ್ಮಣನು ಎಂಬುದು ಹೇಗೆ ಸ್ತುತಿಯೋ ಹಾಗೆಯೇ ಇದೂ ಸ್ತುತಿಯೇ.

ಸಿದ್ಧಾಂತ : ವಿದ್ಯಾಸಹಕಾರಿಯಾದ ಮೌನವನ್ನು ಬಾಲ್ಯಪಾಂಡಿತ್ಯಗಳ ಜೊತೆಗೆ ಇಲ್ಲಿ ವಿಧಿಸಿದೆ. ಮೌನವೆಂದರೆ ಜ್ಞಾನಾತಿಶಯವು. ಜ್ಞಾನಿಯಾದ ಸಂನ್ಯಾಸಿಗೆ ಭೇದದರ್ಶನಪ್ರಾಬಲ್ಯದಿಂದ ಯಾವಾಗ ಜ್ಞಾನಾತಿಶಯವು ಪ್ರಾಪ್ತವಾಗುವದಿಲ್ಲವೋ ಆ ಪಕ್ಷದಲ್ಲಿ ಇದನ್ನು ವಿಧಿಸಿದೆ. ದರ್ಶಪೂರ್ಣಮಾಸಪ್ರಕರಣದಲ್ಲಿ ಸಹಕಾರಿಯಾಗಿರುವ ಅಗ್ನ್ಯನ್ವಾಧಾನಾದಿಗಳನ್ನು ವಿಧಿಸಿರುವಂತೆ ಈ ವಿದ್ಯೆಗೂ ಸಹಕಾರಿಯಾಗಿ ಮೌನವನ್ನು ವಿಧಿಸಬಹುದು. ಸಂನ್ಯಾಸವು ಶ್ರುತಿಸಿದ್ಧವಾಗಿದ್ದರೂ ಛಾಂದೋಗ್ಯದಲ್ಲಿ ಗೃಹಸ್ಥನನ್ನೇ ಕೊನೆಯಲ್ಲಿ ಹೇಳಿರುವದು ಕರ್ಮಗಳೂ ಯಥಾಸಂಭವವಾಗಿ ಅಹಿಂಸಾದಿಗಳೂ ಅವನಲ್ಲಿರುವದರಿಂದ ; ಗಾರ್ಹಸ್ಥ್ಯ, ಸಂನ್ಯಾಸ– ಇವುಗಳಂತೆ ನೈಷ್ಠಿಕಬ್ರಹ್ಮಚರ್ಯ, ವಾನಪ್ರಸ್ಥಗಳೂ ಶ್ರುತ್ಯುಕ್ತವಾಗಿಯೇ ಇವೆಯಾಗಿ ಎಲ್ಲಾ ಆಶ್ರಮಗಳೂ ಅನುಷ್ಠೇಯವೇ, ಅವುಗಳಲ್ಲಿ ವಿಕಲ್ಪಸಮುಚ್ಚಯಗಳೂ ಆಗಬಹುದಾಗಿದೆ.

## ೧೫. ಅನಾವಿಷ್ಕಾರಾಧಿಕರಣ

ಅನಾವಿಷ್ಕುರ್ವನ್ನನ್ವಯಾತ್ ॥೫೦॥

ವಿಷಯವೂ ಸಂಶಯವೂ : 'ಬಾಲ್ಯೇನ ತಿಷ್ಠಾಸೇತ್' (ಬೃ. ೩–೫–೧)ಎಂಬಲ್ಲಿ ವಿಹಿತವಾಗಿರುವ ಬಾಲ್ಯವು ಯಾವದು ? ಬಾಲಕನ ಆಚಾರವೆ ಭಾವವಿಶುದ್ಧಿಯೆ ?

**ಪೂರ್ವಪಕ್ಷ** : ಬಾಲಕನಂತೆ ಕಾಮಚಾರವಾದ**ಭಕ್ಷಣತ್ವ**, ಯಥೋಪಪಾದಮೂತ್ರಪುರೀಷತ್ವ– ಮುಂತಾದ ಆಚಾರಗಳಿರುವದೇ ಬಾಲ್ಯವು ; ವಿಶೇಷಶಾಸ್ತ್ರದಿಂದ ದೋಷವು ಅಂಟುವದಿಲ್ಲವಾಗಿ ಪತಿತತ್ವವೇ ಮುಂತಾದ ದೋಷಗಳು ಜ್ಞಾನಿಯಾದ ಸಂನ್ಯಾಸಿಗೆ ಅಂಟುವದಿಲ್ಲ.

ಸಿದ್ಧಾಂತ : ಈ ಆಶ್ರಮದಲ್ಲಿ ಜ್ಞಾನಾಭ್ಯಾಸವೇ ಅನುಷ್ಠೇಯವಾದದ್ದು. ಆದರೆ ಬಾಲಕನ ಆಚಾರಗಳನ್ನೆಲ್ಲ ಅಂಗೀಕರಿಸಿದರೆ ಜ್ಞಾನಾಭ್ಯಾಸವು ಸಿದ್ಧಿಸುವದಿಲ್ಲ. ಆದ್ದರಿಂದ ಅಂತರವಾದ ಭಾವವಿಶೇಷವೇ ಬಾಲ್ಯವು ; ಬಾಲಕನಂತೆ ದಂಭದರ್ಪಾದಿಗಳಿಲ್ಲದೆ ಇರುವ ಭಾವಶುದ್ಧಿಯೇ ಇಲ್ಲಿ ವಿಹಿತವಾಗಿದೆ.

## ೧೬. ಐಹಿಕಾಧಿಕರಣ

**ಐಹಿಕಮಪ್ಯಪ್ರಸ್ತುತಪ್ರತಿಬನ್ಧೇ ತದ್ದರ್ಶನಾತ್ ||೫೧||**

**ಸಂಶಯ :** ವಿದ್ಯಾಸಾಧನವನ್ನು ಅನುಷ್ಠಾನಮಾಡುತ್ತಿದ್ದರೆ ಈ ಜನ್ಮದಲ್ಲಿಯೇ ವಿದ್ಯೆಯುಂಟಾಗುವದೊ, ಅಥವಾ ಮತ್ತೊಂದು ಜನ್ಮದಲ್ಲಿ ಉಂಟಾಗುವದೊ ?

**ಪೂರ್ವಪಕ್ಷ :** ವಿದ್ಯೆಗೆ ಶ್ರವಣಾದಿಗಳು ಸಾಕ್ಷಾತ್ಸಾಧನಗಳು, ಯಜ್ಞಾದಿಗಳು ಪರಂಪರೆಯಿಂದ ಸಾಧನಗಳು. ಶ್ರವಣಾದಿಗಳನ್ನು ಮಾಡುವವರು ತಮಗೆ ಜನ್ಮಾಂತರದಲ್ಲಿ ಫಲವಾಗಲಿ ಎಂದೇನೂ ಮಾಡುವದಿಲ್ಲ. ಆದ್ದರಿಂದ ಈ ಜನ್ಮದಲ್ಲಿಯೇ ಫಲವಾಗುತ್ತದೆ.

**ಸಿದ್ಧಾಂತ :** ಕರ್ಮಾಂತರದ ವಿಪಾಕದಿಂದ ಜ್ಞಾನಕ್ಕೆ ಯಾವ ಅಡ್ಡಿಯೂ ಆಗದೆ ಇದ್ದರೆ ಈ ಜನ್ಮದಲ್ಲಿಯೇ ಆಗುತ್ತದೆ; ಪ್ರತಿಬಂಧವಾದರೆ ಮುಂದೆ ಯಾವದಾದರೊಂದು ಜನ್ಮದಲ್ಲಿ ಉಂಟಾಗುತ್ತದೆ. ಶ್ರವಣಾದಿಗಳಿಂದ ಉಂಟಾಗುವದೂ ಪ್ರತಿಬಂಧಕ್ಷಯವಾದಮೇಲೆಯೇ; ಆದ್ದರಿಂದಲೇ ಶ್ರುತಿಯು ಆತ್ಮನನ್ನು ತಿಳಿಯುವದು ಕಷ್ಟವೆಂದು ಹೇಳುತ್ತದೆ; ಶ್ರುತಿಯಲ್ಲಿ ಮುಮುಕ್ಷುಗಳು ಅನೇಕಜನ್ಮಗಳಲ್ಲಿ ಸಂಶುದ್ಧರಾಗಿ ಪರಗತಿಯನ್ನು ಪಡೆಯುತ್ತಾರೆಂದು ಹೇಳಿದೆ.

## ೧೭. ಮುಕ್ತಿಫಲಾಧಿಕರಣ

**ಏವಂ ಮುಕ್ತಿಫಲಾನಿಯಮಸ್ತದವಸ್ಥಾವಧೃತೇಸ್ತದವಸ್ಥಾವಧೃತೇಃ ||**

**ಪೂರ್ವಪಕ್ಷ :** ಹೇಗೆ ಸಾಧನಫಲವಾದ ಜ್ಞಾನದಲ್ಲಿ ಐಹಿಕ, ಆಮುಷ್ಮಿಕ—ಎಂಬ ವಿಶೇಷನಿಯಮವುಂಟೋ ಹಾಗೆಯೇ ಮುಕ್ತಿಫಲದಲ್ಲಿಯೂ ತಾರತಮ್ಯವಿರಬಹುದು.

**ಸಿದ್ಧಾಂತ :** ಹಾಗಿಲ್ಲ. ಏಕೆಂದರೆ ಮುಕ್ತಿಯು ಒಂದೇ ರೂಪವಾಗಿರುವದೆಂದು ಶ್ರುತಿಗಳಲ್ಲಿ ಹೇಳಿದೆ. ಮುಕ್ತ್ಯವಸ್ಥೆಯೆಂದರೆ ಬ್ರಹ್ಮವೇ. ಬ್ರಹ್ಮದಲ್ಲಿ ಯಾವ ವಿಶೇಷವೂ ಇಲ್ಲವೆಂದು ಶ್ರುತಿಗಳು ಹೇಳುತ್ತವೆ. ಮುಕ್ತಿಯು ಸಾಧ್ಯವಲ್ಲದ್ದರಿಂದ ಅದರಲ್ಲಿ ಯಾವ ಹೆಚ್ಚುಕಡಿಮೆಯೂ ಇರುವಂತಿಲ್ಲ.

ಸಗುಣವಿದ್ಯೆಗಳಲ್ಲಿ ಫಲಗಳ ತಾರತಮ್ಯವಿರಬಹುದಾದರೂ ಮುಖ್ಯಮುಕ್ತಿಯಲ್ಲಿ ಯಾವ ತಾರತಮ್ಯಕ್ಕೂ ಕಾರಣವಿಲ್ಲ. ಜ್ಞಾನದಲ್ಲಿಯೂ ಯಾವ ಹೆಚ್ಚುಕಡಿಮೆಯೂ ಇರುವದಿಲ್ಲ; ಏಕೆಂದರೆ ಎಲ್ಲಕ್ಕಿಂತಲೂ ಉತ್ಕೃಷ್ಟವಾದದ್ದೇ ಜ್ಞಾನವೆನಿಸುತ್ತದೆ. ಆದ್ದರಿಂದ ಅದು ದೊರಕುವದರಲ್ಲಿ ತಡವಾಗುವದು, ಆಗದೆ ಇರುವದು ಎಂಬ ತಾರತಮ್ಯವು ಮಾತ್ರ ಆಗಬಹುದು. ಆದರೆ ವಿದ್ಯೆಯಿಂದಾಗುವ ಮುಕ್ತಿಯು ನಿತ್ಯಸಿದ್ಧವಾದ್ದರಿಂದ ಅದರಲ್ಲಿ ಯಾವ ತಾರತಮ್ಯವೂ ಇರುವದಕ್ಕೆ ಕಾರಣವಿಲ್ಲ.

# ನಾಲ್ಕನೆಯ ಅಧ್ಯಾಯ

## ಒಂದನೆಯ ಪಾದ

ಈ ಪಾದದಲ್ಲಿ ಸಾಧನಗಳ ವಿಚಾರಶೇಷವೂ ಬ್ರಹ್ಮವಿದ್ಯಾಫಲವೂ ಚರ್ಚಿತವಾಗಿರುತ್ತವೆ.

### ೧. ಆವೃತ್ತ್ಯಧಿಕರಣ

**ಆವೃತ್ತಿರಸಕೃದುಪದೇಶಾತ್ ||೧|| ಲಿಂಗಾಚ್ಚ ||೨||**

**ವಿಷಯವೂ ಸಂಶಯವೂ :** ಮುಕ್ತಿಸಾಧನಗಳಾದ ಶ್ರವಣಾದಿಗಳನ್ನೂ ಉಪಾಸನೆಗಳನ್ನೂ ಶಾಸ್ತ್ರದಲ್ಲಿ ವಿಧಿಸಿದೆಯಷ್ಟೆ. ಅವನ್ನು ಒಂದೇ ಸಲ ಮಾಡಿದರೆ ಸಾಕೊ, ಅಥವಾ ಆವೃತ್ತಿ ಮಾಡಬೇಕೊ ?

**ಪೂರ್ವಪಕ್ಷ :** ಒಂದು ಸಲ ಮಾಡಿದರೆ ಸಾಕು, ಅಷ್ಟಕ್ಕೇ ಶಾಸ್ತ್ರವು ಚರಿತಾರ್ಥವಾಗುವದು. ಆವೃತ್ತಿಯು ಶ್ರುತವಾಗಿಲ್ಲದ್ದರಿಂದ ಮಾಡಬಾರದು. ಶ್ರವಣಾದಿಗಳನ್ನು ಅನೇಕವಾಗಿ ಹೇಳಿದ್ದರೂ ಒಂದೊಂದನ್ನೂ ಒಂದೊಂದು ಸಲ ಮಾಡಿದರಾಯಿತು.

**ಸಿದ್ಧಾಂತ :** ಪ್ರತ್ಯಯಾವೃತ್ತಿಯನ್ನು ಮಾಡಬೇಕು. ಏಕೆಂದರೆ ಅನೇಕಸಾಧನಗಳನ್ನು ಹೇಳಿದೆ. ಉಪಾಸನೆ, ನಿದಿಧ್ಯಾಸನ– ಮುಂತಾದ ಶಬ್ದಗಳಲ್ಲಿ ಆವೃತ್ತಿಯೆಂಬರ್ಥವೂ ಅಡಗಿದೆ. ವಿದ್, ಉಪಾಸ್, ಧಾತುಗಳನ್ನು ಪರ್ಯಾಯವಾಗಿ ಶಾಸ್ತ್ರದಲ್ಲಿ ಉಪಯೋಗಿಸಿದೆ. ಶ್ರವಣಾದಿಗಳು ದರ್ಶನಾರ್ಥವಾಗಿರುವದರಿಂದ ದರ್ಶನವುಂಟಾಗುವವರೆಗೂ ಅವನ್ನು ಮಾಡಬೇಕು. ಶ್ರುತಿಯಲ್ಲಿಯೂ ಈ ಪ್ರತ್ಯಯಗಳನ್ನು ಆವೃತ್ತಿಮಾಡಬೇಕೆಂಬುದಕ್ಕೆ ಲಿಂಗವಿದೆ. ಉಪಾಸನೆಗಳಲ್ಲಿ ಆವೃತ್ತಿಯಿಂದ ಅತಿಶಯವುಂಟಾಗುತ್ತದೆ ; ಪರಬ್ರಹ್ಮವಿಷಯವಾದ ಪ್ರತ್ಯಯಗಳಿಂದ ಒಂದೊಂದು ಅಧ್ಯಾರೋಪಿತಾಂಶವು ಒಂದೊಂದು ಸಲಕ್ಕೆ ಹೋಗಿ ಪದಾರ್ಥವಿಷಯಕವಾದ ಅಜ್ಞಾನವು ತೊಲಗುತ್ತದೆಯಾದ್ದರಿಂದ ಅದರಿಂದ ವಾಕ್ಯಾರ್ಥಜ್ಞಾನಕ್ಕೆ ಸಹಾಯವಾಗುವದು. ಆದ್ದರಿಂದ ಒಂದು ಸಲ ಶ್ರವಣಮಾಡಿದ್ದರಿಂದಲೇ ಯಾರಿಗೆ ಜ್ಞಾನವಾಗುವದಿಲ್ಲವೋ ಅವರು ಜ್ಞಾನವಾಗುವವರೆಗೆ ಆವೃತ್ತಿ ಮಾಡಬೇಕು.

## ೨. ಆತ್ಮತ್ವೋಪಾಸನಾಧಿಕರಣ

### ಆತ್ಮೇತಿ ತೂಪಗಚ್ಛನ್ತಿ ಗ್ರಾಹಯನ್ತಿ ಚ ||೩||

ಸಂಶಯ : ಪರಮಾತ್ಮನನ್ನು ನಾನು ಎಂದು ಗ್ರಹಿಸಬೇಕೊ, ನನಗಿಂತ ಬೇರೆ ಎಂದು ಗ್ರಹಿಸಬೇಕೊ ?

ಪೂರ್ವಪಕ್ಷ : ನಾನೆಂದು ತಿಳಿಯಬಾರದು. ಏಕೆಂದರೆ ಈಶ್ವರನು ಅಪಹತಪಾಪ್ಮತ್ವಾದಿಗುಣಗಳುಳ್ಳವನು, ಜೀವನು ಇದಕ್ಕೆ ವಿಪರೀತವಾದ ಗುಣವುಳ್ಳವನು. ಹೀಗಿರುವವರಿಂದ ಒಬ್ಬನನ್ನು ಮತ್ತೊಬ್ಬನೆಂದು ಗ್ರಹಿಸುವದಕ್ಕೆ ಆಗುವದಿಲ್ಲ. ಈಶ್ವರನು ಸಂಸಾರಿಯೆಂದರೆ ಈಶ್ವರನೇ ಇಲ್ಲವೆಂದಾಗುವದು ; ಸಂಸಾರಿಯು ಈಶ್ವರನೆಂದರೆ ಅಧಿಕಾರಿಯೇ ಇಲ್ಲವೆಂದಾಗುವದು. ಆಗ ಶಾಸ್ತ್ರವು ವ್ಯರ್ಥವಾಗುವದು, ಪ್ರತ್ಯಕ್ಷಾದಿಗಳಿಗೆ ವಿರೋಧವೂ ಆಗುವದು.

ಸಿದ್ಧಾಂತ : ನಾನೆಂದೇ ಈಶ್ವರನನ್ನು ತಿಳಿಯಬೇಕು. ಏಕೆಂದರೆ ಹಾಗೆಂದೇ ಉಪನಿಷತ್ತುಗಳಲ್ಲಿ ಒಪ್ಪಿದೆ ; ಮತ್ತು ಹಾಗೆಂದೇ ಉಪದೇಶ ಮಾಡಿರುತ್ತದೆ. ಇದು ವಿಷ್ಣುಪ್ರತಿಮಾನ್ಯಾಯದಿಂದ ಹೇಳಿದ ಪ್ರತೀಕೋಪಾಸನೆಯೆನ್ನುವದಕ್ಕಿಲ್ಲ ; ಏಕೆಂದರೆ ಆಗ ಗೌಣಾರ್ಥದಲ್ಲಿ ತೆಗೆದುಕೊಂಡಂತೆ ಆಗುತ್ತದೆ ; ನಾನೇ ಪರಮೇಶ್ವರನು, ಪರಮೇಶ್ವರನೇ ನಾನು–ಎಂದು ವ್ಯತಿಹಾರದಿಂದ ಹೇಳಿರುವ ಶ್ರುತಿವಾಕ್ಯವು ಪ್ರತೀಕೋಪಾಸನೆಗೆ ಹೊಂದುವದಿಲ್ಲ. ಈಶ್ವರನಿಗೆ ಸಂಸಾರಿತ್ವವನ್ನು ಶಾಸ್ತ್ರದಲ್ಲಿ ಹೇಳಿದೆ ಎಂಬುದು ನಮ್ಮ ಮತವಲ್ಲ; –ಸಂಸಾರಿಗೇ ಸಂಸಾರಿತ್ವವನ್ನು ಅಲ್ಲಗಳೆದು ಈಶ್ವರತ್ವವನ್ನು ಹೇಳಿದೆ ಎನ್ನುತ್ತೇವೆ. ಆದ್ದರಿಂದ ಶಾಸ್ತ್ರಾನರ್ಥಕ್ಯವಿಲ್ಲ. ಜ್ಞಾನವಾಗುವವರೆಗೂ ಸಂಸಾರಿತ್ವವನ್ನು ಒಪ್ಪಿರುವದರಿಂದಲೂ ಪ್ರತ್ಯಕ್ಷಾದಿಗಳಿಗೆ ಅದು ವಿಷಯವಾಗಿರುವದರಿಂದಲೂ ಪ್ರತ್ಯಕ್ಷಾದಿವಿರೋಧವೂ ಇಲ್ಲ.

## ೩. ಪ್ರತೀಕಾಧಿಕರಣ

### ನ ಪ್ರತೀಕೇ ನ ಹಿ ಸಃ ||೪||

**ಸಂಶಯ :** ಮನಸ್ಸನ್ನು ಬ್ರಹ್ಮವೆಂದು ಉಪಾಸನೆಮಾಡಬೇಕು–ಮುಂತಾದ ಪ್ರತೀಕೋಪಾಸನೆಗಳಲ್ಲಿ ಅವು ನಾನೆಂದು ಗ್ರಹಿಸಬೇಕೊ, ಬಾರದೊ ?

ಪೂರ್ವಪಕ್ಷ : ಗ್ರಹಿಸಬೇಕು. ಏಕೆಂದರೆ ಅವೂ ಬ್ರಹ್ಮದ ವಿಕಾರವೇ ಆಗಿವೆ ; ಬ್ರಹ್ಮವು ನಮ್ಮ ಆತ್ಮನಾಗಿದೆ.

ಸಿದ್ಧಾಂತ : ಪ್ರತೀಕಗಳನ್ನು ನಾನೆಂದು ಗ್ರಹಿಸಬಾರದು ; ಏಕೆಂದರೆ ಅವು ತಾನೆಂಬ ಅರಿವು ಆಗುವದಿಲ್ಲ. ಪ್ರತೀಕಗಳೂ ಬ್ರಹ್ಮದ ಕಾರ್ಯವೇ ಆದರೂ ಅವು ಬ್ರಹ್ಮವೆಂದು ಹಿಡಿದಾಗ ಪ್ರತೀಕವೇ ಇಲ್ಲವಾಗುವದರಿಂದ ಅವು ನಾನೆಂದು ತಿಳಿಯುವದಕ್ಕೆ ಅವಕಾಶವೇ ಇರುವದಿಲ್ಲ. ಉಪಾಸನೆಗಳಲ್ಲಿ ಕರ್ತೃತ್ವಾದಿಗಳನ್ನು ಇಟ್ಟುಕೊಂಡೇ ಇರುವದರಿಂದಲೂ ಅವನ್ನು ಬ್ರಹ್ಮವೆಂದಾಗಲೂ ಅವು ನಾನೆಂದು ತಿಳಿಯುವದಕ್ಕೆ ಬರುವದಿಲ್ಲ. ಏಕೆಂದರೆ ಪ್ರತೀಕಗಳಿಗೆ ಉಪಾಸಕನೂ ಸಮವಾಗಿರುತ್ತಾನೆ.

## ೪. ಬ್ರಹ್ಮದೃಷ್ಟ್ಯಧಿಕರಣ

ಬ್ರಹ್ಮದೃಷ್ಟಿರುತ್ಕರ್ಷಾತ್ ॥೫॥

**ಸಂಶಯ :** ಆದಿತ್ಯನು ಬ್ರಹ್ಮ– ಎಂದು ಮುಂತಾಗಿರುವ ಸಾಮಾನಾಧಿಕರಣ್ಯದ ನಿರ್ದೇಶಗಳಲ್ಲಿ ಬ್ರಹ್ಮದಲ್ಲಿ ಆದಿತ್ಯಾದಿದೃಷ್ಟಿಗಳನ್ನು ಮಾಡಬೇಕೊ ? ಬಾರದೊ ?

**ಪೂರ್ವಪಕ್ಷ :** ಯಾವ ನಿಯಮವೂ ಇಲ್ಲ ; ಏಕೆಂದರೆ ಇಂಥದ್ದರಲ್ಲಿಯೇ ಇಂಥದ್ದರ ದೃಷ್ಟಿಯನ್ನು ಮಾಡಬೇಕು ಎಂಬ ಶಾಸ್ತ್ರವೇನೂ ಇಲ್ಲ. ಅಥವಾ ಆದಿತ್ಯಾದಿದೃಷ್ಟಿಗಳನ್ನೇ ಬ್ರಹ್ಮದಲ್ಲಿ ಮಾಡಬೇಕು. ಏಕೆಂದರೆ ಬ್ರಹ್ಮವನ್ನು ಉಪಾಸನೆಮಾಡಿದರೆ ಫಲವುಂಟಾಗುವದೆಂಬುದು ಯುಕ್ತ.

ಸಿದ್ಧಾಂತ : ಆದಿತ್ಯಾದಿಗಳಲ್ಲಿ ಬ್ರಹ್ಮದೃಷ್ಟಿಯನ್ನೇ ಮಾಡಬೇಕು. ಏಕೆಂದರೆ ಬ್ರಹ್ಮವು ಉತ್ಕೃಷ್ಟವಾಗಿದೆ. ನಿಕೃಷ್ಟವಸ್ತುವಿನಲ್ಲಿ ಉತ್ಕೃಷ್ಟದೃಷ್ಟಿಯನ್ನು ಮಾಡುವದು ಯುಕ್ತವೆಂಬುದು ಲೋಕಸಿದ್ಧವಾಗಿದೆ. ಉದಾಹರಣೆಗೆ ಕ್ಷತ್ತೃವಿನಲ್ಲಿ ರಾಜದೃಷ್ಟಿಯು ಶ್ರೇಯಸ್ಕರವಾಗಿರುತ್ತದೆ. ಶಾಸ್ತ್ರದಲ್ಲಿ ಯಾವ ನಿರ್ಧಾರಣವೂ ಇಲ್ಲದ್ದರಿಂದ ಆ ನ್ಯಾಯವನ್ನು ಇಲ್ಲಿ ಒಪ್ಪಬೇಕು. ಇದಲ್ಲದೆ 'ಆದಿತ್ಯನು ಬ್ರಹ್ಮ' ಎಂಬಲ್ಲಿ ಆದಿತ್ಯಶಬ್ದವು ಮೊದಲು ಬರುವದರಿಂದ ಅದಕ್ಕೆ ಮುಖ್ಯಾರ್ಥವನ್ನು ತೆಗೆದುಕೊಳ್ಳಬೇಕು ; ಆಮೇಲೆ ಬ್ರಹ್ಮಶಬ್ದವನ್ನು ಮುಖ್ಯಾರ್ಥದಲ್ಲಿ ತೆಗೆದುಕೊಂಡರೆ ಹೊಂದುವದಿಲ್ಲವಾದ್ದರಿಂದ ಬ್ರಹ್ಮದೃಷ್ಟಿ

ಯನ್ನು ವಿಧಿಸುವದಕ್ಕೆ ಬಂದಿದೆ ಎಂದಿಟ್ಟುಕೊಳ್ಳುವದು ಯುಕ್ತ. 'ಇತ್ಯುಪಾಸೀತ' ಎಂದು ಬ್ರಹ್ಮಶಬ್ದವು ಇತಿಪರವಾಗಿರುವದರಿಂದಲೂ ಇದೇ ಯುಕ್ತ. ವಾಕ್ಯಶೇಷದಲ್ಲಿಯೂ ಆದಿತ್ಯಾದಿಗಳನ್ನು ಉಪಾಸನೆಮಾಡಬೇಕೆಂದು ದ್ವಿತೀಯಾವಿಭಕ್ತಿಯಿಂದ ತಿಳಿಸಿದೆ. ಆದಿತ್ಯನಲ್ಲಿ ಬ್ರಹ್ಮದೃಷ್ಟಿಯು ಅಧ್ಯಾರೋಪ ಮಾಡುವದೆಂಬುದೂ ಬ್ರಹ್ಮದ ಉಪಾಸನೆಯೇ ಆದ್ದರಿಂದ ಬ್ರಹ್ಮವೇ ಉಪಾಸನೆಗೆ ಫಲವನ್ನು ಕೊಡಬಹುದಾಗಿದೆ.

## ೫. ಆದಿತ್ಯಾದಿಮತ್ಯಧಿಕರಣ

### ಆದಿತ್ಯಾದಿಮತಯಶ್ಚಾಂಗ ಉಪಪತ್ತೇಃ ।

**ಸಂಶಯ :** ಅಂಗಾವಬದ್ಧೋಪಾಸನೆಗಳಲ್ಲಿ ಉದ್ಗೀಥಾದಿದೃಷ್ಟಿಗಳನ್ನು ಆದಿತ್ಯಾದಿಗಳಲ್ಲಿ ಮಾಡಬೇಕೊ ? ಉದ್ಗೀಥಾದಿಗಳಲ್ಲಿ ಆದಿತ್ಯಾದಿದೃಷ್ಟಿಗಳನ್ನು ಮಾಡಬೇಕೊ ?

**ಪೂರ್ವಪಕ್ಷ :** ಹೇಗೆ ಬೇಕಾದರೂ ಮಾಡಬಹುದು, ಏಕೆಂದರೆ ಹೀಗೆಂಬ ನಿಯಮಕ್ಕೆ ಕಾರಣವಿರುವದಿಲ್ಲ, ಅಥವಾ ಆದಿತ್ಯಾದಿಗಳಲ್ಲಿ ಉದ್ಗೀಥಾದಿದೃಷ್ಟಿಗಳನ್ನೇ ಮಾಡಬೇಕು. ಏಕೆಂದರೆ ಉದ್ಗೀಥಾದಿಗಳು ಕರ್ಮಾತ್ಮಕವಾಗಿವೆ. ಇದಲ್ಲದೆ "ಇಯಮೇವರ್ಗಗ್ನಿಃ ಸಾಮ" ಮುಂತಾದವುಗಳಲ್ಲಿ ಪೃಥಿವ್ಯಗ್ನಿಗಳಲ್ಲಿ ಋಕ್ಸಾಮದೃಷ್ಟಿಯನ್ನು ಮಾಡಬೇಕೆಂದೇ ಅರ್ಥಮಾಡುವದು ಯುಕ್ತವೆಂಬ ಹಿಂದಿನ ಅಧಿಕರಣದ ಸಿದ್ಧಾಂತದ ಯುಕ್ತಿಗಳಿಂದ ಸಿದ್ಧವಾಗುತ್ತದೆ.

**ಸಿದ್ಧಾಂತ :** ಆದಿತ್ಯಾದಿಮತಿಗಳನ್ನೇ ಉದ್ಗೀಥಾದಿಗಳಲ್ಲಿಡಬೇಕು. ಏಕೆಂದರೆ ಅಪೂರ್ವಸಂನಿಕರ್ಷದಿಂದ ಉದ್ಗೀಥಾದಿಗಳಿಗೆ ಆ ಮತಿಗಳಿಂದ ಸಂಸ್ಕಾರವಾಗಿ ಕರ್ಮಸಮೃದ್ಧಿಯಾಗುತ್ತದೆ ಎಂಬುದು ಉಪಪನ್ನವಾಗಿರುತ್ತದೆ. 'ಲೋಕಗಳಲ್ಲಿ ಪಂಚವಿಧಸಾಮವನ್ನು ಯಾವನು ಉಪಾಸನೆ ಮಾಡುತ್ತಾನೋ' ಮುಂತಾದ ಸ್ವತಂತ್ರಫಲವುಳ್ಳ ಉಪಾಸನೆಗಳಲ್ಲಿ ಅಧಿಕೃತಾಧಿಕಾರವಿರುವದರಿಂದ ಅಲ್ಲಿಯೂ ಅಪೂರ್ವಸಂನಿಕರ್ಷದಿಂದಲೇ ಫಲವನ್ನು ಕಲ್ಪಿಸುವದು ಯುಕ್ತ. ಕರ್ಮಾಂಗವಾದ ಉದ್ಗೀಥಾದಿಗಳಿಂದ ಫಲಾತ್ಮಕವಾದ ಆದಿತ್ಯಾದಿಗಳು ಉತ್ಕೃಷ್ಟವಾಗಿವೆ– ಎಂಬುದೂ ಉಪಪನ್ನವಾಗಿದೆ,

ಉದ್ಗೀಥಾದಿದೃಷ್ಟಿಗಳಿಂದ ಆದಿತ್ಯಾದಿಗಳನ್ನು ಉಪಾಸನೆಮಾಡಿದರೆ ಅವು ಕರ್ಮಾತ್ಮಕವಾಗಿ ಫಲವನ್ನು ಕೊಡುತ್ತವೆ ಎಂದದ್ದೂ ಸರಿಯಲ್ಲ ; ಏಕೆಂದರೆ ಉಪಾಸನೆಯೇ ಕರ್ಮವಾಗಿರುವದರಿಂದಲೇ ಅದೇ ಫಲವನ್ನು ಕೊಡಬಹು ದಾಗಿದೆ. 'ಇಯಮೇವರ್ಗಗ್ನಿಃ' ಎಂಬಲ್ಲಿ ಅಕ್ಷರನ್ಯಾಸವು ಋಕ್ಕಿನಲ್ಲಿ ಪೃಥಿವೀ ದೃಷ್ಟಿಯನ್ನು ಮಾಡಬೇಕು ಎಂಬರ್ಥಕ್ಕೆ ಹೊಂದುಗೆಯಾಗಿದೆ. ಹಾಗಿಲ್ಲದಿದ್ದರೆ ಋಗೇವ- ಎಂದಿರಬೇಕಾಗುತ್ತಿತ್ತು. ಇದಕ್ಕನುಗುಣವಾಗಿ ಹಿಂಕಾರವೇ ಮುಂತಾದ ಮಿಕ್ಕ ಕಡೆಗಳಲ್ಲಿಯೂ ಹೀಗೆಯೇ ಕಲ್ಪಿಸಬೇಕು. ಆದ್ದರಿಂದ ಆದಿತ್ಯಾದಿಬುದ್ಧಿಗಳನ್ನೇ ಅಂಗಗಳಲ್ಲ ಮಾಡಬೇಕು.

## ೬. ಆಸೀನಾಧಿಕರಣ

**ಆಸೀನಃ ಸಂಭವಾತ್ || ೭ || ಧ್ಯಾನಾಚ್ಚ ೮ ಅಚಲತ್ವಂ ಚಾಪೇಕ್ಷ್ಯ ||೯|| ಸ್ಮರನ್ತಿ ಚ ||೧೦||**

**ಸಂಶಯ** : ಉಪಾಸನೆಗಳನ್ನು ಹೇಗೆ ಬೇಕಾದರೂ ಮಾಡಬಹುದೊ? ಕುಳಿತುಕೊಂಡೇ ಮಾಡಬೇಕೊ ?

**ಪೂರ್ವಪಕ್ಷ** : ಉಪಾಸನೆಯು ಮಾನಸವಾದ್ದರಿಂದ ಹೇಗೆ ಬೇಕಾ ದರೂ ಮಾಡಬಹುದು.

**ಸಿದ್ಧಾಂತ** : ಉಪಾಸನೆಯೆಂದರೆ ಸಮಾನಪ್ರತ್ಯಯವನ್ನು ಪ್ರವಾಹ ವಾಗಿ ನಡೆಯಿಸುವದು. ಅದು ಕುಳಿತುಕೊಂಡೇ ಕೊಡಿದರೆ ಸಾಕಾಗುತ್ತದೆ; ಇಲ್ಲದಿದ್ದರೆ ಚಿತ್ತವಿಕ್ಷೇಪವೋ ನಿದ್ರೆಯೋ ಆಗಬಹುದು. ಉಪಾಸನಾಶಬ್ದಕ್ಕೆ ಪರ್ಯಾಯವಾದ ಧ್ಯಾಯತಿಶಬ್ದವನ್ನು ಏಕಾಗ್ರತೆಯಿಂದ ಚಿತ್ತವನ್ನಿಟ್ಟಿರು ವವನಿಗೆ ಉಪಯೋಗಿಸುತ್ತಾರೆ ; ಅದು ಕುಳಿತುಕೊಂಡವನಿಗೇ ಹೊಂದು ತ್ತದೆ. ಶ್ರುತಿಸ್ಮೃತಿಲಿಂಗಗಳೂ ಇದಕ್ಕೆ ಅನುಗುಣವಾಗಿವೆ. ಆದ್ದರಿಂದ ಕುಳಿತುಕೊಂಡೇ ಉಪಾಸನೆಮಾಡಬೇಕು.

## ೭. ಏಕಾಗ್ರತಾಧಿಕರಣ

**ಯತ್ರೈಕಾಗ್ರತಾ ತತ್ರಾವಿಶೇಷಾತ್ |೧೧|**

**ಸಂಶಯ** : ಉಪಾಸನೆಗೆ ದಿಗ್ದೇಶಕಾಲಾದಿನಿಯಮಗಳಿವೆಯೊ, ಇಲ್ಲವೊ ?

ಪೂರ್ವಪಕ್ಷ : ವೈದಿಕಕರ್ಮವಾದ್ದರಿಂದ ಇದಕ್ಕೂ ನಿಯಮವಿದೆ.

ಸಿದ್ಧಾಂತ : ಏಕಾಗ್ರತೆಯಾಗುವ ಯಾವ ದಿಗಾದಿಗಳಲ್ಲಿಯಾದರೂ ಮಾಡಬಹುದು. ಶ್ರುತಿಯಲ್ಲಿ ಹೇಳಿರುವದೂ ಇದಕ್ಕೆ ಅನುಗುಣವಾಗಿದೆ.

## ೮. ಆಪ್ರಾಯಣಾಧಿಕರಣ

ಆಪ್ರಾಯಣಾತ್ ತತ್ರಾಪಿ ಹಿ ದೃಷ್ಟಮ್ ॥೧೨॥

ಸಂಶಯ : ಉಪಾಸನೆಗಳನ್ನು ಸ್ವಲ್ಪಕಾಲದವರೆಗೆ ಮಾಡಿ ಬಿಟ್ಟು ಬಿಡಬಹುದೊ, ಅಥವಾ ಬದುಕಿರುವವರೆಗೂ ಮಾಡಬೇಕೊ ?

ಪೂರ್ವಪಕ್ಷ : ಉಪಾಸನೆ ಎಂಬ ಶಬ್ದವು ಆವೃತ್ತಿವಿಶಿಷ್ಟವಾಗಿರುವದರಿಂದ ಸ್ವಲ್ಪ ಕಾಲದವರೆಗೆ ಮಾಡಿಬಿಟ್ಟರೆ ಸಾಕಾಗುತ್ತದೆ.

ಸಿದ್ಧಾಂತ : ಸಾಯುವವರೆಗೂ ಮಾಡಬೇಕು. ಏಕೆಂದರೆ ಅಂತ್ಯಪ್ರತ್ಯಯವಶದಿಂದ ಅದೃಷ್ಟಫಲವು ದೊರಕುತ್ತದೆ. ಕರ್ಮಗಳಿಗೆ ಸಾಯುವ ಕಾಲಕ್ಕೆ ಭಾವನಾವಿಜ್ಞಾನವಿರಬೇಕೆಂದು ಶ್ರುತಿಯಿದೆ ; ಉಪಾಸನೆಗಳಿಗೂ ಆವೃತ್ತಿರೂಪವಾದ ಭಾವನಾವಿಜ್ಞಾನವಿರಬೇಕೆಂಬುದು ಇದರಿಂದ ಸಿದ್ಧವಾಗುತ್ತದೆ. ಇದಕ್ಕೆ ಶ್ರುತಿಸ್ಮೃತಿಗಳ ಬೆಂಬಲವೂ ಇದೆ.

## ೯. ತದಧಿಗಮಾಧಿಕರಣ

ತದಧಿಗಮ ಉತ್ತರಪೂರ್ವಾಘಯೋರಶ್ಲೇಷವಿನಾಶೌ ತದ್ವ್ಯಪದೇಶಾತ್ ॥೧೩॥

ಸಂಶಯ : ಬ್ರಹ್ಮಜ್ಞಾನವುಂಟಾಗಲು ಪಾಪವು ನಾಶವಾಗುವದೊ, ಇಲ್ಲವೊ ?

ಪೂರ್ವಪಕ್ಷ : ಕರ್ಮಕ್ಕೆ ಫಲವನ್ನು ಕೊಡುವ ಶಕ್ತಿಯಿದೆ ; ಆದ್ದರಿಂದ ಅದು ಭೋಗದಿಂದಲೇ ನಾಶವಾಗಬೇಕು. ಪ್ರಾಯಶ್ಚಿತ್ತಗಳನ್ನು ದುರಿತಕರ್ಮನಾಶಕ್ಕೆ ವಿಧಿಸಿದೆ ಎಂಬುದನ್ನು ಒಪ್ಪಿದರೂ ಅದನ್ನು ದೋಷಸಂಯೋಗದಿಂದ ವಿಧಿಸಿದೆ ; ಆದರೆ ಬ್ರಹ್ಮಜ್ಞಾನವನ್ನು ದುರಿತನಾಶಕ್ಕೆಂದು ವಿಧಿಸಿಲ್ಲ. ಆದ್ದರಿಂದ ಕರ್ಮವು ನಾಶವಾಗಲಾರದು. ಮೋಕ್ಷವೂ ಕರ್ಮಫಲದಂತೆಯೇ ದೇಶಕಾಲಾಪೇಕ್ಷವೆಂದೇ ಆಗಲಿ !

ಸಿದ್ಧಾಂತ : ಬ್ರಹ್ಮಜ್ಞಾನವಾಗಲು ಹಿಂದುಮುಂದಿನ ಪಾಪಗಳು ಇಲ್ಲವಾಗುತ್ತವೆ ; ಹಿಂದಿನವು ನಾಶವಾಗುವದು, ಮುಂದಿನವು ಅಂಟದೆ ಹೋಗುವವು. ಕರ್ಮಕ್ಕೆ ಫಲವನ್ನು ಕೊಡುವ ಶಕ್ತಿಯಿದೆಯಾದರೂ ಜ್ಞಾನದಿಂದ ಅದಕ್ಕೆ ಅಡ್ಡಿಯಾಗುತ್ತದೆ. ಬ್ರಹ್ಮಜ್ಞಾನವನ್ನು ಪಾಪವಿನಾಶಕ್ಕೆಂದು ವಿಧಿಸಿಲ್ಲವೆಂಬುದು ಸರಿಯಲ್ಲ ; ಏಕೆಂದರೆ ಸಗುಣವಿದ್ಯೆಗಳಲ್ಲಿ ಪಾಪನಿವೃತ್ತಿ ಎಂಬ ಫಲವನ್ನು ವಿಧಿಸಿದೆ. ನಿರ್ಗುಣವಿದ್ಯೆಯಲ್ಲಿ ವಿಧಿಯಿಲ್ಲವಾದರೂ ಬ್ರಹ್ಮಜ್ಞಾನಿಗೆ 'ನಾನು ಮೂರುಕಾಲದಲ್ಲಿಯೂ ಕರ್ತೃತ್ವಭೋಕ್ತೃತ್ವವಿಲ್ಲದ ಬ್ರಹ್ಮವು' ಎಂಬ ನಿಶ್ಚಯವಾಗಿರುವದರಿಂದ ಕರ್ಮವು ಅವನಿಗೆ ಇಲ್ಲವಾಗುತ್ತದೆ.

## ೧೦. ಇತರಾಸಂಶ್ಲೇಷಾಧಿಕರಣ

ಇತರಸ್ಯಾಪ್ಯೇವಮಸಂಶ್ಲೇಷಃ ಪಾತೇ ತು ||೧೪||

ಸಂಶಯ : ಪುಣ್ಯವು ಬ್ರಹ್ಮಜ್ಞಾನದಿಂದ ನಾಶವಾಗುವದೋ, ಇಲ್ಲವೋ?

ಪೂರ್ವಪಕ್ಷ ಶಾಸ್ತ್ರೀಯವಾದ ಪುಣ್ಯಕರ್ಮವನ್ನು ಶಾಸ್ತ್ರೀಯವಾದ ಜ್ಞಾನವು ನಾಶಗೊಳಿಸಲಾರದು.

ಸಿದ್ಧಾಂತ : ಪಾಪದಂತೆ ಪುಣ್ಯವೂ ಹಿಂದಿನದು ನಾಶವಾಗುತ್ತದೆ, ಮುಂದಿನದು ಅಂಟದೆಹೋಗುತ್ತದೆ. ಏಕೆಂದರೆ ಅದೂ ಪಾಪದಂತೆಯೇ ತನ್ನ ಫಲವನ್ನು ಕೊಟ್ಟು ಜ್ಞಾನಫಲಕ್ಕೆ ಪ್ರತಿಬಂಧಕವಾಗಿರುತ್ತದೆ. ಶ್ರುತಿಯಲ್ಲಿ ಪುಣ್ಯಪಾಪಗಳೆರಡನ್ನೂ ಜ್ಞಾನಿಯು ದಾಟುವನೆಂದು ಹೇಳಿದೆ: ಅಕರ್ತ್ರಾತ್ಮಜ್ಞಾನವು ಪಾಪದಂತೆ ಪುಣ್ಯಕ್ಕೂ ನಾಶಕಾರಕವಾಗಿದೆ. ಶ್ರುತಿಯಲ್ಲಿ ಪಾಪಶಬ್ದವನ್ನೇ ಪುಣ್ಯಕ್ಕೂ ಉಪಯೋಗಿಸಿಯೂ ಇದೆ. ಆದ್ದರಿಂದ ಪುಣ್ಯಾಪುಣ್ಯಗಳು ಜ್ಞಾನದಿಂದ ನಾಶವಾಗಲು ಜ್ಞಾನಿಗೆ ಕೈವಲ್ಯವು ಆಗಿಯೇತೀರುವದು, ಜನ್ಮಾಂತರವಾಗಲಾರದು.

## ೧೧. ಅನಾರಬ್ಧಾಧಿಕರಣ

ಅನಾರಬ್ಧಕಾರ್ಯೇ ಏವ ತು ಪೂರ್ವೇ ತದವಧೇಃ ||೧೫||

ಸಂಶಯ : ಎಲ್ಲಾ ಕರ್ಮಗಳೂ ಜ್ಞಾನದಿಂದ ನಾಶವಾಗುವವೋ, ಇಲ್ಲವೋ ?

ಪೂರ್ವಪಕ್ಷ : ಶ್ರುತಿಯಲ್ಲಿ ಯಾವ ವಿಶೇಷವೂ ಕಾಣುವದಿಲ್ಲವಾಗಿ ಎಲ್ಲಾ ಕರ್ಮಗಳೂ ನಾಶವಾಗುವವು.

ಸಿದ್ಧಾಂತ : ಪ್ರಾರಬ್ಧಫಲವುಳ್ಳ ಕರ್ಮಗಳನ್ನುಳಿದು ಮಿಕ್ಕ ಕರ್ಮಗಳಿಗೆ ಮಾತ್ರ ಅಶ್ಲೇಷವಿನಾಶಗಳಾಗುವವು. ಏಕೆಂದರೆ ಶ್ರುತಿಯಲ್ಲಿ ಶರೀರಪಾತವಾಗುವವರೆಗೇ ತಡ ಎಂದು ಮೋಕ್ಷಕ್ಕೆ ಅವಧಿಯನ್ನು ಹೇಳಿದೆ. ಜ್ಞಾನವೂ ಒಂದು ಕರ್ಮಾಶಯವನ್ನಾಶ್ರಯಿಸಿಯೇ ಉಂಟಾಗಬೇಕಷ್ಟೆ. ಆ ಕರ್ಮವು ತನ್ನ ವೇಗವು ಕ್ಷಯವಾಗುವವರೆಗೂ ಇರುವದೆಂದು ತಿಳಿಯುವದು ಯುಕ್ತ. ಅಕರ್ತ್ರಾತ್ಮಜ್ಞಾನವಾದರೂ ಮಿಥ್ಯಾಜ್ಞಾನದ ಸಂಸ್ಕಾರದಿಂದ ಕೆಲವು ಕಾಲದವರೆಗೆ ಬಾಧಿತವಾಗಿಯೂ ಇದ್ದುಕೊಂಡಿರಬಹುದು.

## ೧೨. ಅಗ್ನಿಹೋತ್ರಾದ್ಯಧಿಕರಣ

ಅಗ್ನಿಹೋತ್ರಾದಿ ತು ತತ್ಕಾರ್ಯಾಯೈವ ತದ್ದರ್ಶನಾತ್ ||೧೬||
ಅತೋಽನ್ಯಾಪಿ ಹ್ಯೇಕೇಷಾಮುಭಯೋಃ || ೧೭ ||

ಸಂಶಯ : ಪುಣ್ಯವೂ ಬ್ರಹ್ಮಜ್ಞಾನವಾದಮೇಲೆ ಪಾಪದಂತೆಯೇ ನಾಶವಾಗುತ್ತದೆ, ಅಂಟುವದಿಲ್ಲ– ಎಂಬುದು ಎಲ್ಲಾ ಪುಣ್ಯಕರ್ಮಗಳ ವಿಷಯವೋ, ಅಲ್ಲವೋ ?

ಪೂರ್ವಪಕ್ಷ : ನ್ಯಾಯವು ಸಮಾನವಾಗಿರುವದರಿಂದ ಎಲ್ಲಾ ಪುಣ್ಯಗಳೂ ಜ್ಞಾನದಿಂದ ನಾಶವಾಗುವವು.

ಸಿದ್ಧಾಂತ : ಅಗ್ನಿಹೋತ್ರಾದಿನಿತ್ಯಕರ್ಮವು ಜ್ಞಾನದ ಕಾರ್ಯವಾದ ಮೋಕ್ಷವನ್ನು ಕೊಡುವದರಲ್ಲಿಯೇ ವಿನಿಯೋಗವಾಗುವದು. ಮೋಕ್ಷವು ಕಾರ್ಯವಲ್ಲವಾದರೂ ಕರ್ಮವು ಜ್ಞಾನೋತ್ಪತ್ತಿದ್ವಾರದಿಂದ ಮೋಕ್ಷಕಾರಣವೆನಿಸುತ್ತದೆ ; ಆದ್ದರಿಂದ ಜ್ಞಾನಕ್ಕೆ ಹಿಂದೆ ಮಾಡಿದ ನಿತ್ಯಕರ್ಮದ ವಿಷಯವಿದು. ಸಗುಣವಿದ್ಯೆಗಳಲ್ಲಿ ಜ್ಞಾನಿಗೂ ಕರ್ಮವುಂಟು ; ಫಲಾಭಿಸಂಧಿಯಿಲ್ಲದೆ ಮಾಡಿದ ಕರ್ಮವು ಜ್ಞಾನದೊಡನೆ ಒಂದೇ ಕಾರ್ಯವಾದ ಮೋಕ್ಷವನ್ನು ಕೊಡುವದೆಂಬುದು ಅವನ ವಿಷಯದಲ್ಲಿ ಹೊಂದುತ್ತದೆ. ಏಕೆಂದರೆ ಅವನಿಗೆ ಆಗುವದು ಆಪೇಕ್ಷಿಕಮುಕ್ತಿ. ಆದ್ದರಿಂದ ಕಾಮ್ಯಕರ್ಮಗಳಿಗೇ ಜ್ಞಾನದಿಂದ ಅಶ್ಲೇಷವಿನಾಶಗಳನ್ನು ಹೇಳಿರುವದು ; ಏಕೆಂದರೆ ಅವು ಜ್ಞಾನಕ್ಕೆ ಉಪಕಾರಕವಲ್ಲ.

## ೧೩. ವಿದ್ಯಾಜ್ಞಾನಸಾಧನಾಧಿಕರಣ

### ಯದೇವ ವಿದ್ಯಯೇತಿ ಹಿ || ೧೮ ||

**ಸಂಶಯ :** ಬರಿಯ ಅಗ್ನಿಹೋತ್ರಾದಿಕರ್ಮವೂ ವಿದ್ಯೆಗೆ ಸಾಧನವಾಗುವದೊ, ಕರ್ಮಾಂಗೋಪಾಸನಾಯುಕ್ತವಾದ ಕರ್ಮವೇ ಸಾಧನವಾಗುವದೊ?

**ಪೂರ್ವಪಕ್ಷ :** ಉಪಾಸನಾಯುಕ್ತವಾದ ಕರ್ಮವೇ ಜ್ಞಾನಕ್ಕೆ ಸಾಧನವು ; ಏಕೆಂದರೆ ವಿದ್ಯೆಯಿಂದ ಕೂಡಿದ ಕರ್ಮವೇ ವೀರ್ಯವತ್ತರವೆಂದು ಶ್ರುತಿಯಲ್ಲಿದೆ. ಸ್ಮೃತಿಯಲ್ಲಿಯೂ ಇದೇ ಅರ್ಥವನ್ನು ಹೇಳಿದೆ.

**ಸಿದ್ಧಾಂತ :** ಬರಿಯ ಕರ್ಮವು ವಿದ್ಯೆಗೆ ಅತ್ಯಂತವಾಗಿ ಬೇಕೇ ಇಲ್ಲ ಎನ್ನುವಹಾಗಿಲ್ಲ. ಏಕೆಂದರೆ 'ಯಜ್ಞದಿಂದ ತಿಳಿಯಲಿಚ್ಛಿಸುತ್ತಾರೆ' ಎಂಬ ಶ್ರುತಿಯಲ್ಲಿ ಯಾವ ವಿಶೇಷವೂ ಇಲ್ಲದೆ ಯಜ್ಞಸಾಮಾನ್ಯವನ್ನೇ ವಿದ್ಯೆಗೆ ಅಂಗವಾಗಿ ಹೇಳಿದೆ. ವಿದ್ಯೆಯಿಂದ ಕೂಡಿರುವ ಕರ್ಮವು ವೀರ್ಯವತ್ತರವೆಂದಿರುವದು ಅದು ಹೆಚ್ಚಿನದೆಂಬುದಕ್ಕೆ ಕಾರಣವಾಗಬಹುದು ; ಆದರೆ ಬರಿಯ ಕರ್ಮವೂ ವೀರ್ಯವತ್ತಾಗಿರುವದೆಂದು ಅದರಿಂದಲೇ ಗೊತ್ತಾಗುತ್ತದೆ. ಆದ್ದರಿಂದ ಈ ಜನ್ಮದಲ್ಲಿಯೂ ಜನ್ಮಾಂತರದಲ್ಲಿಯೂ ಮಾಡಿದ ಕರ್ಮವು ದುರಿತಕ್ಷಯದ್ವಾರದಿಂದ ಜ್ಞಾನಕ್ಕೆ ಪರಂಪರೆಯಿಂದ ಎಂದರೆ ಶ್ರವಣಾದಿಗಳ ಮೂಲಕ ಕಾರಣವಾಗಿರುತ್ತದೆ.

## ೧೪. ಇತರಕ್ಷಪಣಾಧಿಕರಣ

### ಭೋಗೇನ ತ್ವಿತರೇ ಕ್ಷಪಯಿತ್ವಾ ಸಂಪದ್ಯತೇ || ೧೯ ||

**ಸಂಶಯ :** ಜ್ಞಾನಿಗೆ ಪ್ರಾರಬ್ಧಕರ್ಮವು ಕ್ಷಯವಾದ ಬಳಿಕ ಕೈವಲ್ಯವು ಆಗುವದೊ, ಇಲ್ಲವೊ ?

**ಪೂರ್ವಪಕ್ಷ :** ದ್ವಿಚಂದ್ರದರ್ಶನದಂತೆ ಬಾಧಿತವಾದ ಮಿಥ್ಯಾಜ್ಞಾನನಿಮಿತ್ತವಾದ ದ್ವೈತದರ್ಶನವು ಜ್ಞಾನವಾದಮೇಲೂ ಸಂಸ್ಕಾರದಿಂದ ಇದ್ದುಕೊಂಡಿರುವಂತೆ ಆಮೇಲೂ ಇರಬಹುದು. ಈ ಕರ್ಮಾಶಯವು ಮುಗಿದರೆ ಮತ್ತೊಂದು ಹೊಸಭೋಗಕ್ಕೆ ಕಾರಣವಾಗಲೂಬಹುದು.

ಸಿದ್ಧಾಂತ ಪ್ರಾರಬ್ಧಫಲದ ಉಪಭೋಗಕ್ಕಾಗಿ ಜ್ಞಾನವಾದಬಳಿಕ ವೂ ದ್ವೈತದರ್ಶನವು ಉಳಿದಿತ್ತು. ಆದರೆ ಅದು ಕ್ಷಯವಾದ ಬಳಿಕ ಜ್ಞಾನಿಗೆ ಜನ್ಮಾಂತರಕ್ಕೆ ಕಾರಣವಿಲ್ಲ. ಮಿಥ್ಯಾಜ್ಞಾನದಿಂದಲೇ ಕರ್ಮಾಂತರದಿಂದ ದೇಹಾಂತರಪ್ರಾಪ್ತಿಯಾಗುವದು ; ಆದರೆ ಆ ಮಿಥ್ಯಾಜ್ಞಾನವು ಸಮ್ಯಗ್ಜ್ಞಾನದಿಂದ ನಾಶವಾಗಿರುವದರಿಂದ ಜನ್ಮಾಂತರಕ್ಕೆ ಕಾರಣವೇ ಇರುವದಿಲ್ಲ.

## ಎರಡನೆಯ ಪಾದ

ಈ ಪಾದದಲ್ಲಿ ಉತ್ಕ್ರಾಂತಿಗತಿಗಳ ವಿಚಾರವನ್ನು ಮಾಡಲಾಗುವದು.

### ೧. ವಾಗಧಿಕರಣ

ವಾಙ್ಮನಸಿ ದರ್ಶನಾಚ್ಛಬ್ದಾಚ್ಚ ||೧|| ಅತ ಏವ ಚ ಸರ್ವಾಣ್ಯನು||೨||

ವಿ ಷ ಯ ವ ನ್ನೂ ಸ ಂ ಶ ಯ ವ ನ್ನೂ : "ಅಸ್ಯ ಸೋಮ್ಯ ಪುರುಷಸ್ಯ ಪ್ರಯತೋ ವಾಙ್ಮನಸಿ ಸಂಪದ್ಯತೇ" (ಛಾಂ. ೬-೮-೬) ಎಂಬಲ್ಲಿ ಸಾಯುವವನ ವಾಕ್ಕೇ ಮನಸ್ಸಿನಲ್ಲಿ ಸೇರುತ್ತದೆ ಎಂದು ಹೇಳಿದೆಯೆ, ಅಥವಾ ವಾಗ್ವೃತ್ತಿಯು ಸೇರುತ್ತದೆಯೆಂದು ಹೇಳಿದೆಯೆ ?

ಪೂರ್ವಪಕ್ಷ : ವಾಕ್ಕೆಂಬ ಶಬ್ದವೇ ಇರುವದರಿಂದ ವಾಕ್ಕೇ ಸೇರುತ್ತದೆ ಎಂದು ತಿಳಿಯುವದು ಯುಕ್ತ. ಹೀಗಲ್ಲದಿದ್ದರೆ ಅನವಶ್ಯವಾಗಿ ಲಕ್ಷಣಾವೃತ್ತಿಯನ್ನು ಒಪ್ಪಿದಂತೆ ಆಗುತ್ತದೆ.

ಸಿದ್ಧಾಂತ : ಮನೋವೃತ್ತಿಯು ಹಾಗೆಯೇ ಇರುವಲ್ಲಿ ವಾಗ್ವೃತ್ತಿಯು ಮೊದಲು ಉಪಸಂಹಾರವಾಗುತ್ತದೆ. ಲಕ್ಷಣಾವೃತ್ತಿಯನ್ನು ಆಶ್ರಯಿಸುವದು ಸರಿಯಲ್ಲ ಎಂಬ ಆಕ್ಷೇಪವು ಯುಕ್ತವಲ್ಲ. ಏಕೆಂದರೆ ಮನಸ್ಸು ವಾಕ್ಕಿಗೆ ಉಪಾದಾನಕಾರಣವಲ್ಲ ; ಆದ್ದರಿಂದ ಅದರಲ್ಲಿ ವಾಕ್ಕು ಲಯವಾಗುವದಕ್ಕೆ ಪ್ರಮಾಣವಿಲ್ಲ. ಪಾರ್ಥಿವವಾದ ಕಟ್ಟಿಗೆಯಿಂದ ತೈಜಸವಾದ ಅಗ್ನಿಯ ವೃತ್ತಿಯು ಹುಟ್ಟುತ್ತದೆ, ಅಪ್ಪಿನಲ್ಲಿ ಉಪಶಾಂತವಾಗುವದು ಕಂಡಿದೆ. ಆದ್ದರಿಂದ ವಾಗ್ವೃತ್ತಿ ಮನಸ್ಸಿನಲ್ಲಿ ಲಯವಾಗಬಹುದು. ವೃತ್ತಿ, ವೃತ್ತಿಯುಳ್ಳದ್ದು

–ಇವುಗಳ ಅಭೇದೋಪಚಾರದಿಂದ ವಾಕ್ಕು ಮನಸ್ಸಿನಲ್ಲಿ ಸೇರುತ್ತದೆ ಎಂದು ಶ್ರುತಿಯು ಹೇಳಬಹುದಾಗಿದೆ. ಇದರಂತೆ ಶ್ರುತ್ಯಂತರದಲ್ಲಿ "ಇನ್ದ್ರಿಯೈರ್ಮನಸಿ ಸಂಪದ್ಯಮಾನೈಃ" (ಪ್ರ. ೩–೯) ಎಂಬಲ್ಲಿ ಎಲ್ಲಾ ಇಂದ್ರಿಯಗಳಿಗೂ ಮನಸ್ಸಿನಲ್ಲಿ ಸಂಪತ್ತಿಯನ್ನು ಹೇಳುವದೂ ವೃತ್ತಿಯ ಲಯವನ್ನೇ ಎನ್ನಬೇಕು.

## ೨. ಮನೋಽಧಿಕರಣ

### ತನ್ಮನಃ ಪ್ರಾಣ ಉತ್ತರಾತ್ ॥ ೩ ॥

**ವಿಷಯವೂ ಸಂಶಯವೂ :** ಮೇಲೆ ಉದಾಹರಿಸಿರುವ ಶ್ರುತಿಯಲ್ಲಿ 'ಮನಃ ಪ್ರಾಣೇ' (ಛಾಂ. ೬–೮–೬) ಎಂದಿದೆ. ಅಲ್ಲಿಯೂ ವೃತ್ತಿಸಂಪತ್ತಿಯನ್ನೇ ಹೇಳಿದೆಯೆ?

**ಪೂರ್ವಪಕ್ಷ :** ಇಲ್ಲಿ ವೃತ್ತಿಗಳುಳ್ಳ ಮನಸ್ಸಿನ ಸಂಪತ್ತಿಯನ್ನೇ ಹೇಳಿದೆ. ಶ್ರುತಿಯಲ್ಲಿ ಅನ್ನದಿಂದ ಮನವೂ ಅಪ್ಪಿನಿಂದ ಪ್ರಾಣವೂ ಆಗಿವೆಯೆಂದು (ಛಾಂ. ೬–೫–೪) ಹೇಳಿದೆ. ಆದ್ದರಿಂದ ಮನಸ್ಸು ಪ್ರಾಣದಲ್ಲಿ ಲಯವಾಗುತ್ತದೆಯೆಂದರೆ ಅನ್ನವೇ ಅಪ್ಪಿನಲ್ಲಿ ಲಯವಾದಂತೆ ಆಯಿತು. ಆದ್ದರಿಂದ ವಿಕಾರವಾದದ್ದು ಪ್ರಕೃತಿಯಲ್ಲಿ ಲಯವಾದಂತೆಯೇ ಆಗುವದು.

**ಸಿದ್ಧಾಂತ :** ಮನಸ್ಸು ವೃತ್ತಿದ್ವಾರದಿಂದಲೇ ಪ್ರಾಣದಲ್ಲಿ ಲಯವಾಗುತ್ತದೆ– ಎಂದು ಮುಂದಿನ ವಾಕ್ಯದಿಂದ ತಿಳಿಯಬಹುದು. ಆದ್ದರಿಂದಲೇ ಸಾಯುವವನಿಗೂ ನಿದ್ರೆಗೆ ಹೋಗುವವನಿಗೂ ಪ್ರಾಣವೃತ್ತಿಯು ಇದ್ದರೂ ಮನೋವೃತ್ತಿಗಳ ಲಯವಾಗುವದು ಕಂಡಿರುತ್ತದೆ. ಮನಸ್ಸೇ ಪ್ರಾಣದಲ್ಲಿ ಲಯವಾಗಲಾಗದು ; ಏಕೆಂದರೆ ಅದಕ್ಕೆ ಪ್ರಾಣವು ಪ್ರಕೃತಿಯಲ್ಲ. ಪೂರ್ವಪಕ್ಷಿಯು ಹೇಳಿದ ಶ್ರುತಿಯಂತೆ ಪ್ರಕೃತಿವಿಕಾರಭಾವವನ್ನೊಪ್ಪಿದರೆ ಅನ್ನದಲ್ಲಿ ಮನಸ್ಸೂ, ಅಪ್ಪಿನಲ್ಲಿ ಅನ್ನವೂ, ಅಪ್ಪಿನಲ್ಲಿಯೇ ಪ್ರಾಣವೂ ಲಯವಾಗಬೇಕಾಗುವದು. ಪ್ರಾಣಭಾವವನ್ನು ಹೊಂದಿದ ಅಪ್ಪಿನಿಂದ ಮನಸ್ಸು ಹುಟ್ಟುವದೆಂಬುದಕ್ಕೆ ಪ್ರಮಾಣವೂ ಇಲ್ಲ. ಆದ್ದರಿಂದ ಇಲ್ಲಿಯೂ ವೃತ್ತಿಲಯವೇ.

## ೩. ಅಧ್ಯಕ್ಷಾಧಿಕರಣ

**ಸೋಽಧ್ಯಕ್ಷೇ ತದುಪಗಮಾದಿಭ್ಯಃ ||೪|| ಭೂತೇಷು ತಚ್ಛ್ರುತೇಃ ||೫|| ನೈಕಸ್ಮಿನ್ ದರ್ಶಯತೋ ಹಿ ||೬||**

ವಿಷಯಸಂಶಯಗಳು : 'ಪ್ರಾಣಸ್ತೇಜಸಿ' ( ಛಾಂ. ೬-೮-೬ ) ಎಂಬ ವಾಕ್ಯದಲ್ಲಿ ಹೇಳಿರುವಂತೆ ಪ್ರಾಣದ ವೃತ್ತಿಯು ತೇಜಸ್ಸಿನಲ್ಲಿಯೇ ಉಪಸಂಹಾರವಾಗುವದೊ, ಜೀವನಲ್ಲಾಗುವದೊ ?

ಪೂರ್ವಪಕ್ಷ : ಶ್ರುತಿಯ ಅಕ್ಷರಾರ್ಥವನ್ನೇ ತೆಗೆದುಕೊಂಡು ತೇಜಸ್ಸಿನಲ್ಲಿಯೇ ಲಯವಾಗುವದೆಂದು ತಿಳಿಯಬೇಕು.

ಸಂಶಯ : ಪ್ರಾಣವು ಜೀವನಲ್ಲಿಯೇ ಲಯವಾಗುತ್ತದೆ. ಏಕೆಂದರೆ (ಬೃ, ೪-೩-೩೮)ರಲ್ಲಿ ಎಲ್ಲಾ ಪ್ರಾಣಗಳೂ ಜೀವನನ್ನು ಸೇರುತ್ತವೆಯೆಂದು ಹೇಳಿದೆ. ಜೀವನು ಉತ್ಕ್ರಾಂತನಾಗುವಾಗ ಮುಖ್ಯಪ್ರಾಣವು ಅವನನ್ನು ಹಿಂಬಾಲಿಸುವದೆಂದೂ (ಬೃ. ೪-೪-೨) ಹೇಳಿದೆ ; ಇಂದ್ರಿಯಗಳು ಮುಖ್ಯಪ್ರಾಣವನ್ನು ಹಿಂಬಾಲಿಸುವದೆಂದೂ ಹೇಳಿದೆ. (ಬೃ. ೪-೪-೨) 'ಸವಿಜ್ಞಾನನಾಗಿರುತ್ತಾನೆ' ಎಂದಿರುವದರಿಂದ ಕರಣಗ್ರಾಮವು ಲಯವಾಗಿರುವ ಪ್ರಾಣವೂ ಆ ಜೀವನಲ್ಲಿಯೇ ಇರುತ್ತದೆ ಎಂದು ಗೊತ್ತಾಗುತ್ತದೆ. ಶ್ರುತಿಯಲ್ಲಿ ತೇಜಸ್ಸಿನಲ್ಲಿ ಲಯವೆಂದು ಹೇಳಿದ್ದರೂ ಉತ್ಕ್ರಮಣಾದಿವ್ಯವಹಾರವು ಅಧ್ಯಕ್ಷನಾದ ಜೀವನಿಗೇ ಮುಖ್ಯವಾಗಿ ಸೇರತಕ್ಕದ್ದಾದ್ದರಿಂದ ನಾವು ಹೇಳಿರುವ ಅರ್ಥವೇ ಸರಿ. ಆ ಪ್ರಾಣಸಹಿತನಾದ ಜೀವನು ತೇಜಸ್ಸೇ ಮುಂತಾದ ದೇಹಬೀಜಭೂತವಾದ ಭೂತಗಳಲ್ಲಿರುತ್ತಾನೆಂದು ಶ್ರುತಿಗೆ ಅರ್ಥ. ಶರೀರವು ಅನೇಕಾತ್ಮಕವಾಗಿರುವದರಿಂದ ಬರಿಯ ತೇಜಸ್ಸಿನಲ್ಲೇ ಎಂದು ಅರ್ಥಮಾಡುವದಕ್ಕೆ ಬರುವದಿಲ್ಲ.

## ೪. ಅಸೃತ್ಯುಪಕ್ರಮಾಧಿಕರಣ

**ಸಮಾನಾ ಚಾಸೃತ್ಯುಪಕ್ರಮಾದಮೃತತ್ವಂ ಚಾನುಪೋಷ್ಯ ||೭||**

ಸಂಶಯ : ಈ ಉತ್ಕ್ರಾಂತಿಯು ಉಪಾಸಕರಿಗೂ ಮಿಕ್ಕವರಿಗೂ ಸಮಾನವೊ, ಅಥವಾ ವಿಶೇಷವುಂಟೊ ?

**ಪೂರ್ವಪಕ್ಷ :** ಇದು ಅಜ್ಞಾನಿಗೇ ಹೊರತು ಉಪಾಸಕನಿಗಲ್ಲ. ಏಕೆಂದರೆ ಭೂತಾಶ್ರಯವಿಶಿಷ್ಟವಾಗಿ ಉತ್ಕ್ರಾಂತಿಯನ್ನು ಹೇಳಿದೆ; ಜನ್ಮಾಂತರಕ್ಕೆ ಭೂತಗಳು ಬೇಕು. ಉಪಾಸಕನಿಗೆ ಜನ್ಮಾಂತರವೂ ಇಲ್ಲ. ಉಪಾಸನೆಯ ಪ್ರಕರಣದಲ್ಲಿ ಹೇಳಿರುವ ಇದು ಉಪಾಸಕನಿಗೇ ಆಗಿರಬೇಕೆಂಬುದು ಸರಿಯಲ್ಲ. ಏಕೆಂದರೆ ನಿದ್ರೆಯೇ ಮುಂತಾದವುಗಳಂತೆ ಇದೂ ಪ್ರಾಪ್ತವಾಗಿಯೇ ಇದ್ದದ್ದನ್ನು ಅನುವಾದಮಾಡಿಕೊಂಡಿದೆ ಎಂದು ಹೇಳುವದು ಯುಕ್ತ. ಜ್ಞಾನಿಗೆ ಪ್ರಾಣಗಳು ಉತ್ಕ್ರಾಂತವಾಗುವದಿಲ್ಲ-ಎಂದೂ ಶ್ರುತಿಯಲ್ಲಿದೆ. ಆದ್ದರಿಂದ ಇದು ಅಜ್ಞಾನಿಗೇ.

ಸಿದ್ಧಾಂತ ಇದು ಅಜ್ಞಾನಿಗೂ ಉಪಾಸಕನಿಗೂ ದೇವಯಾನ ಮಾರ್ಗವು ಪ್ರಾರಂಭವಾಗುವವರೆಗೆ ಸಮಾನವಾಗಿರುತ್ತದೆ. ಅಜ್ಞಾನಾದವನು ಭೂತಸೂಕ್ಷ್ಮಗಳನ್ನಾಶ್ರಯಿಸಿ ಜನ್ಮಾಂತರವನ್ನು ಹೊಂದುತ್ತಾನೆ; ಆದರೆ ಉಪಾಸಕನು ಜ್ಞಾನಪ್ರಕಾಶಿತವಾದ ನಾಡೀದ್ವಾರವನ್ನು ಸೇರುತ್ತಾನೆ. ಮೋಕ್ಷವು ದೇಶಾಂತರದಲ್ಲಾಗತಕ್ಕದ್ದಲ್ಲವಲ್ಲ ಎಂಬ ಶಂಕೆ ಸರಿಯಲ್ಲ; ಏಕೆಂದರೆ ಈ ಅಮೃತತ್ವವು ಅವಿದ್ಯೆಯನ್ನು ಜ್ಞಾನದಿಂದ ಸುಡದೆಯೇ ಉಪಾಸನೆಯ ಸಾಮರ್ಥ್ಯದಿಂದ ಪಡೆಯತಕ್ಕ ಆಪೇಕ್ಷಿಕಾಮೃತತ್ವವಾಗಿದೆ.

## ೫. ಸಂಸಾರವ್ಯಪದೇಶಾಧಿಕರಣ

**ತದಾಪೀತೇಃ ಸಂಸಾರವ್ಯಪದೇಶಾತ್ ||೮|| ಸೂಕ್ಷ್ಮಂ ಪ್ರಮಾಣತಶ್ಚ ತಥೋಪಲಬ್ಧೇಃ ||೯|| ನೋಪಮರ್ದೇನಾತಃ ||೧೦|| ಅಸ್ಯೈವ ಚೋಪಪತ್ತೇರೇಷ ಊಷ್ಮಾ ||೧೧||**

**ಸಂಶಯ :** 'ತೇಜಃ ಪರಸ್ಯಾಂ ದೇವತಾಯಾಮ್' (ಛಾಂ. ೬-೮-೬) ಎಂಬಲ್ಲಿ ತೇಜಸ್ಸು ಜೀವ, ಪ್ರಾಣ, ಕರಣಗಳು- ಇವುಗಳೊಡನೆ ಭೂತಾಂತರಸಹಿತವಾಗಿ ಪರಮಾತ್ಮನಲ್ಲಿ ಸೇರುತ್ತದೆಯಷ್ಟೆ. ಇದು ಆತ್ಯಂತಿಕವೊ, ಅಲ್ಲವೊ ?

**ಪೂರ್ವಪಕ್ಷ :** ಇದು ಆತ್ಯಂತಿಕವೇ; ಏಕೆಂದರೆ ಎಲ್ಲಕ್ಕೂ ಪರಮಾತ್ಮನೇ ಪ್ರಕೃತಿ, ಪ್ರಕೃತಿಯನ್ನು ಸೇರಿದಮೇಲೆ ಆತ್ಯಂತಿಕವೇ ಆಗಿರಬೇಕು.

ಸಿದ್ಧಾಂತ : ಇದೂ ಸುಷುಪ್ತಪ್ರಲಯಗಳಂತೆ ಬೀಜಭಾವದಿಂದುಳಿದು ಕೊಳ್ಳುವ ಸತ್ಸಂಪತ್ತಿಯೇ ; ಏಕೆಂದರೆ ಸತ್ಸಂಪನ್ನನಾದವನಿಗೆ ಸಂಸಾರ ವನ್ನು ಹೇಳಿದೆ. ಸಂಸಾರವಿರುವವರೆಗೂ ತೇಜಆದಿಭೂತಸೂಕ್ಷ್ಮವು ಜೀವನಿಗೆ ಇದ್ದೇಇರುತ್ತದೆ ಎನ್ನಬೇಕು. ಇಲ್ಲದಿದ್ದರೆ ವಿಧಿಶಾಸ್ತ್ರವೂ ವಿದ್ಯಾಶಾಸ್ತ್ರವೂ ವ್ಯರ್ಥವಾಗುವದು. ಈ ತೇಜಸ್ಸು ಸೂಕ್ಷ್ಮವಾಗಿರುತ್ತದೆ ; ಏಕೆಂದರೆ ನಾಡಿ ಯಿಂದ ಹೊರಡುತ್ತದೆ ಎಂದು ಮುಂತಾಗಿ ಶ್ರುತಿಯಲ್ಲಿದೆ. ಇದು ಸೂಕ್ಷ್ಮ ವಾಗಿರುವದರಿಂದಲೇ ಶರೀರದ ದಾಹದಿಂದ ಇದಕ್ಕೆ ನಾಶವಿಲ್ಲ. ಈ ಶರೀರ ದಿಂದಲೇ ಬದುಕಿರುವವನ ಶರೀರದಲ್ಲಿ ಬಿಸಿಯಿರುತ್ತದೆ.

## ೬. ಪ್ರತಿಷೇಧಾಧಿಕರಣ

ಪ್ರತಿಷೇಧಾದಿತಿ ಚೇನ್ನ ಶಾರೀರಾತ್ ॥೧೨॥ ಸ್ಪಷ್ಟೋ ಹ್ಯೇಕೇ- ಷಾಮ್ ||೧೧|| ಸ್ಮರ್ಯತೇ ಚ ॥೧೫॥

ಸಂಶಯ : ಪರಬ್ರಹ್ಮಜ್ಞಾನಿಯ ಪ್ರಾಣಗಳಿಗೆ ಉತ್ಕ್ರಾಂತಿಯುಂಟೆ?

ಪೂರ್ವಪಕ್ಷ : ಉಂಟು. ಅವನ ಪ್ರಾಣಗಳು ಉತ್ಕ್ರಾಂತವಾಗು ವದಿಲ್ಲ ಎಂದು ಶ್ರುತಿಯಲ್ಲಿದ್ದರೂ ಜೀವನಿಂದ ಹೊರಡುವದಿಲ್ಲ ಎಂದೇ ಅರ್ಥ. ಶರೀರದಿಂದ ಹೊರಡುವದಿಲ್ಲ ಎಂದೇನೂ ಅರ್ಥವಲ್ಲ. ಆದ್ದರಿಂದ 'ನ ತಸ್ಮಾತ್ಪ್ರಾಣಾ ಉತ್ಕ್ರಾಮನ್ತಿ' ಎಂದು ಮಾಧ್ಯಂದಿನಶ್ರುತಿಯಲ್ಲಿ ವಿಶೇಷ ಸಂಬಂಧವನ್ನೇ ಹೇಳಿದೆ. ಅವನಿಂದ ಎಂದರೆ ಅಲ್ಲಿ ಪ್ರಧಾನವಾದ ದೇಹಿ ಯನ್ನೇ ತೆಗೆದುಕೊಳ್ಳುವದು ಯುಕ್ತ.

ಸಿದ್ಧಾಂತ : ಆರ್ತಭಾಗಪ್ರಶ್ನದಲ್ಲಿ ಈ ಪುರುಷನು ಸಾಯುವಾಗ ಅವನ ಪ್ರಾಣಗಳು ಉತ್ಕ್ರಾಂತವಾಗುವದಿಲ್ಲವೆಂದು ಹೇಳಿ ಇಲ್ಲಿಯೇ ಸೇರಿ ಹೋಗುತ್ತವೆ ಎಂದು ಹೇಳಿ ಅದರ ಸಿದ್ಧಿಗಾಗಿ 'ಅವನು ಉಬ್ಬಿಕೊಳ್ಳುತ್ತಾನೆ, ಗಾಳಿಯನ್ನು ತುಂಬಿಕೊಳ್ಳುತ್ತಾನೆ....' ಎಂದು ಮುಂತಾಗಿ ದೇಹಧರ್ಮ ಗಳನ್ನು ಹೇಳಿದೆ. ಆದ್ದರಿಂದ "ನೇತಿ ಹೋವಾಚ ಯಾಜ್ಞವಲ್ಕ್ಯಃ (ಬೃ. ೩-೨-೧೧) ಎಂಬಲ್ಲಿ ಶರೀರದಿಂದ ಪ್ರಾಣಗಳು ಉತ್ಕ್ರಾಂತವಾಗುವದಿಲ್ಲ ವೆಂದೇ ಹೇಳಿದೆ ಎನ್ನಬೇಕು. ಇಲ್ಲಿರುವಂತೆ ಮಾಧ್ಯಂದಿನಶ್ರುತಿಯಲ್ಲಿಯೂ ಪಂಚಮೀವಿಭಕ್ತಿಯು ದೇಹಾಪಾದಾನವಾಗಿಯೇ ಪ್ರಾಣೋತ್ಕ್ರಾಂತಿ

ಯನ್ನು ವಿಧಿಸಿದೆ ಎಂಬುದು ಯುಕ್ತ. 'ಅವನ ಪ್ರಾಣಗಳು ಉತ್ಕ್ರಾಂತ ವಾಗುವದಿಲ್ಲ' ಎಂಬ ಕಾಣ್ವಪಾಠದಲ್ಲಿ ಷಷ್ಠೀವಿಭಕ್ತಿಯಿದೆ ; ಅಲ್ಲಿ ಜ್ಞಾನಿಗ ಉತ್ಕ್ರಾಂತಿಯನ್ನು ಪ್ರತಿಷೇಧಿಸಿದೆ. ದೇಹದಿಂದ ಉತ್ಕ್ರಾಂತಿಯು ಪ್ರಾಪ್ತ ವಾಗಿರುವದರಿಂದ ಅಲ್ಲಿ ಅದನ್ನೇ ಪ್ರತಿಷೇಧಿಸಿದೆ ಎಂಬುದು ಯುಕ್ತ. ಅಜ್ಞರಿಗೆ ಉತ್ಕ್ರಾಂತಿಯನ್ನು ಹೇಳಿದ ಬಳಿಕ ಜ್ಞಾನಿಯ ಪ್ರಕರಣವನ್ನು ಬೇರೆಯಾಗಿ ಪ್ರಾರಂಭಿಸಿ ಅವನಿಗೂ ಉತ್ಕ್ರಾಂತಿಯನ್ನೇ ಹೇಳಿದರೆ ಸಮಂಜಸವಾಗ ಲಾರದು; ಇಲ್ಲಿಯೇ ಬ್ರಹ್ಮಪ್ರಾಪ್ತಿಯನ್ನು ಹೇಳುವ ಶ್ರುತಿಗಳಿಗೂ ಹೊಂದು ಗಡೆಯಾಗಲಾರದು. ಮಹಾಭಾರತದಲ್ಲಿ ಜ್ಞಾನಿಗೆ ಗತ್ಯುತ್ಕ್ರಾಂತಿಗಳಿಲ್ಲ ವೆಂದು ಹೇಳಿಯೂ ಇದೆ. ಆದ್ದರಿಂದ ಬ್ರಹ್ಮಜ್ಞಾನಿಗೆ ಗತ್ಯುತ್ಕ್ರಾಂತಿಗಳಿಲ್ಲ ಎಂಬುದೇ ಸರಿ.

## ೭. ವಾಗಾದಿಲಯಾಧಿಕರಣ

ತಾನಿ ಪರೇ ತಥಾ ಹ್ಯಾಹ ||೧೫||

**ಸಂಶಯ :** ಜ್ಞಾನಿಯ ಇಂದ್ರಿಯಗಳೂ ಭೂತಗಳೂ ಬ್ರಹ್ಮದಲ್ಲಿ ಲಯವಾಗುತ್ತವೆಯೆ, ತಮ್ಮತಮ್ಮ ಪ್ರಕೃತಿಯಾಗಿರುವ ಕಾರಣವಲ್ಲಿ ಲಯ ವಾಗುತ್ತವೆಯೆ ?

**ಪೂರ್ವಪಕ್ಷ :** ಕಲೆಗಳು ತಮ್ಮತಮ್ಮ ಮೂಲಕಾರಣಗಳಲ್ಲಿ ಲಯ ವಾಗುವವೆಂದು ಶ್ರುತಿಯಲ್ಲಿ (ಮುಂ. ೩-೨-೭) ಹೇಳಿದೆಯಾದ್ದರಿಂದ ಹಾಗೆಂದು ನಿಶ್ಚಯಿಸಬೇಕು.

**ಸಿದ್ಧಾಂತ :** ಆ ಶ್ರುತಿಯು ವ್ಯಾವಹಾರಿಕದೃಷ್ಟಿಯಿಂದ ಹೇಳಿದ್ದು. ಪ್ರಶ್ನೋಪನಿಷತ್ತಿನಲ್ಲಿ ಪುರುಷಶಬ್ದವಾಚ್ಯನಾದ ಪರಬ್ರಹ್ಮದಲ್ಲಿ ಕಲೆಗಳು ಲಯವಾಗುವವೆಂದು ಹೇಳಿದೆ. ಅದೇ ಜ್ಞಾನಿಯ ದೃಷ್ಟಿ. ಆದ್ದರಿಂದ ಬ್ರಹ್ಮದಲ್ಲಿ ಲಯವಾಗುವವೆಂದೇ ತಿಳಿಯಬೇಕು.

## ೮. ಅವಿಭಾಗಾಧಿಕರಣ

ಅವಿಭಾಗೋ ವಚನಾತ್ ||೧೬||

**ಸಂಶಯ :** ಜ್ಞಾನಿಗೆ ಆಗುವ ಕಲಾಪ್ರಲಯವು ಸಾವಶೇಷವೊ, ನಿರವಶೇಷವೊ ?

ಪೂರ್ವಪಕ್ಷ: ಮಿಕ್ಕ ಪ್ರಲಯದಂತೆ ಇದೂ ಪ್ರಲಯವಾದ್ದರಿಂದ ಸಾವಶೇಷವಾಗಿಯೇ ಆಗುತ್ತದೆ ಎನ್ನಬೇಕು.

ಸಿದ್ಧಾಂತ: ಕಲೆಗಳು ಅವಿದ್ಯೆಯಿಂದಾಗಿರುವದರಿಂದ ವಿದ್ಯೆಯಿಂದ ನಿರವಶೇಷವಾಗಿ ಪ್ರಲಯವಾಗುತ್ತವೆ- ಎಂಬುದೇ ಯುಕ್ತ. ಹಾಗೆಂದು (ಪ್ರ. ೬-೫) ಶ್ರುತಿಯಲ್ಲಿಯೂ ಹೇಳಿದೆ.

## ೯. ತದೋಕೋಽಧಿಕರಣ

ತದೋಕೋಽಗ್ರಜ್ವಲನಂ ತತ್ಪ್ರಕಾಶಿತದ್ವಾರೋ ವಿದ್ಯಾಸಾಮರ್ಥ್ಯಾತ್ ತಚ್ಛೇಷಗತ್ಯನುಸ್ಮೃತಿಯೋಗಾಚ್ಚ ಹಾರ್ದಾನುಗೃಹೀತಃ ಶತಾಧಿಕಯಾ || ೧೭ ||

ಸಂಶಯ: ಉತ್ಕ್ರಾಂತಿಯನ್ನು ಹೇಳುವಾಗ ಹೃದಯದ ಕೊನೆಯು ಹೊತ್ತಿಕೊಂಡು ಉರಿಯುತ್ತದೆಯೆಂದೂ ಚಕ್ಷುರಾದಿಸ್ಥಾನದಿಂದ ಉತ್ಕ್ರಾಂತಿಯಾಗುವದೆಂದೂ (ಬ. ೪-೪-೨) ಶ್ರುತಿಯಲ್ಲಿ ಹೇಳಿದೆ. ಇದು ಜ್ಞಾನಿ, ಅಜ್ಞಾನಿಗಳಿಗೆ ಸಮಾನವೊ, ವಿಶೇಷವೇನಾದರೂ ಇದೆಯೊ?

ಪೂರ್ವಪಕ್ಷ: ಶ್ರುತಿಯಲ್ಲಿ ಯಾವ ವಿಶೇಷವನ್ನೂ ಹೇಳಿಲ್ಲವಾಗಿ ವಿಶೇಷನಿಯಮವೇನೂ ಇಲ್ಲ.

ಸಿದ್ಧಾಂತ: ಹೃದಯದ ಅಗ್ರವು ಬೆಳಗುವದು ಎಲ್ಲರಿಗೂ ಸಮಾನವಾಗಿರುತ್ತದೆ; ಅದರಿಂದ ದ್ವಾರಗಳು ಪ್ರಕಾಶಿತವಾಗುತ್ತವೆ ಎಂಬುದೂ ಸಮಾನವಾಗಿರುತ್ತದೆ. ಆದರೆ ಉಪಾಸಕನು ಮಾತ್ರ ಮೂರ್ಧಸ್ಥಾನದ ನೂರೊಂದನೆಯ ನಾಡಿಯಿಂದಲೇ ಉತ್ಕ್ರಾಂತನಾಗುತ್ತಾನೆ; ಮಿಕ್ಕ ದ್ವಾರಗಳಿಂದ ಉಳಿದವರು ಹೊರಡುತ್ತಾರೆ. ಏಕೆಂದರೆ ವಿದ್ಯೆಯ ಸಾಮರ್ಥ್ಯದಿಂದ ಹೀಗೆಂದು ನಿಶ್ಚಯಿಸಬೇಕು; ಹಾಗಿಲ್ಲದಿದ್ದರೆ ವಿದ್ಯೆಯು ವ್ಯರ್ಥವಾಗುವದು.

## ೧೦. ರಶ್ಮ್ಯಧಿಕರಣ

ರಶ್ಮ್ಯನುಸಾರೀ || ೧೮ || ನಿಶಿ ನೇತಿ ಚೇನ್ನ ಸಂಬಂಧಸ್ಯ ಯಾವದ್ದೇಹಭಾವಿತ್ವಾದ್ದರ್ಶಯತಿ ಚ || ೧೯ ||

**ಸಂಶಯ :** ಹಾರ್ದವಿದ್ಯೆಯಲ್ಲಿ ನಾಡೀರಶ್ಮಿಗಳಿಗೆ ಸಂಬಂಧವನ್ನು ಹೇಳಿ ರಶ್ಮ್ಯನುಸಾರಿಯಾಗಿ ಉಪಾಸಕನು ಹೊರಡುತ್ತಾನೆಂದಿದೆ. ಅದೇನು ಹಗಲಿಗೆ ಮಾತ್ರ ಸೇರಿದ್ದೋ, ರಾತ್ರಿಗೂ ಅನ್ವಯಿಸುತ್ತದೆಯೋ ?

**ಪೂರ್ವಪಕ್ಷ :** ಹಗಲಿನಲ್ಲಿ ರಶ್ಮಿಸಂಬಂಧವಿದೆ ; ರಾತ್ರಿಯಲ್ಲಿರುವದಿಲ್ಲ. ಆದ್ದರಿಂದ ರಾತ್ರಿ ಸತ್ತ ಉಪಾಸಕನಿಗೆ ರಶ್ಮಿಗಳ ಅನುಕರಣೆಯಿಲ್ಲ.

**ಸಿದ್ಧಾಂತ :** ನಾಡಿಗಳಿಂದ ಆದಿತ್ಯನವರೆಗೂ ರಶ್ಮಿಗಳ ಸಂಬಂಧವು ದೇಹವಿರುವವರೆಗೂ ಇರುತ್ತದೆಯೆಂದು ಶ್ರುತಿಯು ಹೇಳುತ್ತಿದೆ. ರಾತ್ರಿಯಲ್ಲಿಯೂ ರಶ್ಮಿಗಳ ಅನುವೃತ್ತಿಯಿರುತ್ತದೆಯಾದರೂ ಸ್ವಲ್ಪವಾಗಿರುವ ಸಮಯಗಳಲ್ಲಿ ಕಾಣುವದಿಲ್ಲ. ರಾತ್ರಿ ಸತ್ತ ಉಪಾಸಕನು ರಶ್ಮಿಗಳ ಹಂಗಿಲ್ಲದೆ ಊರ್ಧ್ವಗತಿಯನ್ನು ಪಡೆಯುತ್ತಾನೆಂದರೆ ರಶ್ಮಿ ಅನುಸರಣೆಯು ವ್ಯರ್ಥವಾಗುವದು. ಹಾಗಿಲ್ಲದೆ ಹಗಲಾಗುವವರೆಗೂ ಕಾದಿರಬೇಕಾಗುವದೆಂದರೆ ದೇಹದಾಹವೇ ಮುಂತಾದ ನಿಮಿತ್ತದಿಂದ ಆ ಸಂಬಂಧವು ತಪ್ಪಿಹೋಗಬಹುದು. ರಾತ್ರಿ ಸತ್ತ ಉಪಾಸಕನಿಗೆ ಊರ್ಧ್ವಗತಿಯಿಲ್ಲವೇ ಇಲ್ಲ ಎನ್ನುವದಾದರೆ ವಿದ್ಯೆಗೆ ನಿಯಮದಿಂದ ಫಲಪ್ರಾಪ್ತಿಯಿಲ್ಲವೆಂದಾಗಿ ಯಾರೂ ಅದರಲ್ಲಿ ಪ್ರವರ್ತಿಸದೆ ಹೋಗಬಹುದು. ಆದ್ದರಿಂದ ಹಗಲಾಗಲಿ ರಾತ್ರಿಯಾಗಲಿ ಸತ್ತ ಉಪಾಸಕನಿಗೆ ರಶ್ಮ್ಯನುಸಾರಿತ್ವವಿದ್ದೇ ಇರುತ್ತದೆ.

## ೧೧. ದಕ್ಷಿಣಾಯನಾಧಿಕರಣ

ಅತಶ್ಚಾಯನೇಽಪಿ ಹಿ ದಕ್ಷಿಣೇ || ೨೦ || ಯೋಗಿನಃ ಪ್ರತಿ ಚ ಸ್ಮರ್ಯತೇ ಸ್ಮಾರ್ತೇ ಚೈತೇ || ೨೧ ||

**ಸಂಶಯ :** ದಕ್ಷಿಣಾಯನದಲ್ಲಿ ಸತ್ತ ಉಪಾಸಕನಿಗೆ ವಿದ್ಯಾಫಲವುಂಟೋ, ಇಲ್ಲವೋ ?

**ಪೂರ್ವಪಕ್ಷ :** ಉತ್ತರಾಯಣದ ಮರಣವು ಪ್ರಶಸ್ತವೆಂದು ಪ್ರಸಿದ್ಧಿಯಿದೆ. ಭೀಷ್ಮರು ಉತ್ತರಾಯಣವು ಬರುವವರೆಗೂ ಕಾದಿದ್ದರೆಂದು ಇತಿಹಾಸದಲ್ಲಿದೆ. ಶ್ರುತಿಯಲ್ಲಿ ಉತ್ತರಾಯಣವನ್ನು ಹೇಳಿದೆ. ಗೀತಾಸ್ಮೃತಿಯಲ್ಲಿಯೂ ಉತ್ತರಾಯಣವನ್ನು ಗೊತ್ತುಮಾಡಿ ಹೇಳಿದೆ. ಆದ್ದರಿಂದ ಉತ್ತರಾಯಣವೂ ವಿದ್ಯಾಫಲಕ್ಕೆ ಬೇಕು.

ಸಿದ್ಧಾಂತ : ಪ್ರಾಶಸ್ತ್ಯಪ್ರಸಿದ್ಧಿಯು ಅರ್ಜುನರ ವಿಷಯ. ಭೀಷ್ಮರ ನಿರೀಕ್ಷಣೆಯು ಆಚಾರರಕ್ಷಣೆಗೂ ಸ್ವೇಚ್ಛಾಮರಣವೆಂಬ ವರದ ಖ್ಯಾಪನೆಗೂ ಮಾಡಿದ್ದು. ಶ್ರುತಿಯು ಕಾಲಪರವಲ್ಲ. ಸ್ಮೃತಿಯಲ್ಲಿ ಕಾಲವನ್ನು ಹೇಳಿದ್ದರೂ ಅಲ್ಲಿ ಯೋಗಿಗಳ ವಿಷಯವನ್ನು ಹೇಳಿರುವದರಿಂದ ಶ್ರೌತಪಕ್ಷಕ್ಕೆ ಅದರ ವಿರೋಧವನ್ನೊಡ್ಡಬಾರದು. ಅಥವಾ ಅಲ್ಲಿಯೂ ಶ್ರುತ್ಯನುಸಾರವಾಗಿ ಅರ್ಥವನ್ನು ಮಾಡಬಹುದು. ಉತ್ತರಾಯಣದವರೆಗೂ ಉಪಾಸಕನು ಕಾದುಕೊಂಡಿರುವನೆಂಬುದು ಹೊಂದುವದಿಲ್ಲವಾದ್ದರಿಂದಲೂ ಹೀಗಲ್ಲದಿದ್ದರೆ ವಿದ್ಯೆಗೆ ಸಾಕ್ಷಿಕಫಲವೆಂದಾಗುವದರಿಂದಲೂ ಮರಣಕಾಲವು ಅನಿಯತವಾಗಿರುವದರಿಂದಲೂ ದಕ್ಷಿಣಾಯನದಲ್ಲಿ ಮೃತನಾದ ಉಪಾಸಕನಿಗೂ ವಿದ್ಯಾಫಲವುಂಟೆಂದೇ ನಿರ್ಣಯಿಸಬೇಕು.

---

## ಮೂರನೆಯ ಪಾದ

ಈ ಪಾದದಲ್ಲಿ ಸಗುಣೋಪಾಸಕರಿಗೆ ಆಗುವ ಉತ್ತರಮಾರ್ಗಗತಿಯ ವಿಚಾರವಿದೆ.

### ೧. ಅರ್ಚಿರಾದ್ಯಧಿಕರಣ

**ಅರ್ಚಿರಾದಿನಾ ತತ್ಪ್ರಥಿತೇಃ ‖ ೧ ‖**

ಸಂಶಯವೂ ಪೂರ್ವಪಕ್ಷವೂ : ನಾಡೀರಶ್ಮಿಸಂಬಂಧದ ಗತಿ, ಅರ್ಚಿರಾದಿಗತಿ, ಮುಂತಾದ ಅನೇಕ ಗತಿಗಳನ್ನು ಶ್ರುತಿಗಳಲ್ಲಿ ಹೇಳಿದೆಯಲ್ಲ, ಅವುಗಳು ಬೇರೆಬೇರೆಯ ಮಾರ್ಗಗಳೆ, ಅಥವಾ ಒಂದೇ ಮಾರ್ಗಕ್ಕೆ ಬೇರೆಬೇರೆಯ ಈ ವಿಶೇಷಣಗಳಿವೆಯೆ ?– ಎಂಬುದು ಸಂಶಯವು. ಬೇರೆಬೇರೆಯ ಪ್ರಕರಣಗಳಲ್ಲಿರುವದರಿಂದಲೂ ಬೇರೆಬೇರೆಯ ಉಪಾಸನೆಗಳಿಗೆ ಶೇಷವಾಗಿರುವದರಿಂದಲೂ ಇವು ಬೇರೆಬೇರೆಯೇ. 'ಈ ರಶ್ಮಿಗಳಿಂದಲೇ' (ಛಾಂ. ೮–೬–೫) ಎಂದು ಅವಧಾರಣೆಮಾಡಿದರೂ 'ಮನಸ್ಸುಹಾಕುವದರೊಳಗೆ ಆದಿತ್ಯಲೋಕಕ್ಕೆ ಹೋಗುತ್ತಾನೆ' (ಛಾಂ. ೮–೬–೫) ಎಂದು ತ್ವರೆಯನ್ನು ಹೇಳಿರುವದೂ ಮತ್ತೊಂದು ಮಾರ್ಗಕ್ಕೆ ಹೊಂದುವದಿಲ್ಲ. ಆದ್ದರಿಂದ ಬೇರೆಬೇರೆಯ ಮಾರ್ಗಗಳಿವು– ಎಂಬುದು ಪೂರ್ವಪಕ್ಷ.

ಸಿದ್ಧಾಂತ : ಬ್ರಹ್ಮಲೋಕಕ್ಕೆ ಹೋಗುವವರೆಗೂ ಅರ್ಚಿರಾದಿಮಾರ್ಗದಿಂದಲೇ ಹೋಗುತ್ತಾರೆ. ಏಕೆಂದರೆ ಅದೇ ಎಲ್ಲಾ ಉಪಾಸಕರ ವಿಷಯದಲ್ಲಿಯೂ ಶ್ರುತಿಪ್ರಸಿದ್ಧವಾಗಿದೆ. ಬೇರೆಬೇರೆಯ ಮಾರ್ಗಗಳೆಂದು ಪೂರ್ವಪಕ್ಷಿ ಹೇಳುವದೆಲ್ಲ ಒಂದೇ ಮಾರ್ಗವೇ; ಒಂದೊಂದು ಕಡೆಯಲ್ಲಿ ಒಂದೊಂದು ವಿಶೇಷಣವನ್ನು ಅದಕ್ಕೆ ಹೇಳಿರುತ್ತದೆ, ಅಷ್ಟೆ. ಪ್ರಕರಣವು ಬೇರೆಯಾದರೂ ಒಂದೇ ವಿದ್ಯೆಯಾದರೆ ಉಪಾಸನೆಗಳಲ್ಲಿ ಗುಣೋಪಸಂಹಾರವನ್ನು ಮಾಡಿಕೊಳ್ಳುವಂತೆ ಗತಿವಿಶೇಷಣಗಳ ಉಪಸಂಹಾರವನ್ನೂ ಮಾಡಿಕೊಳ್ಳಬಹುದು. ವಿದ್ಯೆಗಳು ಬೇರೆಯಾದರೂ ಮಾರ್ಗದ ಒಂದು ಭಾಗದ ಪ್ರತ್ಯಭಿಜ್ಞೆಯಿಂದಲೂ ಗಂತವ್ಯವು ಬೇರೆಯಲ್ಲವಾದ್ದರಿಂದಲೂ ಗತಿಯು ಒಂದೇ ಆಗಿರುತ್ತದೆ. 'ಈ ರಶ್ಮಿಗಳಿಂದಲೇ' ಎಂಬ ವಾಕ್ಯವು ರಶ್ಮಿಪರವಾಗಿರುವದರಿಂದ ಮಿಕ್ಕ ಗತಿಗಳನ್ನು ಅಲ್ಲಗಳೆಯಲಾರದು; ತ್ವರೆಯನ್ನು ಹೇಳಿರುವದೂ ಇತರ ಗಂತವ್ಯಾಪೇಕ್ಷೆಯಿಂದ ಬಹಳ ಬೇಗ ಹೋಗುತ್ತಾನೆ ಎಂಬರ್ಥವಲ್ಲಿ ಹೊಂದುತ್ತದೆ. ಅರ್ಚಿರಾದಿಮಾರ್ಗದಲ್ಲಿ ಬಹಳ ಪರ್ವಗಳಿರುವದರಿಂದ ಮಿಕ್ಕ ಗತಿಗಳನ್ನೆಲ್ಲ ಅದರಲ್ಲಿ ಅಡಕಮಾಡಬಹುದಾಗಿದೆ.

## ೨. ವಾಯ್ವಧಿಕರಣ

ವಾಯುಮಬ್ದಾದವಿಶೇಷವಿಶೇಷಾಭ್ಯಾಮ್ ॥ ೨ ॥

**ಸಂಶಯ :** ಕೌಷೀತಕಿಬ್ರಾಹ್ಮಣೋಪನಿಷತ್ತಿನಲ್ಲಿ 'ಅವನು ಈ ದೇವಯಾನಮಾರ್ಗವನ್ನು ಸೇರಿ ಅಗ್ನಿಲೋಕಕ್ಕೆ ಬರುತ್ತಾನೆ, ಅವನು ವರುಣಲೋಕಕ್ಕೆ (ಬರುತ್ತಾನೆ)' (ಕೌ. ೧-೩) ಎಂದಿದೆ. ಅರ್ಚಿರಾದಿಮಾರ್ಗದಲ್ಲಿ ಅಗ್ನಿಶಬ್ದದಿಂದ ಅರ್ಚಿಯನ್ನು ಹೇಳಿದೆಯೆನ್ನಬಹುದು. ವಾಯುವು ಮಾತ್ರ ಅಲ್ಲಿಲ್ಲವಲ್ಲ !

ಸಿದ್ಧಾಂತ : ಅವನು ವಾಯುಲೋಕಕ್ಕೆ ಬರುತ್ತಾನೆ- ಎಂದು ಅವಿಶೇಷವಾಗಿ ಕೌಷಿತಕಿಯಲ್ಲಿ ಹೇಳಿದ್ದನ್ನು 'ವಾಯುವಾದ ಬಳಿಕ ಆದಿತ್ಯಲೋಕಕ್ಕೆ, ಹೋಗುತ್ತಾನೆ' (ಬೃ. ೫-೧೦-೧) ಎಂದು ವಿಶೇಷವಾಗಿ ಬೃಹದಾರಣ್ಯಕದಲ್ಲಿ ಹೇಳಿರುತ್ತದೆ. ಅದ್ದರಿಂದ ಸಂವತ್ಸರ, ಆದಿತ್ಯ- ಇವರ ನಡುವೆ ವಾಯುವನ್ನು ಸೇರಿಸಿಕೊಳ್ಳಬೇಕು. ಕೌಷಿತಕಿಯಲ್ಲಿ ಅಗ್ನಿಯಾದ

ಬಳಿಕ ವಾಯುವನ್ನು ಹೇಳಿದೆಯಾದರೂ ಅಲ್ಲಿ ಕ್ರಮವಚನವಿಲ್ಲ; ಬೃಹದಾರಣ್ಯಕದಲ್ಲಿ ವಿಶೇಷವಚನವಿದೆ. ದೇವಲೋಕದಿಂದ ಆದಿತ್ಯಲೋಕಕ್ಕೆ ಹೋಗುತ್ತಾರೆಂದು (ಬೃ, ೬–೨–೧೫) ಅಲ್ಲಿರುವದರಿಂದ ದೇವಲೋಕವಾದ ಬಳಿಕ ವಾಯುವೆಂದು ತಿಳಿಯಬೇಕು. ಸಂವತ್ಸರವಾದ ಬಳಿಕ ಎಂಬುದು ಛಾಂದೋಗ್ಯಶ್ರುತಿಯನ್ನನುಸರಿಸಿ ಹೇಳಿದ್ದು; ಛಾಂದೋಗ್ಯಬೃಹದಾರಣ್ಯಕಗಳಿಗೆ ಏಕವಾಕ್ಯತೆಯನ್ನು ಮಾಡಿದರೆ ಮಾಸ, ದೇವಲೋಕ, ವಾಯು– ಎಂದು ಕ್ರಮವನ್ನು ಕಲ್ಪಿಸಬೇಕಾಗುವದು.

ತಡಿತೋಽಪಿ ವರುಣಃ ಸಂಬನ್ಧಾತ್ ॥ ೩ ॥

ಸಂಶಯ : 'ಅವನು ವರುಣಲೋಕಕ್ಕೆ ಬರುತ್ತಾನೆ' ಎಂಬ ಕೌಷೀತಕ್ಯುಪನಿಷತ್ತಿನ ವರುಣಲೋಕವನ್ನು ಎಲ್ಲಿ ಸೇರಿಸಿಕೊಳ್ಳಬೇಕು ?

ಸಿದ್ಧಾಂತ : 'ಆದಿತ್ಯನಿಂದ ಚಂದ್ರನನ್ನು, ಚಂದ್ರನಿಂದ ವಿದ್ಯುತ್ತನ್ನು (ಛಾಂ. ೪–೧೫–೫) ಎಂಬಲ್ಲಿರುವ ವಿದ್ಯುತ್ತಿನ ಬಳಿಕ ವರುಣಲೋಕವನ್ನು ಸೇರಿಸಿಕೊಳ್ಳಬೇಕು. ಏಕೆಂದರೆ ಮಿಂಚಿಗೂ ವರುಣನಿಗೂ ನೀರಿನ ದ್ವಾರದಿಂದ ಸಂಬಂಧವಿದೆ. ವರುಣನಾದ ಬಳಿಕ ಇಂದ್ರ ಪ್ರಜಾಪತಿಗಳನ್ನು ಸೇರಿಸಿಕೊಳ್ಳಬೇಕು; ಏಕೆಂದರೆ ಹಾಗೆ (ಕೌ.) ಪಾಠವಿದೆ. ಅವರಿಗೆ ಬೇರೆ ಸ್ಥಾನವೂ ಇಲ್ಲ. ವರುಣಾದಿಗಳು ಆಗಂತುಕರಾಗಿರುವದರಿಂದಲೂ ಅರ್ಚಿರಾದಿ ಮಾರ್ಗದ ಕೊನೆಯಲ್ಲಿ ಸೇರಿಸಿಕೊಳ್ಳಬೇಕು.

## ೪. ಆತಿವಾಹಿಕಾಧಿಕರಣ

**ಆತಿವಾಹಿಕಾಸ್ತಲ್ಲಿಂಗಾತ್ ॥೪॥ ಉಭಯವ್ಯಾಮೋಹಾತ್ ತತ್ಸಿದ್ಧೇಃ ॥೫॥ ವೈದ್ಯುತೇನೈವ ತತಸ್ತಚ್ಛ್ರುತೇಃ ॥೬॥**

**ಸಂಶಯ :** ಅರ್ಚಿರಾದಿಗಳು ಮಾರ್ಗಚಿಹ್ನೆಗಳೆ, ಭೋಗಭೂಮಿಗಳೆ, ಉಪಾಸಕರನ್ನು ಕರೆದುಕೊಂಡು ಹೋಗುವ ಆತಿವಾಹಿಕರೆ ?

**ಪೂರ್ವಪಕ್ಷ :** ಮಾರ್ಗಚಿಹ್ನೆಗಳನ್ನು ಉಪದೇಶಮಾಡುವಂತೆ ಇಲ್ಲಿ ಉಪದೇಶಮಾಡಿರುವದರಿಂದ ಇವೂ ಚಿಹ್ನೆಗಳೇ. ಅಥವಾ ಲೋಕಶಬ್ದವನ್ನು

ಉಪಯೋಗಿಸಿರುವದರಿಂದ ಇವು ಭೋಗಭೂಮಿಗಳು. ಇವು ಅಚೇತನವಾದ್ದರಿಂದ ಆತಿವಾಹಿಕರಲ್ಲ.

**ಸಿದ್ಧಾಂತ :** 'ತತ್ಪುರುಷೋ ಅಮಾನವಃ ಪುರುಷಃ' ಎಂದು ಬ್ರಹ್ಮಲೋಕಕ್ಕೆ ಕರೆದುಕೊಂಡು ಹೋಗುವ ಅಮಾನವಪುರುಷನನ್ನು ತಿಳಿಸಿರುವದರಿಂದ ಈ ಮಾರ್ಗದಲ್ಲಿ ಮಾನವಪುರುಷರು ಇರುತ್ತಾರೆಂದು ಗೊತ್ತಾಗುತ್ತದೆ. ಈ ಮಾರ್ಗದಲ್ಲಿ ಹೋಗುವವರಿಗೆ ದೇಹವಿಲ್ಲದ್ದರಿಂದಲೂ ಕರಣಗಳಿಲ್ಲದ್ದರಿಂದಲೂ ಅಚೇತನರಾಗಿರುತ್ತಾರೆ; ಅರ್ಚಿರಾದಿಗಳೂ ಅಚೇತನರಾದರೆ ಗತಿಯು ಸಿದ್ಧವಾಗುವದಿಲ್ಲ. ರಾತ್ರಿಯಲ್ಲಿ ಸತ್ತವರಿಗೆ ಅಹಸ್ಸು ಸಿಕ್ಕುವದು ಕಷ್ಟ. ಆದ್ದರಿಂದ ಅಹರಭಿಮಾನಿದೇವತೆಯೆಂದೇ ಅರ್ಥಮಾಡಬೇಕು. 'ಅರ್ಚಿಷಃ' (ಅರ್ಚಿಯಿಂದ) ಎಂಬ ಪಂಚಮಿಯನ್ನು ಹೇತ್ವರ್ಥದಲ್ಲಿಯೂ ತೆಗೆದುಕೊಳ್ಳಬಹುದು; ಅಗ್ನಿಲೋಕವೇ ಮುಂತಾದ ಲೋಕಶಬ್ದಗಳನ್ನು ಅಗ್ನಿಸ್ವಾಮಿಕವಾದ ಲೋಕ ಎಂದೂ ಅರ್ಥಮಾಡಿಕೊಳ್ಳಬಹುದು. ವರುಣಾದಿಲೋಕಗಳಲ್ಲಿ ಅಮಾನವಪುರುಷನೇ ಪ್ರಧಾನನಾಗಿರುತ್ತಾನೆಂದು ಅರ್ಥಮಾಡಿಕೊಂಡರೆ ಯಾವ ದೋಷವೂ ಇರುವದಿಲ್ಲ. ಈ ಎಲ್ಲಾ ಕಾರಣಗಳಿಂದ ಅರ್ಚಿರಾದಿಗಳು ಆತಿವಾಹಿಕರೇ.

## ೫. ಕಾರ್ಯಾಧಿಕರಣ

**ಕಾರ್ಯಂ ಬಾದರಿರಸ್ಯ ಗತ್ಯುಪಪತ್ತೇಃ ||೭|| ವಿಶೇಷಿತತ್ವಾಚ್ಚ ||೮|| ಸಾಮೀಪ್ಯಾತ್ತು ತದ್ವ್ಯಪದೇಶಃ ||೯|| ಕಾರ್ಯಾತ್ಯಯೇ ತದಧ್ಯಕ್ಷೇಣ ಸಹಾತಃ ಪರಮಭಿಧಾನಾತ್ ||೧೦|| ಸ್ಮೃತೇಶ್ಚ ||೧೧|| ಪರಂ ಜೈಮಿನಿರ್ಮುಖ್ಯತ್ವಾತ್ ||೧೨|| ದರ್ಶನಾಚ್ಚ ||೧೩|| ನ ಚ ಕಾರ್ಯೇ ಪ್ರತಿಪತ್ತ್ಯಭಿಸನ್ಧಿಃ ||೧೪||**

**ಸಂಶಯ :** ಅಮಾನವಪುರುಷನು ಬ್ರಹ್ಮದ ಬಳಿಗೆ ಕರೆದೊಯ್ಯುತ್ತಾನೆ ಎಂಬಲ್ಲಿ ಕಾರ್ಯಬ್ರಹ್ಮವನ್ನು ಹೇಳಿದೆಯೆ, ಕಾರಣವಾದ ಪರಬ್ರಹ್ಮವನ್ನು ಹೇಳಿದೆಯೆ?

**ಪೂರ್ವಪಕ್ಷ :** ಪರಬ್ರಹ್ಮವನ್ನೇ ಇಲ್ಲಿ ಹೇಳಿದೆ. ಏಕೆಂದರೆ ಬ್ರಹ್ಮಶಬ್ದವು ಮುಖ್ಯಾರ್ಥದಲ್ಲಿ ಪರಬ್ರಹ್ಮವನ್ನೇ ಹೇಳಿದೆ. ಶ್ರುತಿಯಲ್ಲಿ ಸುಷುಮ್ನಾ

ನಾಡಿಯ ಮೂಲಕ ಉತ್ಕ್ರಾಂತರಾದವರಿಗೆ ಅಮೃತತ್ವವು 'ದೊರೆಯುವ ದೆಂದು ಹೇಳಿದೆ. 'ಪ್ರಜಾಪತಿಯ ಸಭೆಯನ್ನು ಪಡೆಯುತ್ತೇನೆ' (ಛಾಂ. ೮-೧೪-೧) ಎಂಬ ಸಂಕಲ್ಪವಾಕ್ಯವು ಪರಬ್ರಹ್ಮಪ್ರಕರಣದಲ್ಲಿ ಬಂದಿದೆ. ಯಶಸ್ಸೆಂಬ ಪರಬ್ರಹ್ಮನಾಮವೂ ಬಂದಿದೆ. ಈ ವೇಶ್ಮಪ್ರಪತ್ತಿಯು ಗತಿ ಪೂರ್ವಕವೆಂದು ಹಾರ್ದವಿದ್ಯೆಯಲ್ಲಿ ಹೇಳಿದೆ. ಪ್ರಪದ್ಯೇ ಎಂಬಲ್ಲಿರುವ ಧಾತು ವಿಗೂ ಗತಿಯೆಂದೇ ಅರ್ಥ. ಆದ್ದರಿಂದಲೂ ಇದು ಪರಬ್ರಹ್ಮವೇ.

ಸಿದ್ಧಾಂತ: ಕಾರ್ಯಬ್ರಹ್ಮವೇ ಇದು. ಏಕೆಂದರೆ ಅದರ ವಿಷಯಕ್ಕೆ ಗತಿಯು ಹೊಂದುತ್ತದೆ. 'ಬ್ರಹ್ಮಲೋಕೇಷು' (ಬೃ. ೧-೬-೨೫) ಎಂಬ ಬಹುವಚನವೂ ಲೋಕಶ್ರುತಿಯೂ ಅಧಿಕರಣಶ್ರುತಿಯೂ ಕಾರ್ಯಬ್ರಹ್ಮಕ್ಕೇ ಹೊಂದುತ್ತವೆ. ಕಾರ್ಯಬ್ರಹ್ಮವು ಪರಬ್ರಹ್ಮಕ್ಕೆ ಹತ್ತಿರವಿರುವದರಿಂದ ಅದನ್ನೂ ಬ್ರಹ್ಮವೆಂದು ಕರೆಯಬಹುದು. ಅಮೃತತ್ವಶ್ರುತಿಯು ಜ್ಞಾನದ ದ್ವಾರದಿಂದ ಕ್ರಮಮುಕ್ತಿಯಾಗುವದೆಂಬುದನ್ನು ಸೂಚಿಸುತ್ತದೆ. ನಾಡಿಯ ಮೂಲಕವಾದ ಗತಿಯನ್ನು ಹೇಳಿರುವದು ಬ್ರಹ್ಮವಿದ್ಯೆಯ ಸ್ತುತಿಗಾಗಿ; 'ಪ್ರಜಾಪತಿಯ ಸಭೆಯನ್ನು' ಎಂಬ ವಾಕ್ಯವು ಪ್ರಕರಣವನ್ನು ಬಿಡಿಸಿ ಕಾರ್ಯಬ್ರಹ್ಮವನ್ನೇ ಹೇಳುತ್ತದೆಯೆಂದು ಅರ್ಥಮಾಡಬೇಕು.

## ೬. ಅಪ್ರತೀಕಾಲಂಬನಾಧಿಕರಣ

**ಅಪ್ರತೀಕಾಲಂಬನಾನ್ನಯತೀತಿ ಬಾದರಾಯಣಃ ಉಭಯಥಾ ದೋಷಾತ್ ತತ್ಕ್ರತುಶ್ಚ ||೧೫|| ವಿಶೇಷಂ ಚ ದರ್ಶಯತಿ ||೧೬||**

**ಸಂಶಯ:** ಬ್ರಹ್ಮಲೋಕಕ್ಕೆ ಎಲ್ಲಾ ಉಪಾಸಕರನ್ನೂ ಅಮಾನವ ಪುರುಷನು ಒಯ್ಯುತ್ತಾನೊ, ಕೆಲವರನ್ನು ಮಾತ್ರ ಒಯ್ಯುತ್ತಾನೊ ?

**ಪೂರ್ವಪಕ್ಷ:** 'ಅನಿಯಮಃ ಸರ್ವಾಸಾಮ್' ಎಂಬಲ್ಲಿ ಉಪಾಸಕರ ನಿಯಮವಿಲ್ಲದ ಗತಿಯನ್ನು ಹೊಂದಿಸಿದ್ದಾಗಿದೆಯಾದ್ದರಿಂದ ಎಲ್ಲರನ್ನೂ ಒಯ್ಯುತ್ತಾನೆ.

**ಸಿದ್ಧಾಂತ:** ಪ್ರತೀಕಾಲಂಬನರಲ್ಲದ ಉಪಾಸಕರನ್ನು ಮಾತ್ರ ಒಯ್ಯುತ್ತಾನೆ. ಹಿಂದೆ ಹೇಳಿದ ನ್ಯಾಯವೂ ಅವರನ್ನು ಬಿಟ್ಟೇ ನಿರ್ಣಯಿ ಸಿದ್ದು. ಪ್ರತೀಕಾಲಂಬನರು ಬ್ರಹ್ಮವನ್ನು ಪ್ರಧಾನವಾಗಿ ಉಪಾಸನೆಮಾಡಿರು

ವವಿಲ್ಲ : ಪ್ರತೀಕೋಪಾಸನೆಗೆ ಬೇರೆಬೇರೆಯ ಫಲವನ್ನೂ ಶ್ರುತಿಯಲ್ಲಿ ಹೇಳಿದೆ. ಆದ್ದರಿಂದ ಎಲ್ಲಿ ಬಾಯಿಬಿಟ್ಟು ಶ್ರುತಿಯಲ್ಲಿ ಬ್ರಹ್ಮಲೋಕವನ್ನು ಮಿಕ್ಕ ಉಪಾಸಕರಿಗೂ ಹೇಳಿದೆಯೋ ಅಲ್ಲಿ ಆಗಬಹುದು. ಮಿಕ್ಕ ಕಡೆಗಳಲ್ಲಿ ಪ್ರತೀಕೋಪಾಸಕರಲ್ಲದ ಬ್ರಹ್ಮೋಪಾಸಕರನ್ನೇ ಒಯ್ಯುತ್ತಾನೆ ಎಂದು ತಿಳಿಯಬೇಕು.

## ನಾಲ್ಕನೆಯ ಪಾದ

ಈ ಪಾದದಲ್ಲಿ ಮುಕ್ತರ ಸ್ವರೂಪವ್ಯವಹಾರಗಳನ್ನು ಕುರಿತು ವಿಚಾರ ಮಾಡಲಾಗಿದೆ.

### ೧. ಸಂಪದ್ಯಾವಿರ್ಭಾವಾಧಿಕರಣ

ಸಂಪದ್ಯಾವಿರ್ಭಾವಃ ಸ್ವೇನ ಶಬ್ದಾತ್ ||೧|| ಮುಕ್ತಃ ಪ್ರತಿಜ್ಞಾನಾತ್ ||೨|| ಆತ್ಮಾ ಪ್ರಕರಣಾತ್ ||೩||

ಸಂಶಯ : 'ಜೀವನು ಶರೀರಾಭಿಮಾನವನ್ನು ಬಿಟ್ಟು ಪರಮಾತ್ಮನಲ್ಲಿ ನಿಲ್ಲುವಾಗ ತನ್ನ ರೂಪವನ್ನು ಪಡೆದುಕೊಳ್ಳುತ್ತಾನೆ' (ಛಾಂ. ೫-೧೨-೩) ಎಂದು ಶ್ರುತಿಯಲ್ಲಿದೆ. ಅಲ್ಲಿ ಆತ್ಮಸ್ವರೂಪದಲ್ಲಿ ಮಾತ್ರವೇ ಇರುತ್ತಾನೊ, ದೇವಾದಿಲೋಕಗಳನ್ನು ಪಡೆದವರಂತೆ ಯಾವದಾದರೂ ವಿಶೇಷರೂಪವನ್ನು ಪಡೆದುಕೊಳ್ಳುತ್ತಾನೊ ?

ಪೂರ್ವಪಕ್ಷ : 'ಅಭಿನಿಷ್ಪದ್ಯತೇ' ಎಂಬ ಉತ್ಪತ್ತಿಪರ್ಯಾಯ ಶಬ್ದವನ್ನು ಪ್ರಯೋಗಿಸಿರುವದರಿಂದಲೂ ಮುಕ್ತಿಯೂ ಫಲವಾದ್ದರಿಂದಲೂ ಇದೊಂದು ವಿಶೇಷರೂಪವಾದ ಪ್ರಾಪ್ತಿಯೇ. ಬರಿಯ ಸ್ವರೂಪವೇ ಆಗಿದ್ದರೆ ಅದು ಮೊದಲೇ ಇರುತ್ತದೆಯಾದ್ದರಿಂದ ಫಲವೇ ಆಗಲಾರದು.

ಸಿದ್ಧಾಂತ : 'ತನ್ನ ರೂಪದಿಂದ ನಿಲ್ಲುತ್ತಾನೆ' ಎಂದಿರುವದರಿಂದ ಇದು ಸ್ವರೂಪವೇ. ಈಗ ಮುಕ್ತನಾಗಿರುತ್ತಾನೆಂಬುದೇ ವಿಶೇಷ. ಹಿಂದೆ ಆಯಾ ಅವಸ್ಥೆಗಳ ಕಲುಷಸಂಬಂಧವೂ ಇದ್ದಂತೆ ಇರುತ್ತದೆಯಾದ್ದರಿಂದ ಮುಕ್ತಿಯನ್ನು ಪಡೆದುಕೊಳ್ಳುತ್ತಾನೆ- ಎಂದು ಹೇಳಬಹುದು. ಬಂಧನಿವೃತ್ತಿ ಎಂಬ

ಕಾರಣದಿಂದ ಮುಕ್ತಿಯನ್ನು ಫಲವೆನ್ನುವರು. ಹೊಸದಾಗಿ ಉಂಟಾಗುವ ದೆಂಬ ಕಾರಣದಿಂದಲ್ಲ. 'ಪರಂಜ್ಯೋತಿಯನ್ನು ಸೇರಿ' ಎಂದು ಶ್ರುತಿಯಲ್ಲಿ ರುವದು ಆತ್ಮನೇ. ಏಕೆಂದರೆ ಇದು ಆತ್ಮನ ಪ್ರಕರಣವಾಗಿರುತ್ತದೆ.

## ೬. ಅವಿಭಾಗೇನದೃಷ್ಟತ್ವಾಧಿಕರಣ

ಅವಿಭಾಗೇನ ದೃಷ್ಟತ್ವಾತ್ ॥ ೪ ॥

ಸಂಶಯ ಪೂರ್ವಪಕ್ಷಗಳು : ಮುಕ್ತನು ತನ್ನ ರೂಪದಲ್ಲಿರುವನೆಂದರೆ ಪರಮಾತ್ಮನಿಗಿಂತ ಬೇರೆಯಾಗಿರುತ್ತಾನೊ, ಅವನಲ್ಲಿ ಒಂದಾಗಿರುತ್ತಾನೊ ? ಎಂಬ ಸಂಶಯಕ್ಕೆ ಬೇರೆಯಾಗಿರುತ್ತಾನೆಂದೇ ಮೊದಲು ತೋರುತ್ತದೆ. ಏಕೆಂದರೆ 'ಪರಂಜ್ಯೋತಿಯನ್ನು ಸೇರಿ' ಎಂಬ ಕರ್ಮಕರ್ತೃಪ್ರಯೋಗವು ಇದಕ್ಕೆ ಹೊಂದುತ್ತದೆ. ಅಲ್ಲಿ ಸಂಚರಿಸುತ್ತಾನೆ– ಎಂದು ಆಧಾರಾಧೇಯ ಭಾವವನ್ನು ಹೇಳಿರುವದೂ ಇದಕ್ಕೆ ಹೊಂದುಗೆಯಾಗಿದೆ

ಸಿದ್ಧಾಂತ : ತತ್ತ್ವಮಸಿ–ಮುಂತಾದ ಐಕ್ಯವನ್ನು ಹೇಳುವ ಶ್ರುತಿ ಗಳಿಂದಲೂ ಜ್ಞಾನಕ್ಕನುಗುಣವಾಗಿ ಫಲವಾಗುವದು ನ್ಯಾಯವಾದ್ದರಿಂದಲೂ ಮುಕ್ತನು ನೀರಿನಲ್ಲಿ ಬೆರೆತ ನೀರಿನಂತೆ ಒಂದಾಗಿರುತ್ತಾನೆಂದು ಶ್ರುತಿಯು ಹೇಳುವದರಿಂದಲೂ ಪರಮಾತ್ಮನಲ್ಲಿ ಒಂದೇ ಆಗಿರುತ್ತಾನೆನ್ನುವದು ಯುಕ್ತ. ಭೇದವನ್ನು ಹೇಳಿರುವದು ಅಭೇದದಲ್ಲಿಯೇ ಉಪಚಾರಕ್ಕಾಗಿ ಹೇಳಿದ್ದು ಎಂದು ಅವಿರೋಧವನ್ನು ಕಲ್ಪಿಸಿಕೊಳ್ಳಬೇಕು.

## ೭. ಬ್ರಾಹ್ಮಾಧಿಕರಣ

ಬ್ರಾಹ್ಮೇಣ ಜೈಮಿನಿರುಪನ್ಯಾಸಾದಿಭ್ಯಃ ॥ ೫ ॥ ಚಿತಿತನ್ಮಾತ್ರೇಣ ತದಾತ್ಮಕತ್ವಾದಿತ್ಯೌಡುಲೋಮಿಃ ॥ ೬ ॥ ಏವಮಪ್ಯುಪನ್ಯಾಸಾತ್ ಪೂರ್ವಭಾವಾದವಿರೋಧಂ ಬಾದರಾಯಣಃ ॥ ೭ ॥

ಸಂಶಯ : ಮುಕ್ತನು ಪಡೆದುಕೊಳ್ಳುವ ರೂಪವು ಯಾವದು ? ಅಪಹತಪಾಪ್ಮತ್ವಾದಿಗುಣಗಳಿಂದ ಕೂಡಿದ್ದೊ, ನಿರ್ವಿಶೇಷವಾದದ್ದೊ ?

ಪೂರ್ವಪಕ್ಷಗಳು : 'ಯ ಆತ್ಮಾಽಪಹತಪಾಪ್ಮಾ' ಎಂದು ಪ್ರಾರಂಭಿಸಿ 'ಸತ್ಯಕಾಮಃ ಸತ್ಯಸಂಕಲ್ಪಃ' ಎಂದು (ಛಾಂ. ೮–೭–೧) ವರ್ಣಿಸಿರುವದ

ರಿಂದಲೂ ಮುಕ್ತನು ತಿನ್ನುತ್ತಾ ಕುಡಿಯುತ್ತಾ ಕ್ರೀಡಿಸುತ್ತಾ ರಮಿಸುತ್ತಾ ಇರುವನೆಂಬ ಶ್ರುತಿಯಲ್ಲಿ ಹೇಳಿರುವದರಿಂದಲೂ ಸರ್ವಜ್ಞಸರ್ವೇಶ್ವರರೂಪ ದಿಂದಲೇ ಕೂಡಿರುತ್ತಾನೆಂದು ಜೈಮಿನ್ಯಾಚಾರ್ಯರ ಮತವು. ಅಪಹತ ಪಾಪ್ಮತ್ವಾದಿಗಳು ಕೇವಲಶಬ್ದವಿಕಲ್ಪದಿಂದಾಗಿರುವ ಗುಣಗಳಾದ್ದರಿಂದಲೂ ಸತ್ಯಕಾಮತ್ವಾದಿಗಳು ಔಪಾಧಿಕವಾಗಿರುವದರಿಂದಲೂ ತಿನ್ನುವದು ಮುಂತಾ ದವು ಮುಕ್ತನಿಗೆ ಯಾವ ದುಃಖವೂ ಇಲ್ಲವೆಂದು ಸ್ತುತಿಗಾಗಿ ಹೇಳಿದವು ಗಳಾದ್ದರಿಂದಲೂ ನಿಷ್ಪ್ರಪಂಚರೂಪದಿಂದಲೇ ಮುಕ್ತನಿರುತ್ತಾನೆ- ಎಂದು ಔಡುಲೋಮ್ಯಾಚಾರ್ಯರ ಮತವು.

ಸಿದ್ಧಾಂತ : ಪಾರಮಾರ್ಥಿಕಚೈತನ್ಯವೇ ಆತ್ಮನ ಸ್ವರೂಪವಾದರೂ ವ್ಯವಹಾರದೃಷ್ಟಿಯಿಂದ ಐಶ್ವರರೂಪವೂ ಮುಕ್ತನಿಗೆ ಇರಬಹುದೆಂಬುದು ಬಾದರಾಯಣಾಚಾರ್ಯರ ಮತವು.

## ೪. ಸಂಕಲ್ಪಾಧಿಕರಣ

**ಸಂಕಲ್ಪಾದೇವ ತು ತಚ್ಛ್ರುತೇಃ । ೮**

**ಅತ ಏವ ಚಾನನ್ಯಾಧಿಪತಿಃ ॥ ೯ ॥**

**ವಿಷಯವೂ ಸಂಶಯವೂ :** ಹಾರ್ದವಿದ್ಯೆಯಲ್ಲಿ ಮುಕ್ತನಿಗೆ ಸಂಕಲ್ಪ ಮಾತ್ರದಿಂದ ಪಿತ್ರಾದಿಕಾಮಗಳು ಸಿಕ್ಕುವವು ಎಂದಿದೆಯಷ್ಟೆ. ಅಲ್ಲಿ ಬರಿಯ ಸಂಕಲ್ಪ ಒಂದೇ ನಿಮಿತ್ತವೋ, ಇನ್ನುಳಿದ ನಿಮಿತ್ತಗಳೂ ಉಂಟೋ ?

ಪೂರ್ವಪಕ್ಷ : ಸಂಕಲ್ಪದ ಜೊತೆಗೆ ಮಿಕ್ಕ ಗಮನಾದಿಗಳೂ ಬೇಕು. ಹೀಗೆಂದು ಕಲ್ಪಿಸಿದರೆ ಲೋಕಾನುಭವಕ್ಕೆ ಅನುಸಾರವಾಗಿ ಕಲ್ಪಿಸಿದಂತೆ ಆಗುತ್ತದೆ. ಹಾಗಿಲ್ಲದಿದ್ದರೆ ಸಂಕಲ್ಪದಿಂದ ಮಾತ್ರವೇ ಲಭಿಸಿದ್ದು ಚಂಚಲ ವಾಗಿರುವದರಿಂದ ಸರಿಯಾದ ಭೋಗವನ್ನುಂಟುಮಾಡಲಾರದು.

ಸಿದ್ಧಾಂತ . ಸಂಕಲ್ಪವೊಂದೇ ಹೇತು. ಏಕೆಂದರೆ ಹಾಗೆಂದು ಶ್ರುತಿಯಿದೆ. ಮತ್ತೊಂದು ಕಾರಣವೂ ಇದೆ ಎಂದರೆ ಅದು ಸಿದ್ಧಿಸುವ ಮುಂಚೆ ಸತ್ಯಸಂಕಲ್ಪತ್ವವಿಲ್ಲವೆಂದಾಗುತ್ತದೆ ಸಂಕಲ್ಪಬಲದಿಂದಲೇ ಉಪ

ಭೋಗವು ಪೂರ್ತಿಯಾಗುವವರೆಗೆ ಸ್ಥಿರವಾಗಿರಬಹುದಾಗಿದೆ. ಆದ್ದರಿಂದಲೇ ಮುಕ್ತರು ಅನನ್ಯಾಧಿಪತಿಗಳಾಗಿರುವರೆಂದು ಶ್ರುತಿಯಲ್ಲಿದೆ.

## ೫. ಅಭಾವಾಧಿಕರಣ

**ಅಭಾವಂ ಬಾದರಿರಾಹ ಹ್ಯೇವಮ್ ॥ ೧೦ ॥ ಭಾವಂ ಜೈಮಿನಿ ರ್ವಿಕಲ್ಪಾಮನನಾತ್ ॥೧೧ ॥ ದ್ವಾದಶಾಹವದುಭಯವಿಧಂ ಬಾದರಾಯಣೋಽತಃ ॥ ೧೨ ॥ ತನ್ವಭಾವೇ ಸಂಧ್ಯವದುಪಪತ್ತೇಃ ॥ ೧೩ ॥ ಭಾವೇ ಜಾಗ್ರದ್ವತ್ ॥ ೧೪ ॥**

ಸಂಶಯ : ಸಂಕಲ್ಪದಿಂದಲೇ ಸಿದ್ಧಿಯನ್ನು ಪಡೆಯುವ ಮುಕ್ತರಿಗೆ ಶರೀರೇಂದ್ರಿಯಗಳೂ ಉಂಟೊ, ಇಲ್ಲವೊ ?

ಪೂರ್ವಪಕ್ಷ : ಶರೀರೇಂದ್ರಿಯಗಳಿರುವದಿಲ್ಲ. ಏಕೆಂದರೆ ಮನಸ್ಸಿನಿಂದಲೇ ಕಾಮಗಳನ್ನು ಮುಕ್ತರು ಅನುಭವಿಸುತ್ತಾರೆಂದು ಶ್ರುತಿಯಲ್ಲಿದೆ. ಅಥವಾ ಮುಕ್ತರು ಅನೇಕವಿಧವಾಗಿ ಆಗಿರುತ್ತಾರೆಂದೂ ಶ್ರುತಿಯಲ್ಲಿ ಹೇಳಿದೆಯಾದ್ದರಿಂದ ಮನಸ್ಸಿನಂತೆ ಶರೀರೇಂದ್ರಿಯಗಳೂ ಇರುತ್ತವೆ- ಎನ್ನಬಹುದು.

ಸಿದ್ಧಾಂತ : ಹೀಗೆ ಉಭಯಲಿಂಗಶ್ರುತಿಗಳಿರುವದರಿಂದ ಎರಡು ಪಕ್ಷವೂ ಸರಿ. ಮುಕ್ತರು ಸತ್ಯಸಂಕಲ್ಪರಾದ್ದರಿಂದ ಸ್ವಪ್ನದಂತೆ ಶರೀರವಿಲ್ಲದೆಯೂ ಎಚ್ಚರದಂತೆ ಸಶರೀರರಾಗಿಯೂ ಇರಬಹುದು.

## ೬. ಪ್ರದೀಪಾಧಿಕರಣ

**ಪ್ರದೀಪವದಾವೇಶಸ್ತಥಾ ಹಿ ದರ್ಶಯತಿ ॥ ೧೫ ॥ ಸ್ವಾಪ್ಯಯಸಂಪತ್ತ್ಯೋರನ್ಯತರಾಪೇಕ್ಷಮಾವಿಷ್ಕೃತಂ ಹಿ ॥ ೧೬ ॥**

ಸಂಶಯ : ಮುಕ್ತರು ಅನೇಕರೂಪರಾಗುವರೆಂದು ಶ್ರುತಿಯಲ್ಲಿದೆಯಷ್ಟೆ. ಆಗ ಎಲ್ಲಾ ಶರೀರಗಳಲ್ಲಿಯೂ ಆತ್ಮರು ಇರುವರೊ, ಇಲ್ಲವೊ ?

ಪೂರ್ವಪಕ್ಷ : ಆತ್ಮ, ಮನಸ್ಸು- ಇವುಗಳು ಬೇರೆಬೇರೆಯಿರಲಾರವಾದ್ದರಿಂದ ಒಂದು ಶರೀರಕ್ಕೆ ಆತ್ಮಮನಸ್ಸುಗಳಿರುವವು ; ಮಿಕ್ಕ ಶರೀರಗಳಿಗೆ ಆತ್ಮವಿರುವದಿಲ್ಲ.

ಸಿದ್ಧಾಂತ : ಪ್ರದೀಪವು ಅನೇಕದೀಪಗಳಾಗುವಂತೆ ಮುಕ್ತನು ಜ್ಞಾನೈಶ್ವರ್ಯಸಂಬಂಧದಿಂದ ಎಲ್ಲಾ ಶರೀರಗಳಲ್ಲಿಯೂ ಅನೇಕ ಭಾವವನ್ನು ಹೊಂದಿ ಸೇರಿಕೊಂಡಿರುತ್ತಾನೆ. ಒಂದು ಮನಸ್ಸಿಗೆ ಅನುಗುಣವಾಗಿ ಮಿಕ್ಕ ಮನಸ್ಸುಗಳೂ ಇರುವಂತೆ ಸೃಜಿಸಿಕೊಳ್ಳುತ್ತಾನಾದ್ದರಿಂದ ಮನಸ್ಸು ಬೇರೆ ಬೇರೆಯಾಗುವದೆಂಬ ದೋಷವಿಲ್ಲ. ಹೀಗೆ ಮನಸ್ಸು ಬೇರೆಯಾಗಿರುವದರಿಂದ ಉಪಹಿತರಾದ ಆತ್ಮರೂ ಬೇರೆಯಾಗಿರಬಹುದು. ಮುಕ್ತಿಯಲ್ಲಿ ವಿಶೇಷ ವಿಜ್ಞಾನವಿರುವದಿಲ್ಲವೆಂಬ ಶ್ರುತಿಯು ಸುಷುಪ್ತಿ ಅಥವಾ ಕೈವಲ್ಯದ ವಿಷಯ ವಾಗಿರುವದರಿಂದ ಅದಕ್ಕೆ ಈ ಐಶ್ವರ್ಯವರ್ಣನೆಯು ವಿರುದ್ಧವಲ್ಲ. ಸಗುಣ ವಿದ್ಯೆಯ ವಿಪಾಕದಿಂದ ಈ ಸಗುಣಮುಕ್ತಿಯು ಆಗಿರುವದರಿಂದ ಇದೂ ಸ್ವರ್ಗಾದಿಗಳಂತೆ ಒಂದಾನೊಂದು ಅವಸ್ಥೆಯಾಗಿರುತ್ತದೆಯಾದ್ದರಿಂದ ಇಲ್ಲಿ ಐಶ್ವರ್ಯವಿಶೇಷವಿರುವದರಲ್ಲಿ ಯಾವ ದೋಷವೂ ಇಲ್ಲ.

## ೭. ಜಗದ್ವ್ಯಾಪಾರಾಧಿಕರಣ

ಜಗದ್ವ್ಯಾಪಾರವರ್ಜಂ ಪ್ರಕರಣಾದಸಂನಿಹಿತತ್ವಾಚ್ಚ ॥ ೧೭ ॥ ಪ್ರತ್ಯಕ್ಷೋಪದೇಶಾದಿತಿ ಚೇನ್ನಾಧಿಕಾರಿಕಮಂಡಲಸ್ಥೋಕ್ತೇಃ ೧೮ ॥ ವಿಕಾರಾವರ್ತಿ ಚ ತಥಾ ಹಿ ಸ್ಥಿತಿಮಾಹ ॥ ೧೯ ॥ ದರ್ಶ ಯತಶ್ಚೈವಂ ಪ್ರತ್ಯಕ್ಷಾನುಮಾನೇ ॥ ೨೦ ॥ ಭೋಗಮಾತ್ರ ಸಾಮ್ಯಲಿಂಗಾಚ್ಚ ೨೧ ಅನಾವೃತ್ತಿಃ ಶಬ್ದಾದನಾವೃತ್ತಿಃ ಶಬ್ದಾತ್ ೨೨

ಸಂಶಯ : ಸಗುಣವಿದ್ಯೆಯಿಂದ ಈಶ್ವರಸಾಯುಜ್ಯವನ್ನು ಹೊಂದಿದವರ ಐಶ್ವರ್ಯವು ನಿರಂಕುಶವಾಗಿರುವದೊ, ಸಾಂಕುಶವಾಗಿರುವದೊ ?

ಪೂರ್ವಪಕ್ಷ : "ಸ್ವಾರಾಜ್ಯವನ್ನು ಪಡೆದುಕೊಳ್ಳುತ್ತಾನೆ" (ತೈ ೧-೬) ಎಂದು ಮುಂತಾಗಿ ಶ್ರುತಿಯು ಹೇಳುವದರಿಂದ ಇದು ನಿರಂಕುಶವೇ.

ಸಿದ್ಧಾಂತ : ಈಶ್ವರನ ಅಸಾಧಾರಣೈಶ್ವರ್ಯವಾದ ಜಗತ್ಸೃಷ್ಟ್ಯಾದಿ ವ್ಯಾಪಾರವನ್ನುಳಿದು ಮಿಕ್ಕ ಐಶ್ವರ್ಯವು ಮುಕ್ತರಿಗೆ ಆಗುತ್ತದೆ. ಏಕೆಂದರೆ ಶ್ರುತಿಯು ಪರಮೇಶ್ವರನ ಪ್ರಕರಣದಲ್ಲಿಯೇ ಈ ಸೃಷ್ಟ್ಯಾದಿಗಳನ್ನು ಹೇಳು

ತ್ತದೆ. ಶ್ರುತಿಯಲ್ಲಿ ಸ್ವಾರಾಜ್ಯಪ್ರಾಪ್ತಿಯೇ ಮುಂತಾದದ್ದನ್ನು ಹೇಳಿರುವದು ನಿಜವಾದರೂ ಆದಿತ್ಯಾದಿಸ್ಥಾನದಲ್ಲಿರುವ ಪರಮೇಶ್ವರನ ಅಧೀನವಾದ ಸ್ವಾರಾಜ್ಯವನ್ನೇ ಅಲ್ಲಿ ಹೇಳಿದೆ. ನಿತ್ಯಮುಕ್ತನಾದ ಪರಮೇಶ್ವರರೂಪವೂ ಬೇರೆ ಇದೆ-ಎಂದು ಶ್ರುತಿಸ್ಮೃತಿಗಳಿಂದ ತಿಳಿದುಬರುತ್ತದೆ. ಆದ್ದರಿಂದ ಸಗುಣ ನಿರ್ಗುಣರೂಪಗಳಲ್ಲಿ ಹೇಗೆ ಸಗುಣರೂಪವನ್ನು ಮಾತ್ರ ಉಪಾಸಕರು ಪಡೆದುಕೊಳ್ಳುತ್ತಾರೋ ಹಾಗೆಯೇ ಸಾಂಕುಶನಿರಂಕುಶೈಶ್ವರ್ಯಗಳೊಳಗೆ ಸಾಂಕುಶೈಶ್ವರ್ಯವನ್ನೇ ಪಡೆದುಕೊಳ್ಳುತ್ತಾರೆ ಎಂಬುದು ಯುಕ್ತ. ಆದ್ದರಿಂದ ಈಶ್ವರನಿಗೆ ಸಮವಾದ ಭೋಗವು ಮಾತ್ರ ಇವರಿಗೆ ಇರುತ್ತದೆ ಎಂದು ಶ್ರುತಿಯಲ್ಲಿ ಹೇಳಿದೆ. ರೆ ಬ್ರಹ್ಮಲೋಕಕ್ಕೆ ಹೋದಮೇಲೆ ಉಪಾಸಕರಿಗೆ ಜ್ಞಾನದ್ವಾರದಿಂದ ಕ್ರಮಮುಕ್ತಿಯಾಗುವದರಿಂದ ಸಂಸಾರಕ್ಕೆ ಪುನರಾವೃತ್ತಿಯಾಗುವದಿಲ್ಲ. ಜ್ಞಾನದಿಂದ ಮುಕ್ತರಾದವರಿಗೆ ಯಾರಿಗೂ ಪುನರಾವೃತ್ತಿಯಿಲ್ಲವಾದ್ದರಿಂದ ಹೀಗೆಂದು ಒಪ್ಪಬೇಕು.

# ಪರಿಶಿಷ್ಟ

## ಬಾದರಾಯಣಕೃತವೇದಾನ್ತ ಸೂತ್ರಪಾಠಃ

### ಅಥ ಪ್ರಥಮಾಧ್ಯಾಯೇ ಪ್ರಥಮಃ ಪಾದಃ

೧. ಓಂ॥ ಅಥಾತೋ ಬ್ರಹ್ಮಜಿಜ್ಞಾಸಾ ೨. ಜನ್ಮಾದ್ಯಸ್ಯ ಯತಃ ೩. ಶಾಸ್ತ್ರಯೋನಿತ್ವಾತ್ ೪. ತತ್ತು ಸಮನ್ವಯಾತ್ ೫. ಈಕ್ಷತೇರ್ನಾಶಬ್ದಮ್ ೬. ಗೌಣಶ್ಚೇನ್ನಾತ್ಮಶಬ್ದಾತ್ ೭. ತನ್ನಿಷ್ಠಸ್ಯ ಮೋಕ್ಷೋಪದೇಶಾತ್ ೮. ಹೇಯತ್ವಾವಚನಾಚ್ಚ ೯. ಸ್ವಾಪ್ಯಯಾತ್ ೧೦. ಗತಿಸಾಮಾನ್ಯಾತ್ ೧೧. ಶ್ರುತತ್ವಾಚ್ಚ ೧೨. ಆನನ್ದಮಯೋಽಭ್ಯಾಸಾತ್ ೧೩. ವಿಕಾರಶಬ್ದಾನ್ನೇತಿ ಚೇನ್ನ ಪ್ರಾಚುರ್ಯಾತ್ ೧೪. ತದ್ಧೇತುವ್ಯಪದೇಶಾಚ್ಚ ೧೫. ಮಾನ್ತ್ರವರ್ಣಿಕಮೇವ ಚ ಗೀಯತೇ ೧೬. ನೇತರೋಽನುಪಪತ್ತೇಃ ೧೭. ಭೇದವ್ಯಪದೇಶಾಚ್ಚ ೧೮. ಕಾಮಾಚ್ಚ ನಾನುಮಾನಾಪೇಕ್ಷಾ ೧೯. ಅಸ್ಮಿನ್ನಸ್ಯ ಚ ತದ್ಯೋಗಂ ಶಾಸ್ತಿ ೨೦. ಅನ್ತಸ್ತದ್ಧರ್ಮೋಪದೇಶಾತ್ ೨೧. ಭೇದವ್ಯಪದೇಶಾಚ್ಚಾನ್ಯಃ ೨೨. ಆಕಾಶಸ್ತಲ್ಲಿಙ್ಗಾತ್ ೨೩. ಅತ ಏವ ಪ್ರಾಣಃ ೨೪. ಜ್ಯೋತಿಶ್ಚರಣಾಭಿಧಾನಾತ್ ೨೫. ಛನ್ದೋಽಭಿಧಾನಾನ್ನೇತಿ ಚೇನ್ನ ತಥಾ ಚೇತೋಽರ್ಪಣನಿಗದಾತ್ತಥಾ ಹಿ ದರ್ಶನಮ್ ೨೬. ಭೂತಾದಿಪಾದವ್ಯಪದೇಶೋಪಪತ್ತೇಶ್ಚೈವಮ್ ೨೭. ಉಪದೇಶಭೇದಾನ್ನೇತಿ ಚೇನ್ನೋಭಯಸ್ಮಿನ್ನಪ್ಯವಿರೋಧಾತ್ ೨೮. ಪ್ರಾಣಸ್ತಥಾನುಗಮಾತ್ ೨೯. ನ ವಕ್ತುರಾತ್ಮೋಪದೇಶಾದಿತಿ ಚೇದಧ್ಯಾತ್ಮಸಂಬನ್ಧಭೂಮಾ ಹ್ಯಸ್ಮಿನ್ ೩೦. ಶಾಸ್ತ್ರದೃಷ್ಟ್ಯಾತೂಪದೇಶೋ ವಾಮದೇವವತ್ ೩೧. ಜೀವಮುಖ್ಯಪ್ರಾಣಲಿಙ್ಗಾನ್ನೇತಿ ಚೇನ್ನೋಪಾಸಾತ್ರೈವಿಧ್ಯಾದಾಶ್ರಿತತ್ವಾದಿಹ ತದ್ಯೋಗಾತ್ ॥

ಇತಿ ವೇದಾನ್ತಸೂತ್ರಪಾಠೇ ಪ್ರಥಮಾಧ್ಯಾಯೇ ಪ್ರಥಮಃ ಪಾದಃ

### ಅಥ ಪ್ರಥಮಾಧ್ಯಾಯೇ ದ್ವಿತೀಯಃ ಪಾದಃ

೧. ಸರ್ವತ್ರ ಪ್ರಸಿದ್ಧೋಪದೇಶಾತ್ ೨. ವಿವಕ್ಷಿತಗುಣೋಪಪತ್ತೇಶ್ಚ ೩. ಅನುಪಪತ್ತೇಸ್ತು ನ ಶಾರೀರಃ ೪. ಕರ್ಮಕರ್ತೃವ್ಯಪದೇಶಾಚ್ಚ

೫. ಶಬ್ದವಿಶೇಷಾತ್ ೬. ಸ್ಮೃತೇಶ್ಚ ೭. ಅರ್ಭಕೌಕಸ್ತ್ವಾತ್ತದ್ವ್ಯಪದೇಶಾಚ್ಚ ನೇತಿ ಚೇನ್ನ ನಿಚಾಯ್ಯತ್ವಾದೇವಂ ವ್ಯೋಮವಚ್ಚ ೮. ಸಂಭೋಗಪ್ರಾಪ್ತಿರಿತಿ ಚೇನ್ನ ವೈಶೇಷ್ಯಾತ್ ೯. ಅತ್ತಾ ಚರಾಚರಗ್ರಹಣಾತ್ ೧೦. ಪ್ರಕರಣಾಚ್ಚ ೧೧. ಗುಹಾಂ ಪ್ರವಿಷ್ಟಾವಾತ್ಮಾನೌ ಹಿ ತದ್ದರ್ಶನಾತ್ ೧೨. ವಿಶೇಷಣಾಚ್ಚ ೧೩. ಅನ್ತರ ಉಪಪತ್ತೇಃ ೧೪. ಸ್ಥಾನಾದಿವ್ಯಪದೇಶಾಚ್ಚ ೧೫. ಸುಖವಿಶಿಷ್ಟಾಭಿಧಾನಾದೇವ ಚ ೧೬. ಶ್ರುತೋಪನಿಷತ್ಕಗತ್ಯಭಿಧಾನಾಚ್ಚ ೧೭. ಅನವಸ್ಥಿತೇರಸಂಭವಾಚ್ಚ ನೇತರಃ ೧೮. ಅನ್ತರ್ಯಾಮ್ಯಧಿದೈವಾದಿಷು ತದ್ಧರ್ಮವ್ಯಪದೇಶಾತ್ ೧೯. ನ ಚ ಸ್ಮಾರ್ತಮತದ್ಧರ್ಮಾಭಿಲಾಪಾತ್ ೨೦. ಶಾರೀರಶ್ಚೋಭಯೇಽಪಿ ಹಿ ಭೇದೇನೈನಮಧೀಯತೇ ೨೧. ಅದೃಶ್ಯತ್ವಾದಿಗುಣಕೋ ಧರ್ಮೋಕ್ತೇಃ ೨೨. ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ ೨೩. ರೂಪೋಪನ್ಯಾಸಾಚ್ಚ ೨೪. ವೈಶ್ವಾನರಃ ಸಾಧಾರಣಶಬ್ದವಿಶೇಷಾತ್ ೨೫. ಸ್ಮರ್ಯಮಾಣಮನುಮಾನಂ ಸ್ಯಾದಿತಿ ೨೬. ಶಬ್ದಾದಿಭ್ಯೋಽನ್ತಃಪ್ರತಿಷ್ಠಾನಾನ್ನೇತಿ ಚೇನ್ನ ತಥಾ ದೃಷ್ಟ್ಯುಪದೇಶಾದಸಂಭವಾತ್ ಪುರುಷಮಪಿ* ಚೈನಮಧೀಯತೇ ೨೭. ಅತ ಏವ ನ ದೇವತಾಭೂತಂ ಚ ೨೮. ಸಾಕ್ಷಾದಪ್ಯವಿರೋಧಂ ಜೈಮಿನಿಃ ೨೯. ಅಭಿವ್ಯಕ್ತೇರಿತ್ಯಾಶ್ಮರಥ್ಯಃ ೩೦. ಅನುಸ್ಮೃತೇರ್ಬಾದರಿಃ ೩೧. ಸಂಪತ್ತೇರಿತಿ ಜೈಮಿನಿಸ್ತಥಾ ಹಿ ದರ್ಶಯತಿ ೩೨. ಆಮನನ್ತಿ ಚೈನಮಸ್ಮಿನ್ ||

ಇತಿ ವೇದಾನ್ತಸೂತ್ರಪಾಠೇ ಪ್ರಥಮಾಧ್ಯಾಯೇ ದ್ವಿತೀಯಃ ಪಾದಃ

## ಅಥ ಪ್ರಥಮಾಧ್ಯಾಯೇ ತೃತೀಯ ಪಾದಃ

೧. ದ್ಯುಭ್ವಾದ್ಯಾಯತನಂ ಸ್ವಶಬ್ದಾತ್ ೨. ಮುಕ್ತೋಪಸೃಪ್ಯವ್ಯಪದೇಶಾತ್ ೩. ನಾನುಮಾನಮತಚ್ಛಬ್ದಾತ್ ೪. ಪ್ರಾಣಭೃಚ್ಚ ೫. ಭೇದವ್ಯಪದೇಶಾತ್ ೬. ಪ್ರಕರಣಾತ್ ೭. ಸ್ಥಿತ್ಯದನಾಭ್ಯಾಂ ಚ ೮. ಭೂಮಾ ಸಂಪ್ರಸಾದಾದಧ್ಯುಪದೇಶಾತ್ ೯. ಧರ್ಮೋಪಪತ್ತೇಶ್ಚ ೧೧. ಅಕ್ಷರಮಮ್ಬರಾನ್ತಧೃತೇಃ ೧೧. ಸಾ ಚ ಪ್ರಶಾಸನಾತ್ ೧೨. ಅನ್ಯಭಾವ

* ಪುರುಷವಿಧಮಪಿ ಪಾ||

ವ್ಯಾವೃತ್ತೇಶ್ಚ ೧೩. ಈಕ್ಷತಿಕರ್ಮವ್ಯಪದೇಶಾತ್ ಸಃ ೧೪. ದಹರ ಉತ್ತರೇಭ್ಯಃ ೧೫. ಗತಿಶಬ್ದಾಭ್ಯಾಂ ತಥಾ ಹಿ ದೃಷ್ಟಂ ಲಿಙ್ಗಂ ಚ ೧೬. ಧೃತೇಶ್ಚ ಮಹಿಮ್ನೋಽಸ್ಯಾಸ್ಮಿನ್ನುಪಲಬ್ಧೇಃ ೧೭. ಪ್ರಸಿದ್ಧೇಶ್ಚ ೧೮. ಇತರಪರಾಮರ್ಶಾತ್ ಸ ಇತಿ ಚೇನ್ನಾಸಂಭವಾತ್ ೧೯. ಉತ್ತರಾಚ್ಚೇದಾ-ವಿರ್ಭೂತಸ್ವರೂಪಸ್ತು ೨೦. ಅನ್ಯಾರ್ಥಶ್ಚ ಪರಾಮರ್ಶಃ ೨೧. ಅಲ್ಪಶ್ರುತೇರಿತಿ ಚೇತ್ ತದುಕ್ತಮ್ ೨೨. ಅನುಕೃತೇಸ್ತಸ್ಯ ಚ ೨೩. ಅಪಿ ಚ ಸ್ಮರ್ಯತೇ ೨೪. ಶಬ್ದಾದೇವ ಪ್ರಮಿತಃ ೨೫. ಹೃದ್ಯಪೇಕ್ಷಯಾ ತು ಮನುಷ್ಯಾಧಿಕಾರತ್ವಾತ್ ೨೬. ತದುಪರ್ಯಪಿ ಬಾದರಾಯಣಃ ಸಂಭವಾತ್ ೨೭. ವಿರೋಧಃ ಕರ್ಮಣೀತಿ ಚೇನ್ನಾನೇಕಪ್ರತಿಪತ್ತೇರ್ದರ್ಶನಾತ್ ೨೮. ಶಬ್ದ ಇತಿ ಚೇನ್ನಾತಃ ಪ್ರಭವಾತ್ ಪ್ರತ್ಯಕ್ಷಾನುಮಾನಾಭ್ಯಾಮ್ ೨೯. ಅತ ಏವ ಚ ನಿತ್ಯತ್ವಮ್ ೩೦. ಸಮಾನನಾಮರೂಪತ್ವಾಚ್ಚಾವೃತ್ತಾವಪ್ಯವಿರೋಧೋ ದರ್ಶನಾತ್ ಸ್ಮೃತೇಶ್ಚ ೩೧. ಮಧ್ವಾದಿಷ್ವಸಂಭವಾದನಧಿಕಾರಂ ಜೈಮಿನಿಃ ೩೨. ಜ್ಯೋತಿಷಿ ಭಾವಾಚ್ಚ ೩೩. ಭಾವಂ ತು ಬಾದರಾಯಣೋಽಸ್ತಿ ಹಿ ೩೪. ಶುಗಸ್ಯ ತದನಾದರಶ್ರವಣಾತ್ ತದಾದ್ರವಣಾತ್ ಸೂಚ್ಯತೇ ಹಿ ೩೫. ಕ್ಷತ್ರಿಯತ್ವಗತೇಶ್ಚೋತ್ತರತ್ರ ಚೈತ್ರರಥೇನ ಲಿಙ್ಗಾತ್ ೩೬. ಸಂಸ್ಕಾರಪರಾಮರ್ಶಾತ್ತದಭಾವಾಭಿಲಾಪಾಚ್ಚ ೩೭. ತದಭಾವನಿರ್ಧಾರಣೇ ಚ ಪ್ರವೃತ್ತೇಃ ೩೮. ಶ್ರವಣಾಧ್ಯಯನಾರ್ಥಪ್ರತಿಷೇಧಾತ್ ಸ್ಮೃತೇಶ್ಚ ೩೯. ಕಮ್ಪನಾತ್ ೪೦. ಜ್ಯೋತಿರ್ದರ್ಶನಾತ್ ೪೧. ಆಕಾಶೋಽರ್ಥಾನ್ತರತ್ವಾದಿವ್ಯಪದೇಶಾತ್ ೪೨. ಸುಷುಪ್ತ್ಯುತ್ಕ್ರಾನ್ತ್ಯೋರ್ಭೇದೇನ ೪೩. ಪತ್ಯಾದಿಶಬ್ದೇಭ್ಯಃ ||

ಇತಿ ವೇದಾನ್ತಸೂತ್ರಪಾಠೇ ಪ್ರಥಮಾಧ್ಯಾಯೇ ತೃತೀಯಃ ಪಾದಃ

## [ಅಥ ಪ್ರಥಮಾಧ್ಯಾಯೇ ಚತುರ್ಥಃ ಪಾದಃ

೧ ಆನುಮಾನಿಕಮಪ್ಯೇಕೇಷಾಮಿತಿ ಚೇನ್ನ ಶರೀರರೂಪಕವಿನ್ಯಸ್ತಗೃಹೀತೇರ್ದರ್ಶಯತಿ ಚ ೨ ಸೂಕ್ಷ್ಮಂ ತು ತದರ್ಹತ್ವಾತ್ ೩ ತದಧೀನತ್ವಾದರ್ಥವತ್ ೪ ಜ್ಞೇಯತ್ವಾವಚನಾಚ್ಚ ೫ ವದತೀತಿ ಚೇನ್ನ ಪ್ರಾಜ್ಞೋ ಹಿ ಪ್ರಕರಣಾತ್ ೬ ತ್ರಯಾಣಾಮೇವ ಚೈವಮುಪ

ನ್ಯಾಸಃ ಪ್ರಶ್ನಶ್ಚ ೭. ಮಹದ್ವಚ್ಚ ೮. ಚಮಸವದವಿಶೇಷಾತ್ ೯. ಜ್ಯೋತಿರುಪಕ್ರಮಾ ತು ತಥಾ ಹ್ಯಧೀಯತ ಏಕೇ ೧೦. ಕಲ್ಪನೋಪದೇಶಾಚ್ಚ ಮಧ್ವಾದಿವದವಿರೋಧಃ ೧೧. ನ ಸಂಖ್ಯೋಪಸಂಗ್ರಹಾದಪಿ ನಾನಾಭಾವಾದತಿರೇಕಾಚ್ಚ ೧೨. ಪ್ರಾಣಾದಯೋ ವಾಕ್ಯಶೇಷಾತ್ ೧೩. ಜ್ಯೋತಿಷೈಕೇಷಾಮಸತ್ಯನ್ನೇ ೧೪. ಕಾರಣತ್ವೇನ ಚಾಕಾಶಾದಿಷು ಯಥಾವ್ಯಪದಿಷ್ಟೋಕ್ತೇಃ ೧೫. ಸಮಾಕರ್ಷಾತ್ ೧೬. ಜಗದ್ವಾಚಿತ್ವಾತ್ ೧೭. ಜೀವಮುಖ್ಯಪ್ರಾಣಲಿಙ್ಗಾನ್ನೇತಿ ಚೇತ್ತದ್ವ್ಯಾಖ್ಯಾತಮ್ ೧೮. ಅನ್ಯಾರ್ಥಂ ತು ಜೈಮಿನಿಃ ಪ್ರಶ್ನವ್ಯಾಖ್ಯಾನಾಭ್ಯಾಮಪಿ ಚೈವಮೇಕೇ ೧೯. ವಾಕ್ಯಾನ್ವಯಾತ್ ೨೦. ಪ್ರತಿಜ್ಞಾಸಿದ್ಧೇರ್ಲಿಙ್ಗಮಾಶ್ಮರಥ್ಯಃ ೨೧. ಉತ್ಕ್ರಮಿಷ್ಯತ ಏವಂ ಭಾವಾದಿತ್ಯೌಡುಲೋಮಿಃ ೨೨. ಅವಸ್ಥಿತೇರಿತಿ ಕಾಶಕೃತ್ಸ್ನಃ ೨೩. ಪ್ರಕೃತಿಶ್ಚ ಪ್ರತಿಜ್ಞಾದೃಷ್ಟಾನ್ತಾನುಪರೋಧಾತ್ ೨೪. ಅಭಿಧ್ಯೋಪದೇಶಾಚ್ಚ ೨೫. ಸಾಕ್ಷಾಚ್ಚೋಭಯಾಮ್ನಾನಾತ್ ೨೬. ಆತ್ಮಕೃತೇಃ ಪರಿಣಾಮಾತ್ ೨೭. ಯೋನಿಶ್ಚ ಹಿ ಗೀಯತೇ ೨೮. ಏತೇನ ಸರ್ವೇ ವ್ಯಾಖ್ಯಾತಾ ವ್ಯಾಖ್ಯಾತಾಃ ||

ಇತಿ ವೇದಾನ್ತಸೂತ್ರಪಾಠೇ ಪ್ರಥಮಾಧ್ಯಾಯೇ ಚತುರ್ಥಃ ಪಾದಃ

## ಇತಿ ಪ್ರಥಮೋಽಧ್ಯಾಯಃ

## ಅಥ ದ್ವಿತೀಯಾಧ್ಯಾಯೇ ಪ್ರಥಮಃಪಾದಃ

೧. ಸ್ಮೃತ್ಯನವಕಾಶದೋಷಪ್ರಸಙ್ಗ ಇತಿ ಚೇನ್ನಾನ್ಯಸ್ಮೃತ್ಯನವಕಾಶದೋಷಪ್ರಸಙ್ಗಾತ್ ೨. ಇತರೇಷಾಂ ಚಾನುಪಲಬ್ಧೇಃ ೩. ಏತೇನ ಯೋಗಃ ಪ್ರತ್ಯುಕ್ತಃ ೪. ನ ವಿಲಕ್ಷಣತ್ವಾದಸ್ಯ ತಥಾತ್ವಂ ಚ ಶಬ್ದಾತ್ ೫. ಅಭಿಮಾನಿವ್ಯಪದೇಶಸ್ತು ವಿಶೇಷಾನುಗತಿಭ್ಯಾಮ್ ೬. ದೃಶ್ಯತೇ ತು ೭. ಅಸದಿತಿ ಚೇನ್ನ ಪ್ರತಿಷೇಧಮಾತ್ರತ್ವಾತ್ ೮. ಅಪೀತೌ ತದ್ವತ್ಪ್ರಸಙ್ಗಾದಸಮಞ್ಜಸಮ್ ೯. ನ ತು ದೃಷ್ಟಾನ್ತಭಾವಾತ್ ೧೦. ಸ್ವಪಕ್ಷದೋಷಾಚ್ಚ ೧೧. ತರ್ಕಾಪ್ರತಿಷ್ಠಾನಾದಪ್ಯನ್ಯಥಾನುಮೇಯಮಿತಿ ಚೇದೇವಮಪ್ಯವಿಮೋಕ್ಷಪ್ರಸಙ್ಗಃ ೧೨. ಏತೇನ ಶಿಷ್ಟಾಪರಿಗ್ರಹಾ ಅಪಿ ವ್ಯಾಖ್ಯಾ-

ತಾಃ ೧೩. ಭೋಕ್ತ್ರಾಪತ್ತೇರವಿಭಾಗಶ್ಚೇತ್ಸ್ಯಾಲ್ಲೋಕವತ್ ೧೪. ತದನನ್ಯತ್ವಮಾರಮ್ಭಣಶಬ್ದಾದಿಭ್ಯಃ ೧೫. ಭಾವೇ ಚೋಪಲಬ್ಧೇಃ ೧೬. ಸತ್ತ್ವಾಚ್ಚಾವರಸ್ಯ ೧೭. ಅಸದ್ವ್ಯಪದೇಶಾನ್ನೇತಿ ಚೇನ್ನ ಧರ್ಮಾನ್ತರೇಣ ವಾಕ್ಯಶೇಷಾತ್ ೧೮. ಯುಕ್ತೇಃ ಶಬ್ದಾನ್ತರಾಚ್ಚ ೧೯. ಪಟವಚ್ಚ ೨೦. ಯಥಾ ಚ ಪ್ರಾಣಾದಿ ೨೧. ಇತರವ್ಯಪದೇಶಾದ್ಧಿತಾಕರಣಾದಿದೋಷಪ್ರಸಕ್ತಿಃ ೨೨. ಅಧಿಕಂ ತು ಭೇದನಿರ್ದೇಶಾತ್ ೨೩. ಅಶ್ಮಾದಿವಚ್ಚ ತದನುಪಪತ್ತಿಃ ೨೪. ಉಪಸಂಹಾರದರ್ಶನಾನ್ನೇತಿ ಚೇನ್ನ ಕ್ಷೀರವದ್ಧಿ ೨೫. ದೇವಾದಿವದಪಿ ಲೋಕೇ ೨೬. ಕೃತ್ಸ್ನಪ್ರಸಕ್ತಿರ್ನಿರವಯವತ್ವಶಬ್ದಕೋಪೋ ವಾ ೨೭. ಶ್ರುತೇಸ್ತು ಶಬ್ದಮೂಲತ್ವಾತ್ ೨೮. ಆತ್ಮನಿ ಚೈವಂ ವಿಚಿತ್ರಾಶ್ಚ ಹಿ ೨೯. ಸ್ವಪಕ್ಷದೋಷಾಚ್ಚ ೩೦. ಸರ್ವೋಪೇತಾ ಚ ತದ್ದರ್ಶನಾತ್ ೩೧. ವಿಕರಣತ್ವಾನ್ನೇತಿ ಚೇತ್ ತದುಕ್ತಮ್ ೩೨. ನ ಪ್ರಯೋಜನವತ್ತ್ವಾತ್ ೩೩. ಲೋಕವತ್ತು ಲೀಲಾಕೈವಲ್ಯಮ್ ೩೪. ವೈಷಮ್ಯನೈರ್ಘೃಣ್ಯೇ ನ ಸಾಪೇಕ್ಷತ್ವಾತ್ ತಥಾ ಹಿ ದರ್ಶಯತಿ ೩೫. ನ ಕರ್ಮಾವಿಭಾಗಾದಿತಿ ಚೇನ್ನಾನಾದಿತ್ವಾತ್ ೩೬. ಉಪಪದ್ಯತೇ ಚಾಪ್ಯುಪಲಭ್ಯತೇ ಚ ೩೭. ಸರ್ವಧರ್ಮೋಪಪತ್ತೇಶ್ಚ ||

ಇತಿ ವೇದಾನ್ತಸೂತ್ರಪಾಠೇ ದ್ವಿತೀಯಾಧ್ಯಾಯೇ ಪ್ರಥಮಃ ಪಾದಃ

## ಅಥ ದ್ವಿತೀಯಾಧ್ಯಾಯೇ ದ್ವಿತೀಯಃ ಪಾದಃ

೧. ರಚನಾನುಪಪತ್ತೇಶ್ಚ ನಾನುಮಾನಮ್ ೨. ಪ್ರವೃತ್ತೇಶ್ಚ ೩. ಪಯೋಽಮ್ಬುವಚ್ಚೇತ್ ತತ್ರಾಪಿ ೪. ವ್ಯತಿರೇಕಾನವಸ್ಥಿತೇಶ್ಚಾನಪೇಕ್ಷತ್ವಾತ್ ೫. ಅನ್ಯತ್ರಾಭಾವಾಚ್ಚ ನ ತೃಣಾದಿವತ್ ೬. ಅಭ್ಯುಪಗಮೇಽಪ್ಯರ್ಥಾಭಾವಾತ್ ೭. ಪುರುಷಾಶ್ಮವದಿತಿ ಚೇತ್ ತಥಾಪಿ ೮. ಅಙ್ಗಿತ್ವಾನುಪಪತ್ತೇಶ್ಚ ೯. ಅನ್ಯಥಾನುಮಿತೌ ಚ ಜ್ಞಶಕ್ತಿವಿಯೋಗಾತ್ ೧೦. ವಿಪ್ರತಿಷೇಧಾಚ್ಚಾಸಮಞ್ಜಸಮ್ ೧೧. ಮಹದ್ದೀರ್ಘವದ್ವಾ ಹ್ರಸ್ವಪರಿಮಣ್ಡಲಾಭ್ಯಾಮ್ ೧೨. ಉಭಯಥಾಪಿ ಚ ನ ಕರ್ಮಾತಸ್ತದಭಾವಃ ೧೩. ಸಮವಾಯಾಭ್ಯುಪಗಮಾಚ್ಚ ಸಾಮ್ಯಾದನವಸ್ಥಿತೇಃ ೧೪. ನಿತ್ಯಮೇವ ಚ ಭಾವಾತ್ ೧೫. ರೂಪಾದಿಮತ್ತ್ವಾಚ್ಚ ವಿಪರ್ಯಯೋ ದರ್ಶನಾತ್

೧೬. ಉಭಯಥಾ ಚ ದೋಷಾತ್ ೧೭. ಅಪರಿಗ್ರಹಾಚ್ಚಾತ್ಯನ್ತಮನಪೇಕ್ಷಾ ೧೮. ಸಮುದಾಯ ಉಭಯಹೇತುಕೇಽಪಿ ತದಪ್ರಾಪ್ತಿಃ ೧೯. ಇತರೇತರಪ್ರತ್ಯಯತ್ವಾದಿತಿ ಚೇನ್ನೋತ್ಪತ್ತಿಮಾತ್ರನಿಮಿತ್ತತ್ವಾತ್ ೨೦. ಉತ್ತರೋತ್ಪಾದೇ ಚ ಪೂರ್ವನಿರೋಧಾತ್ ೨೧. ಅಸತಿ ಪ್ರತಿಜ್ಞೋಪರೋಧೋ ಯೌಗಪದ್ಯಮನ್ಯಥಾ ೨೨. ಪ್ರತಿಸಂಖ್ಯಾಪ್ರತಿಸಂಖ್ಯಾನಿರೋಧಾಪ್ರಾಪ್ತಿರವಿಚ್ಛೇದಾತ್ ೨೩. ಉಭಯಥಾ ಚ ದೋಷಾತ್ ೨೪. ಆಕಾಶೇ ಚಾವಿಶೇಷಾತ್ ೨೫. ಅನುಸ್ಮೃತೇಶ್ಚ ೨೬. ನಾಸತೋಽದೃಷ್ಟತ್ವಾತ್ ೨೭. ಉದಾಸೀನಾನಾಮಪಿ ಚೈವಂ ಸಿದ್ಧಿಃ ೨೮. ನಾಭಾವ ಉಪಲಬ್ಧೇಃ ೨೯. ವೈಧರ್ಮ್ಯಾಚ್ಚ ನ ಸ್ವಪ್ನಾದಿವತ್ ೩೦. ನ ಭಾವೋಽನುಪಲಬ್ಧೇಃ ೩೧. ಕ್ಷಣಿಕತ್ವಾಚ್ಚ ೩೨. ಸರ್ವಥಾನುಪಪತ್ತೇಶ್ಚ ೩೩. ನೈಕಸ್ಮಿನ್ನಸಂಭವಾತ್ ೩೪. ಏವಂ ಚಾತ್ಮಾಽಕಾರ್ತ್ಸ್ನ್ಯಮ್ ೩೫. ನ ಚ ಪರ್ಯಾಯಾದಪ್ಯವಿರೋಧೋ ವಿಕಾರಾದಿಭ್ಯಃ ೩೬. ಅನ್ತ್ಯಾವಸ್ಥಿತೇಶ್ಚೋಭಯನಿತ್ಯತ್ವಾದವಿಶೇಷಃ ೩೭. ಪತ್ಯುರಸಾಮಞ್ಜಸ್ಯಾತ್ ೩೮. ಸಂಬನ್ಧಾನುಪಪತ್ತೇಶ್ಚ ೩೯. ಅಧಿಷ್ಠಾನಾನುಪಪತ್ತೇಶ್ಚ ೪೦. ಕರಣವಚ್ಚೇನ್ನ ಭೋಗಾದಿಭ್ಯಃ ೪೧. ಅನ್ತವತ್ತ್ವಮಸರ್ವಜ್ಞತಾ ವಾ ೪೨. ಉತ್ಪತ್ತ್ಯಸಂಭವಾತ್ ೪೩. ನ ಚ ಕರ್ತುಃ ಕರಣಮ್ ೪೪. ವಿಜ್ಞಾನಾದಿಭಾವೇ ವಾ ತದಪ್ರತಿಷೇಧಃ ೪೫. ವಿಪ್ರತಿಷೇಧಾಚ್ಚ ||

ಇತಿ ವೇದಾನ್ತಸೂತ್ರಪಾಠೇ ದ್ವಿತೀಯಾಧ್ಯಾಯೇ ದ್ವಿತೀಯಃ ಪಾದಃ

## ಅಥ ದ್ವಿತೀಯಾಧ್ಯಾಯೇ ತೃತೀಯಃ ಪಾದಃ

೧. ನ ವಿಯದಶ್ರುತೇಃ ೨. ಅಸ್ತಿ ತು ೩. ಗೌಣ್ಯಸಂಭವಾತ್ ೪. ಶಬ್ದಾಚ್ಚ ೫. ಸ್ಯಾಚ್ಚೈಕಸ್ಯ ಬ್ರಹ್ಮಶಬ್ದವತ್ ೬. ಪ್ರತಿಜ್ಞಾಹಾನಿರವ್ಯತಿರೇಕಾಚ್ಛಬ್ದೇಭ್ಯಃ ೭ ಯಾವದ್ವಿಕಾರಂ ತು ವಿಭಾಗೋ ಲೋಕವತ್ ೮. ಏತೇನ ಮಾತರಿಶ್ವಾ ವ್ಯಾಖ್ಯಾತಃ ೯. ಅಸಂಭವಸ್ತು ಸತೋಽನುಪಪತ್ತೇಃ ೧೦. ತೇಜೋಽತಸ್ತಥಾ ಹ್ಯಾಹ ೧೧. ಆಪಃ ೧೨. ಪೃಥಿವ್ಯಧಿಕಾರರೂಪಶಬ್ದಾನ್ತರೇಭ್ಯಃ ೧೩. ತದಭಿಧ್ಯಾನಾದೇವ ತು ತಲ್ಲಿಙ್ಗಾತ್ ಸಃ ೧೪. ವಿಪರ್ಯಯೇಣ ತು ಕ್ರಮೋಽತ ಉಪಪದ್ಯತೇ

ಚ ೧೫. ಅನ್ತರಾ ವಿಜ್ಞಾನಮನಸೀ ಕ್ರಮೇಣ ತಲ್ಲಿಙ್ಗಾದಿತಿ ಚೇನ್ನಾವಿಶೇಷಾತ್ ೧೬. ಚರಾಚರವ್ಯಪಾಶ್ರಯಸ್ತು ಸ್ಯಾತ್ ತದ್ವ್ಯಪದೇಶೋ ಭಾಕ್ತಸ್ತದ್ಭಾವಭಾವಿತ್ವಾತ್ ೧೭. ನಾತ್ಮಾಽಶ್ರುತೇರ್ನಿತ್ಯತ್ವಾಚ್ಚ ತಾಭ್ಯಃ ೧೮. ಜ್ಞೋಽತ ಏವ ೧೯. ಉತ್ಕ್ರಾನ್ತಿಗತ್ಯಾಗತೀನಾಮ್ ೨೦. ಸ್ವಾತ್ಮನಾ ಚೋತ್ತರಯೋಃ ೨೧. ನಾಣುರತಚ್ಛ್ರುತೇರಿತಿ ಚೇನ್ನೇತರಾಧಿಕಾರಾತ್ ೨೨. ಸ್ವಶಬ್ದೋನ್ಮಾನಾಭ್ಯಾಂ ಚ ೨೩. ಅವಿರೋಧಶ್ಚನ್ದನವತ್ ೨೪. ಅವಸ್ಥಿತಿವೈಶೇಷ್ಯಾದಿತಿ ಚೇನ್ನಾಭ್ಯುಪಗಮಾದ್ಧೃದಿ ಹಿ ೨೫. ಗುಣಾದ್ವಾ ಲೋಕವತ್ ೨೬. ವ್ಯತಿರೇಕೋ ಗನ್ಧವತ್ ೨೭. ತಥಾ ಚ ದರ್ಶಯತಿ ೨೮. ಪೃಥಗುಪದೇಶಾತ್ ೨೯. ತದ್ಗುಣಸಾರತ್ವಾತ್ತು ತದ್ವ್ಯಪದೇಶಃ ಪ್ರಾಜ್ಞವತ್ ೩೦. ಯಾವದಾತ್ಮಭಾವಿತ್ವಾಚ್ಚ ನ ದೋಷಸ್ತದ್ದರ್ಶನಾತ್ ೩೧. ಪುಂಸ್ತ್ವಾದಿವತ್ತ್ವಸ್ಯ ಸತೋಽಭಿವ್ಯಕ್ತಿಯೋಗಾತ್ ೩೨. ನಿತ್ಯೋಪಲಬ್ಧ್ಯನುಪಲಬ್ಧಿಪ್ರಸಙ್ಗೋಽನ್ಯತರನಿಯಮೋ ವಾನ್ಯಥಾ ೩೩. ಕರ್ತಾ ಶಾಸ್ತ್ರಾರ್ಥವತ್ತ್ವಾತ್ ೩೪. ವಿಹಾರೋಪದೇಶಾತ್ ೩೫. ಉಪಾದಾನಾತ್ ೩೬. ವ್ಯಪದೇಶಾಚ್ಚ ಕ್ರಿಯಾಯಾಂ ನ ಚೇನ್ನಿರ್ದೇಶವಿಪರ್ಯಯಃ ೩೭. ಉಪಲಬ್ಧಿವದನಿಯಮಃ ೩೮. ಶಕ್ತಿವಿಪರ್ಯಯಾತ್ ೩೯. ಸಮಾಧ್ಯಭಾವಾಚ್ಚ ೪೦. ಯಥಾ ಚ ತಕ್ಷೋಭಯಥಾ ೪೧. ಪರಾತ್ತು ತಚ್ಛ್ರುತೇಃ ೪೨. ಕೃತಪ್ರಯತ್ನಾಪೇಕ್ಷಸ್ತು ವಿಹಿತಪ್ರತಿಷಿದ್ಧಾವೈಯರ್ಥ್ಯಾದಿಭ್ಯಃ ೪೩. ಅಂಶೋ ನಾನಾವ್ಯಪದೇಶಾದನ್ಯಥಾ ಚಾಪಿ ದಾಶಕಿತವಾದಿತ್ವಮಧೀಯತ ಏಕೇ ೪೪. ಮನ್ತ್ರವರ್ಣಾಚ್ಚ ೪೫. ಅಪಿ ಚ ಸ್ಮರ್ಯತೇ ೪೬. ಪ್ರಕಾಶಾದಿವನ್ನೈವಂ ಪರಃ ೪೭. ಸ್ಮರನ್ತಿ ಚ ೪೮. ಅನುಜ್ಞಾಪರಿಹಾರೌ ದೇಹಸಂಬನ್ಧಾಜ್ಜ್ಯೋತಿರಾದಿವತ್ ೪೯. ಅಸನ್ತತೇಶ್ಚಾವ್ಯತಿಕರಃ ೫೦. ಆಭಾಸ ಏವ ಚ ೫೧. ಅದೃಷ್ಟಾನಿಯಮಾತ್ ೫೨. ಅಭಿಸನ್ಧ್ಯಾದಿಷ್ವಪಿ ಚೈವಮ್ ೫೩. ಪ್ರದೇಶಾದಿತಿ ಚೇನ್ನಾನ್ತರ್ಭಾವಾತ್ ||

ಇತಿ ವೇದಾನ್ತಸೂತ್ರಪಾಠೇ ದ್ವಿತೀಯಾಧ್ಯಾಯೇ ತೃತೀಯಃ ಪಾದಃ

## ಅಥ ದ್ವಿತೀಯಾಧ್ಯಾಯೇ ಚತುರ್ಥಃ ಪಾದಃ

೧. ತಥಾ ಪ್ರಾಣಾಃ ೨. ಗೌಣ್ಯಸಂಭವಾತ್ ೩. ತತ್ಪ್ರಾಕ್ಛ್ರುತೇಶ್ಚ

೪. ತತ್ಪೂರ್ವಕತ್ವಾದ್ ವಾಚಃ ೫. ಸಪ್ತ ಗತೇರ್ವಿಶೇಷಿತತ್ವಾಚ್ಚ ೬. ಹಸ್ತಾದಯಸ್ತು ಸ್ಥಿತೇಽತೋ ನೈವಮ್ ೭ ಅಣವಶ್ಚ ೮ ಶ್ರೇಷ್ಠಶ್ಚ ೯ ನ ವಾಯುಕ್ರಿಯೇ ಪೃಥಗುಪದೇಶಾತ್ ೧೦ ಚಕ್ಷುರಾದಿವತ್ತು ತತ್ಸಹಶಿಷ್ಟ್ಯಾದಿಭ್ಯಃ ೧೧ ಅಕರಣತ್ವಾಚ್ಚ ನ ದೋಷಸ್ತಥಾ ಹಿ ದರ್ಶಯತಿ ೧೨ ಪಞ್ಚವೃತ್ತಿರ್ಮನೋವದ್ ವ್ಯಪದಿಶ್ಯತೇ ೧೩ ಅಣುಶ್ಚ ೧೪ ಜ್ಯೋತಿರಾದ್ಯಧಿಷ್ಠಾನಂ ತು ತದಾಮನನಾತ್ ೧೫ ಪ್ರಾಣವತಾ ಶಬ್ದಾತ್ ೧೬ ತಸ್ಯ ಚ ನಿತ್ಯತ್ವಾತ್ ೧೭ ತ ಇನ್ದ್ರಿಯಾಣಿ ತದ್ವ್ಯಪದೇಶಾದನ್ಯತ್ರ ಶ್ರೇಷ್ಠಾತ್ ೧೮ ಭೇದಶ್ರುತೇಃ ೧೯ ವೈಲಕ್ಷಣ್ಯಾಚ್ಚ ೨೦ ಸಂಜ್ಞಾಮೂರ್ತಿಕ್ಲೃಪ್ತಿಸ್ತು ತ್ರಿವೃತ್ಕುರ್ವತ ಉಪದೇಶಾತ್ ೨೧ ಮಾಂಸಾದಿ ಭೌಮಂ ಯಥಾಶಬ್ದಮಿತರಯೋಶ್ಚ ೨೨ ವೈಶೇಷ್ಯಾತ್ತು ತದ್ವಾದಸ್ತದ್ವಾದಃ ||

ಇತಿ ವೇದಾನ್ತಸೂತ್ರಪಾಠೇ ದ್ವಿತೀಯಾಧ್ಯಾಯೇ ಚತುರ್ಥಃ ಪಾದಃ

ಇತಿ ದ್ವಿತೀಯೋಽಧ್ಯಾಯಃ

## ಅಥ ತೃತೀಯಾಧ್ಯಾಯೇ ಪ್ರಥಮಃ ಪಾದಃ

೧ ತದನ್ತರಪ್ರತಿಪತ್ತೌ ರಂಹತಿ ಸಂಪರಿಷ್ವಕ್ತಃ ಪ್ರಶ್ನನಿರೂಪಣಾಭ್ಯಾಮ್ ೨ ತ್ರ್ಯಾತ್ಮಕತ್ವಾತ್ತು ಭೂಯಸ್ತ್ವಾತ್ ೩ ಪ್ರಾಣಗತೇಶ್ಚ ೪ ಅಗ್ನ್ಯಾದಿಗತಿಶ್ರುತೇರಿತಿ ಚೇನ್ನ ಭಾಕ್ತತ್ವಾತ್ ೫ ಪ್ರಥಮೇಽಶ್ರವಣಾದಿತಿ ಚೇನ್ನ ತಾ ಏವ ಹ್ಯುಪಪತ್ತೇಃ ೬ ಅಶ್ರುತತ್ವಾದಿತಿ ಚೇನ್ನೇಷ್ಟಾದಿಕಾರಿಣಾಂ ಪ್ರತೀತೇಃ ೭ ಭಾಕ್ತಂ ವಾನಾತ್ಮವಿತ್ತ್ವಾತ್ ತಥಾ ಹಿ ದರ್ಶಯತಿ ೮ ಕೃತಾತ್ಯಯೇಽನುಶಯವಾನ್ ದೃಷ್ಟಸ್ಮೃತಿಭ್ಯಾಂ ಯಥೇತಮನೇವಂ ಚ ೯ ಚರಣಾದಿತಿ ಚೇನ್ನೋಪಲಕ್ಷಣಾರ್ಥೇತಿ ಕಾರ್ಷ್ಣಾಜಿನಿಃ ೧೦ ಆನರ್ಥಕ್ಯಮಿತಿ ಚೇನ್ನ ತದಪೇಕ್ಷತ್ವಾತ್ ೧೧ ಸುಕೃತದುಷ್ಕೃತೇ ಏವೇತಿ ತು ಬಾದರಿಃ ೧೨ ಅನಿಷ್ಟಾದಿಕಾರಿಣಾಮಪಿ ಚ ಶ್ರುತಮ್ ೧೩ ಸಂಯಮನೇ ತ್ವನುಭೂಯೇತರೇಷಾಮಾರೋಹಾವರೋಹೌ ತದ್ಗತಿದರ್ಶನಾತ್ ೧೪ ಸ್ಮರನ್ತಿ ಚ ೧೫ ಅಪಿ ಚ ಸಪ್ತ ೧೬ ತತ್ರಾಪಿ ಚ ತದ್ವ್ಯಾಪಾರಾದವಿರೋಧಃ ೧೭ ವಿದ್ಯಾಕರ್ಮಣೋರಿತಿ ತು ಪ್ರಕೃತತ್ವಾತ್

೧೮ ನ ತೃತೀಯೇ ತಥೋಪಲಬ್ಧೇಃ ೧೯ ಸ್ಮರ್ಯತೇಽಪಿ ಚ ಲೋಕೇ ೨೦ ದರ್ಶನಾಚ್ಚ ೨೧ ತೃತೀಯಶಬ್ದಾವರೋಧಃ ಸಂಶೋಕಜಸ್ಯ ೨೨ ಸಾಭಾವ್ಯಾಪತ್ತಿರುಪಪತ್ತೇಃ ೨೩ ನಾತಿಚಿರೇಣ ವಿಶೇಷಾತ್ ೨೪ ಅನ್ಯಾಧಿಷ್ಠಿತೇಷು ಪೂರ್ವವದಭಿಲಾಪಾತ್ ೨೫ ಅಶುದ್ಧಮಿತಿ ಚೇನ್ನ ಶಬ್ದಾತ್ ೨೬ ರೇತಃಸಿಗ್ಯೋಗೋಽಥ ೨೭ ಯೋನೇಃ ಶರೀರಮ್ ||

ಇತಿ ವೇದಾನ್ತಸೂತ್ರಪಾಠೇ ತೃತೀಯಾಧ್ಯಾಯೇ ಪ್ರಥಮಃ ಪಾದಃ

## ಅಥ ತೃತೀಯಾಧ್ಯಾಯೇ ದ್ವಿತೀಯಃ ಪಾದಃ

೧ ಸನ್ಧ್ಯೇ ಸೃಷ್ಟಿರಾಹ ಹಿ ೨ ನಿರ್ಮಾತಾರಂ ಚೈಕೇ ಪುತ್ರಾದಯಶ್ಚ ೩ ಮಾಯಾಮಾತ್ರಂ ತು ಕಾರ್ತ್ಸ್ನ್ಯೇನಾನಭಿವ್ಯಕ್ತಸ್ವರೂಪತ್ವಾತ್ ೪ ಸೂಚಕಶ್ಚ ಹಿ ಶ್ರುತೇರಾಚಕ್ಷತೇ ಚ ತದ್ವಿದಃ ೫ ಪರಾಭಿಧ್ಯಾನಾತ್ತು ತಿರೋಹಿತಂ ತತೋ ಹ್ಯಸ್ಯ ಬನ್ಧವಿಪರ್ಯಯೌ ೬ ದೇಹಯೋಗಾದ್ವಾ ಸೋಽಪಿ ೭ ತದಭಾವೋ ನಾಡೀಷು ತಚ್ಛ್ರುತೇರಾತ್ಮನಿ ಚ ೮ ಅತಃ ಪ್ರಬೋಧೋಽಸ್ಮಾತ್ ೯ ಸ ಏವ ತು ಕರ್ಮಾನುಸ್ಮೃತಿಶಬ್ದವಿಧಿಭ್ಯಃ ೧೦ ಮುಗ್ಧೇಽರ್ಧಸಂಪತ್ತಿಃ ಪರಿಶೇಷಾತ್ ೧೧ ನ ಸ್ಥಾನತೋಽಪಿ ಪರಸ್ಯೋಭಯಲಿಙ್ಗಂ ಸರ್ವತ್ರ ಹಿ ೧೨ ನ ಭೇದಾದಿತಿ ಚೇನ್ನ ಪ್ರತ್ಯೇಕಮತದ್ವಚನಾತ್ ೧೩ ಅಪಿ ಚೈವಮೇಕೇ ೧೪ ಅರೂಪವದೇವ ಹಿ ತತ್ಪ್ರಧಾನತ್ವಾತ್ ೧೫ ಪ್ರಕಾಶವಚ್ಚಾವೈಯರ್ಥ್ಯಾತ್ ೧೬ ಆಹ ಚ ತನ್ಮಾತ್ರಮ್ ೧೭ ದರ್ಶಯತಿ ಚಾಥೋ ಅಪಿ ಸ್ಮರ್ಯತೇ ೧೮ ಅತ ಏವ ಚೋಪಮಾ ಸೂರ್ಯಕಾದಿವತ್ ೧೯ ಅಮ್ಬುವದಗ್ರಹಣಾತ್ತು ನ ತಥಾತ್ವಮ್ ೨೦ ವೃದ್ಧಿಹ್ರಾಸಭಾಕ್ತ್ವಮನ್ತರ್ಭಾವಾದುಭಯಸಾಮಞ್ಜಸ್ಯಾದೇವಮ್ ೨೧ ದರ್ಶನಾಚ್ಚ ೨೨ ಪ್ರಕೃತೈತಾವತ್ತ್ವಂ ಹಿ ಪ್ರತಿಷೇಧತಿ ತತೋ ಬ್ರವೀತಿ ಚ ಭೂಯಃ ೨೩ ತದವ್ಯಕ್ತಮಾಹ ಹಿ ೨೪ ಅಪಿ ಚ ಸಂರಾಧನೇ ಪ್ರತ್ಯಕ್ಷಾನುಮಾನಾಭ್ಯಾಮ್ ೨೫ ಪ್ರಕಾಶಾದಿವಚ್ಚಾವೈಶೇಷ್ಯಂ ಪ್ರಕಾಶಶ್ಚ ಕರ್ಮಣ್ಯಭ್ಯಾಸಾತ್ ೨೬ ಅತೋಽನನ್ತೇನ ತಥಾ ಹಿ ಲಿಙ್ಗಮ್ ೨೭ ಉಭಯವ್ಯಪದೇಶಾತ್ತ್ವಹಿಕುಣ್ಡಲವತ್ ೨೮ ಪ್ರಕಾಶಾಶ್ರಯವದ್ವಾ ತೇಜಸ್ತ್ವಾತ್ ೨೯ ಪೂರ್ವವದ್ವಾ ೩೦ ಪ್ರತಿಷೇಧಾಚ್ಚ ೩೧ ಪರಮತಃ

ಸೇತೂನ್ಮಾನಸಂಬನ್ಧಭೇದವ್ಯಪದೇಶೇಭ್ಯಃ ೩೨. ಸಾಮಾನ್ಯಾತ್ತು
೩೩. ಬುದ್ಧ್ಯರ್ಥಃ ಪಾದವತ್ ೩೪. ಸ್ಥಾನವಿಶೇಷಾತ್ ಪ್ರಕಾಶಾದಿವತ್
೩೫. ಉಪಪತ್ತೇಶ್ಚ ೩೬. ತಥಾಽನ್ಯಪ್ರತಿಷೇಧಾತ್ ೩೭. ಅನೇನ ಸರ್ವಗತ
ತ್ವಮಾಯಾಮಶಬ್ದಾದಿಭ್ಯಃ ೩೮. ಫಲಮತ ಉಪಪತ್ತೇಃ ೩೯. ಶ್ರುತ
ತ್ವಾಚ್ಚ ೪೦. ಧರ್ಮಂ ಜೈಮಿನಿರತ ಏವ ೪೧. ಪೂರ್ವಂ ತು ಬಾದ
ರಾಯಣೋ ಹೇತುವ್ಯಪದೇಶಾತ್ ||

ಇತಿ ವೇದಾನ್ತಸೂತ್ರಪಾಠೇ ತೃತೀಯಾಧ್ಯಾಯೇ ದ್ವಿತೀಯಃ ಪಾದಃ

## ಅಥ ತೃತೀಯಾಧ್ಯಾಯೇ ತೃತೀಯಃ ಪಾದಃ

೧. ಸರ್ವವೇದಾನ್ತಪ್ರತ್ಯಯಂ ಚೋದನಾದ್ಯವಿಶೇಷಾತ್
೨. ಭೇದಾನ್ನೇತಿ ಚೇನ್ನೈಕಸ್ಯಾಮಪಿ ೩. ಸ್ವಾಧ್ಯಾಯಸ್ಯ ತಥಾತ್ವೇನ ಹಿ
ಸಮಾಚಾರೇಽಧಿಕಾರಾಚ್ಚ ಸವವಚ್ಚ ತನ್ನಿಯಮಃ ೪. ದರ್ಶಯತಿ ಚ
೫. ಉಪಸಂಹಾರೋಽರ್ಥಾಭೇದಾದ್ವಿಧಿಶೇಷವತ್ ಸಮಾನೇ ಚ
೬. ಅನ್ಯಥಾತ್ವಂ ಶಬ್ದಾದಿತಿ ಚೇನ್ನಾವಿಶೇಷಾತ್ ೭. ನ ವಾ ಪ್ರಕರಣ
ಭೇದಾತ್ ಪರೋವರೀಯಸ್ತ್ವಾದಿವತ್ ೮. ಸಂಜ್ಞಾತಶ್ಚೇತ್ತದುಕ್ತಮಸ್ತಿ
ತು ತದಪಿ ೯. ವ್ಯಾಪ್ತೇಶ್ಚ ಸಮಞ್ಜಸಮ್ ೧೦. ಸರ್ವಾಭೇದಾದನ್ಯ
ತ್ರೇಮೇ ೧೧. ಅನನ್ದಾದಯಃ ಪ್ರಧಾನಸ್ಯ ೧೨. ಪ್ರಿಯಶಿರ
ಸ್ತ್ವಾದ್ಯಪ್ರಾಪ್ತಿರುಪಚಯಾಪಚಯೌ ಹಿ ಭೇದೇ ೧೩. ಇತರೇ ತ್ವರ್ಥ
ಸಾಮಾನ್ಯಾತ್ ೧೪. ಆಧ್ಯಾನಾಯ ಪ್ರಯೋಜನಾಭಾವಾತ್ ೧೫.
ಆತ್ಮಶಬ್ದಾಚ್ಚ ೧೬. ಆತ್ಮಗೃಹೀತಿರಿತರವದುತ್ತರಾತ್ ೧೭. ಅನ್ವ
ಯಾದಿತಿ ಚೇತ್ಸ್ಯಾದವಧಾರಣಾತ್ ೧೮. ಕಾರ್ಯಾಖ್ಯಾನಾದಪೂರ್ವಮ್
೧೯. ಸಮಾನ ಏವಂ ಚಾಭೇದಾತ್ ೨೦. ಸಂಬನ್ಧಾದೇವಮನ್ಯತ್ರಾಪಿ
೨೧. ನ ವಾ ವಿಶೇಷಾತ್ ೨೨. ದರ್ಶಯತಿ ಚ ೨೩. ಸಂಭೃತಿದ್ಯು
ವ್ಯಾಪ್ತ್ಯಪಿ ಚಾತಃ ೨೪. ಪುರುಷವಿದ್ಯಾಯಾಮಿವ ಚೇತರೇಷಾಮ
ನಾಮ್ನಾನಾತ್ ೨೫. ವೇಧಾದ್ಯರ್ಥಭೇದಾತ್ ೨೬. ಹಾನೌ ತೂಪ
ಯನಶಬ್ದಶೇಷತ್ವಾತ್ ಕುತಾಚ್ಛನ್ದಸ್ತುತ್ಯುಪಗಾನವತ್ ತದು
ಕ್ತಮ್ ೨೭. ಸಾಂಪರಾಯೇ ಕರ್ತವ್ಯಾಭಾವಾತ್ತಥಾ ಹ್ಯನ್ಯೇ

೨೮ ಛನ್ದತ ಉಭಯಾವಿರೋಧಾತ್ ೨೯ ಗತೇರರ್ಥವತ್ತ್ವಮುಭಯಥಾನ್ಯಥಾ ಹಿ ವಿರೋಧಃ ೩೦ ಉಪಪನ್ನಸ್ತಲ್ಲಕ್ಷಣಾರ್ಥೋಪಲಬ್ಧೇರ್ಲೋಕವತ್ ೩೧ ಅನಿಯಮಃ ಸರ್ವಾಸಾಮವಿರೋಧಃ ಶಬ್ದಾನುಮಾನಾಭ್ಯಾಮ್ ೩೨ ಯಾವದಧಿಕಾರಮವಸ್ಥಿತಿರಾಧಿಕಾರಿಕಾಣಾಮ್ ೩೩ ಅಕ್ಷರಧಿಯಾಂ ತ್ವವರೋಧಃ ಸಾಮಾನ್ಯತದ್ಭಾವಾಭ್ಯಾಮೌಪಸದವತ್ ತದುಕ್ತಮ್ ೩೪ ಇಯದಾಮನನಾತ್ ೩೫ ಅನ್ತರಾ ಭೂತಗ್ರಾಮವತ್ ಸ್ವಾತ್ಮನಃ ೩೬ ಅನ್ಯಥಾ ಭೇದಾನುಪಪತ್ತಿರಿತಿ ಚೇನ್ನೋಪದೇಶಾನ್ತರವತ್ ೩೭ ವ್ಯತಿಹಾರೋ ವಿಶಿಂಷನ್ತಿ ಹಿ ಇತರವತ್ ೩೮ ಸೈವ ಹಿ ಸತ್ಯಾದಯಃ ೩೯ ಕಾಮಾದೀತರತ್ರ ತತ್ರ ಚಾಯತನಾದಿಭ್ಯಃ ೪೦ ಆದರಾದಲೋಪಃ ೪೧ ಉಪಸ್ಥಿತೇಽತಸ್ತದ್ವಚನಾತ್ ೪೨ ತನ್ನಿರ್ಧಾರಣಾನಿಯಮಸ್ತದ್ದೃಷ್ಟೇಃ ಪೃಥಗ್ಘ್ಯಪ್ರತಿಬನ್ಧಃ ಫಲಮ್ ೪೩ ಪ್ರದಾನವದೇವ ತದುಕ್ತಮ್ ೪೪ ಲಿಙ್ಗಭೂಯಸ್ತ್ವಾತ್ತದ್ಧಿ ಬಲೀಯಸ್ತದಪಿ ೪೫ ಪೂರ್ವವಿಕಲ್ಪಃ ಪ್ರಕರಣಾತ್ ಸ್ಯಾತ್ ಕ್ರಿಯಾಮಾನಸವತ್ ೪೬ ಅತಿದೇಶಾಚ್ಚ ೪೭ ವಿದ್ಯೈವ ತು ನಿರ್ಧಾರಣಾತ್ ೪೮ ದರ್ಶನಾಚ್ಚ ೪೯ ಶ್ರುತ್ಯಾದಿಬಲೀಯಸ್ತ್ವಾಚ್ಚ ನ ಬಾಧಃ ೫೦ ಅನುಬನ್ಧಾದಿಭ್ಯಃ ಪ್ರಜ್ಞಾನ್ತರಪೃಥಕ್ತ್ವವತ್ ದೃಷ್ಟಶ್ಚ ತದುಕ್ತಮ್ ೫೧ ನ ಸಾಮಾನ್ಯಾದಪ್ಯುಪಲಬ್ಧೇರ್ಮೃತ್ಯುವನ್ನ ಹಿ ಲೋಕಾಪತ್ತಿಃ ೫೨ ಪರೇಣ ಚ ಶಬ್ದಸ್ಯ ತಾದ್ವಿಧ್ಯಂ ಭೂಯಸ್ತ್ವಾತ್ತ್ವನುಬನ್ಧಃ ೫೩ ಏಕ ಆತ್ಮನಃ ಶರೀರೇ ಭಾವಾತ್ ೫೪ ವ್ಯತಿರೇಕಸ್ತದ್ಭಾವಾಭಾವಿತ್ವಾನ್ನ ತೂಪಲಬ್ಧಿವತ್ ೫೫ ಅಙ್ಗಾವಬದ್ಧಾಸ್ತು ನ ಶಾಖಾಸು ಹಿ ಪ್ರತಿವೇದಮ್ ೫೬ ಮನ್ತ್ರಾದಿವದ್ವಾಽವಿರೋಧಃ ೫೭ ಭೂಮ್ನಃ ಕ್ರತುವಜ್ಜ್ಯಾಯಸ್ತ್ವಂ ತಥಾ ಹಿ ದರ್ಶಯತಿ ೫೮ ನಾನಾ ಶಬ್ದಾದಿಭೇದಾತ್ ೫೯ ವಿಕಲ್ಪೋಽವಿಶಿಷ್ಟಫಲತ್ವಾತ್ ೬೦ ಕಾಮ್ಯಾಸ್ತು ಯಥಾಕಾಮಂ ಸಮುಚ್ಚೀಯೇರನ್ನ ವಾ ಪೂರ್ವಹೇತ್ವಭಾವಾತ್ ೬೧ ಅಙ್ಗೇಷು ಯಥಾಶ್ರಯಭಾವಃ ೬೨ ಶಿಷ್ಟೇಶ್ಚ ೬೩ ಸಮಾಹಾರಾತ್ ೬೪ ಗುಣಸಾಧಾರಣ್ಯಶ್ರುತೇಶ್ಚ ೬೫ ನ ವಾ ತತ್ಸಹಭಾವಾಶ್ರುತೇಃ ೬೬ ದರ್ಶನಾಚ್ಚ ||

ಇತಿ ವೇದಾನ್ತಸೂತ್ರಪಾಠೇ ತೃತೀಯಾಧ್ಯಾಯೇ ತೃತೀಯಃ ಪಾದಃ

# ಅಥ ತೃತೀಯಾಧ್ಯಾಯೇ ಚತುರ್ಥಃ ಪಾದಃ

೧ ಪುರುಷಾರ್ಥೋಽತಃ ಶಬ್ದಾದಿತಿ ಬಾದರಾಯಣಃ ೨ ಶೇಷತ್ವಾತ್ ಪುರುಷಾರ್ಥವಾದೋ ಯಥಾನ್ಯೇಷ್ವಿತಿ ಜೈಮಿನಿಃ ೩ ಆಚಾರದರ್ಶನಾತ್ ೪ ತಚ್ಛ್ರುತೇಃ ೫ ಸಮನ್ವಾರಮ್ಭಣಾತ್ ೬ ತದ್ವತೋ ವಿಧಾನಾತ್ ೭ ನಿಯಮಾಚ್ಚ ೮ ಅಧಿಕೋಪದೇಶಾತ್ತು ಬಾದರಾಯಣಸ್ಯೈವಂ ತದ್ದರ್ಶನಾತ್ ೯ ತುಲ್ಯಂ ತು ದರ್ಶನಮ್ ೧೦ ಅಸಾರ್ವತ್ರಿಕೀ ೧೧ ವಿಭಾಗಃ ಶತವತ್ ೧೨ ಅಧ್ಯಯನಮಾತ್ರವತಃ ೧೩ ನಾವಿಶೇಷಾತ್ ೧೪ ಸ್ತುತಯೇಽನುಮತಿರ್ವಾ ೧೫ ಕಾಮಕಾರೇಣ ಚೈಕೇ ೧೬ ಉಪಮರ್ದಂ ಚ ೧೭ ಊರ್ಧ್ವರೇತಃಸು ಚ ಶಬ್ದೇ ಹಿ ೧೮ ಪರಾಮರ್ಶಂ ಜೈಮಿನಿರಚೋದನಾ ಚಾಪವದತಿ ಹಿ ೧೯ ಅನುಷ್ಠೇಯಂ ಬಾದರಾಯಣಃ ಸಾಮ್ಯಶ್ರುತೇಃ ೨೦ ವಿಧಿರ್ವಾ ಧಾರಣವತ್ ೨೧ ಸ್ತುತಿಮಾತ್ರಮುಪಾದಾನಾದಿತಿ ಚೇನ್ನಾಪೂರ್ವತ್ವಾತ್ ೨೪ ತಥಾ ಚೈಕವಾಕ್ಯತೋಪಬನ್ಧಾತ್ ೨೫ ಅತ ಏವ ಚಾಗ್ನೀನ್ಧನಾದ್ಯನಪೇಕ್ಷಾ ೨೬ ಸರ್ವಾಪೇಕ್ಷಾ ಚ ಯಜ್ಞಾದಿಶ್ರುತೇರಶ್ವವತ್ ೨೭ ಶಮದಮಾದ್ಯುಪೇತಃ ಸ್ಯಾತ್ ತಥಾಪಿ ತು ತದ್ವಿಧೇಸ್ತದಙ್ಗತಯಾ ತೇಷಾಮವಶ್ಯಾನುಷ್ಠೇಯತ್ವಾತ್ ೨೮ ಸರ್ವಾನ್ನಾನುಮತಿಶ್ಚ ಪ್ರಾಣಾತ್ಯಯೇ ತದ್ದರ್ಶನಾತ್ ೨೯ ಅಬಾಧಾಚ್ಚ ೩೦ ಅಪಿ ಚ ಸ್ಮರ್ಯತೇ ೩೧ ಶಬ್ದಶ್ಚಾತೋಽಕಾಮಕಾರೇ ೩೨ ವಿಹಿತತ್ವಾಚ್ಚಾಶ್ರಮಕರ್ಮಾಪಿ ೩೩ ಸಹಕಾರಿತ್ವೇನ ಚ ೩೪ ಸರ್ವಥಾಪಿ ತ ಏವೋಭಯಲಿಙ್ಗಾತ್ ೩೫ ಅನಭಿಭವಂ ಚ ದರ್ಶಯತಿ ೩೬ ಅನ್ತರಾ ಚಾಪಿ ತು ತದ್ದೃಷ್ಟೇಃ ೩೭ ಅಪಿ ಚ ಸ್ಮರ್ಯತೇ ೩೮ ವಿಶೇಷಾನುಗ್ರಹಶ್ಚ ೩೯ ಅತಸ್ತ್ವಿತರಜ್ಜ್ಯಾಯೋ ಲಿಙ್ಗಾಚ್ಚ ೪೦ ತದ್ಭೂತಸ್ಯ ತು ನಾತದ್ಭಾವೋ ಜೈಮಿನೇರಪಿ ನಿಯಮಾತದ್ರೂಪಾಭಾವೇಭ್ಯಃ ೪೧ ನ ಚಾಧಿಕಾರಿಕಮಪಿ ಪತನಾನುಮಾನಾತ್ ತದಯೋಗಾತ್ ೪೨ ಉಪಪೂರ್ವಮಪಿ ತ್ವೇಕೇ ಭಾವಮಶನವತ್ ತದುಕ್ತಮ್ ೪೩ ಬಹಿಸ್ತೂಭಯಥಾಪಿ ಸ್ಮೃತೇರಾಚಾರಾಚ್ಚ ೪೪ ಸ್ವಾಮಿನಃ ಫಲಶ್ರುತೇರಿತ್ಯಾತ್ರೇಯಃ ೪೫ ಆರ್ತ್ವಿಜ್ಯಮಿತ್ಯೌಡುಲೋಮಿಸ್ತಸ್ಮೈ ಹಿ ಪರಿಕ್ರೀಯತೇ

೪೬ ಶ್ರುತೇಶ್ಚ ೪೭ ಸಹಕಾರ್ಯನ್ತರವಿಧಿಃ ಪಕ್ಷೇಣ ತೃತೀಯಂ ತದ್ವತೋ ವಿಧ್ಯಾದಿವತ್ ೪೮ ಕೃತ್ಸ್ನಭಾವಾತ್ತು ಗೃಹಿಣೋಪಸಂಹಾರಃ ೪೯ ಮೌನವದಿತರೇಷಾಮಪ್ಯುಪದೇಶಾತ್ ೫೦ ಅನಾವಿಷ್ಕುರ್ವನ್ನನ್ವಯಾತ್ ೫೧ ಐಹಿಕಮಪ್ಯಪ್ರಸ್ತುತಪ್ರತಿಬನ್ಧೇ ತದ್ದರ್ಶನಾತ್ ೫೨ ಏವಂ ಮುಕ್ತಿಫಲಾನಿಯಮಸ್ತದವಸ್ಥಾವಧೃತೇಸ್ತದವಸ್ಥಾವಧೃತೇಃ ||

ಇತಿ ವೇದಾನ್ತಸೂತ್ರಪಾಠೇ ತೃತೀಯಾಧ್ಯಾಯೇ ಚತುರ್ಥಃ ಪಾದಃ

ಇತಿ ತೃತೀಯೋಽಧ್ಯಾಯಃ

## ಅಥ ಚತುರ್ಥಾಧ್ಯಾಯೇ ಪ್ರಥಮಃ ಪಾದಃ

೧ ಆವೃತ್ತಿರಸಕೃದುಪದೇಶಾತ್ ೨ ಲಿಙ್ಗಾಚ್ಚ ೩ ಆತ್ಮೇತಿ ತೂಪಗಚ್ಛನ್ತಿ ಗ್ರಾಹಯನ್ತಿ ಚ ೪ ನ ಪ್ರತೀಕೇ ನ ಹಿ ಸಃ ೫ ಬ್ರಹ್ಮದೃಷ್ಟಿರುತ್ಕರ್ಷಾತ್ ೬ ಆದಿತ್ಯಾದಿಮತಯಶ್ಚಾಙ್ಗ ಉಪಪತ್ತೇಃ ೭ ಆಸೀನಃ ಸಂಭವಾತ್ ೮ ಧ್ಯಾನಾಚ್ಚ ೯ ಅಚಲತ್ವಂ ಚಾಪೇಕ್ಷ್ಯ ೧೦ ಸ್ಮರನ್ತಿ ಚ ೧೧ ಯತ್ರೈಕಾಗ್ರತಾ ತತ್ರಾವಿಶೇಷಾತ್ ೧೨ ಆ ಪ್ರಾಯಣಾತ್ ತತ್ರಾಪಿ ಹಿ ದೃಷ್ಟಮ್ ೧೩ ತದಧಿಗಮ ಉತ್ತರಪೂರ್ವಾಘಯೋರಶ್ಲೇಷವಿನಾಶೌ ತದ್ವ್ಯಪದೇಶಾತ್ ೧೪ ಇತರಸ್ಯಾಪ್ಯೇವಮಸಂಶ್ಲೇಷಃ ಪಾತೇ ತು ೧೫ ಅನಾರಬ್ಧಕಾರ್ಯೇ ಏವ ತು ಪೂರ್ವೇ ತದವಧೇಃ ೧೬ ಅಗ್ನಿಹೋತ್ರಾದಿ ತು ತತ್ಕಾರ್ಯಾಯೈವ ತದ್ದರ್ಶನಾತ್ ೧೭ ಅತೋಽನ್ಯಾಪಿ ಹ್ಯೇಕೇಷಾಮುಭಯೋಃ ೧೮ ಯದೇವ ವಿದ್ಯಯೇತಿ ಹಿ ೧೯ ಭೋಗೇನ ತ್ವಿತರೇ ಕ್ಷಪಯಿತ್ವಾ ಸಂಪದ್ಯತೇ ||

ಇತಿ ವೇದಾನ್ತಸೂತ್ರಪಾಠೇ ಚತುರ್ಥಾಧ್ಯಾಯೇ ಪ್ರಥಮಃ ಪಾದಃ

## ಅಥ ಚತುರ್ಥಾಧ್ಯಾಯೇ ದ್ವಿತೀಯಃ ಪಾದಃ

೧ ವಾಙ್ಮನಸಿ ದರ್ಶನಾಚ್ಛಬ್ದಾಚ್ಚ ೨ ಅತ ಏವ ಚ ಸರ್ವಾಣ್ಯನು ೩ ತನ್ಮನಃ ಪ್ರಾಣ ಉತ್ತರಾತ್ ೪ ಸೋಽಧ್ಯಕ್ಷೇ ತದುಪಗಮಾದಿಭ್ಯಃ

೫ ಭೂತೇಷು ತಚ್ಛ್ರುತೇಃ ೬ ನೈಕಸ್ಮಿನ್ ದರ್ಶಯತೋ ಹಿ ೭ ಸಮಾನಾ ಚಾಸೃತ್ಯುಪಕ್ರಮಾದಮೃತತ್ವಂ ಚಾನುಪೋಷ್ಯ ೮ ತದಾಪೀತೇಃ ಸಂಸಾರವ್ಯಪದೇಶಾತ್ ೯ ಸೂಕ್ಷ್ಮಂ ಪ್ರಮಾಣತಶ್ಚ ತಥೋಪಲಬ್ಧೇಃ ೧೦ ನೋಪಮರ್ದೇನಾತಃ ೧೧ ಅಸ್ಯೈವ ಚೋಪಪತ್ತೇರೇಷ ಊಷ್ಮಾ ೧೨ ಪ್ರತಿಷೇಧಾದಿತಿ ಚೇನ್ನ ಶಾರೀರಾತ್ ೧೩ ಸ್ಪಷ್ಟೋ ಹ್ಯೇಕೇಷಾಮ್ ೧೪ ಸ್ಮರ್ಯತೇ ಚ ೧೫ ತಾನಿ ಪರೇ ತಥಾ ಹ್ಯಾಹ ೧೬ ಅವಿಭಾಗೋ ವಚನಾತ್ ೧೭ ತದೋಕೋಽಗ್ರಜ್ವಲನಂ ತತ್ಪ್ರಕಾಶಿತದ್ವಾರೋ ವಿದ್ಯಾಸಾಮರ್ಥ್ಯಾತ್ ತಚ್ಛೇಷಗತ್ಯನುಸ್ಮೃತಿಯೋಗಾಚ್ಚ ಹಾರ್ದಾನುಗೃಹೀತಃ ಶತಾಧಿಕಯಾ ೧೮ ರಶ್ಮ್ಯನುಸಾರೀ ೧೯ ನಿಶಿ ನೇತಿ ಚೇನ್ನ ಸಂಬನ್ಧಸ್ಯ ಯಾವದ್ದೇಹಭಾವಿತ್ವಾದ್ದರ್ಶಯತಿ ಚ ೨೦ ಅತಶ್ಚಾಯನೇಽಪಿ ಹಿ ದಕ್ಷಿಣೇ ೨೧ ಯೋಗಿನಃ ಪ್ರತಿ ಚ ಸ್ಮರ್ಯತೇ ಸ್ಮಾರ್ತೇ ಚೈತೇ ||

ಇತಿ ವೇದಾನ್ತಸೂತ್ರಪಾಠೇ ಚತುರ್ಥಾಧ್ಯಾಯೇ ದ್ವಿತೀಯಃ ಪಾದಃ

## ಅಥ ಚತುರ್ಥಾಧ್ಯಾಯೇ ತೃತೀಯಃ ಪಾದಃ

೧ ಆರ್ಚಿರಾದಿನಾ ತತ್ಪ್ರಥಿತೇಃ ೨ ವಾಯುಮಬ್ದಾದವಿಶೇಷವಿಶೇಷಾಭ್ಯಾಮ್ ೩ ತಡಿತೋಽಪಿ ವರುಣಃ ಸಂಬನ್ಧಾತ್ ೪ ಆತಿವಾಹಿಕಾಸ್ತಲ್ಲಿಙ್ಗಾತ್ ೫ ಉಭಯವ್ಯಾಮೋಹಾತ್ ತತ್ಸಿದ್ಧೇಃ ೬ ವೈದ್ಯುತೇನೈವ ತತಸ್ತಚ್ಛ್ರುತೇಃ ೭ ಕಾರ್ಯಂ ಬಾದರಿರಸ್ಯ ಗತ್ಯುಪಪತ್ತೇಃ ೮ ವಿಶೇಷಿತತ್ವಾಚ್ಚ ೯ ಸಾಮೀಪ್ಯಾತ್ತು ತದ್ವ್ಯಪದೇಶಃ ೧೦ ಕಾರ್ಯಾತ್ಯಯೇ ತದಧ್ಯಕ್ಷೇಣ ಸಹಾತಃಪರಮಭಿಧಾನಾತ್ ೧೧ ಸ್ಮೃತೇಶ್ಚ ೧೨ ಪರಂ ಜೈಮಿನಿರ್ಮುಖ್ಯತ್ವಾತ್ ೧೩ ದರ್ಶನಾಚ್ಚ ೧೪ ನ ಚ ಕಾರ್ಯೇ ಪ್ರತಿಪತ್ತ್ಯಭಿಸನ್ಧಿಃ ೧೫ ಅಪ್ರತೀಕಾಲಮ್ಬನಾನ್ನಯತೀತಿ ಬಾದರಾಯಣ ಉಭಯಥಾ ದೋಷಾತ್ ತತ್ಕ್ರತುಶ್ಚ ೧೬ ವಿಶೇಷಂ ಚ ದರ್ಶಯತಿ ||

ಇತಿ ವೇದಾನ್ತಸೂತ್ರಪಾಠೇ ಚತುರ್ಥಾಧ್ಯಾಯೇ ತೃತೀಯಃ ಪಾದ.

## ಅಥ ಚತುರ್ಥಾಧ್ಯಾಯೇ ಚತುರ್ಥಃ ಪಾದಃ

೧ ಸಂಪದ್ಯಾವಿರ್ಭಾವಃ ಸ್ವೇನ ಶಬ್ದಾತ್ ೨ ಮುಕ್ತಃ ಪ್ರತಿಜ್ಞಾನಾತ್ ೩ ಆತ್ಮಾ ಪ್ರಕರಣಾತ್ ೪ ಅವಿಭಾಗೇನ ದೃಷ್ಟತ್ವಾತ್ ೫ ಬ್ರಾಹ್ಮೇಣ ಜೈಮಿನಿರುಪನ್ಯಾಸಾದಿಭ್ಯಃ ೬ ಚಿತಿತನ್ಮಾತ್ರೇಣ ತದಾತ್ಮಕತ್ವಾದಿತ್ಯೌಡುಲೋಮಿಃ ೭ ಏವಮಪ್ಯುಪನ್ಯಾಸಾತ್ ಪೂರ್ವಭಾವಾದವಿರೋಧಂ ಬಾದರಾಯಣಃ ೮ ಸಂಕಲ್ಪಾದೇವ ತು ತಚ್ಛ್ರುತೇಃ ೯ ಅತ ಏವ ಚಾನನ್ಯಾಧಿಪತಿಃ ೧೦ ಅಭಾವಂ ಬಾದರಿರಾಹ ಹ್ಯೇವಮ್ ೧೧ ಭಾವಂ ಜೈಮಿನಿರ್ವಿಕಲ್ಪಾಮನನಾತ್ ೧೨ ದ್ವಾದಶಾಹವದುಭಯವಿಧಂ ಬಾದರಾಯಣೋಽತಃ ೧೩ ತನ್ವಭಾವೇ ಸನ್ಧ್ಯವದುಪಪತ್ತೇಃ ೧೪ ಭಾವೇ ಜಾಗ್ರದ್ವತ್ ೧೫ ಪ್ರದೀಪವದಾವೇಶಸ್ತಥಾ ಹಿ ದರ್ಶಯತಿ ೧೬ ಸ್ವಾಪ್ಯಯಸಂಪತ್ತ್ಯೋರನ್ಯತರಾಪೇಕ್ಷಮಾವಿಷ್ಕೃತಂ ಹಿ ೧೭ ಜಗದ್ವ್ಯಾಪಾರವರ್ಜಂ ಪ್ರಕರಣಾದಸಂನಿಹಿತತ್ವಾಚ್ಚ ೧೮ ಪ್ರತ್ಯಕ್ಷೋಪದೇಶಾದಿತಿ ಚೇನ್ನಾಧಿಕಾರಿಕಮಣ್ಡಲಸ್ಥೋಕ್ತೇಃ ೧೯ ವಿಕಾರಾವರ್ತಿ ಚ ತಥಾ ಹಿ ಸ್ಥಿತಿಮಾಹ ೨೦ ದರ್ಶಯತಶ್ಚೈವಂ ಪ್ರತ್ಯಕ್ಷಾನುಮಾನೇ ೨೧ ಭೋಗಮಾತ್ರಸಾಮ್ಯಲಿಙ್ಗಾಚ್ಚ ೨೨ ಅನಾವೃತ್ತಿಃ ಶಬ್ದಾದನಾವೃತ್ತಿಃ ಶಬ್ದಾತ್"

ಇತಿ ವೇದಾನ್ತಸೂತ್ರಪಾಠೇ ಚತುರ್ಥಾಧ್ಯಾಯೇ ಚತುರ್ಥಃ ಪಾದಃ

### ಇತಿ ಚತುರ್ಥೋಽಧ್ಯಾಯಃ

### ಇತಿ ಶ್ರೀಬಾದರಾಯಣೀಯವೇದಾನ್ತಸೂತ್ರಪಾಠಃ ಸಮಾಪ್ತಃ

ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ.